ಸಮಾಚಾರ ಸಣ್ಣದಲ್ಲ

ಬಂಕ್ ಮಾಲೀಕರ ಸಂಘಕ್ಕೆ ಪ್ರದೀಪ್

ಹಾಸನ: ಜಿಲ್ಲಾ ಪೆಟ್ರೋಲ್ ಬಂಕ್‌ಗಳ ಮಾಲೀಕರ ಸಂಘದ ಅಧ್ಯಕ್ಷರಾಗಿ ಸಾಲಗಾಮೆ ಬಾಲಾಜಿ ಫ್ಯೂಯಲ್ಸ್ ಮಾಲೀಕ ಬಿ.ಪ್ರದೀಪ್ ಕುಮಾರ್ ಆಯ್ಕೆಯಾಗಿದ್ದಾರೆ. ಕಾರ್ಯದರ್ಶಿಯಾಗಿ ಬೇಲೂರಿನ ಮಲ್ಲಿಕಾರ್ಜುನ ಪೆಟ್ರೋಲ್ ಬಂಕ್ ಮಾಲೀಕ ರಘುನಂದನ, ಖಜಾಂಚಿಯಾಗಿ ಹಾರನಹಳ್ಳಿ ಸಿಂಚನ ಸರ್ವೀಸ್ ಸ್ಟೇಷನ್ ಮಾಲೀಕ ಮಂಜಪ್ಪ ಅವರು ಆಯ್ಕೆಯಾದರು. ನಿರ್ದೇಶಕರಾಗಿ ಸಂದೇಶ್, ಮಂಜುನಾಥ್, ತೀರ್ಥಕುಮಾರ, ಶಿವಕುಮಾರ, ರಾಮಚಂದ್ರ, ಶ್ರೀನಿವಾಸ, ಚನ್ನಕೇಶವ, ಮಂಜುನಾಥ್, ಶೆಟ್ಟಿಗೌಡ, ತಿಮ್ಮೇಗೌಡ, ಚಂದನ್ ಅವರನ್ನು ಆಯ್ಕೆ ಮಾಡಲಾಯಿತು. ನಗರದ ಹೋಟೆಲ್ ರಾಮಾದಲ್ಲಿ ನಡೆದ ಜಿಲ್ಲಾ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಪದಾಧಿಕಾರಿಗಳ ಆಯ್ಕೆ ನಡೆಯಿತು. ಸಂಘದ ನಿಕಟಪೂರ್ವ ಅಧ್ಯಕ್ಷ ಗಿರೀಶ್ ಅಡವಿಗೌಡ, ರಾಜ್ಯ ಸಂಘದ ಅಧ್ಯಕ್ಷ ಬಸವೇಗೌಡ ಮಾತನಾಡಿದರು.

ಚಿರತೆ ಸೆರೆ ಹಿಡಿಯಲು ಗ್ರಾಮಸ್ಥರ ಮನವಿ

ಹಾಸನ: ಆಹಾರ ಅರಸಿ ಚಿರತೆಯೊಂದು ಗ್ರಾಮದೊಳಗೆ ಎಂಟ್ರಿಕೊಟ್ಟಿದ್ದು, ಮನೆಯ ಕಾಂಪೌಂಡ್ ಹಾರಿ ಮನೆಯ ಆವರಣದಲ್ಲಿ ಮಲಗಿದ್ದ ಸಾಕುನಾಯಿ ಹೊತ್ತೊಯ್ಯಲು ಯತ್ನಿಸಿದ ಘಟನೆ ಸಾಲಗಾಮೆ ಹೋಬಳಿ, ಸುಂಡಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಲೋಕೇಶ್ ಎಂಬುವವರ ಮನೆ ಆವರಣಕ್ಕೆ ಬಂದ ಚಿರತೆ ಮನೆ ಮುಂದೆ ಮಲಗಿದ್ದ ನಾಯಿಯನ್ನು ಕಚ್ಚಿಕೊಂಡು ಎಳೆದೊಯ್ಯಲು ಯತ್ನಿಸಿದೆ. ನಾಯಿ ಜೋರಾಗಿ ಬೊಗಳಲು ಆರಂಭಿಸಿದೆ. ಅದೇ ವೇಳೆಗೆ ಎಚ್ಚರಗೊಂಡ ಮನೆಯವರು ಚಿರತೆ ಮೇಲೆ ಟಾರ್ಚ್ ಲೈಟ್ ಬಿಟ್ಟಿದ್ದಾರೆ. ಇದರಿಂದ ವಿಚಲಿತಗೊಂಡ ಚಿರತೆ, ಕ್ಷಣಾರ್ಧದಲ್ಲಿ ಕಣ್ಮರೆಯಾಗಿದೆ. ಸುಂಡಹಳ್ಳಿ ಗ್ರಾಮದ ಸುತ್ತಮುತ್ತ ಚಿರತೆಗಳ ಹಾವಳಿ ಹೆಚ್ಚಾಗಿದ್ದು, ನಾಯಿ, ಕೋಳಿ, ಕುರಿ, ಕರುಗಳನ್ನು ಹೊತ್ತೊಯ್ದು ತಿಂದು ಹಾಕುತ್ತಿವೆ. ಹಗಲು ವೇಳೆಯೇ ರೈತರ ಜಮೀನಿನಲ್ಲಿ ಕಾಣಿಸಿಕೊಂಡು ಆತಂಕ ಸೃಷ್ಟಿಸಿವೆ

ವಿರಾಮ
ಪ್ರತಿ ಭಾನುವಾರ

ವಾಹನಗಳ ಚಾಲಕರು, ಮಾಲೀಕರಿಂದ ಪ್ರತಿಭಟನೆ
ಪ್ರವಾಸಿ ಟ್ಯಾಕ್ಸಿಗೆ ಜಿಪಿಎಸ್ ಬೇಡ

ಮೈಸೂರು: ಪ್ರವಾಸಿ ವಾಹನಗಳಿಗೆ ಅವೈಜ್ಞಾನಿಕವಾಗಿ ಪ್ಯಾನಿಕ್ ಬಟನ್, ಜಿಪಿಎಸ್ ಅಳವಡಿಕೆ ಖಂಡಿಸಿ ಮೈಸೂರು ಜಿಲ್ಲಾ ಪ್ರವಾಸಿ ವಾಹನ ಚಾಲಕರ ಮತ್ತು ಮಾಲೀಕರ ಕ್ಷೇಮಾಭಿವೃದ್ಧಿ ಸಂಘದಿಂದ ಪ್ರತಿಭಟನೆ ನಡೆಯಿತು.

ನಗರದ ಆರ್ ಟಿಒ ಕಚೇರಿ ಮುಂಭಾಗ ಮಾಜಿ ಸಂಸದ ಪ್ರತಾಪ್ ಸಿಂಹ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಈ ವೇಳೆ ಮಾತನಾಡಿದ ಸಿಂಹ, ಪ್ಯಾನಿಕ್ ಬಟನ್ ಹಾಗೂ ಜಿಪಿಎಸ್ ಅಳವಡಿಕೆಗೆ ಒತ್ತಾಯ ಮಾಡದಂತೆ ಮನವಿ ಮಾಡಿದರು.

ಸರಕಾರ ಸೂಚಿಸಿರುವ 12 ಸಂಸ್ಥೆಗಳಿಂದಲೇ ಜಿಪಿಎಸ್ ಹಾಗೂ ಪ್ಯಾನಿಕ್ ಬಟನ್ ಖರೀದಿಗೆ ಸೂಚಿಸಿರುವ ಸರ್ಕಾರದ ಕ್ರಮ ಖಂಡನೀಯ ಎಂದರು.

ಶಕ್ತಿ ಯೋಜನೆಯಿಂದ ಖಾಸಗಿ ಬಸ್ ಹಾಗೂ ವಾಹನಗಳಿಗೆ ಜನ ಬರುತ್ತಿಲ್ಲ. ಖಾಸಗಿ ವಾಹನ ಚಾಲಕರು ಮಾಲೀಕರು ಸಂಕಷ್ಟದಲ್ಲಿದ್ದಾರೆ. ನಿಮ್ಮ ಶಕ್ತಿ ಯೋಜನೆ ಬಗ್ಗೆ ನಾನು ಮಾತನಾಡುವುದಿಲ್ಲ. ಖಾಸಗಿ ವಾಹನಗಳಿಗೆ ಜಿಪಿಎಸ್ ಅಳವಡಿಕೆ ಮಾಡಬೇಕು, ಪ್ಯಾನಿಕ್ ಬಟನ್ ಅವಳಡಿಕೆ ಮಾಡಬೇಕೆಂಬುದು ಉತ್ತಮ ನಿರ್ಧಾರ. ಇದನ್ನು ಜಾರಿಗೆ ತಂದಿದ್ದೇ ಕೇಂದ್ರ ಸರ್ಕಾರ. ಹೊರಗಡೆ ಜಿಪಿಎಸ್ ಅಳವಡಿಕೆ ಮಾಡಿಸಿಕೊಳ್ಳಲು ಒಂದರಿಂದ ಎರಡು ಸಾವಿರ ಖರ್ಚಾಗುತ್ತದೆ. ಆದರೆ, ಈ ಜಿಪಿಎಸ್ ಅವಳಡಿಕೆಗೆ 12 ಖಾಸಗಿ ಕಂಪನಿಗಳಿಗೆ ಟೆಂಡರ್ ನೀಡಿರುವುದು ಸರಿಯಾದ ಕ್ರಮವಲ್ಲ ಎಂದು ಆರೋಪಿಸಿದರು.

ನಗರದ ಆರ್ ಟಿಒ ಕಚೇರಿ ಮುಂಭಾಗ ಮಾಜಿ ಸಂಸದ ಪ್ರತಾಪ್ ಸಿಂಹ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಈಗಾಗಲೇ ಜಿಪಿಎಸ್ ಅವಳಡಿಕೆ ಕಂಪನಿಯವರು ಯದ್ವಾತದ್ವಾ ರೇಟ್ ಫಿಕ್ಸ್ ಮಾಡಿದ್ದಾರೆ. ಕೂಡಲೇ ಈ ಲೋಪವನ್ನು ಸರಿಪಡಿಸಬೇಕು. ಇಲ್ಲವಾದಲ್ಲಿ ನಾವೇ ರಾಜ್ಯದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಗಾಂಧಿ ಭವನ ಕಾಮಗಾರಿ ಜಿಲ್ಲಾಧಿಕಾರಿ ಪರಿಶೀಲನೆ

ಚಿಕ್ಕಬಳ್ಳಾಪುರ ದ ಗಾಂಧಿ ಭವನಕ್ಕೆ ಸೋಮವಾರ ಜಿಲ್ಲಾಧಿಕಾರಿ ಪಿ. ಎನ್. ರವೀಂದ್ರ ಅವರು ಭೇಟಿ ನೀಡಿ ಪರಿಶೀಲಿಸಿದರು.

ಚಿಕ್ಕಬಳ್ಳಾಪುರ: ನಗರದ ಹೃದಯ ಭಾಗದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಗಾಂಧಿ ಭವನಕ್ಕೆ ಸೋಮವಾರ ಜಿಲ್ಲಾಧಿಕಾರಿ ಪಿ. ಎನ್. ರವೀಂದ್ರ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಮಾತನಾಡಿದ ಅವರು ಗಾಂಧೀಜಿಯವರ ತತ್ವಾದರ್ಶಗಳು,ಚಿಂತನೆಗಳನ್ನು ಯುವಜನತೆಗೆ ಮುಟ್ಟಿಸಲು ಜಿಲ್ಲಾ ಕೇಂದ್ರದಲ್ಲಿ ಗಾಂಧಿ ಭವನದ ಅಗತ್ಯದೆ.ರಾಷ್ಟ್ರಪಿತರ ಬದುಕೇ ಒಂದು ಮಹಾಕಾವ್ಯವಾಗಿದೆ.ಇದನ್ನು ಇಂದಿನ ಮತ್ತು ಮುಂದಿನ ಪೀಳಿಗೆಗೆ ತಲುಪಿಸುವ ನಿಟ್ಟಿನಲ್ಲಿ 3 ಕೋಟಿ ವೆಚ್ಚದಲ್ಲಿ ಪ್ರತಿ ಜಿಲ್ಲಾ ಕೇಂದ್ರದಲ್ಲಿ ಗಾಂಧಿ ಭವನ ನಿರ್ಮಾಣಕ್ಕೆ ಸರ್ಕಾರ ಮುಂದಾಗಿರುವುದು ಶ್ಲಾಘನೀಯ ಎಂದರು. ಮಾಜಿ ಸಂಸದ ಡಾ.ವೀರಪ್ಪಮೊಯ್ಲಿ ಅವರ ಅಮೃತಹಸ್ತದಿಂದ ಭೂಮಿ ಪೂಜೆ ಆಗಿತ್ತು.ಅನುದಾನದ ಕೊರತೆಯಿಂದ ಕೆಲಕಾಲ ಕಾಮಗಾರಿ ಸ್ಥಗಿತವಾಗಿತ್ತು.ನಂತರದ ದಿನಗಳಲ್ಲಿ ಅನುದಾನ ಜಿಲ್ಲಾಡಳಿತ ಅನುದಾನ ಹೊಂದಿಸಿದ ಪರಿಣಾಮ ಕಾಮಗಾರಿ ಶುರುವಾಗಿದ್ದು ಈಗ ಅಂತಿಮ ಹಂತದಲ್ಲಿದೆ. ಆದಷ್ಟು ಬೇಗ ಪೂರ್ಣಗೊಳಿಸಲು ಯೋಜನಾ ಅಭಿಯಂತರರಿಗೆ ಸೂಚನೆ ನೀಡಿರುವುದಾಗಿ ಡಿಸಿ ತಿಳಿಸಿದರು. ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಎಂ ಜುಂಜಣ್ಣ, ಯೋಜನಾ ಅಭಿಯಂತರ ತೇಜಸ್ ರೆಡ್ಡಿ ಇದ್ದರು.

ಜಿಲ್ಲಾ ಸಮಿತಿ ಸಭೆ | ಅಧ್ಯಕ್ಷ ಧರ್ಮಜ ಉತ್ತಪ್ಪ ಸೂಚನೆ
ಗ್ಯಾರಂಟಿ ಯೋಜನೆ ಅರ್ಹರಿಗೆ ತಲುಪಿಸಿ

ಮಡಿಕೇರಿ: ರಾಜ್ಯ ಸರಕಾರ ಶಕ್ತಿ, ಗೃಹಲಕ್ಷ್ಮಿ, ಗೃಹ ಜ್ಯೋತಿ, ಯುವನಿಧಿ ಹಾಗೂ ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದ್ದು, ಅರ್ಹರಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಗ್ಯಾರಂಟಿಗಳ ಜಿಲ್ಲಾ ಅನುಷ್ಠಾನ ಸಮಿತಿಯ ಅಧ್ಯಕ್ಷ ಧರ್ಮಜ ಉತ್ತಪ್ಪ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಗ್ಯಾರಂಟಿ ಯೋಜನೆಗಳ ಪ್ರಗತಿಗೆ ಸಂಬಂಧಿಸಿದಂತೆ ನಗರದ ಡಿಸಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳಿಂದ ಅರ್ಹರು ವಂಚಿತರಾಗದಂತೆ ಗಮನಹರಿಸುವುದು ಅಧಿಕಾರಿಗಳ ಜವಾಬ್ದಾರಿ ಆಗಿದೆ. ಸರಕಾರದ ಉದ್ದೇಶ ಮತ್ತು ಆಶಯದಂತೆ ಗ್ಯಾರಂಟಿ ತಲುಪಿಸಿ. ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ, ಅನ್ನಭಾಗ್ಯ ಈ 5 ಯೋಜನೆಗಳು ಜನರಿಗೆ ತಲುಪಬೇಕು. ಗ್ಯಾರಂಟಿಗಳ ಅನುಷ್ಠಾನದಲ್ಲಿ ಸಮಸ್ಯೆ ಇದ್ದಲ್ಲಿ ಮಾಹಿತಿ ನೀಡಬೇಕು ಎಂದು ತಿಳಿಸಿದರು.

ಕುಶಾಲನಗರ ತಾ.ಸಮಿತಿ ಅಧ್ಯಕ್ಷ .ಪಿ.ಶಶಿಧರ ಮಾತನಾಡಿ ಯುವನಿಧಿ ಯೋಜನೆಯಡಿ ಸಲ್ಲಿಕೆ ಆಗಿರುವ ಬಾಕಿ ಅರ್ಜಿಗಳನ್ನು ತ್ವರಿತವಾಗಿ ಲೇವಾರಿ ಮಾಡುವಂತೆ ಸೂಚನೆ ನೀಡಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಮಾತನಾಡಿ, ಗ್ಯಾರಂಟಿ ಯೋಜನೆ ಅನುಷ್ಠಾನದಲ್ಲಿ ವಿಳಂಬ ಮಾಡದೆ, ಕಾಲಮಿತಿಯಲ್ಲಿ ಅರ್ಹರಿಗೆ ಸೌಲಭ್ಯ ಕಲ್ಪಿಸಲು ಪ್ರಯತ್ನಿಸಬೇಕು ಎಂದರು.

ಆಹಾರ ಇಲಾಖೆ ಜಂಟಿ ನಿರ್ದೇಶಕ ಕುಮುದಾ ಶರತ್ ಮಾಹಿತಿ ನೀಡಿ, ಜಿಲ್ಲೆಯಲ್ಲಿ 1.30 ಲಕ್ಷ ಗುರಿಯಲ್ಲಿ 97,570 ಜನರಿಗೆ ಅನ್ನಭಾಗ್ಯ ಯೋಜನೆಯಡಿ ಹಣ ಪಾವತಿಯಾಗುತ್ತಿದ್ದು, ಶೇ.98 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದರು.

ಯುವನಿಧಿ ಯೋಜನೆಯು ಪ್ರತೀ ತಿಂಗಳು 3000 ಮತ್ತು 1500 ನಿರುದ್ಯೋಗಿ ಭತ್ಯೆ ನೀಡುವ ಯೋಜನೆಯಾಗಿದ್ದು, ಅರ್ಹರಿಗೆ ತಲುಪಿಸಲು ಪ್ರಯತ್ನಿಸಲಾಗಿದೆ. ಜಿಲ್ಲೆಯ 562 ಮಂದಿಗೆ ಯೋಜನೆ ತಲುಪುತ್ತಿದೆ. ಒಟ್ಟಾರೆ ಇದುವರೆಗೆ 1030 ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದು ರೇಖಾ ಗಣಪತಿ ತಿಳಿಸಿದರು.

ಮಹಿಳಾ –ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರಾದ ನಟರಾಜು, ಗೃಹಲಕ್ಷ್ಮಿ ಯೋಜನೆ ಜೂನ್‌ವರೆಗೆ ಹಣ ಪಾವತಿಯಾಗಿದ್ದು, ಜುಲೈದು ಬಾಕಿ ಇದೆ ಎಂದರು.

ಎಸ್ಕಾಂ ಎಇಇ ವಿನಯ್ ಕುಮಾರ್, ಕೊಡಗು ಜಿಲ್ಲೆಯಲ್ಲಿ ಗೃಹಜ್ಯೋತಿ ಯೋಜನೆಯಡಿ 1,53,623 ಕುಟುಂಬಗಳಲ್ಲಿ 1,51,907 ಕುಟುಂಬಗಳು ನೋಂದಣಿಯಾಗಿದ್ದು, ಮೇ ಅಂತ್ಯದವರೆಗೆ 5905.30 ಲಕ್ಷ ರೂ. ಸಹಾಯಧನ ಕಲ್ಪಿಸಲಾಗಿದೆ ಎಂದರು.

ಶಕ್ತಿ ಯೋಜನೆಯಿಂದ ಇದುವರೆಗೆ 62,04,618 ಮಂದಿ ಮಹಿಳೆಯರು ಪ್ರಯಾಣ ಮಾಡಿದ್ದು, 24.65 ಕೋಟಿ ರೂ. ಭರಿಸಲಾಗಿದೆ ಎಂದು ಕೆಎಸ್ ಆರ್‌ಟಿಸಿ ಘಟಕ ವ್ಯವಸ್ಥಾಪಕರಾದ ಮೆಹಬೂಬ್ ಅಲಿ ತಿಳಿಸಿದರು.

ತಾಲೂಕು ಘಟಕದ ಅಧ್ಯಕ್ಷರಾದ ಮೋಹನ್ ದಾಸ್(ಮಡಿಕೇರಿ), ಜಾನ್ಸನ್(ವಿರಾಜಪೇಟೆ) ಇತರರು ಇದ್ದರು.

ಶ್ರೀಗಳ 62ನೇ ಜನ್ಮ ವರ್ಧಂತಿ

ಜನ್ಮವರ್ಧಂತಿ ನಿಮಿತ್ತ ವಿವಿಧ ಮಠಾಧೀಶರು ಶ್ರೀಸಿದ್ದಲಿಂಗ ಸ್ವಾಮೀಜಿಯ ಪಾದಪೂಜೆ ನೆರವೇರಿಸಿದರು.

ತುಮಕೂರು: ಸಿದ್ದಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿ ಅವರ 62 ನೇ ಜನ್ಮವರ್ಧಂತಿಯನ್ನು ಭಕ್ತರು ಸರಳವಾಗಿ ಆಚರಿಸಿದರು. ಶ್ರೀಮಠದಲ್ಲಿ ಮುಂಜಾನೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದ್ದು, ಕಿರಿಯ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ ಸಿದ್ದಲಿಂಗ ಸ್ವಾಮೀಜಿಯವರ ಪಾದಪೂಜೆ ನೆರವೇರಿಸಿ ಭಕ್ತಿ ಸಮರ್ಪಿಸಿದರು. ವಿವಿಧ ಮಠಾಧೀಶರುಗಳು ಸಹ ಶ್ರೀಗಳ ಪಾದಪೂಜೆ ನೆರವೇರಿಸಿ ಆಶೀರ್ವಾದ ಪಡೆದು ಭಕ್ತಿ ಸಮರ್ಪಿಸಿದರು.

ಶ್ರೀಗಳು ಎಂದಿನಂತೆ ಮುಂಜಾನೆಯೇ ಇಷ್ಟಲಿಂಗ ಪೂಜೆ ನೆರವೇರಿಸಿದರು. ನಂತರ ಲಿಂಗೈಕ್ಯ ಡಾ.ಶಿವಕುಮಾರ ಸ್ವಾಮೀಜಿಯವರ ಗದ್ದುಗೆಗೆ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು.

ಯಾವುದೇ ರೀತಿಯ ಆಡಂಬರದ ಆಚರಣೆ ನಡೆಸದೆ ಧಾರ್ಮಿಕ ವಿಧಿ ವಿಧಾನಗಳಿಂದಷ್ಟೇ ಜನ್ಮವರ್ಧಂತಿಯನ್ನು ಆಚರಿಸಿದ್ದು ವಿಶೇಷವಾಗಿತ್ತು. ಮಠದ ಮಕ್ಕಳು ಸರದಿ ಸಾಲಿನಲ್ಲಿ ನಿಂತು ಆಶೀರ್ವಾದ ಪಡೆದರು. ಮಠಕ್ಕೆ ಭಕ್ತಾದಿಗಳು ಆಗಮಿಸಿ ಗದ್ದುಗೆ ದರ್ಶನ ಪಡೆದು, ನಂತರ ಸಿದ್ದಲಿಂಗ ಸ್ವಾಮೀಜಿಗಳ ಆಶೀರ್ವಾದ ಪಡೆದರು.

ಸಿಯಾಚಿನ್ ಯುದ್ಧಭೂಮಿಯಲ್ಲಿ ಮೈಸೂರಿನ ಹೆಮ್ಮೆಯ ಯೋಧೆ !

ಮೈಸೂರು: ಪ್ರಪಂಚದ ಅತಿ ಎತ್ತರದ ಯುದ್ಧಭೂಮಿ ಸಿಯಾಚಿನ್ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸಲು ದೇಶದ ಮೊದಲ ಭಾರತೀಯ ಸೇನಾ ಅಧಿಕಾರಿಯಾಗಿ (ಆರ್ಮಿ ಏರ್ ಡಿಫೆನ್ಸ್) ಮೈಸೂರಿನ ಸಿ.ಟಿ. ಸುಪ್ರಿತಾ ಆಯ್ಕೆಯಾಗಿದ್ದಾರೆ.

ಮೂಲತಃ ಚಾಮರಾಜನಗರದ ಸುಪ್ರಿತಾ, ಮೈಸೂರಿನ ಸರದಾರ್ ವಲ್ಲಭಬಾಯಿ ನಗರ ಬಡಾವಣೆ ನಿವಾಸಿ. ಇವರ ತಂದೆ ತಿರುಮಲ್ಲೇಶ್ ತಿ.ನರಸೀಪುರ ತಾಲೂಕಿನ ತಲಕಾಡು ಪೊಲೀಸ್ ಠಾಣೆ ಪಿಎಸ್‌ಐ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ತಾಯಿ ನಿರ್ಮಲ ಗೃಹಿಣಿಯಾಗಿದ್ದು, ಮೈಸೂರಿನಿಂದ ಸಿಯಾಚಿನ್‌ವರೆಗಿನ ಪ್ರಯಾಣ ಸುಪ್ರೀತಾ ಅವರ ಪ್ರಬಲ ಮನೋಸ್ಥೈರ್ಯಕ್ಕೆ ಸಾಕ್ಷಿಯಾಗಿದೆ.

2021ರಲ್ಲಿ ಸುಪ್ರೀತಾ ಅವರು ಸೇನೆಯಲ್ಲಿ ಲೆಫ್ಟಿನೆಂಟ್ ಆಗಿ ನೇಮಕಗೊಂಡಾಗ ಅವರ ಮಿಲಿಟರಿ ಕನಸುಗಳಿಗೆ ರೆಕ್ಕೆ ಬಂದವು. ಚೆನ್ನೈನಲ್ಲಿರುವ ಆಫೀಸರ್ಸ್ ಟ್ರೈನಿಂಗ್ ಅಕಾಡೆಮಿಯ ಕಠಿಣ ತರಬೇತಿಯು ಆರ್ಮಿ ಏರ್ ಡಿಫೆನ್ಸ್ ನಲ್ಲಿ ಕರ್ತವ್ಯ ನಿರ್ವಹಿಸಲು ಅವರನ್ನು ಸಿದ್ಧಪಡಿಸಿತು. ಆಕೆಯ ಸೇವೆಯು ಆಯಕಟ್ಟಿನ ಸ್ಥಳಗಳಾದ ಅನಂತನಾಗ್, ಜಬಲ್ಪುರ್ ಮತ್ತು ಲೇಹ್‌ನಲ್ಲಿ ನಿಯೋಜಿಸಲ್ಪಟ್ಟಿತು. ಜುಲೈ 18ರಂದು ಸಿಯಾಚಿನ್ ಗ್ಲೇಸಿಯರ್‌ಗೆ ಆಕೆಯ ಪೋಸ್ಟಿಂಗ್ ಬಂದಿದೆ ಎಂದು ತಿರುಮಲ್ಲೇಶ್ ಹೇಳಿದ್ದಾರೆ.

ಸಿಯಾಚಿನ್ ಪ್ರದೇಶದಲ್ಲಿ ಕರ್ತವ್ಯ ನಿರತ ಮೈಸೂರಿನ ಸಿ.ಟಿ. ಸುಪ್ರಿತಾ.

ತಲಕಾಡು ಪೊಲೀಸ್ ಠಾಣೆಯ ಎಸ್‌ಐ ಆಗಿರುವ ತಿರುಮಲ್ಲೇಶ್ ಅವರು ತಮ್ಮ ಮಗಳ ಸಾಧನೆಗೆ ಅಪಾರ ಹೆಮ್ಮೆ ವ್ಯಕ್ತಪಡಿಸಿದರು. ಸುಪ್ರೀತಾ ಯಾವಾಗಲೂ ದೃಢನಿಶ್ಚಯ ಮತ್ತು ಏಕಾಗ್ರತೆ ಹೊಂದಿದ್ದಾಳೆ. ಅವರ ಕನಸು ನನಸಾಗಿದೆ ಮತ್ತು ಅನೇಕರಿಗೆ ಸ್ಫೂರ್ತಿಯಾಗಿದೆ ಎಂದು ಹೇಳಿದರು.

ಸುಪ್ರೀತಾ ಹುಣಸೂರಿನ ಶಾಸ್ತ್ರಿ ವಿದ್ಯಾ ಸಂಸ್ಥೆ, ಎಚ್.ಡಿ. ಕೋಟೆಯ ಸೇಂಟ್ ಮೇರಿಸ್, ಕೆ.ಆರ್. ನಗರದ ಸೇಂಟ್ ಜೋಸೆಫ್ ಮತ್ತು ಮೈಸೂರಿನ ಮರಿಮಲ್ಲಪ್ಪ ಶಾಲೆಯಲ್ಲಿ ಓದಿದ್ದಾರೆ. ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಎಲ್‌ಎಲ್ ಬಿ ವ್ಯಾಸಂಗ ಮಾಡಿದರು. ಸುಪ್ರೀತಾ 2024ರಲ್ಲಿ ಕರ್ನಲ್ (ನಿವೃತ್ತ) ರಿಚರ್ಡ್ ಬ್ಲೇಜ್ ಮತ್ತು ಲೆ.ಕರ್ನಲ್ ವಿಜಯಲಕ್ಷ್ಮಿ ದಂಪತಿ ಪುತ್ರ ಮೇಜರ್ ಜೆರಿರ್ ಬ್ಲೇಜ್ ಅವರನ್ನು ವಿವಾಹವಾದರು. ಈ ವರ್ಷದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿದ ಮೊದಲ ಜೋಡಿಯಾಗಿ ದಂಪತಿ ಸುದ್ದಿ ಮಾಡಿದ್ದರು.

ಗುರುಪೂರ್ಣಿಮೆ: ಶಿರಡಿ ಸಾಯಿಬಾಬಾ ಪಲ್ಲಕ್ಕಿ ಉತ್ಸವ

ಚಿಕ್ಕಬಳ್ಳಾಪುರ: ಆಷಾಢ ಮಾಸದ ಹುಣ್ಣಿಮೆಯ ದಿನವಾದ ಭಾನುವಾರ ಜಿಲ್ಲೆಯಾದ್ಯಂತ ಶ್ರದ್ಧಾಭಕ್ತಿ,ಸಡಗರ ಸಂಭ್ರಮದಿಅದ ಗುರು ಪೂರ್ಣಿಮೆಯನ್ನು ವಿಶೇಷವಾಗಿ ಆಚರಿಸಲಾಯಿತು. ನಗರದಲ್ಲಿರುವ ಶಿರಡಿ ಸಾಯಿ ಬಾಬಾ ಮಂದಿರಗಳಲ್ಲಿ ವಿಶೇಷ ಧಾರ್ಮಿಕ ಕೈಂಕರ್ಯಗಳು ಜರುಗಿದವು. ಭಕ್ತರು ಬೆಳಿಗ್ಗೆಯಿಂದಲೇ ದೇವಾಲಯಗಳಿಗೆ ತೆರಳಿ ಬಾಬಾ ದರ್ಶನ ಪಡೆದರು. ಬಾಬಾ ಅವರ ಪಲ್ಲಕ್ಕಿ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ನಗರದ ಎಂ.ಜಿ.ರಸ್ತೆಯ ಮುನ್ಸಿಪಲ್ ಬಡಾವಣೆಯ ಸಿದ್ಧಿವಿನಾಯಕ, ಶಿರಡಿ ಸಾಯಿಬಾಬಾ ಹಾಗೂ ಅನ್ನಪೂರ್ಣೇಶ್ವರಿ ದೇವಾಲಯ ಮತ್ತು ಸುಬ್ರಹ್ಮಣ್ಯೇಶ್ವರ, ಶನೈಶ್ಚರ, ಶಿರಡಿ ಸಾಯಿಬಾಬಾ ಮಂದಿರ, ಹಾರೋಬಂಡೆ ಹತ್ತಿರದ ಸಾಯಿಬಾಬಾ ಮಂದಿರಗಳಲ್ಲಿ ಗುರು ಪೂರ್ಣಿಮೆ ಆಚರಿಸಲಾಯಿತು.

ಎಲ್ಲೆಡೆ ಸಾಯಿಬಾಬ ಮಂದಿರ ಹಾಗೂ ದೇವಾಲಯವನ್ನುಮಾವು, ಬಾಳೆ, ಹೂವುಗಳಿಂದ ಅಲಂಕಾರ ಮಾಡಲಾಗಿತ್ತು. ಭಕ್ತರು ಕೂಡ ವಿವಿಧ ಪೂಜೆ ಸಲ್ಲಿಸಿ ಕೃತಾರ್ಥರಾದರು. ಸಾಯಿಬಾಬಾ ಮಂದಿರದಲ್ಲಿ ಕಾಕಡಾರತಿ, ಭಕ್ತಾದಿಗಳಿಂದ ಕ್ಷೀರಾಭಿಷೇಕ, ಸತ್ಯನಾರಾಯಣ ಪೂಜೆ, ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಬೆಂಗಳೂರು ಉತ್ತರ ತಾಲೂಕಿನ ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಆರ್.ವಿಶ್ವನಾಥ್ ವಿವಿಧ ಕಡೆ ಪ್ರಮುಖ ರಸ್ತೆ, ಚರಂಡಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿದರು. ಇದೇ ವೇಳೆ ರಾಹುತನಹಳ್ಳಿ ಗ್ರಾಮದ ನೂತನ ಅಂಬೇಡ್ಕರ್ ಭವನ, ಅಂಗನವಾಡಿ ಕಿತ್ತನಹಳ್ಳಿ ಗ್ರಂಥಾಲಯ ಉದ್ಘಾಟಿಸಿದರು. ಬೆಟ್ಟಹಳ್ಳಿ ಗ್ರಾಮದ ಒಂದು ಕೋಟಿ ವೆಚ್ಚದ ಒಳಚರಂಡಿ ನಿರ್ಮಾಣಕ್ಕೂ ಗುದ್ದಲಿ ಪೂಜೆ ನಡೆಯಿತು. ಈ ಸಂದರ್ಭದಲ್ಲಿ ಕಿತ್ತನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಭಾಗ್ಯ ಶೇಖರ್, ಉಪಾಧ್ಯಕ್ಷ ಬೆಟ್ಟಹಳ್ಳಿ ಕುಮಾರ, ಹಾಲಿ ಸದಸ್ಯರಾದ ಕಿರಣ್ ಕುಮಾರ, ನರಸೇಗೌಡರು, ರವಿ ಗೌಡ, ಸವಿತಾ ಕೆಂಪಯ್ಯ, ಯಲಹಂಕ ಮಂಡಲ ಬಿಜೆಪಿ ಅಧ್ಯಕ್ಷ ಹನುಮಯ್ಯ ಇದ್ದರು.

ಒಲಂಪಿಯಾ ಟಾಕೀಸ್ ಡಗೋಡೆ ಕುಸಿತ: ಇಬ್ಬರ ಸ್ಥಿತಿ ಗಂಭೀರ

ಮೈಸೂರು: ನಗರದ ಒಲಂಪಿಯಾ ಚಿತ್ರಮಂದಿರದ ಗೋಡೆ ಸೋಮವಾರ ಮಧ್ಯಾಹ್ನ ಕುಸಿತ ಕಂಡಿದೆ. ಪರಿಣಾಮ ನಾಲ್ವರಿಗೆ ಗಾಯಗಳಾಗಿದ್ದು, ಇಬ್ಬರ ಪರಿಸ್ಥಿತಿ ಗಂಭೀರವಾಗಿದೆ. ಎಲ್ಲರನ್ನೂ ಕೆ.ಆರ್. ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಕಳೆದ ಒಂದು ವಾರದಿಂದ ಎಡಬಿಡದೆ ಸುರಿದ ನಿರಂತರ ಮಳೆಗೆ ಚಿತ್ರಮಂದಿರದ ಹಿಂಬದಿಯ ಗೋಡೆ ಸಂಪೂರ್ಣ ಶೀತಗೊಂಡು ಸಡಿಲವಾಗಿ ದಿಢೀರ್ ಕುಸಿತವಾಗಿದೆ. ಈ ವೇಳೆ ಗೋಡೆ ಬದಿಯಲ್ಲಿ ವ್ಯಾಪಾರ ಮಾಡುತ್ತಿದ್ದ ನಾಲ್ವರಿಗೆ ಗಾಯವಾದರೆ, ಗೋಡೆಯ ಅವಶೇಷಗಳ ಅಡಿಯಲ್ಲಿ ಸಿಲುಕಿದ ಇಬ್ಬರ ಪರಿಸ್ಥಿತಿ ಗಂಭೀರವಾಗಿದೆ. ಬಟ್ಟೆ ವ್ಯಾಪಾರಿಗಳಾದ ತಬರೇಜ್ ಮತ್ತು ಅರ್‌ಮಾನ್ ಗಂಭೀರವಾಗಿ ಗಾಯಗೊಂಡರಾಗಿದ್ದು, ಇಬ್ಬರೂ ಚಿಕಿತ್ಸೆ ಪಡೆಯುತ್ತಿದ್ದಾರೆ. ಗೋಡೆ ಬಿದ್ದ ಮಾಹಿತಿ ಸಿಗುತ್ತಿದ್ದಂತೆ ಘಟನಾ ಸ್ಥಳಕ್ಕೆ ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ ತಕ್ಷಣ ಆಗಮಿಸಿ ಪರಿಶೀಲನೆ ನಡೆಸಿ, ಗೋಡೆಯ ಅವಶೇಷಗಳ ಕೆಳಗೆ ಸಿಲುಕಿದವರನ್ನು ರಕ್ಷಿಸಿದರು. ನಂತರ ಬಟ್ಟೆ ಅಂಗಡಿ ಸ್ಟಾಲ್‌ಗಳನ್ನು ಜೆಸಿಬಿ ಯಂತ್ರದ ಮೂಲಕ ತೆರವು ಕಾರ್ಯಾಚರಣೆ ಮಾಡಲಾಯಿತು.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಲಯ, ಮಧುಗಿರಿ.
ಸೀಮಿಸ್ 260/2024.
ಅರ್ಜಿದಾರರು: 1. ಅಶ್ವತ್ತಮ ಕೋಂ. ದಾಳಪ್ಪ, 55 ವರ್ಷ,2. ಪುಷ್ಪ ಬಿನ್ ದಾಳಪ್ಪ, 31 ವರ್ಷ,3. ಗೀತಾ ಬಿನ್ ದಾಳಪ್ಪ –28 ವರ್ಷ. ಎಲ್ಲರ ವಾಸ –ದೊಡ್ಡಮಾಲೂರು ಗ್ರಾಮ, ಕೊಡಿಗೇನಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು.
ವಿರುದ್ಧ
ಎದುರುದಾರರು: ಉಪ–ತಹಶೀಲ್ದಾರ್, ನಾಡಕಚೇರಿ, ಕೊಡಿಗೇನಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು.
ಪ್ರಕಟಣೆ
ಮೇಲ್ಕಂಡ 1 ಅರ್ಜಿದಾರರ ತಾಯಿ ಮತ್ತು 2ನೇ ಮತ್ತು 3ನೇ ಅರ್ಜಿದಾರರ ಆಜ್ಜಿಯಾದ ಗೌರಮ್ಮ ಕೋಂ. ತಿಮ್ಮಯ್ಯ ರವರು ದಿನಾಂಕ:18–12–1985 ರಂದು ಮಧುಗಿರಿ ತಾಲ್ಲೂಕು, ಕೊಡಿಗೇನಹಳ್ಳಿ ಹೋಬಳಿ, ದೊಡ್ಡಮಾಲೂರು ಗ್ರಾಮದ ವಾಸದ ಮನೆಯಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿರವರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿರವರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ:27–08–2024 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ 2024ನೇ ವರ್ಷದ ಜುಲೈ ತಿಂಗಳ 22 ನೇ ದಿನ.
ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೆದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಲಯ, ಮಧುಗಿರಿ.
ಅರ್ಜಿದಾರರ ಪರ ವಕೀಲರು
ಪಿ.ಸಿ ನಾಗಭೂಷಣ, ಮಧುಗಿರಿ.

ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂಎಫ್.ಸಿ ಮಾಲೂರು,
ಪಿ.ಅಂಡ್ ಎಸ್.ಸಿ. 1/2024
ಅರ್ಜಿದಾರರು:– 1. ಶ್ರೀ ನಾರಾಯಣಸ್ವಾಮಿ ಬಿನ್ ಲೇಟ್ ಚನ್ನಪ್ಪ ವಯಸ್ಸು :– 56 ವರ್ಷ. 2. ಶ್ರೀಮತಿ ಮಂಜುಳ ಕೋಂ ಕೃಷ್ಣಮೂರ್ತಿ.ಪಿ.ಎಂ ವಯಸ್ಸು :– 42 ವರ್ಷ, ಅರ್ಜಿದಾರರಾದ 1 & 2 ರವರ ವಾಸ :–ಪಟಾಲಮ್ಮ ಬಡಾವಣೆ, ವಾರ್ಡ್ ನಂ 17, ಮಾಲೂರು ಟೌನ್ ಕೋಲಾರ ಜಿಲ್ಲೆ.
ವಿರುದ್ಧ
ಎದುರುದಾರರು:– ಇಲ್ಲ.
ಸಾರ್ವಜನಿಕ ನೋಟಿಸ್
ಅರ್ಜಿದಾರರಾದ 1 ಮತ್ತು 2 ರವರ ತಾಯಿ ಲೇಟ್ ಯಲ್ಲಮ್ಮ ರವರು ದಿನಾಂಕ:– 08/05/2023 ರಂದು ಮರಣ ಹೊಂದಿರುತ್ತಾರೆ ಸದರಿ ಅರ್ಜಿದಾರರ ತಾಯಿಯವರು ಸ್ಟೇಟ್ ಬ್ಯಾಂಕ್ ಇಂಡಿಯಾ, ಜೆ.ಎಸ್.ಎಸ್ ಕಾಲೇಜು ಶಾಖೆ, ಮಾಲೂರು ಇಲ್ಲಿ ಉಳಿತಾಯ ಖಾತೆ ನಂ:–00000064149340577 ರಲ್ಲಿ ರೂ 49,303/–ರೂಗಳನ್ನು ಇಟ್ಟಿರುತ್ತಾರೆ. ಸದರಿ ಠೇವಣಿ ಹಣವಾದ ರೂಪಾಯಿ 49,303/– ಪಡೆಯಲು ನಾವೇ ವಾರಸುದಾರರೆಂದು ಪ್ರಮಾಣಿತ ಇಚ್ಛಾ ಪತ್ರ ಮತ್ತು ಉತ್ತರಾಧಿಕಾರ ಪತ್ರವನ್ನು ನೀಡಬೇಕೆಂದು ಕೋರಿ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇವೆ. ಈ ಸಂಬಂಧ ಯಾರಾದರು ತಕರಾರು ಇದ್ದಲ್ಲಿ ಅಂತಹವರು ದಿನಾಂಕ:– 27/08/2024 ನ್ಯಾಯಾಲಯದ ಮುಂದೆ ಖುದ್ದಾಗಿ ಆಗಲಿ ಅಥವಾ ಅಧಿಕಾರವನ್ನು ಹೊಂದಿರುವ ವಕೀಲರ ಮೂಲಕ ಆಗಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಏಕ ಪಕ್ಷೀಯವಾಗಿ ಪರಿಗಣಿಸಿ ಅರ್ಜಿಯನ್ನು ವಿಲೇ ಮಾಡಲಾಗುವುದೆಂದು ಈ ಮೂಲಕ ತಿಳಿಯುವುದು.
ಷೆಡ್ಯೂಲ್ ವಿವರ
ರೂಪಾಯಿ 49,303/– ಉಳಿತಾಯ ಖಾತೆ ನಂ:– 00000064149340577 ಸ್ಟೇಟ್ ಬ್ಯಾಂಕ್ ಇಂಡಿಯಾ, ಜೆ.ಎಸ್.ಎಸ್ ಕಾಲೇಜು ಶಾಖೆ, ಮಾಲೂರು, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸೇದಾರರು
ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಮಾಲೂರು.
ಅರ್ಜಿದಾರರ ಪರ ವಕೀಲರು
ಎ.ಎಸ್.ಲಾ ಚೇಂಬರ್, ಕೆ.ಆರ್.ಅಸೋಸಿಯೇಟ್ಸ್ ಬಿಲ್ಡಿಂಗ್ ಲೀಲಾ ಸಾಯಿ ಆಸ್ಪತ್ರೆ ಹತ್ತಿರ. ಸಿವಿಲ್ ಕೋರ್ಟ್ ಎದುರು ರಸ್ತೆ, ಮಾರುತಿ ಬಡಾವಣೆ, ಮಾಲೂರು ಟೌನ್, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ–563130.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಲಯ, ಮಧುಗಿರಿ.
ಸೀಮಿಸ್ 262/2024.
ಅರ್ಜಿದಾರರು: 1. ಅಶ್ವತ್ತಮ ಕೋಂ. ದಾಳಪ್ಪ, 55 ವರ್ಷ,2. ಪುಷ್ಪ ಬಿನ್ ದಾಳಪ್ಪ, 31 ವರ್ಷ,3. ಗೀತಾ ಬಿನ್ ದಾಳಪ್ಪ –28 ವರ್ಷ. ಎಲ್ಲರ ವಾಸ –ದೊಡ್ಡಮಾಲೂರು ಗ್ರಾಮ, ಕೊಡಿಗೇನಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು.
ವಿರುದ್ಧ
ಎದುರುದಾರರು: ಉಪ – ತಹಶೀಲ್ದಾರ್, ನಾಡಕಚೇರಿ, ಕೊಡಿಗೇನಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು.
ಪ್ರಕಟಣೆ
ಮೇಲ್ಕಂಡ 1 ಅರ್ಜಿದಾರರ ತಂದೆಯಾದ ಮತ್ತು 2ನೇ ಮತ್ತು 3ನೇ ಅರ್ಜಿದಾರರ ತಾತನಾದ ತಿಮ್ಮಯ್ಯ ಬಿನ್ ತಿಮ್ಮಯ್ಯರವರು ದಿನಾಂಕ:03–08–1980–ರಂದು ಮಧುಗಿರಿ ತಾಲ್ಲೂಕು, ಕೊಡಿಗೇನಹಳ್ಳಿ ಹೋಬಳಿ, ದೊಡ್ಡಮಾಲೂರು ಗ್ರಾಮದ ವಾಸದ ಮನೆಯಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿರವರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿರವರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ:27–08–2024 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ 2024ನೇ ವರ್ಷದ ಜುಲೈ ತಿಂಗಳ 22 ನೇ ದಿನ.
ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೆದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಲಯ, ಮಧುಗಿರಿ.
ಅರ್ಜಿದಾರರ ಪರ ವಕೀಲರು
ಪಿ.ಸಿ ನಾಗಭೂಷಣ, ಮಧುಗಿರಿ.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಲಯ, ಮಧುಗಿರಿ.
ಸೀಮಿಸ್ 261/2024.
ಅರ್ಜಿದಾರರು: 1. ಅಶ್ವತ್ತಮ ಕೋಂ. ದಾಳಪ್ಪ, 55 ವರ್ಷ,2. ಪುಷ್ಪ ಬಿನ್ ದಾಳಪ್ಪ, 31 ವರ್ಷ,3. ಗೀತಾ ಬಿನ್ ದಾಳಪ್ಪ –28 ವರ್ಷ. ಎಲ್ಲರ ವಾಸ –ದೊಡ್ಡಮಾಲೂರು ಗ್ರಾಮ, ಕೊಡಿಗೇನಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು.
ವಿರುದ್ಧ
ಎದುರುದಾರರು: ಉಪ – ತಹಶೀಲ್ದಾರ್, ನಾಡಕಚೇರಿ, ಕೊಡಿಗೇನಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು.
ಪ್ರಕಟಣೆ
ಮೇಲ್ಕಂಡ 1 ಅರ್ಜಿದಾರರ ದೊಡ್ಡಮ್ಮ ಮತ್ತು 2ನೇ ಮತ್ತು 3ನೇ ಅರ್ಜಿದಾರರ ಆಜ್ಜಿಯಾದ ಚಿಕ್ಕಲಕ್ಷ್ಮಮ್ಮ ಕೋಂ. ತಿಮ್ಮಯ್ಯ ರವರು ದಿನಾಂಕ:21–04–1980 ರಂದು ಮಧುಗಿರಿ ತಾಲ್ಲೂಕು, ಕೊಡಿಗೇನಹಳ್ಳಿ ಹೋಬಳಿ, ದೊಡ್ಡಮಾಲೂರು ಗ್ರಾಮದ ವಾಸದ ಮನೆಯಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿರವರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿರವರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ:27–08–2024 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ 2024ನೇ ವರ್ಷದ ಜುಲೈ ತಿಂಗಳ 22 ನೇ ದಿನ.
ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೆದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಲಯ, ಮಧುಗಿರಿ.
ಅರ್ಜಿದಾರರ ಪರ ವಕೀಲರು
ಪಿ.ಸಿ ನಾಗಭೂಷಣ, ಮಧುಗಿರಿ.

ಸಮಾಚಾರ ಸಣ್ಣದಲ್ಲ

ನೈರ್ಮಲ್ಯದ ಕೊರತೆ ಎರಡು ದರ್ಶಿನಿ ಬಂದ್

ಬೆಂಗಳೂರು: ಬಿಬಿಎಂಪಿಯು ನೈರ್ಮಲ್ಯವನ್ನು ಕಾಪಾಡಿಕೊಳ್ಳದ ಹಿನ್ನೆಲೆಯಲ್ಲಿ ಇಂದಿರಾನಗರದ ಎರಡು ದರ್ಶಿನಿಗಳನ್ನು ಬಂದ್ ಮಾಡಿದೆ. ಸಾರ್ವಜನಿಕರ ದೂರಿನ ಮೇರೆಗೆ ಬಿಬಿಎಂಪಿ ಅಧಿಕಾರಿಗಳು ದರ್ಶಿನಿಗಳನ್ನು ಪರಿಶೀಲಿಸಿದ್ದಾರೆ. ಈ ವೇಳೆ ತ್ಯಾಜ್ಯಗಳ ಎಸೆಯುವಿಕೆ ಹಾಗೂ ಸೊಳ್ಳೆಗಳ ಉತ್ಪತ್ತಿಯ ತಾಣವಾಗಿ ಅನೈರ್ಮಲ್ಯದಿಂದ ಕೂಡಿದ್ದ ಹಿನ್ನೆಲೆಯಲ್ಲಿ ಬಂದ್ ಮಾಡಿದ್ದಾರೆ. ಈ ಬಗ್ಗೆ ಬಿಬಿಎಂಪಿ ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ಮಾತನಾಡಿ, ಉಪಹಾರ ಗೃಹದಲ್ಲಿ ಕೆಲವು ಕಡೆ ನಿಂತ ನೀರು ಮತ್ತು ಅನೈರ್ಮಲ್ಯವನ್ನು ನಾವು ಗಮನಿಸಿದ್ದೇವೆ. ಹೀಗಾಗಿ, ನಾವು ಅವರಿಗೆ ನೋಟಿಸ್ ಜಾರಿ ಮಾಡಿ ಉಪಹಾರ ಗೃಹಗಳನ್ನು ಮುಚ್ಚಿಸಿದ್ದೇವೆ. ಅಲ್ಲದೆ ಈ ಉಪಹಾರ ಗೃಹಗಳಿಗೆ 25,000 ರು. ದಂಡವನ್ನು ವಿಧಿಸಲಾಗಿದ್ದು, ದಂಡವನ್ನು ಪಾವತಿಸಿದ ಬಳಿಕ ನೈರ್ಮಲ್ಯ ಕ್ರಮಗಳನ್ನು ಜಾರಿಗೆ ತಂದ ನಂತರವೇ ಉಪಹಾರ ಗೃಹವನ್ನು ಮತ್ತೆ ತೆರೆಯಲು ಅನುಮತಿ ನೀಡಲಾಗುತ್ತದೆ ಎಂದರು. ಸ್ಥಳೀಯರು ಈ ಕುರಿತು ಮಾತನಾಡಿ, ವಿದ್ಯುತ್ ಸರಬರಾಜಿನ ಸಮಸ್ಯೆಯಿಂದ ಉಪಾಹಾರ ಗೃಹಗಳು ಸ್ಥಗಿತ ಗೊಂಡಿವೆ ಎಂಬ ಬೋರ್ಡ್ ಹಾಕಿದ್ದು, ಇದರಿಂದ ಸಾರ್ವಜನಿಕರಿಗೆ ತಪ್ಪು ಸಂದೇಶ ರವಾನೆಯಾಗಿದೆ. ಬಿಬಿಎಂಪಿ ಉಪಹಾರ ಗೃಹದ ಬಾಗಿಲಿಗೆ ನೋಟಿಸ್ ಅಂಟಿಸಬೇಕು. ಇದರಿಂದ ಅವರ ಮೇಲೆ ಕೈಗೊಂಡ ಕ್ರಮದ ಗಂಭೀರತೆಯು ಎಲ್ಲರಿಗೂ ಅರಿವಾಗುತ್ತದೆ. ಈಗ ನೈರ್ಮಲ್ಯದ ಕೊರತೆಯ ತನ್ನ ತಪ್ಪನ್ನು ಉಪಹಾರ ಗೃಹದವರು ಬಿಬಿಎಂಪಿ ಮೇಲೆ ಹೊರಿಸುವ ಮೂಲಕ ತನ್ನ ತಪ್ಪನ್ನು ಮುಚ್ಚಿ ಹಾಕಲು ಯತ್ನಿಸುತ್ತಿದೆ ಎಂದರು ಆರೋಪಿಸಿದ್ದಾರೆ.

ವಿದ್ವತ್ತಿನ ಕ್ಷೇತ್ರದ ಅಭಿವೃದ್ಧಿ ಕುಂಠಿತ

ಬೆಂಗಳೂರು: ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿಯಾಗುತ್ತಿದ್ದರೂ, ವಿದ್ವತ್ತಿನ ಕ್ಷೇತ್ರದಲ್ಲಿ ಮಾತ್ರ ಅಭಿವೃದ್ಧಿ ಕುಂಠಿತವಾಗುತ್ತಿದೆ' ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ಬೇಸರ ವ್ಯಕ್ತಪಡಿಸಿದರು.

ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಾಹಿತಿ ಎಂ.ಎ. ಜಯಚಂದ್ರ ಅವರಿಗೆ ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ ದತ್ತಿ ಪ್ರಶಸ್ತಿ' ಪ್ರದಾನ ಮಾಡಿ ಮಾತನಾಡಿದ ಅವರು, ಜಲಕ್ಷಾಮ ಉಂಟಾದರೆ ಮಳೆಗಾಳದಲ್ಲಿ ನೀರು ಉಕ್ಕುತ್ತದೆ. ವಾಯುಮಾಲಿನ್ಯ ಸೇರಿ ವಿವಿಧ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಆದರೆ, ವಿದ್ವತ್ತಿನ ಬರಗಾಲ ಉಂಟಾದಲ್ಲಿ ನೂರು ವರ್ಷಗಳಾದರೂ ಅದನ್ನು ತುಂಬುವುದು ಕಷ್ಟ. ಈಗ ವಿದ್ವತ್ತಿನ ಕ್ಷೇತ್ರ ಅವಸರ್ಪಿಣಿ ಯುಗದಲ್ಲಿದೆ. 50-100 ವರ್ಷಗಳು ಹಿಂದಕ್ಕೆ ಹೋದಲ್ಲಿ ವಿದ್ವತ್ತಿನ ಪ್ರಕಾಶ ಕಾಣಬಹುದು. ವಿದ್ವತ್ ಕೂಡ ಒಂದು ರೀತಿಯ ಬೆಳಕಾಗಿದೆ. ವಿದ್ಯುತ್ ಹೋದರೆ ಬೆಳಕು ಕೂಡ ಹೋಗುತ್ತದೆ. ವಿದ್ವತ್ ಒಮ್ಮೆ ಸೃಷ್ಟಿಯಾದರೆ ಅದು ನಾಶವಾಗುವುದಿಲ್ಲ' ಎಂದು ಹೇಳಿದರು. ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಮಾತನಾಡಿ, ವಿದ್ವತ್ ಹಾಗೂ ಸಂಶೋಧನೆಯಲ್ಲಿ ಪ್ರಾಮಾಣಿಕತೆ, ಶಿಸ್ತು ಮತ್ತು ಶ್ರದ್ಧೆ ಅಗತ್ಯ. ಈ ಮೂರೂ ವಿಚಾರಗಳನ್ನು ಕ್ರೋಡೀಕರಿಸಿಕೊಂಡು ಸಂಶೋಧನೆ ಮಾಡುವವರ ಸಂಖ್ಯೆ ಇತ್ತೀಚೆಗೆ ವಿರಳ. ಇಂತಹ ಸಂದರ್ಭದಲ್ಲಿಯೂ ಹೊಸ ವಿದ್ವಾಂಸರು ಹುಟ್ಟಿಕೊಳ್ಳುತ್ತಿದ್ದಾರೆ. ಅಂತಹವರಿಗೆ ಆದರ್ಶಪ್ರಾಯವಾಗಿರುವ ಕೆಲಸವನ್ನು ಜಯಚಂದ್ರ ಮಾಡಿದ್ದಾರೆ ಎಂದರು. ಅಂಕಿತ ಪುಸ್ತಕ ಪ್ರಕಾಶನದ ಪ್ರಕಾಶ್ ಕಂಬತ್ತಳ್ಳಿ ಮಾತನಾಡಿ, ಕಂಬತ್ತಳ್ಳಿಯನ್ನು ಬೆಂಗಳೂರಿಗೆ ತರಬೇಕು ಎಂಬ ಹಂಬಲ ಮೂಡಿತ್ತು. ಆದ್ದರಿಂದ ತಂದೆ-ತಾಯಿ ಹೆಸರಿನಲ್ಲಿ ದತ್ತಿ ಪ್ರಶಸ್ತಿ ಸ್ಥಾಪಿಸಲಾಯಿತು ಎಂದರು.

ಹಡಪದ ಸಮಾಜಕ್ಕೆ ಸಚಿವ ಶಿವರಾಜ ತಂಗಡಗಿ ಭರವಸೆ

ಜಾತಿ ಪ್ರಮಾಣಪತ್ರ ಗೊಂದಲಕ್ಕೆ ತೆರೆ

ಬೆಂಗಳೂರು: ಹಡಪದ ಸಮಾಜದ ಮಕ್ಕಳು ಜಾತಿ ಪ್ರಮಾಣ ಪತ್ರ ಪಡೆಯವಲ್ಲಿ ಉಂಟಾಗಿರುವ ಗೊಂದಲಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಡಗಿ ಭರವಸೆ ನೀಡಿದರು.

ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಶಿವಶರಣ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಡಪದ ಸಮಾಜದ ಅಭಿವೃದ್ಧಿಗೆ ಸರಕಾರ ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದು ಅವುಗಳ ಸಮರ್ಪಕ ಅನುಷ್ಠಾನಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸುವುದಾಗಿ ತಿಳಿಸಿದ್ದಾರೆ.

ಹಡಪದ ಸಮಾಜದ ಕಟ್ಟಡಕ್ಕಾಗಿ ಬೆಂಗಳೂರಿನಲ್ಲಿ ಈ ಹಿಂದೆ ನಿವೇಶನವನ್ನು ಗುರುತಿಸಲಾಗಿದ್ದು ಕಾನೂನು ತೊಡಕು ಉಂಟಾದ ಕಾರಣ ಅದು ಇನ್ನೂ ಮಂಜೂರಾಗಿಲ್ಲ ಈ ಕುರಿತು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಹಡಪದ ಸಮಾಜಕ್ಕೆ ಬೆಂಗಳೂರಿನಲ್ಲಿ ನಿವೇಶನ ಒದಗಿಸುವ ಕುರಿತು ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಪ್ರತಿ ನಿಗಮಕ್ಕೆ ಕನಿಷ್ಠ ಐದು ಕೋಟಿ

ಕಳೆದ ಸರಕಾರದ ಅವಧಿಯಲ್ಲಿ 11 ನಿಗಮಗಳನ್ನು ಘೋಷಣೆ ಮಾಡಿ ಆದೇಶ ಹೊರಡಿಸಿದ್ದು, ಅವು ಕೇವಲ ಕಾಗದದ ಮೇಲೆ ಉಳಿದಿದೆ. ಅದಕ್ಕೆ ಪೂರಕವಾದ ಯಾವುದೇ ಸಿದ್ಧತೆಗಳನ್ನು ಹಿಂದಿನ ಸರಕಾರ ಮಾಡಿರಲಿಲ್ಲ, ಪ್ರತಿ ನಿಗಮಕ್ಕೆ ಕನಿಷ್ಠ ಪಕ್ಷ ಐದು ಕೋಟಿ ಮೀಸಲಾಗಿಡಬೇಕಿತ್ತು, ಅದನ್ನು ಸಹ ಮಾಡಿಲ್ಲ. ಹೀಗಾಗಿ ಈಗ ಸಮಸ್ಯೆ ಎದುರಾಗಿದ್ದು, ಇದನ್ನು ಆದಷ್ಟು ಬೇಗ ಬಗೆಹರಿಸುವ ಪ್ರಯತ್ನವನ್ನು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ತೀರ್ಮಾನಿಸುವುದಾಗಿ ತಿಳಿಸಿದ್ದಾರೆ.

ತುಳಿತಕ್ಕೆ ಒಳಗಾದ ಎಲ್ಲ ಸಮಾಜಗಳ ಸಬಲೀಕರಣಕ್ಕೆ ಕಟಿಬದ್ಧವಾಗಿದ್ದು, ಅವುಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಬೇಕಾದ ಎಲ್ಲ ಪ್ರಯತ್ನ ಮಾಡಿ, ಪ್ರತಿಯೊಂದನ್ನೂ ಯೋಜನಾಬದ್ಧ ವಾಗಿ ಮಾಡಲು ಸಮಯ ಬೇಕಾಗಿದೆ, ಶೀಘ್ರವೇ ಎಲ್ಲ ನಿಗಮಗಳಿಗೆ ಅಗತ್ಯ ಅನುದಾನ ಒದಗಿಸಿ ಆಯಾ ಸಮಾಜದ ಪ್ರಗತಿಗೆ ಪೂರಕವಾದ ಯೋಜನೆ ಅನುಷ್ಠಾನಗೊಳಿಸಲಾಗುವುದು ಎಂದು ಸಚಿವರು ತಿಳಿಸಿದರು.

ರಾಜ್ಯಮಟ್ಟದ 4 ವಿಶೇಷ ಕಾರ್ಯಕ್ರಮ: ಕರ್ನಾಟಕ ನಾಮಕರಣದ ಸುವರ್ಣ ಸಂದರ್ಭಕ್ಕಾಗಿ ನವೆಂಬರ್ ಒಳಗೆ ನಾಲ್ಕು ವಿಶೇಷ ಕಾರ್ಯಕ್ರಮಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರೂಪಿಸಲಾ ಗುತ್ತಿದೆ. ರಾಯಚೂರಿನಲ್ಲಿ ಗೋಕಾಕ್ ಚಳವಳಿಯ ಹಿನ್ನೋಟ -ಮುನ್ನೋಟ ಎಂಬ ರಾಜ್ಯಮಟ್ಟದ ಸಮಾವೇಶ, ಜತ್ತ ತಾಲೂಕಿನಲ್ಲಿ ಗಡಿಭಾಗದ ಸಾಂಸ್ಕೃತಿಕ ಸಮಾವೇಶ, ಮೈಸೂರಿನಲ್ಲಿ ಸಾಹಿತಿ ,ಚಿಂತಕರ ಸಮಾವೇಶ ಹಾಗೂ ಬೆಂಗಳೂರಿನಲ್ಲಿ ಸುವರ್ಣ ಸಂಭ್ರಮ 50 ಎಂಬ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು, ಇವು ಕರ್ನಾಟಕ ನಾಮಕರಣದ ಸುವರ್ಣ ಸಂಭ್ರಮದ ಮೆರಗನ್ನು ಹೆಚ್ಚಿಸಲು ಕಾರಣವಾಗುತ್ತದೆ ಎಂದು ಸಚಿವ ತಂಗಡಗಿ ತಿಳಿಸಿದರು.

ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಶಿವಶರಣ ಶ್ರೀಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮ ಉದ್ಘಾಟಿಸಿದ ಸಚಿವ ಶಿವರಾಜ ತಂಗಡಗಿ. ಹಡಪದ ಅಪ್ಪಣ್ಣ ದೇವರ ಮಹಾಸಂಸ್ಥಾನ ಮಠದ ಸ್ವಾಮೀಜಿ ಪೂಜ್ಯ ಶ್ರೀಅನ್ನದಾನಿ ಭಾರತಿ ಅಪ್ಪಣ್ಣ ಮಹಾಸ್ವಾಮಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಡಾ. ಅಜಯ್ ನಾಗಭೂಷಣ್ ಭಾಗಿಯಾಗಿದ್ದರು.

> ತಂಗಡಗಿಯಲ್ಲಿರುವ ಹಡಪದ ಅಪ್ಪಣ್ಣ ಮಹಾಸಂಸ್ಥಾನ ಮಠದ ಅಭಿವೃದ್ಧಿಗಾಗಿ 3 ಕೋಟಿ ಮಂಜೂರು ಮಾಡಲಾಗಿದ್ದು, ಅದರಲ್ಲಿ 75 ಕೋಟಿ ಈಗಾಗಲೇ ಬಿಡುಗಡೆಯಾಗಿದೆ. ಈ ಬಿಡುಗಡೆಯಾದ ಹಣದ ಉಪಯೋಗ ಪ್ರಮಾಣ ಪತ್ರ ಒದಗಿಸಿದ ಕೂಡಲೇ ಉಳಿದ ಹಣವನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುತ್ತದೆ.
>
> -ಶಿವರಾಜ ತಂಗಡಗಿ, ಕನ್ನಡ -ಸಂಸ್ಕೃತಿ ಇಲಾಖೆ ಸಚಿವ

ಪಾಲಿಕೆಯಿಂದ ಕರಡು ಪ್ರತಿ ಬಿಡುಗಡೆ | ಆಕ್ಷೇಪಣೆ ಸಲ್ಲಿಕೆಗೆ 30 ದಿನ ಕಾಲಾವಕಾಶ

ಬಿಬಿಎಂಪಿಯಿಂದ ಹೊಸ ಜಾಹೀರಾತು ಕಾಯಿದೆ ಜಾರಿ

ಬೆಂಗಳೂರು: ನಗರದ ಸೌಂದರ್ಯ ಹಾಳಾಗದಂತೆ ವೈಜ್ಞಾನಿಕವಾಗಿ ಜಾಹೀರಾತು ಕಾಯಿದೆಯನ್ನು ಜಾರಿಗೆ ತರಲು ಸರಕಾರವು ಅನುಮತಿ ನೀಡಿದ ಬೆನ್ನಲ್ಲೇ ರಾಜ್ಯ ಪತ್ರದ ಮೂಲಕ ಕರಡುಪ್ರತಿಯನ್ನು ಬಿಬಿಎಂಪಿ ಬಿಡುಗಡೆ ಮಾಡಿದ್ದು, ಆಕ್ಷೇಪಣೆ ಸಲ್ಲಿಸಲು 30 ದಿನಗಳ ಕಾಲಾವಕಾಶವನ್ನು ನೀಡಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತುಗಳಿಗೆ ಕಡಿವಾಣ ಹಾಕಲು ಹಾಗೂ ಸರಕಾರದ ಖಜಾನೆಯನ್ನು ಭರ್ತಿ ಮಾಡುವ ಸಲುವಾಗಿ ಜಾಹಿರಾತು ನಿಯಮ ತಿದ್ದುಪಡಿ ಮಾಡಲು ಮುಂದಾಗಿದ್ದು, ಹೊಸ ಜಾಹಿರಾತು ನಿಯಮ ಜಾರಿಗೆ ತರಲು ರಾಜ್ಯ ಸರಕಾರ ಮುಂದಾಗಿತ್ತು. ಇದರ ಬೆನ್ನಲ್ಲೇ ಹೊಸ ಜಾಹೀರಾತು ಕಾಯಿದೆ ಜಾರಿ ಮಾಡಲಾಗಿದೆ.

ಹೊಸ ಜಾಹೀರಾತು ನೀತಿಯ ಅಂಶಗಳು: ಜಾಹೀರಾತು ಟೆಂಡರ್‌ನಲ್ಲಿ ಭಾಗವಹಿಸಲು ಪಾಲಿಕೆಯಲ್ಲಿ ನೋಂದಣಿ ಕಡ್ಡಾಯವಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ನೋಂದಣಿ ಶುಲ್ಕ 5 ಲಕ್ಷ ರು. ನಿಗದಿ ಮಾಡಲಾಗಿದೆ. ಒಮ್ಮೆ ನೋಂದಣಿ ಪಡೆದವರು ಪ್ರತಿ 3 ವರ್ಷಕ್ಕೆ ನವೀಕರಣ ಮಾಡಬೇಕು. ರಸ್ತೆ, ಸರ್ಕಲ್, ವಲಯವಾರು ಪ್ಯಾಕೇಜ್ ಮಾದರಿಯಲ್ಲಿ ಟೆಂಡರ್ ನೀಡಲಾಗುತ್ತದೆ. ರಸ್ತೆ ಅಗಲ, ಸರ್ಕಲ್ ಗಾತ್ರಕ್ಕೆ ಅನುಗುಣವಾಗಿ ಜಾಹೀರಾತು ಫಲಕಕ್ಕೆ ಅವಕಾಶ. ಒಂದು ಜಾಹೀರಾತು ಫಲಕದಿಂದ ಮತ್ತೊಂದಕ್ಕೆ 100 ಮೀಟರ್ ಅಂತರ ಕಡ್ಡಾಯ. ಜಾಹೀರಾತು ಫಲಕ ಅಳವಡಿಕೆಗೆ ಸಬ್ ರಿಜಿಸ್ಟರ್(ಮಾರ್ಗಸೂಚಿ) ದರ ಆಧರಿಸಿ ಶುಲ್ಕ ನಿಗದಿ. ಮಾರ್ಗಸೂಚಿ ಪ್ರಕಾರ ಹೆಚ್ಚಿನ ಬಿಡ್ ಮಾಡಿದವರಿಗೆ ಗುತ್ತಿಗೆ ನೀಡಲಾಗುತ್ತದೆ. ನೂತನ ಜಾಹೀರಾತು ನೀತಿಯಲ್ಲಿ ಪರಿಸರಸ್ನೇಹಿ ವಸ್ತುಗಳ ಬಳಕೆ ಮಾಡಬೇಕು.

> **ಖಾಸಗಿ-ಸರಕಾರಿ ಕಟ್ಟಡಗಳ ಮೇಲೆ ಜಾಹೀರಾತು**
>
> ಸರಕಾರಿ ಹಾಗೂ ಖಾಸಗಿ ಕಟ್ಟಡಗಳ ಮೇಲೆ ಜಾಹೀರಾತಿಗೆ ಅವಕಾಶವಿದೆ. ಬಿಬಿಎಂಪಿಗೆ ತೆರಿಗೆ ನೀಡಿ ಖಾಸಗಿ ಕಟ್ಟಡಗಳು ಜಾಹಿರಾತಿಗೆ ಬಾಡಿಗೆ ನೀಡಬಹುದು. ಹೊಸ ಜಾಹೀರಾತು ನೀತಿಯಿಂದ 1 ಸಾವಿರ ಕೋಟಿ ರು. ವಾರ್ಷಿಕ ಆದಾಯ ನಿರೀಕ್ಷೆ ಇದೆ. ವಿಧಾನಸೌಧ, ಹೈಕೋರ್ಟ್, ರಾಜಭವನ ರಸ್ತೆ, ಕುಮಾರಕೃಪಾ ರಸ್ತೆ, ಅಂಬೇಡ್ಕರ್ ಬೀದಿ, ನೃಪತುಂಗ ರಸ್ತೆ ಸೇರಿದಂತೆ ಹಲವೆಡೆ ಜಾಹಿರಾತು ನಿಷೇಧಿಸಲಾಗಿದೆ. ಆಟೋ, ಬಸ್, ಮೆಟ್ರೋ ಪಿಲ್ಲರ್, ಮೆಟ್ರೋರೈಲು, ಟ್ಯಾಕ್ಸಿ, ಬಸ್ ಶೆಲ್ಟರ್ ಮೇಲೆ ಜಾಹೀರಾತಿಗೆ ಬಿಬಿಎಂಪಿಯಿಂದ ಅವಕಾಶ ಕಲ್ಪಿಸಲಾಗಿದೆ.

ಮದುವೆಯಾಗುವುದಾಗಿ ವಂಚನೆ

ಬೆಂಗಳೂರು: ಮಹಿಳೆಗೆ ವ್ಯಕ್ತಿಯೊಬ್ಬ ಮದುವೆಯಾಗುವುದಾಗಿ ನಂಬಿಸಿ ಲವ್ ಮಾಡಿ ನಂತರ ಆಕೆಯ ಜತೆಗೆ ದೈಹಿಕ ಸಂಪರ್ಕ ಬೆಳೆಸಿದ್ದಲ್ಲದೆ, 41 ಲಕ್ಷ ಹಣ 5 ಲಕ್ಷ ಮೌಲ್ಯದ ಎಲ್ಐಸಿ ಬಾಂಡ್ ಕಿತ್ತುಕೊಂಡು ವಂಚನೆ ಮಾಡಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ.

ಈ ಕುರಿತು ಮಹಿಳೆಯರು ಸೋಲದೇವನಹಳ್ಳಿ ಠಾಣೆಯಲ್ಲಿ ಚಿಕ್ಕಬಾಣಾವರದ ವಿಶ್ವನಾಥ್ ಅಲಿಯಾಸ್ ವಿಷ್ಣುಗೌಡ ವಿರುದ್ಧ ಮಹಿಳೆ ಇದೀಗ ದೂರು ದಾಖಲಿಸಿದ್ದಾಳೆ. ಮಹಿಳೆಯ ಖಾಸಗಿ ವಿಡಿಯೋ ಇಟ್ಟುಕೊಂಡು ವೈರಲ್ ಮಾಡುವುದಾಗಿ ವಿಶ್ವನಾಥ್ ಬೆದರಿಕೆ ಹಾಕಿದ್ದಾನೆ ಎನ್ನಲಾಗಿದೆ. ಅಲ್ಲದೆ, ಚೆಕ್ ಗಳಿಗೆ ಬಲವಂತವಾಗಿ ಸಹಿ ಮಾಡಿಸಿಕೊಂಡು ಮಹಿಳೆಯ ಮೇಲೆ ಹಲ್ಲೆ ಮಾಡಿದ್ದಾನೆ.

ಅಷ್ಟಕ್ಕೇ ಸುಮ್ಮನಾಗದೆ ಮನೆಗೆ ನುಗ್ಗಿ ಮಹಿಳೆಯ ತಂದೆ-ತಾಯಿಯ ಮೇಲೆ ವಿಶ್ವನಾಥ ಹಲ್ಲೆ ನಡೆಸಿದ್ದಾನೆ. ಸಂತ್ರಸ್ತ ಮಹಿಳೆಯ ತಂಗಿ ಮುಂದೆ ಪ್ಯಾಂಟ್ ಬಿಚ್ಚಿ ವಿಶ್ವನಾಥ ವಿಕೃತಿ ಮೆರೆದಿದ್ದಾನೆ.

ತನ್ನನ್ನು ದೈಹಿಕವಾಗಿ ಬಳಸಿಕೊಂಡು ವಂಚನೆ ಮಾಡಿರು ವುದಾಗಿ ದೂರು ಸಲ್ಲಿಸಲಾಗಿದೆ. ವಿಶ್ವನಾಥ್ ಅಲಿಯಾಸ್ ವಿಷ್ಣು ಗೌಡ ವಿರುದ್ಧ 40 ವರ್ಷದ ಮಹಿಳೆ ದೂರು ಸಲ್ಲಿಸಿದ್ದಾರೆ. ಸೋಲದೇವನಹಳ್ಳಿ ಠಾಣೆಯಲ್ಲಿ ಕೇಸ್ ದಾಖಲಾಗಿದೆ.

ದೆಹಲಿಯಲ್ಲಿ ಇತ್ತೀಚೆಗೆ ಐಸಿಎನ್ ಫೆಡರೇಷನ್ ಏರ್ಪಡಿಸಿದ್ದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಆನೇಕಲ್ಲಿನ ಪವಿ ಶಂಕರ್ ಚಿನ್ನದ ಪದಕ ಪಡೆದರು.

ಬೆಂಗಳೂರು ಕಾನೂನು ಕಾಲೇಜಿನಲ್ಲಿ ಕಾನೂನು ಸೇವಾ ಪ್ರಾಧಿಕಾರಗಳ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಗೌರವಾನ್ವಿತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಮತ್ತು ಕರ್ನಾಟಕ ಸ್ಟೇಟ್ ಲೀಗಲ್ ಸರ್ವಿಸ್ ಅಥಾರಿಟಿಯ ಸದಸ್ಯರು, ಕಾರ್ಯದರ್ಶಿಗಳು ಆದ ಶ್ರೀಯುತ ಎಂ.ಎಲ್. ರಘುನಾಥ್ ಅವರು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು.

ಅವಧಿ ಮೀರಿ ಪಬ್ ಸೇವೆ; ಪೊಲೀಸರ ಎಚ್ಚರಿಕೆ

ಬೆಂಗಳೂರು: ವಾರಾಂತ್ಯದಲ್ಲಿ ಅವಧಿ ಮೀರಿ ಗ್ರಾಹಕರಿಗೆ ಅವಕಾಶ ನೀಡುತ್ತಿದ್ದ ಪಬ್, ರೆಸ್ಟೋರೆಂಟ್‌ಗಳಿಗೆ ಶನಿವಾರ ತಡರಾತ್ರಿ ಬೆಂಗಳೂರು ಕೇಂದ್ರ ವಿಭಾಗದ ಪೊಲೀಸರು ಬಿಸಿ ಮುಟ್ಟಿಸಿದ್ದಾರೆ.

ಅಪರಾಧ ಸುದ್ದಿಗಳು

ಡಿಸಿಪಿ ಶೇಖರ್. ಎಚ್.ಟಿ ನೇತೃತ್ವದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗಿದ್ದು, ಎಂ.ಜಿ.ರೋಡ್, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್ ಸೇರಿದಂತೆ ವಿವಿಧೆಡೆ ಅವಧಿ ಮೀರಿ (ರಾತ್ರಿ 1ರ ನಂತರ) ತೆರೆದಿದ್ದ ಎಲ್ಲಾ ಪಬ್, ರೆಸ್ಟೋರೆಂಟ್‌ಗಳನ್ನು ಬಂದ್ ಮಾಡಿಸಿದ್ದಾರೆ.

ಈ ಹಿಂದೆ ಅವಧಿ ಮೀರಿ ಕಾರ್ಯ ನಿರ್ವಹಿಸುತ್ತಿದ್ದ ಹಿನ್ನೆಲೆಯಲ್ಲಿ ವಿರಾಟ್ ಕೊಹ್ಲಿ ಸಹ ಮಾಲಿಕತ್ವದ ರೆಸ್ಟೋರೆಂಟ್ ಸಹಿತ 15ಕ್ಕೂ ಅಧಿಕ ಪಬ್, ರೆಸ್ಟೋರೆಂಟ್‌ಗಳ ವಿರುದ್ಧ ಕಬ್ಬನ್‌ಪಾರ್ಕ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದರು. ಈ ಹಿನ್ನೆಲೆ ತಡರಾತ್ರಿ ಪೊಲೀಸರು ಕಾರ್ಯಾಚರಣೆ ಕೈಗೊಂಡಿದ್ದು, ಅನೇಕ ಕಡೆಗಳಲ್ಲಿ ಅತಿಯಾದ ಮ್ಯೂಸಿಕ್, ಓವರ್ ನೈಟ್ ಪಾರ್ಟಿಗೆ ಅವಕಾಶ ನೀಡುತ್ತಿರುವುದು ಕಂಡುಬಂದಿದೆ. ಕೆಲವೆಡೆ ಪೊಲೀಸರನ್ನು ನೋಡುತ್ತಿದ್ದಂತೆ ಪಬ್, ರೆಸ್ಟೋರೆಂಟ್ ಸಿಬ್ಬಂದಿಗಳು ಪಾರ್ಟಿಪ್ರಿಯರ ಮನವೊಲಿಸಿ ಕಳುಹಿಸಿ ಬಂದ್ ಮಾಡಿಸಿದ್ದಾರೆ.

ಕಳೆದ ಕೆಲ ದಿನಗಳಿಂದಲೂ ಅವಧಿ ಮೀರಿ ವಹಿವಾಟನಲ್ಲಿ ತೊಡಗಿರುತ್ತಿದ್ದ ಪಬ್, ಬಾರ್, ರೆಸ್ಟೋರೆಂಟ್‌ಗಳ ವಿರುದ್ಧ ವಿಶೇಷ ಕಾರ್ಯಾಚರಣೆ ಕೈಗೊಂಡು ಪ್ರಕರಣ ದಾಖಲಿಸಿಕೊಳ್ಳುತ್ತಿದ್ದೇವೆ. ಕಾರ್ಯಾಚರಣೆ ಮುಂದುವರಿಯುತ್ತದೆ. ಪ್ರತಿದಿನ ರಾತ್ರಿ ಗಸ್ತು ಸಂಚರಿಸುವ ಅಧಿಕಾರಿಗಳಿಗೆ ಈ ಬಗ್ಗೆ ಹೆಚ್ಚು ಗಮನವಹಿಸುವಂತೆ ಸೂಚಿಸಲಾಗಿದೆ. ಸರಕಾರ ನಿಗದಿಪಡಿಸಿದ ಸಮಯ ಮೀರಿ ಯಾವುದೇ ಪಬ್, ಬಾರ್, ರೆಸ್ಟೋರೆಂಟ್‌ಗಳು ವಹಿವಾಟಿನಲ್ಲಿ ತೊಡಗಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಬೆಂಗಳೂರು ಕೇಂದ್ರ ವಿಭಾಗದ ಡಿಸಿಪಿ ಶೇಖರ್.ಎಚ್.ಟಿ ತಿಳಿಸಿದ್ದಾರೆ.

ಆ್ಯಪಲ್ ಕಂಪನಿ ಹೆಸರಿನ ನಕಲಿ ಉಪಕರಣ ಮಾರಾಟ: ಬಂಧನ

ಬೆಂಗಳೂರು: ಆ್ಯಪಲ್ ಕಂಪನಿಯ ಹೆಸರಿನಲ್ಲಿ ನಕಲಿ ಉಪಕರಣಗಳನ್ನು ಮಾರಾಟ ಮಾಡುತ್ತಿದ್ದ ಚಿಕ್ಕಪೇಟೆ ಅಂಗಡಿಯ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

ಗೋದಾಮಿನಲ್ಲಿ ಕಂಪನಿಯ ಬ್ರ್ಯಾಂಡ್ ಮುದ್ರಿಸಿದ್ದ ನಕಲಿ ಉಪಕರಣಗಳನ್ನು ದಾಸ್ತಾನು ಮಾಡಿಕೊಂಡು, ಅಸಲಿ ಎಂದು ನಂಬಿಸಿ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿತ್ತು. ಖಚಿತ ಮಾಹಿತಿ ಆಧರಿಸಿ ಸಿಸಿಬಿಯ ಆರ್ಥಿಕ ಅಪರಾಧ ದಳದ ಸಿಬ್ಬಂದಿ ಅಂಗಡಿ ಮೇಲೆ ದಾಳಿ ನಡೆಸಿ, ವ್ಯಕ್ತಿಯನ್ನು ಬಂಧಿಸಿ, 8 ಲಕ್ಷ ರು. ಮೌಲ್ಯದ ನಕಲಿ ಏರ್‌ಪಾಡ್ ಪ್ರೊ, ಯುಎಸ್‌ಬಿ-ಸಿ ಲೈಟ್ನಿಂಗ್ ಕೇಬಲ್‌ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಸಿಟಿ ಮಾರುಕಟ್ಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲಕ್ಷಾಂತರ ಮೌಲ್ಯದ ತಾಮ್ರದ ವೈರ್ ವಶ: ಮತ್ತೊಂದು ಪ್ರಕರಣದಲ್ಲಿ ಪ್ರತಿಷ್ಠಿತ ಕಂಪನಿಗಳ ಬ್ರ್ಯಾಂಡ್ ನಮೂದಿಸಿ ತಾಮ್ರದ ವಿದ್ಯುತ್ ತಂತಿಗಳನ್ನು ಮಾರಾಟ ಮಾಡುತ್ತಿದ್ದ ಗರುಡಾಚಾರ್ ಪಾಳ್ಯದ ಮಹದೇವಪುರ ವ್ಯಾಪ್ತಿಯ ಅಂಗಡಿ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಎವಿ ಗಾರ್ಡ್, ಆರ್‌ಆರ್, ಆ್ಯಂಕರ್, ಗ್ರೇಟ್ ವೈಟ್, ಹವೇಲಿ ಕಂಪನಿಗಳ ತಾಮ್ರದ ತಂತಿಗಳನ್ನು ಮಾರಾಟ ಮಾಡಲಾಗುತ್ತಿತ್ತು. ಆರೋಪಿಯಿಂದ 6.20 ಲಕ್ಷ ಮೌಲ್ಯದ ವಸ್ತು ವಶಪಡಿಸಿಕೊಳ್ಳಲಾಗಿದೆ. ಮಹದೇವಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುರಾಯಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ಚಾಕುವಿನಿಂದ ಹತ್ಯೆ

ಬೆಂಗಳೂರು: ಗುರಾಯಿಸಿದ್ದನ್ನು ಪ್ರಶ್ನಿಸಿದ ಎಂಬ ಕಾರಣಕ್ಕೆ ಚಾಕುವಿನಿಂದ ಇರಿದು ಯುವಕನನ್ನು ಹತ್ಯೆಗೈದ ಘಟನೆ ರಾಮಮೂರ್ತಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಹೊಯ್ಸಳ ನಗರದ 3ನೇ ಮುಖ್ಯರಸ್ತೆಯಲ್ಲಿ ಶನಿವಾರ ಬೆಳಗ್ಗೆ ನಡೆದಿರುವುದ್ ಬೆಳಕಿಗೆ ಬಂದಿದೆ.

ಹೊಯ್ಸಳ ನಗರದ ಮನೋಜ್ (22) ಹತ್ಯೆಯಾದ ಯುವಕನಾಗಿದ್ದಾನೆ .ಮನೋಜ್ ಶನಿವಾರ ಬೆಳಗಿನಜಾವ ತನ್ನ ಸ್ನೇಹಿತ ಆ್ಯಂಟನಿಯೊಂದಿಗೆ ರಸ್ತೆಯಲ್ಲಿ ಹೋಗುತ್ತಿದ್ದ. ಈ ವೇಳೆ ಎದುರಿನಿಂದ ಬಂದ ಆರೋಪಿಗಳ ಗುಂಪೊಂದು ಮನೋಜ್‌ನನ್ನು ಗುರಾಯಿಸಿದೆ. ಅದೇ ವಿಚಾರವಾಗಿ ಇಬ್ಬರ ನಡುವೆ ಜಗಳ ಆರಂಭವಾಗಿದೆ. ನೋಡ ನೋಡುತ್ತಿದ್ದಂತೆ ಆರೋಪಿಗಳು ಚಾಕುವಿನಿಂದ ಮನೋಜ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ತಕ್ಷಣ ಆತನ ಸ್ನೇಹಿತರು ಹತ್ತಿರದ ಆಸ್ಪತ್ರೆಗೆ ರವಾನಿಸಿದ್ದರು. ಆದರೆ ತೀವ್ರ ರಕ್ತಸ್ರಾವವಾಗಿದ್ದರಿಂದ ಚಿಕಿತ್ಸೆ ಫಲಿಸದೆ ಮನೋಜ್ ಮೃತಪಟ್ಟಿದ್ದಾನೆ. ಗಾಯಗೊಂಡಿರುವ ಸ್ನೇಹಿತ ಆ್ಯಂಟನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ರಸ್ತೆ ವಿಭಜಕಕ್ಕೆ ಜೀಪ್ ಡಿಕ್ಕಿ; ಆರು ಮಂದಿ ಪಾರು

ಬೆಂಗಳೂರು: ಚಾಲಕನ ನಿಯಂತ್ರಣ ತಪ್ಪಿ ಜೀಪೊಂದು ವಿಭಜಕಕ್ಕೆ ಡಿಕ್ಕಿ ಹೊಡೆದ ಘಟನೆ ಶಾಂತಿನಗರದಿಂದ ರಿಚ್‌ಮಂಡ್ ಸರ್ಕಲ್‌ಗೆ ಹೋಗುವ ಮಾರ್ಗದಲ್ಲಿ ನಡೆದಿದ್ದು, ಏರ್‌ಬ್ಯಾಗ್ ಓಪನ್ ಆಗಿದ್ದರಿಂದ ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಶಾಂತಿನಗರದಿಂದ ರಿಚ್‌ಮಂಡ್ ಸರ್ಕಲ್‌ಗೆ ಹೋಗುವ ಶಾಂತಿನಗರ ಡಬಲ್ ರೋಡ್ ಬಳಿ ನಡೆದ ಘಟನೆ ನಡೆದಿದ್ದು, ಚಾಲಕನ ನಿಯಂತ್ರಣ ತಪ್ಪಿ ಜೀಪು ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ. ಥಾರ್‌ನಲ್ಲಿ ಕೇರಳ ಮೂಲದ ಆರು ಜನರು ಪ್ರಯಾಣಿಸುತ್ತಿದ್ದರು. ಅಪಘಾತ ನಡೆದ ತಕ್ಷಣ ಏರ್‌ಬ್ಯಾಗ್ ಓಪನ್ ಆಗಿದ್ದರಿಂದ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿ ಪೊಲೀಸರು ವಾಹನ ತೆರವುಗೊಳಿಸಿದ್ದಾರೆ. ಹಲಸೂರು ಗೇಟ್ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ತಮಿಳುನಾಡು ಬಸ್‌ಗೆ ಕಲ್ಲೇಟು: ಕಿಡಿಗೇಡಿ ಸೆರೆ

ಬೆಂಗಳೂರು: ನಗರದಿಂದ ತಿರುವಣ್ಣಮಲೈಗೆ ಹೋಗುತ್ತಿದ್ದ ತಮಿಳುನಾಡಿನ ಸರಕಾರಿ ಬಸ್‌ಗೆ ಜೆಸಿ ರಸ್ತೆಯ ಪುರಭವನದ ಬಳಿ ಕಿಡಿಗೇಡಿಯೊಬ್ಬ ಕಲ್ಲು ತೂರಾಟ ನಡೆಸಿರುವ ಘಟನೆ ನಡೆದಿದೆ. ಕಲ್ಲೇಟಿಗೆ ಬಸ್‌ನ ಹಿಂಬದಿ ಗಾಜು ಪುಡಿ ಪುಡಿಯಾಗಿದ್ದು, ಕೃತ್ಯ ಎಸಗಿದ ಕಿಡಿಗೇಡಿ ಪೊಲೀಸರ ಅತಿಥಿಯಾಗಿದ್ದಾನೆ. ಬಸ್ ಟೌನ್‌ಹಾಲ್ ಬಳಿ ಬರುತ್ತಿದ್ದಂತೆ ಮಹಾರಾಜ ಎನ್ನುವ ಯುವಕ ಬಸ್‌ಗೆ ಕಲ್ಲು ಹೊಡೆದು ಪರಾರಿಯಾಗಲು ಯತ್ನಿಸಿದ್ದು, ಕೂಡಲೇ ಆತನನ್ನು ಹಿಡಿದ ಪ್ರಯಾಣಿಕರು ಪೊಲೀಸರಿಗೆ ಒಪ್ಪಿಸಿದರು.

ಬಸ್ ನಿಲ್ಲಿಸಲಿಲ್ಲ ಎನ್ನುವ ಕಾರಣಕ್ಕೆ ಕೋಪಗೊಂಡ ಮಹಾರಾಜ ಬಸ್‌ಗೆ ಕಲ್ಲು ತೂರಾಟ ನಡೆಸಿದ್ದ.ಆತನನ್ನು ತಮಿಳುನಾಡು ಮೂಲದವನು ಎಂದು ಗುರುತಿಸಲಾಗಿದ್ದು, ಎಸ್‌ಜೆ ಪಾರ್ಕ್ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಯುವರಾಜನಿಂದಾಗಿ ಊರಿಗೆ ಹೋಗಬೇಕೆಂದು ಬಸ್ ಹತ್ತಿದ್ದ ಪ್ರಯಾಣಿಕರು ಠಾಣೆ ಮುಂದೆ ಕಾಯುವ ಸ್ಥಿತಿ ನಿರ್ಮಾಣವಾಗಿತ್ತು.

Affidavit

I, Gowramma W/o Padian aged about 55 years R/at: # 431, 3rd Cross, MV HAL 2nd Stage Bengaluru do hereby solomenly affirm and Garden Ulsoor,
1) I Submit that I am residing in the above said address.
2) I Submit that I am the owner of the property bearing Sy No: 106/2 measuring 0-01.1 gunte Situated at: Huskur village, Sarjapura Hobli, Anekal Taluk, Bengaluru Urban Dist, said Sale Deed was registered in office of Anekal Sub Register office Document No: ANK-1-03629/2001-02 Deed date: 13-09-2001, the said document was in my custody but the said original document was lost on date : 28-03-2018 when I was Shifting home same araea to next corss, with best efforts I could not able to trace the same, I am swearing this affidavit to produce the same before concerned Ulsoor Police, Bengaluru authorities to lodge the complaint for seeking necessary relief. Hence, this affidavit.
3) I am not pledged the same in any Bank, Or private Persons any where the above said paper said matter was published in Kannada New paper.
What is stated above is true and correct.
Identified by me,
Advocate, Anekal
Date: 19-07-2024
DEPONENT
Sworn before me
MUNISWAMY.T
ADVOCATE & NOTARY PUBLIC
Govt. Of India
Court Complex, Anekal Town, Bangalore Dist.-562 107.

PUBLIC NOTICE

Public are informed that, my client Mrs. Yashasvi R. Ra had lost the Original document of 1). Partition Deed dated 6/8/2005 executed by K. Ravi Shankar and K. Nagendra vide regd. as doc. No. 2056/2005-06. If any person/s firm company, institution or organization has any claim are holding the afore mentioned document, they may contact the undersigned in writing within 7 days from the date of this notice failing which it will be presumed that there are no claims.
SCHEDULE: All that piece and parcel of the Corporation No. 11, (Site No. 41), situated at Seshadripuram, 2nd Main Road, B. Kempanna and Brothers layout (P.G. Halli). BMP Ward No. 99, Bangalore, measuring: East to West 30-6 feet North to South 42 feet, and bounded on : EAST :Site No. 9, WEST: Property No. 11/1 allotted to Second Party, NORTH: Second Main Road, SOUTH: Site No. 10.
KSR Associates, ADVOCATES & LEGAL CONSULTANTS
OFFICE# 53/1, 1th Floor, Guttahalli Main Road, D.T. Street, 8th Cross, Malleshwaram, Bangalore – 560 003, Email: raviksadvocate@gmail.com, Mobile: 99450 00789

ಆಸ್ತಿ ತೆರಿಗೆ ಬಾಕಿದಾರರಿಗೆ ಬಿಬಿಎಂಪಿ ನೋಟಿಸ್

ಬೆಂಗಳೂರು: ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಬಿಬಿಎಂಪಿ ನೋಟಿಸ್ ನೀಡಿದೆ. ಇದರ ವಿರುದ್ಧ ಖಾಸಗಿ ಶಿಕ್ಷಣ ಸಂಸ್ಥೆಗಳು ಕೋರ್ಟ್‌ಗೆ ಮೊರೆ ಹೋಗಲು ಮುಂದಾಗಿವೆ.

ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಶೇ.100ರಷ್ಟು ತೆರಿಗೆ ಬಾಕಿ ಪಾವತಿಸುವಂತೆ ಸೂಚನೆ ನೀಡಲಾಗಿದ್ದು, ಪಾಲಿಕೆಯ ಈ ನಡೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟವು ವಿರೋಧ ವ್ಯಕ್ತಪಡಿಸಿದೆ. ಈಗಾಗಲೇ ಶೇ.25ರಷ್ಟು ತೆರಿಗೆ ಪಾವತಿ ಮಾಡಲಾಗುತ್ತಿದ್ದು, ಬೇರೆ ರಾಜ್ಯಗಳಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಸಂಪೂರ್ಣ ತೆರಿಗೆ ವಿನಾಯಿತಿ ನೀಡಲಾಗಿದೆ. ರಾಜ್ಯದಲ್ಲಿ ಶೇ.25ರಷ್ಟು ತೆರಿಗೆ ಪಾವತಿಸಲಾಗುತ್ತಿದ್ದು, ಈಗ ಪಾಲಿಕೆಯು ನೂರರಷ್ಟು ತೆರಿಗೆ ಪಾವತಿಸುವಂತೆ ಸೂಚನೆ ನೀಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಕ್ಯಾಮ್ಸ್ ಸರಕಾರದ ನಡೆಗೆ ವಿರೋಧ ವ್ಯಕ್ತಪಡಿಸಿದ್ದು, ಈ ಹಿಂದೆ ಈ ವಿಚಾರವಾಗಿ ಕೋರ್ಟ್ ಮೊರೆ ಹೋಗಲಾಗಿತ್ತು. ಆದರೆ ಈಗ 2021ನೇ ಸಾಲಿನ ಪೂರ್ಣ ತೆರಿಗೆಯನ್ನು ಪಾವತಿ ಮಾಡುವಂತೆ ಪಾಲಿಕೆಯು ಸೂಚನೆ ನೀಡಿದ್ದು, ಜುಲೈ 31ರವರೆಗೆ ಒನ್ ಟೈಮ್ ಸೆಟಲ್‌ಮೆಂಟ್ ಮೂಲಕ ತೆರಿಗೆ ಪಾವತಿಗೆ ಅವಕಾಶ ನೀಡಲಾಗಿದೆ. ಆದರೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಇದು ಅನ್ವಯಿಸದಿರುವ ಹಿನ್ನೆಲೆ ಈ ಸಂಕಷ್ಟ ಎದುರಾಗಿದ್ದು, ಸರಕಾರ ಬಲವಂತವಾಗಿ ವಸೂಲಿಗೆ ನಿಂತಿದೆ ಎಂದು ಅಸಹನೆ ವ್ಯಕ್ತಪಡಿಸಿದೆ.

ವಿಜೃಂಭಣೆಯಿಂದ ಗುರುಪೂರ್ಣಿಮಾ ಆಚರಣೆ

ಬೆಂಗಳೂರು: ನಗರದ ಹಲವೆಡೆಗಳಲ್ಲಿ ಭಾನುವಾರ ನಗರದ ಹಲವೆಡೆಗಳಲ್ಲಿರುವ ಸಾಯಿಬಾಬಾ ದೇವಾಲಯಗಳು, ರಾಯರ ಮಠಗಳು ಸೇರಿಂತೆ ಹಲವೆಡೆಗಳಲ್ಲಿ ಗುರುಪೂರ್ಣಿಮೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಎಂ.ಎಸ್. ರಾಮಯ್ಯ ಲೇಔಟ್‌ನ ಸಾಯಿ ಮಂದಿರ, ವಸಂತಪುರದ ಸಾಯಿಬಾಬಾ ದೇವಾಲಯಗಳಲ್ಲಿ ಕಿ.ಮೀ.ಗಟ್ಟಲೆ ಕ್ಯೂನಲ್ಲಿ ಭಕ್ತರು ಸಾಗಿ ಬರುತ್ತಿದ್ದರು. ಸಾಯಿಬಾಬಾ, ಗುರು ರಾಘವೇಂದ್ರ, ಸ್ವಾಮಿ ಮತ್ತಿತರ ದೇವರುಗಳಿಗೆ ಅಭಿಷೇಕ ನೆರವೇರಿಸಿ, ನಂತರ ವಿಶೇಷ ಅಲಂಕಾರ ಮತ್ತು ಪೂಜೆ ನಡೆಸಲಾಯಿತು. ದೇವರ ದರ್ಶನಕ್ಕಾಗಿ ಬೆಳಗ್ಗೆಯಿಂದಲೇ ಭಕ್ತರು ಸಾಲುಗಟ್ಟಿ ಆಗಮಿಸುತ್ತಿದ್ದುದನ್ನು ಕಾಣಬಹುದಾಗಿತ್ತು. ಗುರುಪೂರ್ಣಿಮೆಯ ಹಿಂದಿನ ದಿನವೇ ವಿಶೇಷವಾಗಿ ದೇವಾಲಯಗಳ ಒಳಾಂಗಣ ಮತ್ತು ಹೊರಾಂಗಣಗಳನ್ನು ತಳಿರು-ತೋರಣ, ಹೂವು, ಹಣ್ಣು, ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿತ್ತು.

ಜೆ.ಪಿ. ನಗರದಲ್ಲಿ ಗುರುಪೂರ್ಣಿಮೆ

ಜೆ.ಪಿ ನಗರ ಶ್ರೀ ಸತ್ಯಗಣಪತಿ ಶಿರಡಿ ಸಾಯಿ ಟ್ರಸ್ಟ್‌ನಲ್ಲಿ ಹೂವು ಹಣ್ಣುಗಳಿಂದ ವಿಶೇಷ

ಅಲಂಕಾರ ಮಾಡಲಾಗಿದ್ದು, ಬೆಳಗ್ಗೆ ವಿಶೇಷ ಪೂಜೆ ಮತ್ತು ಹೋಮಗಳನ್ನು ನಡೆಸಲಾಯಿತು. ಬಾಬಾರ 'ಸಬ್ ಕಾ ಮಾಲೀಕ್ ಏಕ್ ಹೇ' ಎಂಬ ಪರಿಕಲ್ಪನೆಯಡಿ ಬಡವ, ಬಲ್ಲಿದ ಬೇಧ- ಭಾವವಿಲ್ಲದೇ ಎಲ್ಲಾ ಸಮುದಾಯದವರಿಗೆ ದರ್ಶನಕ್ಕಾಗಿ ವ್ಯವಸ್ಥೆ ಮಾಡಲಾಗಿತ್ತು. ನಾನಾ ಹಣ್ಣುಗಳು, ವಿಶೇಷ ಹೂವುಗಳಿಂದ ದೇವಸ್ಥಾನವನ್ನು ಆಲಂಕರಿಸಿರುವುದನ್ನು ಭಕ್ತರು ಕಣ್ತುಂಬಿಕೊಳ್ಳಬಹುದಾಗಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಲೋಕರಾಜು ಹೇಳಿದರು. ಅಭಿಷೇಕ, ಆಲಂಕಾರ, ಸಾಯಿ ಮಂತ್ರ ಹೋಮ, ಸುದರ್ಶನ ಹೋಮ, ದತ್ತಾತ್ರೇಯ ಹೋಮ ಸೇರಿದಂತೆ ಇನ್ನಿತರ ಪೂಜೆಗಳನ್ನು ಆಯೋಜಿಸಲಾಗಿತ್ತು, ಸಾವಿರಾರು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಶ್ರೀ ಸತ್ಯಗಣಪತಿ ಶಿರಡಿ ಸಾಯಿ ಟ್ರಸ್ಟ್‌ನಲ್ಲಿ ಕಳೆದ ವರ್ಷವೂ ಶಿರಡಿ ಬಾಬಾರಿಗೆ ವಿಶೇಷ ಅಲಂಕಾರ ಮಾಡುವ ಮೂಲಕ ಗುರುಪೂರ್ಣಿಮೆ ಆಚರಿಸಲಾಗಿತ್ತು. 20 ಸಾವಿರ ತೆಂಗಿನಕಾಯಿ, 2,500 ಪರಂಗಿ, ಹಲಸಿನ ಹಣ್ಣು, 5 ಸಾವಿರ ಬೆಲ್ಲ, 25 ಸಾವಿರಕ್ಕೂ ಹೆಚ್ಚು ಖರ್ಜೂರ, ಬಾದಾಮಿ, ಗೋಡಂಬಿ, ದ್ರಾಕ್ಷಿ, ಒಣಹಣ್ಣುಗಳು, ನವಧಾನ್ಯಗಳ ಮೂಲಕ ವಿಶೇಷವಾಗಿ ಅಲಂಕರಿಸಲಾಗಿತ್ತು. ಅಲ್ಲದೇ ಕಳೆದ ವರ್ಷ ಗಣೇಶ ಚುತುರ್ಥಿಯಲ್ಲಿ ನೋಟುಗಳ ಮೂಲಕ ದೇವಸ್ಥಾನ ಅಲಂಕರಿಸಿ ಗಮನ ಸೆಳೆದಿತ್ತು.

> **ತ್ಯಾಗರಾಜನಗರದಲ್ಲಿ ಸಾಲು ಸಾಲು ಭಕ್ತರು**
>
> ತ್ಯಾಗರಾಜ ನಗರದ ಸಾಯಿ ಅಧ್ಯಾತ್ಮ ಕೇಂದ್ರದ ಸಾಯಿಮಂದಿರದಲ್ಲಿ ಗುರುಪೂರ್ಣಿಮೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ದೇವಸ್ಥಾನವನ್ನು ವಿವಿಧ ಹೂವಿನಿಂದ ಅಲಂಕರಿಸಲಾಗಿತ್ತು. ಸಾಯಿಬಾಬಾ ಮೂರ್ತಿಯನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ವ್ಯಾಸಪೂಜೆ, ಆರತಿ, ಸತ್ಯನಾರಾಯಣ ಪೂಜೆ ನಡೆಯಿತು. ಇಡೀ ದಿನ ನಾನಾ ಸಂಘಗಳಿಂದ ಭಜನೆ ನಡೆಯಿತು. ಭಾನುವಾರ ಬೆಳಗಿನಿಂದ ರಾತ್ರಿಯವರೆಗೆ ಸುಮಾರು 60 ಸಾವಿರ ಭಕ್ತರು ಆಗಮಿಸಿ ದೇವರ ದರ್ಶನ ಪಡೆದರು. ಒಂಬತ್ತು ಸಾವಿರಕ್ಕೂ ಹೆಚ್ಚು ಶಾಲಾ ಮಕ್ಕಳಿಗೆ ಉಚಿತವಾಗಿ ಅನ್ನ ದಾಸೋಹ ಮಾಡಲಾಯಿತು.

ಸಮಾಚಾರ ಸಣ್ಣದಲ್ಲ

ನ್ಯಾಯ ಸಂಹಿತೆ ಕರಡು ತಡೆಗೆ ಆಗ್ರಹ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರನ್ನು ಒಳಗೊಳ್ಳದೇ ಭಾರತೀಯ ನ್ಯಾಯ ಸಂಹಿತೆ ಕಾನೂನಿನಲ್ಲಿ ಬದಲಾವಣೆ ತರುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರ ರೂಪಿಸಿರುವ ಕರುಡನ್ನು ತಕ್ಷಣವೇ ತಡೆ ಹಿಡಿಯಬೇಕು ಎಂದು ಕರ್ನಾಟಕ ರಾಜ್ಯ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟ ಆಗ್ರಹಿಸಿದೆ. ಲಿಂಗತ್ವ ಹಾಗೂ ಲೈಂಗಿಕ ಅಲ್ಪಸಂಖ್ಯಾತ ಸಮುದಾಯ ಶತಮಾನಗಳಿಂದ ಸಾಮಾಜಿಕ ಬಹಿಷ್ಕಾರ, ಶೋಷಣೆ, ಹಿಂಸೆಗಳನ್ನು ಅನುಭವಿಸುತ್ತಾ ಬಂದಿದೆ. ಈ ಸಮುದಾ ಯದ ಪರವಾಗಿ ಹಲವು ಮಹತ್ವದ ತೀರ್ಪುಗಳನ್ನು ಸುಪ್ರೀಂ ಕೋರ್ಟ್, ಹೈಕೋರ್ಟ್ ನೀಡಿದ್ದರೂ ಈವರೆಗೆ ಅನುಷ್ಠಾನವಾಗಿಲ್ಲ ಎಂದು ವಿವಿಧ ಸಂಘಟ ನೆಗಳ ಪ್ರತಿನಿಧಿಗಳಾದ ಅಕ್ಕೈ ಪದ್ಮಶಾಲಿ ಸೇರಿದಂತೆ ಅನೇಕರು ಪತ್ರ ಬರೆದು, ಬೇಸರ ವ್ಯಕ್ತಪಡಿಸಿದ್ದಾರೆ. ಈ ಸಮುದಾಯದ ಬಗ್ಗೆ ಚರ್ಚಿಸಲು, ಕಾನೂನಿನ ಅಡೆತಡೆಗಳ ಬಗ್ಗೆ ವಿಮರ್ಶೆ ನಡೆಸಲು, ಸಮುದಾಯದ ಜೀವನ ಶೈಲಿ ಹಾಗೂ ಇನ್ನಿತರ ಸೂಕ್ಷ್ಮ ವಿಚಾರಗಳ ಕುರಿತು ತಿಳಿಯಲು ಕಾನೂನು ಸಚಿವ ಎಚ್.ಕೆ. ಪಾಟೀಲ ಅವರು ತುರ್ತಾಗಿ ಸಭೆ ನಿಗದಿಪಡಿಸಬೇಕು. ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಧ್ವನಿಯನ್ನು ಆಲಿಸಬೇಕು. ಈ ಸಮುದಾಯವನ್ನು ಕಾಪಾಡುವ ಅಂಶಗಳನ್ನು ಸೇರಿಸಿದ ಬಳಿಕವಷ್ಟೇ ಕೇಂದ್ರ ಸರಕಾರಕ್ಕೆ ಕರಡು ಕಳುಹಿಸಿಕೊಡಬೇಕು ಎಂದು ಕಾನೂನು ಸಚಿವರಿಗೆ ಬರೆದಿರುವ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಕಾರ್ಮಿಕ, ಕ್ರಿಮಿನಲ್ ಕಾನೂನು ರದ್ದುಗೊಳಿಸಿ

ಬೆಂಗಳೂರು: ಗುಲಾಮಗಿರಿ ಪ್ರತಿಪಾದಿಸುವ ನಾಲ್ಕು ಕಾರ್ಮಿಕ ಸಂಹಿತೆಗಳು, ನೂತನ ಕರಾಳ ಕ್ರಿಮಿನಲ್ ಕಾನೂನುಗಳನ್ನು ರದ್ದುಪಡಿಸಬೇಕು' ಎಂದು ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್‌ನ ರಾಷ್ಟ್ರೀಯ ಅಧ್ಯಕ್ಷ ವಿ. ಶಂಕರ್ ಒತ್ತಾಯಿಸಿದರು. ಭಾನುವಾರ ನಡೆದ ಎಐಸಿಸಿಟಿಯು ಪ್ರಥಮ ಬೆಂಗಳೂರು ಜಿಲ್ಲಾ ಸಮ್ಮೇಳನದಲ್ಲಿ 'ಕಾರ್ಮಿ ಕರ ಕಿಡಿ' ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರ ಭಾರತ ಬಿಟ್ಟು ತೊಲಗಬೇಕು ಎಂಬ ಅಭಿಯಾನವನ್ನು ಜುಲೈ 25ರಿಂದ ಆಗಸ್ಟ್ 9ರವರೆಗೆ ದೇಶದಾದ್ಯಂತ ಕೈಗೊಳ್ಳಲಾಗುವುದು ಎಂದರು. ಕಾರ್ಮಿಕರ ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಕಾರ್ಮಿಕರ ಹಕ್ಕುಗಳಿಗಾಗಿ, ಘನತೆ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮತ್ತು ಕಾರ್ಪೊರೇಟ್-ಕಮ್ಯುನಲ್ ಫ್ಯಾಸಿಸಂ ವಿರುದ್ಧದ ಹೋರಾಟಗಳನ್ನು ರೂಪಿಸಲು ನೂತನ ನಕ್ಷೆಯನ್ನು ತಯಾರಿಸಬೇಕು ಎಂದು ಕರೆ ನೀಡಿದರು.

ಮಳೆ ಅವಾಂತರ; ಸಹಾಯವಾಣಿ ಆರಂಭ

ಬೆಂಗಳೂರು: ಬಿಬಿಎಂಪಿ ಮಳೆಗಾಲ ಆರಂಭದ ಹಿನ್ನೆಲೆ ಕೆಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದು, ಮಳೆ ಅವಾಂತರಗಳನ್ನು ತಡೆಯಲು ಕೆಲ ಯೋಜನೆಗಳನ್ನು ಸಿದ್ಧ ಮಾಡಿಕೊಂಡಿದೆ. ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಮತ್ತೆ ಅವಾಂತರಗಳಾಗುವ ಸಂಭವವಿರುವುದರಿಂದ ಮಳೆ ನಿಂತಿದೆ ಎಂದು ನೆಮ್ಮದಿಯಾಗಿದ್ದ ಪಾಲಿಕೆಗೆ ಮತ್ತೆ ಸಮಸ್ಯೆಗಳ ಆತಂಕವು ಆರಂಭವಾಗಿದೆ. ಮಳೆಗಾಲದ ಆರಂಭದಲ್ಲಿ ಸಾಕಷ್ಟು ಅವಾಂತರ ಸೃಷ್ಟಿಯಾಗಿದ್ದು, ನಗರದ ಹಲವು ಏರಿಯಾಗಳ ಜನರು ನೀರು ನುಗ್ಗಿ ಸಂಕಷ್ಟ ಅನುಭವಿಸಿದರು. 500 ಕ್ಕೂ ಹೆಚ್ಚು ಮರ-ಗಿಡಗಳು ಧರೆಗುರುಳಿ ಅವಾಂತರ ಸೃಷ್ಟಿಸಿತ್ತು. ಇದೆಲ್ಲದರಿಂದ ಎಚ್ಚೆತ್ತ ಪಾಲಿಕೆ ಕೆಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದು, ರಾಜಕಾಲುವೆಗಳ ನೀರಿನ ಮಟ್ಟವನ್ನು ಗಮನಿಸಲು ತಂತ್ರಜ್ಞಾನವನ್ನು ಬಳಸಿಕೊಂಡಿದ್ದು, ಈ ಮೂಲಕ ಹಲವು ಸಮಸ್ಯೆಗಳನ್ನು ತಡೆಯಲು ಮುಂದಾಗಿದೆ.

▶ ಮಳೆಗಾಲದ ಸಮಸ್ಯೆಗಳಿಗೆ 1533 ಸಹಾಯವಾಣಿ

ಕಸಾಪದಿಂದ ದತ್ತಿ ಪ್ರಶಸ್ತಿ ಪ್ರಕಟ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಮಳಲಿ ವಸಂತಕುಮಾರ್ ಸಾಹಿತ್ಯ ದತ್ತಿನಿಧಿ ಪುರಸ್ಕಾರಕ್ಕೆ ಮಂಡ್ಯ ಜಿಲ್ಲೆಯ ಹಿರಿಯ ಬರಹಗಾರ ರಾಮೇಗೌಡ

ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕಸಾಪ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ತಿಳಿಸಿದರು. ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ, ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗ ಶೆಟ್ಟಿ, ಡಾ. ಪದ್ಮಿನಿ ನಾಗರಾಜು, ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು ಮತ್ತು ದತ್ತಿ ದಾನಿಗಳ ಪರವಾಗಿ ಶಾಂತ ವಸಂತ ಕುಮಾರ್ ಭಾಗವಹಿಸಿದ್ದರು.

{ ಎಚ್.ಸಿ ಮಹದೇವಪ್ಪ } ಸಚಿವ

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪಿಎಚ್‌ಡಿ ಅಧ್ಯಯನಕ್ಕೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಂಶೋಧನಾ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರಬುದ್ಧ ಯೋಜನೆಯಡಿ ನೀಡಲಾಗುತ್ತಿದ್ದ ಸಹಾಯಧನ ಮುಂದುವರಿಯಲಿದೆ.

ಬಿಡದಿಗೆ ಮೆಟ್ರೋ ರೈಲು ವರದಿ ತಯಾರಿಗೆ ಟೆಂಡರ್

ಬೆಂಗಳೂರು ಹೊರ ವಲಯಕ್ಕೆ ಮೆಟ್ರೋ ವಿಸ್ತರಣೆ ಮಾಡಲು ಎರಡು ಪ್ಯಾಕೇಜ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಮ್ಮ ಮೆಟ್ರೋ ಬಿಡದಿಗೆ ಮೆಟ್ರೋ ರೈಲು ಸಂಪರ್ಕವನ್ನು ಕಲ್ಪಿಸಲು ಮುಂದಾಗಿದ್ದು, ಈ ಮಾರ್ಗದ ಕಾರ್ಯಸಾಧ್ಯತಾ ವರದಿ ತಯಾರಿಸಲು ಟೆಂಡರ್ ಕರೆದಿದೆ.

ನಮ್ಮ ಮೆಟ್ರೋ ಜುಲೈ.9 ರಂದು 1.59 ಕೋಟಿ ರು.ಗಳ ಟೆಂಡರ್ ಕರೆದಿದ್ದು, ಮೂರು ಮಾರ್ಗದಲ್ಲಿ ನಮ್ಮ ಮೆಟ್ರೋ ಮಾರ್ಗದಲ್ಲಿ ಯೋಜನೆ ವಿಸ್ತರಿಸಲು ಕಾರ್ಯಸಾಧ್ಯತಾ ಅಧ್ಯಯನ ವರದಿಗಾಗಿ ಟೆಂಡರ್ ತಯಾರಿಸಲು ಹೈದರಾಬಾದ್ ಮೂಲದ ಕಂಪನಿಗೆ ಟೆಂಡರ್ ನೀಡಿದೆ. ನಮ್ಮ ಮೆಟ್ರೋವು 50 ಕಿ.ಮೀ ಮಾರ್ಗದಲ್ಲಿ ನಮ್ಮ ಮೆಟ್ರೋ ಯೋಜನೆಯ ವಿಸ್ತರಣೆಗಾಗಿ ಮತ್ತು 68 ಕಿ.ಮೀ ನೂತನ ಮಾರ್ಗದ ನಿರ್ಮಾಣದ ಕುರಿತು ಕಾರ್ಯ ಸಾಧ್ಯತಾ ಅಧ್ಯಯನದ ವರದಿಯನ್ನು ತಯಾರಿಸಲು ಟೆಂಡರ್ ಆಹ್ವಾನಿಸಿತ್ತು.

ಬಿಡದಿಗೆ ನಮ್ಮ ಮೆಟ್ರೋ ರೈಲು

ನಮ್ಮ ಮೆಟ್ರೋ ವರದಿ ಪ್ರಕಾರ ವಿಸ್ತರಿತ ಮಾರ್ಗದಲ್ಲಿ ಚಲ್ಲಘಟ್ಟ-ಬಿಡದಿ (15 ಕಿ. ಮೀ.), ಸಿಲ್ಕ್ ಇನ್ಸ್‌ಟಿಟ್ಯೂಟ್-ಹಾರೋಹಳ್ಳಿ (24 ಕಿ. ಮೀ.), ಬೊಮ್ಮಸಂದ್ರ-ಅತ್ತಿಬೆಲೆ (11 ಕಿ. ಮೀ) ಮಾರ್ಗವಿದೆ. ಕಾಳೇನ ಅಗ್ರಹಾರ-ಕಾಡುಗೋಡಿ ಟ್ರೀ ಪಾರ್ಕ್ ವಯಾ ಜಿಗಣಿ, ಅನೇಕಲ್, ಅತ್ತಿಬೆಲೆ, ಸರ್ಜಾಪುರ ಮತ್ತು ವರ್ತೂರು (52.41 ಕಿ. ಮೀ.) ಹೊಸ ಮಾರ್ಗ ಸೇರಿದೆ. ಕರ್ನಾಟಕ ಸರಕಾರ ಕಾರ್ಯಸಾಧ್ಯತಾ ಅಧ್ಯಯನ ವರದಿಯ ಆಧಾರದಲ್ಲಿ ಬಿಡದಿಗೆ ನಮ್ಮ ಮೆಟ್ರೋ ಯೋಜನೆಯನ್ನು ವಿಸ್ತರಿಸಲು ಒಪ್ಪಿಗೆ ನೀಡಲಿದ್ದು, ಈ ವರದಿಗೆ ಅನುಮತಿ ದೊರೆತರೆ ನಮ್ಮ ಮೆಟ್ರೋ ವಿಸ್ತೃತ ಯೋಜನಾ ವರದಿ ತಯಾರು ಮಾಡಲು ಪ್ರತ್ಯೇಕ ಟೆಂಡರ್ ಕರೆಯಲಿದೆ.

2023ರ ನವೆಂಬರ್‌ನಲ್ಲಿ ಬಿಡದಿ ಟೊಯೋಟಾ ಘಟಕದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಪಾಲ್ಗೊಂಡಿದ್ದಾಗ ಬಿಡದಿವರೆಗೆ ನಮ್ಮ ಮೆಟ್ರೋ ರೈಲು ಯೋಜನೆ ವಿಸ್ತರಣೆ ಮಾಡುವ ಕುರಿತು ಮಾತನಾಡಿದ್ದರು. ಬಿಡದಿಯನ್ನು ಕೈಗಾರಿಕಾ ಹಬ್ ಆಗಿ ಪರಿವರ್ತನೆ ಮಾಡಿ ಬೆಂಗಳೂರು ನಗರದ ಮೇಲಿರುವ ಒತ್ತಡ ಕಡಿಮೆ ಮಾಡಲು ಮುಂದಾಗಿದೆ. ಇದೇ ಮಾದರಿಯಲ್ಲಿ ನಮ್ಮ ಮೆಟ್ರೋವು ಹೊರ ವಲಯಕ್ಕೆ ಮೆಟ್ರೋ ಸಂಪರ್ಕ ವಿಸ್ತರಣೆ ಮಾಡುವ ಚಿಂತನೆ ನಡೆಸುತ್ತಿದೆ. ನಮ್ಮ ಮೆಟ್ರೋ ಯೋಜನೆ ವಿಸ್ತರಣೆ ಮಾಡಲು ನಮ್ಮ ಮೆಟ್ರೋ ಈಗಾಗಲೇ ಎರಡು ಪ್ಯಾಕೇಜ್‌ಗಳನ್ನು ಘೋಷಿಸಿದೆ.

ಮೊದಲ ಹಂತದಲ್ಲಿ 50 ಕಿ. ಮೀ. ಮೂರು ಕಾರಿಡಾರ್

ಮೊದಲ ಹಂತದಲ್ಲಿ 50 ಕಿ. ಮೀ. ಉದ್ದದ ಮೂರು ಕಾರಿಡಾರ್, 2ನೇ ಹಂತದಲ್ಲಿ ಒಟ್ಟು 60 ಕಿ. ಮೀ. ಪ್ಯಾಕೇಜ್ ನಿರ್ಮಾಣ ಸೇರಿದೆ. ಬೆಂಗಳೂರು ನಗರದಿಂದ ಪ್ರತಿನಿತ್ಯ ಸಾವಿರಾರು ಜನರು ಬಿಡದಿಗೆ ಪ್ರಯಾಣಿಸುತ್ತಾರೆ. ಈಗಾಗಲೇ ಸರಕಾರ ಬಿಡದಿ ಯೋಜನಾ ಪ್ರಾಧಿಕಾರವನ್ನು ಬದಲಾವಣೆ ಮಾಡಿ, ಬೃಹತ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂದು ಮರುನಾಮಕರಣ ಮಾಡಿದೆ. ಇದರ ಜತೆಗೆ ಬಿಡದಿಯ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ರೂಪಿಸುತ್ತಿದೆ. ಬಿಡದಿಯಲ್ಲಿ ಬೃಹತ್ ಕೈಗಾರಿಕಾ ಪ್ರದೇಶವಿದೆ. ಸುಮಾರು 1 ಲಕ್ಷಕ್ಕೂ ಅಧಿಕ ಜನರು ಇಲ್ಲಿ ಕೆಲಸ ಮಾಡುತ್ತಿದ್ದು, ಬೆಂಗಳೂರಿನಿಂದ ಪ್ರತಿದಿನ ಸಂಚಾರ ನಡೆಸುವ ಜನರ ಅನುಕೂಲಕ್ಕಾಗಿ ಮೆಟ್ರೋ ಮಾರ್ಗವನ್ನು ವಿಸ್ತರಿಸುವಂತೆ ಸ್ಥಳೀಯ ಜನಪ್ರತಿನಿಧಿಗಳು ಸರಕಾರವನ್ನು ಒತ್ತಾಯಿಸಿದ್ದರು.

ನಗರದ ಅತ್ತಿಬೆಲೆಯ ಎ ಕಿಡ್ಜ್ ಪ್ರೀಶಾಲೆಯಲ್ಲಿ ಗುರುಪೂರ್ಣಿಮೆ ದಿನವನ್ನು ಆಚರಿಸಲಾಯಿತು. ಈ ವೇಳೆ ಮಾತನಾಡಿದ ಶಾಲೆಯ ಪ್ರಾಂಶುಪಾಲ ಜಿ.ಎಸ್.ಸಂತೋಷ್, ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ದೇವರ ಸ್ಥಾನ ನೀಡಲಾಗಿದ್ದು, ವಿದ್ಯೆ ಎಂಬ ಸಾಗರದಲ್ಲಿ ಈಜು ಕಲಿಸಿ ದಡ ಸೇರಿಸುವ ಶಕ್ತಿಯಿರುವುದು ಗುರುವಿಗೆ ಮಾತ್ರ. ತಾಂತ್ರಿಕ ಯುಗದಲ್ಲಿ ಗುರು ಮತ್ತು ಶಿಷ್ಯರ ಸಂಬಂಧ ದೂರ ಸಾಗುತ್ತಿದ್ದು ಮತ್ತೆ ಈ ಸಮಾಗಮ ಬೆಸೆಯುವ ಯುಗ ಬರಲಿ ಎಂದರು. ಈ ವೇಳೆ ಶಾಲೆಯ ಆಡಳಿತ ಮಂಡಳಿ ಸದಸ್ಯರು ಇದ್ದರು.

ಯಲಹಂಕ ಕ್ಷೇತ್ರದ ಹನುಮಂತೇಗೌಡನ ಪಾಳ್ಯ, ಗಂಗೊಂಡನಹಳ್ಳಿ, ರಾವುತ್ತನಹಳ್ಳಿ, ಬೆಟ್ಟಗಹಳ್ಳಿ, ಕಿತ್ತನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಶಾಸಕ ಎಸ್.ಆರ್ ವಿಶ್ವನಾಥ್ ಅವರು ಸುಮಾರು 6.5 ಕೋಟಿ ರುಪಾಯಿ ವೆಚ್ಚದಲ್ಲಿ ರಸ್ತೆ ಕಾಮಗಾರಿ, ಒಳ ಚರಂಡಿ ಕಾಮಗಾರಿ ಉದ್ಘಾಟನೆ ಮತ್ತು ಹಲವು ಸರಕಾರಿ ಶಾಲೆಗಳ ಕೊಠಡಿಗಳನ್ನು ಉದ್ಘಾಟಿಸಿದರು.

ಮೌಲ್ಯಗಳಿಗೆ ಒತ್ತು ನೀಡಿ: ದೊರೆಸ್ವಾಮಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಮೂರು 'ಎಂ'ಗಳಾದ ತಾಯಿ, ಮಾತೃಭಾಷೆ ಮತ್ತು ಮಾತೃಭೂಮಿಗೆ ಬೆಲೆ ಕೊಟ್ಟರೆ ಮಾತ್ರ ಆತನಿಗೆ ಎಲ್ಲೆಡೆ ಬೆಲೆಯಿದೆ ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಆರ್.ದೊರೆಸ್ವಾಮಿ ಒತ್ತಿ ಹೇಳಿದ್ದಾರೆ.

ಪಿಇಎಸ್ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಪ್ರಥಮ ವರ್ಷದ ತರಗತಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಜೀವನದಲ್ಲಿನ ಮೌಲ್ಯಗಳ ಮೇಲೆ ಹೆಚ್ಚು ಒತ್ತು ನೀಡಬೇಕೇ ಹೊರತು ಅಲಂಕಾರಿಕ ಜೀವನ ಹಾಗೂ ಹೆಚ್ಚು ಸಂಬಳ ಪಡೆಯುವ ಉದ್ಯೋಗದ ಹಂಬಲ ಬೆಳೆಸಿಕೊಳ್ಳಬಾರದು ಎಂದು ಸಲಹೆ ನೀಡಿದ್ದಾರೆ. ಕ್ಯಾಂಪಸ್‌ನಲ್ಲಿ ಮೌಲ್ಯಾಧಾರಿತ ವಾತಾವರಣ ನಿರ್ಮಿಸಬೇಕು ಮತ್ತು ನೈತಿಕತೆಯ ಕೊರತೆಯಿಂದಾಗಿ ಅಪರಾಧದ ಪ್ರಮಾಣ ಹೆಚ್ಚುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು. ಪ್ರೊ.ಜವಾಹರ್ ಬೋಧನೆ-ಕಲಿಕೆ ಮೌಲ್ಯಮಾಪನ, ಉದ್ಯೋಗಗಳು-ವಿದ್ಯಾರ್ಥಿವೇತನಗಳು-ಪ್ರೋತ್ಸಾಹಗಳು, ಸಂಶೋಧನೆ-ನಾವೀನ್ಯತೆ- ಇವುಗಳ ಮೇಲೆ ಗಮನ ಕೇಂದ್ರೀಕರಿಸುವುದರ ಜತೆಗೆ ವಿಶ್ವದರ್ಜೆಯ ಮೂಲಸೌಕರ್ಯವನ್ನು ರಚಿಸುವ ಮೂಲಕ 10 ವರ್ಷಗಳಲ್ಲಿ ಪಿಇಎಸ್ ವಿಶ್ವವಿದ್ಯಾನಿಲಯವನ್ನು ಪ್ರಗತಿಯ ಶಿಖರಕ್ಕೇರಿಸಿದ್ದಾರೆ ಎಂದು ಶ್ಲಾಘಿಸಿದರು.

ಪಿಇಎಸ್ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಪ್ರಥಮ ವರ್ಷದ ಮೊದಲ ತರಗತಿಗಳ ಬಿಡುಗಡೆಗೊಳಿಸಿ ಮಾತನಾಡಿದ ಕುಲಪತಿ ಪ್ರೊ.ಎಂ.ಆರ್.ದೊರೆಸ್ವಾಮಿ. ವಿಶ್ವವಿದ್ಯಾಲಯದ ಸಿಇಒ ಪ್ರೊ. ಡಿ. ಜವಾಹರ್, ಕಾರ್ಯಕ್ರಮದಲ್ಲಿ ಉಪಕುಲಪತಿ ಡಾ.ಜೆ.ಸೂರ್ಯಪ್ರಸಾದ್ ಉಪಸ್ಥಿತರಿದ್ದರು.

ಸೆ.28ಕ್ಕೆ ಸಿಂಗಾಪುರದಲ್ಲಿ ವಿಶ್ವ ಕನ್ನಡ ಹಬ್ಬ

ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷ ಡಾ.ಶಿವಕುಮಾರ್ ನಾಗರ ನವಿಲೆ

ಬೆಂಗಳೂರು: ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಸಂಸ್ಥೆ ವತಿಯಿಂದ ಹೊರನಾಡ ಕನ್ನಡಿಗರನ್ನು ಬೆಸೆಯುವ ಸಲುವಾಗಿ ಕಳೆದ ವರ್ಷ ದುಬೈನಲ್ಲಿ ಸಿಕ್ಕ ಅಭೂತಪೂರ್ವ ಯಶಸ್ಸಿನಿಂದ ಪ್ರೇರಿತರಾಗಿ ಈ ಬಾರಿ ಸಿಂಗಾಪುರನಲ್ಲಿ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಡಾ. ಶಿವಕುಮಾರ್ ನಾಗರ ನವಿಲೆ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡನೇ ವಿಶ್ವ ಕನ್ನಡ ಹಬ್ಬವನ್ನು ಸಿಂಗಾಪುರದಲ್ಲಿ ಸೆಪ್ಟೆಂಬರ್ 28ರಂದು ಆಯೋಜಿಸಲಾಗಿದ್ದು, ಇಸ್ರೋ ವಿಜ್ಞಾನಿ ಎಸ್. ಕಿರಣ್ ಕುಮಾರ್ ಮತ್ತು ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ (ಇನ್ಫೋಸಿಸ್ ಫೌಂಡೇಶನ್) ಅವರಿಗೆ 2024ನೇ ಸಾಲಿನ ವಿಶ್ವ ಮಾನವ ಪ್ರಶಸ್ತಿ ನೀಡಿ ಗೌರವಿಸಲಾ ಗುತ್ತದೆ. ಪ್ರಸಾದ್ ಗುರುಜಿ, ನಟ ದೊಡ್ಡಣ್ಣ, ಸಂಗೀತ ನಿರ್ದೇಶಕ ಗುರುಕಿರಣ್, ಗಾಯಕಿ ಮಂಗ್ಲಿ, ಜಾನಪದ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಸೇರಿದಂತೆ ಆಶಾ, ಪದ್ಮಾ ನಾಗರಾಜ್, ಹರೀಶ್ ಕುಮಾರ್ ಮತ್ತು ಉಮೇಶ್ ಕುಮಾರ್ ಅವರಿಗೆ ವಿಶ್ವಮಾನ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗು ತ್ತಿದೆ. ಈ ಹಬ್ಬದಲ್ಲಿ ರಾಜ್ಯ, ದೇಶ ಮತ್ತು ವಿದೇಶಗಳಲ್ಲಿ ನೆಲೆಸಿರುವ ನೂರಾರು ಕನ್ನಡಿ ಗರು ಭಾಗವಹಿಸುವುದರ ಜತೆಗೆ ನಟ ಶಿವರಾಜ ಕುಮಾರ್ ಮತ್ತು ಗೀತಾ ಶಿವರಾಜಕುಮಾರ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ವತಿಯಿಂದ ವಿಶ್ವ ಕನ್ನಡ ಹಬ್ಬದ ಕುರಿತು ಪತ್ರಿಕಾಗೋಷ್ಠಿ ನಡೆಸಿದ ಅಧ್ಯಕ್ಷ ಡಾ. ಶಿವಕುಮಾರ್ ನಾಗರ ನವಿಲೆ. ಮಹರ್ಷಿ ಡಾ. ಆನಂದ್ ಗುರೂಜಿ, ಉತ್ಸವದ ರಾಯಭಾರಿ ವಸಿಷ್ಠ ಸಿಂಹ, 2ನೇ ವಿಶ್ವ ಕನ್ನಡ ಹಬ್ಬದ ಸರ್ವಾಧ್ಯಕ್ಷ ಡಾ.ಸಿ. ಸೋಮಶೇಖರ್, ಸಾಂಸ್ಕೃತಿಕ ಅಧ್ಯಕ್ಷ ನಟಿ ರೂಪಿಕಾ ಮುಂತಾದವರು ಹಾಜರಿದ್ದರು.

ಬೆಂವಿವಿಯ ಸಂವಹನ ವಿಭಾಗದ ಸುವರ್ಣ ಮಹೋತ್ಸವ ಇಂದು

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ವಿಭಾಗದ ಸುವರ್ಣ ಮಹೋತ್ಸವದ (1973-2023) ಅಂಗವಾಗಿ (ಮೀಡಿಯಾ ಎಜ್ಯುಕೇಷನ್: ಎ ಲೆಗಸಿ ಟು ಹೋಲ್ಡ್, ಎ ಫ್ಯೂಚರ್ ಟು ಬಿಲ್ಡ್) ಮೀಡಿಯಾ ಸ್ಪಿಯರ್-2024, ಭಾರತೀಯ ಮಾಧ್ಯಮ ಉದ್ಯಮದ ರೂಪಾಂತರ ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ವಿಭಾಗ, ಭಾರತೀಯ ಸಂವಹನ ಕಾಂಗ್ರೆಸ್ (ಐಸಿಸಿ) ಹಾಗೂ ಕರ್ನಾಟಕ ರಾಜ್ಯ ಪತ್ರಿಕೋದ್ಯಮ ಮತ್ತು ಸಂವಹನ ಶಿಕ್ಷಕರ ಸಂಘ (ಕೆಎಸ್‌ಜೆಸಿಟಿಎ) ಸಹಯೋಗದಲ್ಲಿ ಜುಲೈ 22ರಂದು ಬೆಳಗ್ಗೆ 10:30ಕ್ಕೆ ಜ್ಞಾನಭಾರತಿ ಆವರಣದಲ್ಲಿರುವ ಪ್ರೊ.ವೆಂಕಟಗಿರಿಗೌಡ ಮೆಮೋರಿಯಲ್ ಆಡಿಟೋರಿಯಂನಲ್ಲಿ ಸಮ್ಮೇಳ ಉದ್ಘಾಟನೆಯಾಗಲಿದ್ದು, ಬೆಂವಿವಿಯ ಕುಲಪತಿ ಪ್ರೊ.ಡಾ. ಜಯಕರ ಶೆಟ್ಟಿ ಎಂ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕೊಪ್ಪಳ ವಿವಿ ಕುಲಪತಿ ಪ್ರೊ.ಬಿ.ಕೆ.ರವಿ ಪ್ರಮುಖ ಉಪನ್ಯಾಸ ನೀಡಲಿದ್ದಾರೆ.

ಭೋಪಾಲ್‌ನ ಪತ್ರಿಕೋದ್ಯಮ ಮತ್ತು ಸಂವಹನ ಮಖನ್ ಲಾಲ್ ಚತುರ್ವೇದಿ ರಾಷ್ಟ್ರೀಯ ವಿವಿ ಕುಲಪತಿ ಪ್ರೊ.ಕೆ.ಜಿ.ಸುರೇಶ್, ಬೆಂಗಳೂರು ಉತ್ತರ ವಿವಿ ಕುಲಪತಿ ಪ್ರೊ.ನಿರಂಜನ ವಾನಳ್ಳಿ, ಪಶ್ಚಿಮ ಬಂಗಾಳದ ವಿಶ್ವ ಭಾರತಿ ಕೇಂದ್ರೀಯ ವಿವಿ ಮುಖ್ಯಸ್ಥ ಪ್ರೊ. ಬಿಪ್ಲಾಬ್ ಲೋಹೋ ಚೌಧರಿ, ಭುವನೇಶ್ವರ್ ಉತ್ಕಲ್ ವಿವಿಯ ಮಾಧ್ಯಮ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಉಪೇಂದ್ರ ಪಾಢಿ, ಬೆಂಗಳೂರು ವಿವಿ ಕುಲಸಚಿವ ಶೇಕ್ ಲತೀಫ್, ಮೌಲ್ಯಮಾಪನ ಕುಲಸಚಿವ ಪ್ರೊ.ಶ್ರೀನಿವಾಸ್ ಚೌಡಪ್ಪ, ಹಣಕಾಸು ಅಧಿಕಾರಿ ಡಾ.ಸುನೀತಾ ಎಂ. ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಸಂಜೆ 4:00 ಗಂಟೆಗೆ ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ವಿಭಾಗವು ಸುವರ್ಣ ಮಹೋತ್ಸವ ಮತ್ತು ಒಂದು ದಿನದ ರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭ ನಡೆಯಲಿದ್ದು, ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷ ಆಯೇಷಾ ಖಾನಂ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥ ಡಾ.ಬಿ. ಶೈಲಶ್ರೀ, ಪ್ರಾಧ್ಯಾಪಕ ಡಾ.ಎನ್.ಸಂಜೀವ ರಾಜ್, ಸಹಾಯಕ ಪ್ರಾಧ್ಯಾಪಕ ಡಾ.ವಸುಂಧರಾ ಪ್ರಿಯದರ್ಶಿನಿ, ಬೋಧಕೇತರ ಸಿಬ್ಬಂದಿ, ಸಂಶೋಧನಾರ್ಥಿಗಳು, ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತಿತರರು ಭಾಗವಹಿಸಲಿದ್ದಾರೆ.

ಕರ್ತವ್ಯದ ವೇಳೆ ರೀಲ್ಸ್ ಮಾಡಿದರೆ ಅಮಾನತು

ಬಸ್ ಚಾಲಕ, ನಿರ್ವಾಹಕರಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಖಡಕ್ ಎಚ್ಚರಿಕೆ

ಬೆಂಗಳೂರು: ಕರ್ತವ್ಯದ ವೇಳೆ ರೀಲ್ಸ್ ಮಾಡುವ ಕರ್ನಾಟಕ ಸಾರಿಗೆ ಇಲಾಖೆಯ ಚಾಲಕರು ಹಾಗೂ ನಿರ್ವಾಹಕರನ್ನು ಮುಲಾಜಿಲ್ಲದೆ ಕೆಲಸದಿಂದ

ತೆಗೆಯಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಎಚ್ಚರಿಕೆ ನೀಡಿದರು.

ಈ ಕುರಿತು ಮಾತನಾಡಿದ ಅವರು, ರೀಲ್ಸ್ ಮಾಡಿದವರು ಕೆಲಸದಲ್ಲಿ ಇರಲು ಲಾಯಕ್ ಇಲ್ಲ. ಈ ನಿಟ್ಟಿನಲ್ಲಿ ಹುಚ್ಚಾಟ ಮೆರೆದ ಚಾಲಕರು ಹಾಗೂ ನಿರ್ವಾಹಕರನ್ನು ಅಮಾನತು ಮಾಡಲಾಗುವುದು ಎಂದರು.

ಇತ್ತೀಚಿಗೆ ಕೆಎಸ್‌ಆರ್‌ಟಿಸಿ ಬಸ್ ಚಾಲಕರ ಮತ್ತು ನಿರ್ವಾಹಕರ ರೀಲ್ಸ್ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದವು. ಇದರಿಂದ ಜೀವ ಹಾನಿಯಾಗಿತ್ತು. ಹೀಗಾಗಿ ಕರ್ನಾಟಕ ಸಾರಿಗೆ ಇಲಾಖೆಯ ಚಾಲಕ ಮತ್ತು ನಿರ್ವಾಹಕರಿಗೆ ಸಚಿವ ರಾಮಲಿಂಗಾ ರೆಡ್ಡಿ ಖಡಕ್ ಸೂಚನೆ ನೀಡಿದ್ದು, ಕರ್ತವ್ಯದ ವೇಳೆ ವೇಳೆ ರೀಲ್ಸ್ ಮಾಡಿದರೇ ಅಂತವರನ್ನು ಮುಲಾಜಿಲ್ಲದೆ ಅಮಾನತುಗೊಳಿಸಲಾಗುವುದು ಎಂದರು.

ಚಾಲಕನ ರೀಲ್ಸ್ ಹುಚ್ಚಾಟಕ್ಕೆ ಎತ್ತುಗಳು ಬಲಿ

ಹುಬ್ಬಳ್ಳಿಯಿಂದ ಬಾಗಲಕೋಟೆಗೆ ಹೊರಟಿದ್ದ ಬಸ್ ನಲ್ಲಿ ಚಾಲಕನ ರೀಲ್ಸ್ ಹುಚ್ಚಾಟಕ್ಕೆ ಎರಡು ಎತ್ತುಗಳು ಬಲಿಯಾಗಿದ್ದವು. ಬಸ್ ಚಾಲಕ ಬಸ್ ಓಡಿಸುತ್ತಾ ರೀಲ್ಸ್ ಗೆ ಪೋಸ್ ನೀಡಲು ಹೋಗಿದ್ದಾನೆ. ರೀಲ್ಸ್ ಗುಂಗಿನಲ್ಲಿ ಬಸ್ ಚಲಾಯಿಸುತ್ತಿರುವುದನ್ನು ಮರೆತಿದ್ದು, ಚಕ್ಕಡಿ ಗಾಡಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದ್ದ. ಅಪಘಾತದ ರಭಸಕ್ಕೆ ಎರಡು ಎತ್ತುಗಳು ಸ್ಥಳದಲ್ಲೇ ಸಾವನ್ನಪ್ಪಿದ್ದವು. ರೈತ ಮಂಜುನಾಥ್ ಎಂಬುವವರ ಮೆದುಳು ನಿಷ್ಕ್ರಿಯವಾಗಿದ್ದು, ಸ್ಥಿತಿ ಚಿಂತಾಜನಕವಾಗಿದೆ.

- ರೀಲ್ಸ್ ಮಾಡಿದವರು ಕೆಲಸದಲ್ಲಿ ಇರಲು ಲಾಯಕ್ ಇಲ್ಲ
- ಕರ್ತವ್ಯದ ವೇಳೆ ವೇಳೆ ಚಾಲಕ, ನಿರ್ವಾಹಕರು ಹುಚ್ಚಾಟ ಮಾಡಿದರೆ ಅಮಾನತು

ಕಳೆದ ಮೇ ತಿಂಗಳಲ್ಲಿ ಚಾಲಕ ಛತ್ರಿ ಹಿಡಿದುಕೊಂಡು ಬಸ್ ಓಡಿಸುತ್ತಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಭಾರಿ ವೈರಲ್ ಆಗಿತ್ತು. ಧಾರವಾಡ ಘಟಕದ ಬೇಟಗೇರಿ-ಧಾರವಾಡ ಮಾರ್ಗದಲ್ಲಿ ಸಂಚರಿಸುವ ಆ ಬಸ್‌ನಲ್ಲಿ ಚಾಲಕರಾಗಿ ಹನುಮಂತಪ್ಪ ಕಿಲ್ಲೇದಾರ ಹಾಗೂ ನಿರ್ವಾಹಕರಾಗಿ ಅನಿತಾ ಅವರು ಕರ್ತವ್ಯ ನಿರ್ವಹಿಸುತ್ತಿದ್ದರು. ಸಂಜೆ ಮಳೆ ಬರುತ್ತಿದ್ದಾಗ ಬಸ್ಸಿನಲ್ಲಿ ಪ್ರಯಾಣಿಕರು ಇಲ್ಲದೇ ಇದ್ದಾಗ ಚಾಲಕ ಹನುಮಂತಪ್ಪ ಛತ್ರಿ ಹಿಡಿದು ಬಸ್ ಚಲಾಯಿಸಿದ್ದರು. ಛತ್ರಿ ಹಿಡಿದು ಚಾಲನೆ ಮಾಡುತ್ತಿದ್ದ ದೃಶ್ಯವನ್ನು ನಿರ್ವಾಹಕಿ ಮೊಬೈಲಿನಲ್ಲಿ ಸೆರೆ ಹಿಡಿದಿದ್ದರು.

ಈ ವಿಡಿಯೊ ವೈರಲ್ ಆಗುತ್ತಿದ್ದಂತೆಯೇ ಕರ್ನಾಟಕ ಬಿಜೆಪಿ ವ್ಯಂಗ್ಯಚಿತ್ರವನ್ನು ಹಂಚಿಕೊಂಡಿದ್ದು ಕರ್ನಾಟಕದ ಸರಕಾರದಿಂದ ಛತ್ರಿ ಭಾಗ್ಯಕ್ಕೆ ಚಾಲನೆ ಎಂದು ಟೀಕಿಸಿತ್ತು. ಬಿಜೆಪಿ ಹಿರಿಯ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ತಮ್ಮ ಎಕ್ಸ್ ಖಾತೆಯಲ್ಲಿ ಈ ವಿಡಿಯೊವನ್ನು ಹಂಚಿಕೊಂಡಿದ್ದು ರಾಜ್ಯ ಸರಕಾರವನ್ನು ತರಾಟೆಗೆ ತೆಗೆದುಕೊಂಡಿದ್ದರು. ಇದರಿಂದ ಸರಕಾರ ಮುಜುಗರಕ್ಕೆ ಒಳಗಾಗಿತ್ತು. ನಂತರ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ತನಿಖೆ ನಡೆಸಿ, ಇದು ಮನರಂಜನೆಗಾಗಿ ಮಾಡಿದ ವಿಡಿಯೊ ಎಂದು ಸ್ಪಷ್ಟನೆ ನೀಡಿದೆ.

ತನಿಖೆ ಪೂರ್ಣಗೊಂಡರೆ ಸಿಎಂ ರಾಜೀನಾಮೆ

ರಾಜಕೀಯ ದ್ವೇಷಕ್ಕಾಗಿ ಅಧಿಕಾರ ದುರುಪಯೋಗವಾಗಬಾರದು: ಬೊಮ್ಮಾಯಿ

ಬೆಂಗಳೂರು: ವಾಲ್ಮೀಕಿ ನಿಗಮದ ಹಗರಣದಲ್ಲಿ ಇಡೀ ಸರಕಾರ ಸಿಲುಕಿಕೊಂಡಿದ್ದು, ತನಿಖೆ ಪೂರ್ಣಗೊಂಡರೆ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ಬಿಜೆಪಿ ವಿರುದ್ಧ ಆರೋಪಿಸುತ್ತಿದ್ದು, ರಾಜಕೀಯ ದ್ವೇಷಕ್ಕಾಗಿ ಅಧಿಕಾರ ದುರುಪಯೋಗವಾಗಬಾರದು ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಹಳ ಕಷ್ಟಪಟ್ಟು ಬಿಜೆಪಿಯ ಅವಧಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದ್ದಾರೆ. ರಾಜ್ಯದಲ್ಲಿ ಅವರೇ ಅಧಿಕಾರದಲ್ಲಿರುವುದರಿಂದ, ಅವರು ಯಾವುದೇ ತನಿಖೆ ನಡೆಸಿದರೂ ಎದುರಿಸಲು ಸಿದ್ಧ. ಆದರೆ ತನಿಖೆಯ ಹೆಸರಲ್ಲಿ ಅಧಿಕಾರ ದುರ್ಬಳಕೆ ಆಗಬಾರದು ಎಂದು ಸ್ಪಷ್ಟಪಡಿಸಿದರು.

ಎಪಿಎಂಸಿ ಪ್ರಕರಣದಲ್ಲಿ ಎಪಿಎಂಸಿ ಸಚಿವನಾಗಿರಲಿಲ್ಲ ಆಗ ಗೃಹ ಸಚಿವನಾಗಿದ್ದೆ. ತನಿಖೆ ನಡೆಸಿ ಬ್ಯಾಂಕಿನಿಂದ 48 ಕೋಟಿಯೊಂದಿಗೆ 52 ಕೋಟಿ ವಸೂಲಿ ಮಾಡಿದ್ದಲ್ಲದೇ, ಭೋವಿ ನಿಗಮದ ಅವ್ಯವಹಾರವನ್ನು ಸಿಐಡಿ ತನಿಖೆಗೆ ವಹಿಸಲಾಗಿದೆ. ಗಂಗಾ ಕಲ್ಯಾಣ ಯೋಜನೆ ದುರುಪಯೋಗದ ಆರೋಪ ಕೇಳಿಬಂದಾಗ ಸದನದಲ್ಲೇ ತನಿಖೆಗೆ ಆದೇಶ ನೀಡಿದ್ದು, ಸಿಐಡಿ ತನಿಖೆ ಕೊನೆ ಹಂತಕ್ಕೆ ತಲುಪಿದೆ. ಈ ಹಿಂದೆ ಚುನಾವಣೆ ಸಮಯದಲ್ಲಿ ಬಿಜೆಪಿ ಸರಕಾರದ ವಿರುದ್ಧ ಶೇ.40 ಆರೋಪದ ಕುರಿತಾಗಿ ಕಾಂಗ್ರೆಸ್ ಯಾವುದೇ ಅಧಿಕಾರಿ, ಗುತ್ತಿಗೆದಾರರಿಗೆ ನೋಟಿಸ್ ನೀಡಿಲ್ಲ. ರಾಜಕೀಯ ಉದ್ದೇಶದಿಂದ ಆರೋಪ ಮಾಡಿರುವುದಾಗಿ ಎಂದರು.

ಎಲ್ಲ ಹಗರಣ ಹೊರ ಬರುತ್ತಿವೆ: ವಾಲ್ಮೀಕಿ ಸೇರಿದಂತೆ ಎಲ್ಲ ಇಲಾಖೆಗಳ ಹಗರಣ ಹೊರ ಬರುತ್ತಿದ್ದು, ಕೊಮುಲ್‌ನಿಂದ ಹಿಡಿದು ಪ್ರವಾಸೋದ್ಯಮ ಇಲಾಖೆ ಹಗರಣ ಎಲ್ಲವೂ ಹೊರ ಬರುತ್ತಿವೆ. ಸ್ವಾತಂತ್ರ್ಯ ನಂತರ ಭ್ರಷ್ಟಾಚಾರ ಹುಟ್ಟು ಹಾಕಿದ್ದೆ ಕಾಂಗ್ರೆಸ್. ಅವರ ಹಾಗೆ ನಾವು ಅಂಜುಬುರುಕರಲ್ಲ. ಯಾವುದೇ ತನಿಖೆಗೂ ಎದುರಿಸಲು ಸಿದ್ಧರಿದ್ದು, ಇಡಿ ಏಕೆ, ಸಿಬಿಐ ಏಕೆ ಎಂದು ಪ್ರಶ್ನಿಸುವುದಿಲ್ಲ ಎಂದರು.

ಸದನದಲ್ಲಿ ಪ್ರತಿ ಪಕ್ಷದ ಶಾಸಕರನ್ನು ಟಾರ್ಗೆಟ್ ಮಾಡಿದರೂ ಯಾರೂ ಬಗ್ಗುವುದಿಲ್ಲ. ಅವರ ಮುಖಕ್ಕೆ ಮಸಿ ಬಳಿದಿದ್ದು, ಭ್ರಷ್ಟಾಚಾರದ ಬ್ರಹ್ಮ ಯಾರು ಅಂತ ಎಲ್ಲರಿಗೂ ತಿಳಿದಿದು, ಈಗ ಹಗರಣದಲ್ಲಿ ಸಿಲುಕಿಕೊಂಡಿದ್ದು ತನಿಖೆ ನಂತರ ಸತ್ಯ ಹೊರಬರಲಿದೆ. ಸರಕಾರದ ಭ್ರಷ್ಟಾಚಾರದ ವಿರುದ್ಧದ ಹೋರಾಟ ಸದನದ ಹೊರಗೆ ಹಾಗೂ ಒಳಗೆ ಮುಂದುವರೆಯಲಿದೆ.

- ಬಸವರಾಜ ಬೊಮ್ಮಾಯಿ ಸಂಸದ

ಪ್ರವಾಹ ನಿರ್ಲಕ್ಷ್ಯ

ಬರ ಮತ್ತು ಪ್ರವಾಹದ ವಿಚಾರದಲ್ಲಿ ಸರಕಾರ ನಿರ್ಲಕ್ಷ್ಯ ತೋರುತ್ತಿದ್ದು, ಕೇಂದ್ರ ಸಚಿವರು, ಪಕ್ಷದ ನಾಯಕರು ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ನಂತರ ಸಿಎಂ ಭೇಟಿ ಮಾಡಿದ್ದು, ಕೇಂದ್ರ ಸರಕಾರ 700 ಕೋಟಿ ರೂ. ನೀಡಿದೆ. ರಾಜ್ಯ ಸರಕಾರ ದಿಂದ ಬರ ಬಂದಾಗಲೂ ಹಣ ಬಿಡುಗಡೆ ಮಾಡದೇ ಈಗಲೂ ಬಿಡುಗಡೆ ಮಾಡಿಲ್ಲ. ಈ ಸರಕಾರಕ್ಕೆ ಒಳ್ಳೆಯ ಆಡಳಿತ ಕೊಡುವ ಉದ್ದೇಶ ಇಲ್ಲ ಎಂದು ಬೊಮ್ಮಾಯಿ ಆರೋಪಿಸಿದರು.

ಜುಲೈ ಅಂತ್ಯಕ್ಕೆ ಪೀಣ್ಯ ಸೇತುವೆ ಭಾರಿ ವಾಹನ ಸಂಚಾರಕ್ಕೆ ಮುಕ್ತ

ಬೆಂಗಳೂರು: ಮೂರು ವರ್ಷಗಳ ಬಳಿಕ ಪೀಣ್ಯ ಮೇಲ್ಸೇತುವೆಯು ಭಾರಿ ವಾಹನಗಳ ಸಂಚಾರಕ್ಕೆ ಮುಕ್ತವಾಗಲಿದ್ದು, ಜುಲೈ ಅಂತ್ಯದಲ್ಲಿ ಪೀಣ್ಯ ಫ್ಲೈಓವರ್‌ನಲ್ಲಿ ಭಾರಿ ವಾಹನಗಳ ಸಂಚಾರ ಆರಂಭವಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೇಲ್ಸೇತುವೆಯು ಭಾರೀ ವಾಹನ ಸಂಚಾರಕ್ಕೆ ಮುಕ್ತವಾಗುತ್ತಿದ್ದಂತೆಯೇ ತುಮಕೂರು ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆಯು ಕಡಿಮೆಯಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದು, 15 ಮೀಟರ್ ಅಗಲ, 4.2-ಕಿಮೀ ಉದ್ದದ ಮೇಲಸೇತುವೆಯಲ್ಲಿ 2021 ರ ಡಿಸೆಂಬರ್‌ನಿಂದ ಬಸ್ ಮತ್ತು ಟ್ರಕ್‌ಗಳ ಸಂಚಾರವನ್ನು ನಿರ್ಬಂಧಿಸಲಾಗಿತ್ತು. ಮೇಲ್ಸೇತುವೆಯ ಮೂರು ವ್ಯಾಪ್ತಿಯಲ್ಲಿರುವ ಪ್ರಿಸ್ಟ್ರೆಸ್ಡ್ ಕೇಬಲ್‌ಗಳು ತುಕ್ಕು ಹಿಡಿದ ಹಿನ್ನೆಲೆ ಘನ ವಾಹನಗಳ ಸಂಚಾರಕ್ಕೆ ಸೂಕ್ತವಲ್ಲ ಎಂಬ ತಜ್ಞರ ವರದಿಯ ನಂತರ ಈ ಕ್ರಮ ಕೈಗೊಳ್ಳಲಾಗಿತ್ತು. ಜುಲೈ ಕೊನೆಯ ವಾರದಲ್ಲಿ ಭಾರಿ ವಾಹನಗಳಿಗೆ ಮೇಲ್ಸೇತುವೆ ಮುಕ್ತವಾಗ ಲಿದ್ದು, ಪ್ರಸ್ತುತ ಸೈಟ್ ಮತ್ತು ಟ್ರಾಫಿಕ್ ಪರಿಸ್ಥಿತಿಗಳನ್ನು ವಿವರಿಸುವ ವರದಿಯನ್ನು ಹೆದ್ದಾರಿ ಪ್ರಾಧಿಕಾರದ ಪ್ರಧಾನ ಕಚೇರಿಗೆ ಸಲ್ಲಿಸಲಾಗಿದೆ. ತಜ್ಞರ ಸಮಿತಿ ಮತ್ತು ಟ್ರಾಫಿಕ್ ಪೊಲೀಸರ ಅನು ಮೋದನೆಯನ್ನು ಮುಂದಿನ ವಾರ ಪಡೆಯಲಿದ್ದೇವೆ ಎಂದು ಎನ್‌ಎಚ್‌ಎಐ ಬೆಂಗಳೂರು ಘಟಕವು ತಿಳಿ ಸಿದ್ದು, ಮೇಲ್ಸೇತುವೆಯನ್ನು ಘನ ವಾಹನಗಳ ಸಂಚಾರಕ್ಕೆ ತೆರವುಗೊಳಿಸುತ್ತಿದ್ದೇವೆ. ಅಸ್ತಿತ್ವದಲ್ಲಿರುವ 1,243 ಕೇಬಲ್‌ಗಳನ್ನು ಬಲಪಡಿಸಲು ಗ್ರೌಟಿಂಗ್ ಮಾಡಲು, ವಾರದಲ್ಲಿ ಒಂದು ದಿನ ಮೇಲ್ಸೇತುವೆಯ ಮೇಲೆ ಕಂಪನ ಇರಬಾರದು ಅಷ್ಟೆ ಎಂದು ಐಐಎಸ್‌ಸಿ ನಿರ್ದೇಶಕ ಪ್ರೊ.ಚಂದ್ರ ಕಿಶನ್ ಜೆಎಂ ತಿಳಿಸಿದರು.

ಪ್ರಾಯೋಗಿಕ ಸಂಚಾರ

ಮೇಲ್ಸೇತುವೆಯ ಪ್ರತಿ ಸ್ಪ್ಯಾನ್‌ನಲ್ಲಿ ಎರಡು ಹೆಚ್ಚುವರಿ ಕೇಬಲ್‌ಗಳನ್ನು ಹೆಚ್ಚುವರಿ ಸ್ಲಾಟ್‌ಗಳನ್ನಾಗಿ ಸೇರಿಸಿ ಮತ್ತು ಫ್ಲೈಓವರ್‌ನ್ನು ಬಲಪಡಿಸುವುದಕ್ಕಾಗಿ ಎನ್‌ಎಸ್‌ಎಐ 2023 ರಲ್ಲಿ, 38.5-ಕೋಟಿ ರು. ದುರಸ್ತಿ ಯೋಜನೆಯನ್ನು ಪ್ರಾರಂಭಿಸಿತ್ತು. ಮೇಲ್ಸೇತುವೆಯಲ್ಲಿ 120 ಸ್ಪ್ಯಾನ್‌ಗಳೊಂದಿಗೆ 240 ಪ್ರಿಸ್ಟ್ರೆಸ್ಡ್ ಕೇಬಲ್‌ಗಳನ್ನು ಸೇರಿಸಲಾಗಿದೆ. ಜನವರಿಯಲ್ಲಿ ಮೇಲ್ಸೇತುವೆಯಲ್ಲಿ ಲೋಡ್ ಪರೀಕ್ಷೆಗಳನ್ನು ಮಾಡಲಾಗಿತ್ತು.

ಸಮಾಚಾರ ಸಣ್ಣದಲ್ಲ

ಪೊಲೀಸರ ಮೇಲೆ ಕಳ್ಳರ ಕಲ್ಲು ತೂರಾಟ

ಚಿತ್ರದುರ್ಗ: ನಾಯಕನಹಟ್ಟಿ ಸಮೀಪದ ಕುದಾಪುರ ಬಳಿ ಕಳ್ಳರ ಗ್ಯಾಂಗ್ ಹಿಡಿಯಲು ಮುಂದಾದ ಪೊಲೀಸರ ಮೇಲೆ ಕಲ್ಲುತೂರಾಟ ನಡೆದಿದ್ದು, ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ ಘಟನೆ ಶನಿವಾರ ತಡರಾತ್ರಿ ನಡೆದಿದೆ. ನಾಯಕನಹಟ್ಟಿ ಪೊಲೀಸ್ ಠಾಣೆ ಪಿಎಸ್ಐ ಶಿವಕುಮಾರ್ ನೇತೃತ್ವದಲ್ಲಿ ಪೊಲೀಸರು ರಾತ್ರಿಗಸ್ತಿನಲ್ಲಿದ್ದಾಗ ಈ ಘಟನೆ ನಡೆದಿದೆ. ಕುದಾಪುರ ಡಿಆರ್‌ಡಿಓ ಬಳಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಆಂಧ್ರಪ್ರದೇಶದ ನೋಂದಣಿ ಸಂಖ್ಯೆ ಹೊಂದಿದ್ದ ಬೊಲೇರೊ ವಾಹನವನ್ನು ನಿಲ್ಲಿಸಿ ಪರಿಶೀಲಿಸಲು ಮುಂದಾದ ವೇಳೆ ಪೊಲೀಸ್ ಜೀಪ್ ಮೇಲೆ ಕಲ್ಲುತೂರಾಟ ನಡೆಸಿ ತಪ್ಪಿಸಿಕೊಂಡು ಪರಾರಿಯಾಗಿದ್ದಾರೆ. ಕಲ್ಲುತೂರಾಟ ನಡೆಸುತ್ತಿದ್ದಂತೆ ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಆದರೂ ಬಗ್ಗದ ಡೆಡ್ಲಿ ಕಳ್ಳರ ಗ್ಯಾಂಗ್ ತಪ್ಪಿಸಿಕೊಂಡಿದೆ. ಘಟನೆಯ ಮಾಹಿತಿ ತಿಳಿಯುತ್ತಿಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದರ್ ಕುಮಾರ್ ಮೀನಾ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ದೇವಪ್ಪಜ್ಜ ಕುಸುಗಲ್ ಭೀಕರ ಹತ್ಯೆ

ಹುಬ್ಬಳ್ಳಿ: ಧಾರವಾಡ ರಸ್ತೆಯ ಈಶ್ವರನಗರದ ಶ್ರೀ ವೈಷ್ಣೋದೇವಿ ಮಂದಿರದ ಸ್ವಾಮೀಜಿ ದೇವಪ್ಪಜ್ಜ ಕುಸುಗಲ್ ಅವರನ್ನು ಚಾಕುವಿನಿಂದ ಇರಿದು ಹತ್ಯೆ

ಮಾಡಲಾಗಿದೆ. ಮಂದಿರದ ಮುಂಭಾಗದಲ್ಲೇ ಹೊಡೆದು ಪರಾರಿಯಾಗಿರುವ ಆರೋಪಿಗಳು, ಸ್ಥಳೀಯರು ದೇವಪ್ಪಜ್ಜ ಅವರನ್ನ ಕಿಮ್ಸ್‌ಗೆ ದಾಖಲಿಸಿದರೂ, ಪ್ರಯೋಜನವಾಗಿಲ್ಲ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೇ ನವನಗರದ ಎಪಿಎಂಸಿ ಠಾಣೆಯ ಪೊಲೀಸರು, ಸ್ಥಳಕ್ಕೆ ದೌಡಾಯಿಸಿ ಆರೋಪಿಯ ಪತ್ತೆಗಾಗಿ ಜಾಲಬೀಸಿದ್ದಾರೆ. ದೇವಪ್ಪಜ್ಜ ಕುಸುಗಲ್ ಅಜ್ಜನವರು ರವಿವಾರ ನಡೆದ ವೀರಶೈವ ಮಹಾಸಭಾದ ಚುನಾವಣೆಯಲ್ಲಿ ಮತ ಚಲಾಯಿಸಿದ್ದರು. ದೇವಪ್ಪಜ್ಜನವರ ಮನೆ ಹುಬ್ಬಳ್ಳಿಯ ವಿದ್ಯಾನಗರದ ಲೋಕಪ್ಪನಹಕ್ಕಲದ ಬಳಿಯಿದೆ.

ಆಕಸ್ಮಿಕ ಬೆಂಕಿಗೆ ತಂಬಾಕು ಭಸ್ಮ

ಹುಣಸೂರು: ಆಕಸ್ಮಿಕವಾಗಿ ಬೆಂಕಿ ಬಿದ್ದು ತಂಬಾಕು ಹದ ಮಾಡುವ ಬ್ಯಾರನ್ ಸುಟ್ಟು ಹೋಗಿ ಲಕ್ಷಾಂತರ ರು. ನಷ್ಟ ಸಂಭವಿಸಿರುವ ಘಟನೆ ಹರವೆ ಗ್ರಾಮದಲ್ಲಿ

ನಡೆದಿದೆ. ಹುಣಸೂರು ತಾಲೂಕಿನ ಹರವೆ ಗ್ರಾಮದ ಕುಚೇಲೇಗೌಡರಿಗೆ ಸೇರಿದ ಡಬ್ಬಲ್ ಬ್ಯಾರನ್ ಗೆ ಹೊಗೆ ಸೊಪ್ಪು ಹದಗೊಳಿಸಲು ಬ್ಯಾರನ್ ಗೆ ಏರಿಸಿದ್ದ ವೇಳೆ ಬೆಂಕಿ ಹತ್ತಿ ದಟ್ಟ ಹೊಗೆ ಕಾಣಿಸಿಕೊಂಡಿದೆ. ಅಕ್ಕಪಕ್ಕದ ರೈತರು ನೀರು ಹಾಯಿಸಿ ಅಗ್ನಿ ಶಾಮಕ ದಳಕ್ಕೆ ಮಾಹಿತಿ ನೀಡಿದ ಮೇರೆಗೆ ಸಿಬ್ಬಂದಿಗಳು ಆಗಮಿಸಿ ಬೆಂಕಿ ಅಕ್ಕಪಕ್ಕಕ್ಕೆ ಹರಡುವುದನ್ನು ತಪ್ಪಿಸಿದರು. ತಂಬಾಕು ಸಂಪೂರ್ಣ ಭಸ್ಮವಾಗಿದೆ. ಬ್ಯಾರನ್ ಚಾವಣಿಗೆ ಹಾನಿಯಾಗಿದ್ದು, ಸುಮಾರು ಐದು ಲಕ್ಷ ರು. ನಷ್ಟ ಉಂಟಾಗಿದೆ. ನಷ್ಟಕ್ಕೊಳಗಾಗಿರುವ ಕುಚೇಲೇ ಗೌಡರಿಗೆ ತಂಬಾಕು ಮಂಡಳಿವತಿಯಿಂದ ನೀಡುವ ಪರಿಹಾರ ಕೊಡಿಸುವಂತೆ ರೈತ ಮುಖಂಡ ಮೋದೂರು ಮಹೇಶ್ ಮನವಿ ಮಾಡಿದ್ದಾರೆ.

ಕಾರ್ಮಿಕನ ಆತ್ಮಹತ್ಯೆ

ಬಜಪೆ: ಎಕ್ಕಾರು ಗ್ರಾಮ ಪಂಚಾಯತ್ ವ್ಯಾಪ್ತಿ ಬಡಗ ಎಕ್ಕಾರು ಅರಸು ಪದವಿನ ಕೆಂಪುಕಲ್ಲಿನ ಕೋರೆಯ ಕಾರ್ಮಿಕ ವಿಜಯ ನಗರ ಕೊಪ್ಪಳದ ಮಂಜುನಾಥ (28) ಅವರು ಮರಕ್ಕೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು 6 ವರ್ಷಗಳಿಂದ ಕೋರೆಯಲ್ಲಿ ಕೆಲಸ ಮಾಡುತ್ತಿದ್ದರು. ಬಾಡಿಗೆ ಮನೆಯಲ್ಲಿದ್ದ ಆತ ಜು. 20ರಿಂದ ರಾತ್ರಿಯಿಂದ ನಾಪತ್ತೆಯಾಗಿದ್ದ. ಈತ ಮಾನಸಿಕವಾಗಿಯೂ ಅಸ್ವಸ್ಥನಾಗಿದ್ದ ಎಂದು ಹೇಳಲಾಗಿದೆ.

ಕಳಚಿದ ಬಸ್ ಟಯರ್ ತಪ್ಪಿದ ಅನಾಹುತ

ಉಡುಪಿ: ಚಲಿಸುತ್ತಿದ್ದಾಗಲೇ ಕೆಎಸ್‌ಆರ್‌ಟಿಸಿ ಬಸ್‌ನ ಟಯರ್ ಕಳಚಿದ್ದು, ಸಂಭವನೀಯ ಅನಾಹುತ ತಪ್ಪಿದ ಘಟನೆ ಕುಂದಾಪುರ ಆಜ್ರಿ ಸಮೀಪದ ಹೆಮ್ಮಕ್ಕಿ ಬಳಿ ಶನಿವಾರ ನಡೆದಿದೆ. ಆಜ್ರಿಯಿಂದ ಕುಂದಾಪುರಕ್ಕೆ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್ ಇದಾಗಿದೆ. ಬಸ್ ನಿಧಾನಗತಿಯಲ್ಲಿ ಸಂಚರಿಸುತ್ತಿದ್ದರಿಂದ ಯಾವುದೇ ಅನಾಹುತ ಸಂಭವಿಸದೆ ಪ್ರಯಾಣಿಕರೆಲ್ಲರೂ ಅಪಾಯದಿಂದ ಪಾರಾಗಿದ್ದಾರೆ. ಈ ಬಗ್ಗೆ ಆಜ್ರಿಯ ನಿವಾಸಿ ಚಂದ್ರಹಾಸ ಅವರು ಪ್ರತಿಕ್ರಿಯೆ ನೀಡಿದ್ದು, ಕೆಎಸ್‌ಆರ್‌ಟಿಸಿ ಹಾಗೂ ಡಿಪೋ ಮೆಕ್ಯಾನಿಕ್‌ಗಳ ನಿರ್ಲಕ್ಷ್ಯದಿಂದ ಈ ಘಟನೆ ಸಂಭವಿಸಿದೆ. ಪ್ರಯಾಣಿಕರ ಜೀವದೊಂದಿಗೆ ಚೆಲ್ಲಾಟ ಆಡುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

{ಬಸವರಾಜ ಬೊಮ್ಮಾಯಿ} ಸಂಸದ

ಕಾಂಗ್ರೆಸ್ ಶಾಸಕರ ಪರಿಸ್ಥಿತಿ ಏನಾಗಿದೆ ಎಂದರೆ ಕ್ಷೇತ್ರಕ್ಕೆ ಅನುದಾನ, ಅಭಿವೃದ್ಧಿ ಇಲ್ಲದೇ ಜನರ ಸಮಸ್ಯೆ ಕೇಳಲು ಆಗುತ್ತಿಲ್ಲ. ಅತ್ತ ಸಚಿವರ ಬಳಿ ಹೋದರೆ ಶಾಸಕರ ಕಷ್ಟ ಕೇಳುತ್ತಿಲ್ಲ. ಅದಕ್ಕಾಗಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕರು ಕೇಳಿದ್ದಾರೆ. ಇವರ ಅಸಮಾಧಾನ ಮುಂದಿನ ರಾಜಕೀಯ ಬದಲಾವಣೆಗೆ ನಾಂದಿ ಹಾಡಬಹುದು.



ಗೋಕರ್ಣದ ಅಶೋಕೆಯಲ್ಲಿ ರಾಘವೇಶ್ವರ ಭಾರತೀ ಸ್ವಾಮೀಜಿ 31ನೇ ಚಾತುರ್ಮಾಸ್ಯ ವ್ರತಾರಂಭ

ಅರಿವಿನ ಪ್ರಾಪ್ತಿಯೇ ಅನಾವರಣ

ಗೋಕರ್ಣ: ಅಜ್ಞಾನವೇ ಆವರಣ, ಸುಜ್ಞಾನವೇ ಅನಾವರಣ. ಅರಿವಿನ ಪ್ರಾಪ್ತಿಯೇ ನಿಜವಾದ ಅನಾವರಣ ಎಂದು ರಾಮಚಂದ್ರಾಪುರ ಮಠದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿ ನುಡಿದರು.

ಗೋಕರ್ಣದ ಅಶೋಕೆಯ ವಿಷ್ಣುಗುಪ್ತ ವಿಶ್ವವಿದ್ಯಾಪೀಠದ ಆವರಣದಲ್ಲಿ ಭಾನುವಾರ ಅನಾವರಣ ಚಾತುರ್ಮಾಸ್ಯ ಧರ್ಮಸಭೆಯಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ಪ್ರತಿಯೊಬ್ಬರ ಹೃದಯವೂ ಒಂದು ಅಮೂಲ್ಯರತ್ನ. ಆದರೆ ಅದರ ಕಲ್ಪನೆ ನಮಗಿಲ್ಲ. ರತ್ನಕ್ಕೆ ಮುಚ್ಚಿರುವ ಆವರಣವನ್ನು ಸುಜ್ಞಾನದ ಮೂಲಕ ಸರಿಸುವುದೇ ಅನಾವರಣ ಎಂದರು. ನಮ್ಮ ನಮ್ಮ ಆತ್ಮಗಳ ಅನಾವರಣಕ್ಕೆ ಈ ಚಾತುರ್ಮಾಸ್ಯ ವೇದಿಕೆಯಾಗಲಿ. ಆತ್ಮದ ಹಾದಿ ಶಿಷ್ಯರಿಗೆ ಕಾಣುವಂತಾಗಲಿ. ಸತ್ಯದ ಅನುಭೂತಿಯಾಗಿ ಪೂರ್ಣತೃಪ್ತಿ ಸಿಗುವ ಅನಾವರಣ ಆಗಲಿ ಎಂದು ಆಶಿಸಿದರು.

ನಮ್ಮ ಮಠದಲ್ಲೇ ಇರುವ ಅದ್ಭುತವಾದ ಸಂಗತಿಗಳೇ ಅನಾವರಣಗೊಳ್ಳಬೇಕು. ಇಂದು ಮಠ ಚಿರಪರಿಚಿತವಾದರೂ, ಗೊತ್ತಿಲ್ಲದ ಅನೇಕ ಸಂಗತಿಗಳು ಗರ್ಭದಲ್ಲಿ ಅಡಗಿವೆ. ಇವು ಹೊರಗೆ ಬರುವಂತಾಗಬೇಕು ಎನ್ನುವುದೇ ಈ ಚಾತುರ್ಮಾಸ್ಯದ ಆಶಯ ಎಂದು ಬಣ್ಣಿಸಿದರು.

ಜಗದ್ಗುರು ಶ್ರೀಕೃಷ್ಣ: ಇರುವುದನ್ನು ತೋರದಂತೆ ತಡೆಯುವ ತೆರೆಯನ್ನು ಸರಿಸುವುದೇ ಅನಾವರಣ. ಈ ತೆರೆ ಸರಿಸುವವನು ಗುರು. ಗೀತೆಗಿಂತ ದೊಡ್ಡ ಉಪದೇಶ ವಿಶ್ವದಲ್ಲಿ ಮತ್ತೊಂದಿಲ್ಲ. ಅದನ್ನು ನೀಡಿದ ಕೃಷ್ಣ ಜಗದ್ಗುರು. ಗುರುವಿಗೆ ವಿಶಿಷ್ಟ ಸ್ಥಾನವಿದೆ. ನಮ್ಮ ಆರಾಧ್ಯದೈವ ರಾಮ ಕೂಡಾ ಬೋಧಮುದ್ರೆಯೊಂದಿಗೆ ಗುರುವಾಗಿ ಗೋಚರಿಸಿದ್ದಾನೆ ಎಂದು ಹೇಳಿದರು.

ಒಂದು ನಿತ್ಯ ವಿಶೇಷ. ಇನ್ನೊಂದು ಅದ್ಯ ವಿಶೇಷ. ರಾಮ-ಕೃಷ್ಣರ ನಿತ್ಯೋತ್ಸವ, ಸತ್ಯೋತ್ಸವ ವ್ಯಾಸಪೂಜೆಯ ವಿಶೇಷ ಸಂದರ್ಭದಲ್ಲಿ ನಡೆಯುತ್ತದೆ. ದೇವವೃಂದ ಉಭಯ ಮಂಟಪಗಳಲ್ಲಿ ಸಾನ್ನಿಧ್ಯ ನೀಡಿವೆ. ನೃಸಿಂಹ, ರಾಮ ಹಾಗೂ ಕೃಷ್ಣಾವತಾರದ ಸಾನ್ನಿಧ್ಯ, ಗುರುಪೂರ್ಣಿಮೆಯಂದು ವಿಶೇಷ. ಕೃಷ್ಣಪಂಚಕ ಹಾಗೂ ವ್ಯಾಸಪಂಚಕರ ಪೂಜೆ ನಡೆಯುತ್ತದೆ. ಜತೆಗೆ ಎಡಭಾಗದಲ್ಲಿ ಶಂಕರ ಪಂಚಕ, ಹಿಂದೆ ಸನಕ ಪಂಚಕ, ಆಚಾರ್ಯ ಪಂಚಕ, ಗುರುಪಂಚಕ, ಬ್ರಹ್ಮವಿದ್ಯಾ ಸಂಪ್ರದಾಯ ಕರ್ತೃಗಳ ಪೂಜೆ ವಿಧ್ಯುಕ್ತವಾಗಿ ನಡೆಯುತ್ತದೆ. ಅಷ್ಟದಿಕ್ಪಾಲಕರು ಸೇರಿದಂತೆ 64 ದೇವತೆಗಳ ಪೂಜೆ ನಡೆಯುತ್ತದೆ ಎಂದು ಬಣ್ಣಿಸಿದರು.

ಗಣ್ಯರ ಉಪಸ್ಥಿತಿ: ಶ್ರೀಮಠದ ಪ್ರಶಾಸನಾಧಿಕಾರಿ ಸಂತೋಷ್ ಹೆಗಡೆ, ವಿತ್ತಾಧ್ಯಕ್ಷ ಗಣೇಶ್ ಜೆ.ಎಲ್, ವಿಷ್ಣುಗುಪ್ತಾ ವಿವಿ ಗೌರವಾಧ್ಯಕ್ಷ ಡಿ.ಡಿ.ಶರ್ಮಾ, ಚಾತುರ್ಮಾಸ್ಯ ಸಮಿತಿ ಅಧ್ಯಕ್ಷ ಮಂಜುನಾಥ ಸುವರ್ಣಗದ್ದೆ, ಕಾರ್ಯದರ್ಶಿ ಶ್ರೀಕಾಂತ್ ಪಂಡಿತ್, ಕೋಶಾಧ್ಯಕ್ಷ ಸುಧಾಕರ್, ಮಹಾಮಂಡಲ ಪ್ರಧಾನ ಕಾರ್ಯದರ್ಶಿ ಉದಯಶಂಕರ ಭಟ್ ಮಿತ್ತೂರು, ವಿವಿವಿ ಗೌರವಾಧ್ಯಕ್ಷ ಆರ್.ಎಸ್.ಹೆಗಡೆ ಹರಗಿ, ಅಧ್ಯಕ್ಷ ಎಸ್.ಎಸ್.ಹೆಗಡೆ, ಆಡಳಿತಾಧಿಕಾರಿ ಡಾ.ಪ್ರಸನ್ನ ಕುಮಾರ್, ಪಾರಂಪರಿಕ ವಿಭಾಗದ ವರಿಷ್ಠಾಚಾರ್ಯ ಸತ್ಯನಾರಾಯಣ ಶರ್ಮ, ಸಂಯೋಜಕಿ ಅಶ್ವಿನಿ ಉಡುಚೆ, ಹಿರಿಯ ಲೋಕಸಂಪರ್ಕಾಧಿಕಾರಿ ಜಿ.ಕೆ. ಹೆಗಡೆ, ಹರಿಪ್ರಸಾದ್ ಪೆರಿಯಾಪು, ಕಾರ್ಯದರ್ಶಿ ಮಧು ಜಿ.ಕೆ, ವ್ಯವಸ್ಥಾಪಕ ಪ್ರಮೋದ್ ಮುಡಾರೆ ಮತ್ತಿತರರು ಉಪಸ್ಥಿತರಿದ್ದರು.

ಗೋಕರ್ಣದ ಅಶೋಕೆಯ ವಿಷ್ಣುಗುಪ್ತ ವಿಶ್ವವಿದ್ಯಾಪೀಠದ ಆವರಣದಲ್ಲಿ ಭಾನುವಾರ ಅನಾವರಣ ಚಾತುರ್ಮಾಸ್ಯ ಧರ್ಮಸಭೆಯಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ವ್ಯಾಸಪೂಜೆ ಮೂಲಕ ಚಾತುರ್ಮಾಸ್ಯ ವ್ರತಾರಂಭ

ಶ್ರೀಸಂಸ್ಥಾನದವರು ಸಾಂಪ್ರದಾಯಿಕ ವ್ಯಾಸಪೂಜೆ ನೆರವೇರಿಸುವ ಮೂಲಕ ಚಾತುರ್ಮಾಸ್ಯ ವ್ರತಾರಂಭ ಮಾಡಿದರು. ಶ್ರೀಮಠದ ಶಾಸ್ತ್ರಿಗಳಾದ ಸುಬ್ರಾಯ ಅಗ್ನಿಹೋತ್ರಿ, ವಿನಾಯಕ ಶಾಸ್ತ್ರಿ, ಶ್ರೀಶ, ಅಮೃತೇಶ ಹಿರೇ, ಪರಮೇಶ್ವರ ಮಾರ್ಕಂಡೆ, ಸುಬ್ರಹ್ಮಣ್ಯ ಭಟ್, ಶೇಷಗಿರಿ ಭಟ್ ಮತ್ತಿತರರು ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ದಿವ್ಯತೆ ಅನಾವರಣಕ್ಕೆ ಗುರು ಅಗತ್ಯ

ಮಠವೆಂಬ ಸಮುದ್ರದ ಅನಾವರಣ. ಅಂತೆಯೇ ಸಮಾಜದಲ್ಲಿ ಅನೇಕಾನೇಕ ವ್ಯಕ್ತಿ-ವಿಷಯ-ವಸ್ತುಗಳು ಇರಬಹುದು. ಅವುಗಳ ಅನಾವರಣ ಈ ಚಾತುರ್ಮಾಸ್ಯದಲ್ಲಿ ನಡೆಯಬೇಕು. ಇಡೀ ಸಮಾಜಕ್ಕೆ ವಿಷ್ಣುಗುಪ್ತ ವಿಶ್ವವಿದ್ಯಾಪೀಠವನ್ನು ಅನಾವರಣಗೊಳಿಸಬೇಕು. ಇದರಿಂದ ಸಮಾಜಕ್ಕೆ ಉಪಯೋಗವಾಗಬೇಕು. ಮನುಷ್ಯ ತನ್ನ ದಿವ್ಯತೆಯನ್ನು ದುರುಪಯೋಗ ಮಾಡದಂತೆ ಹುದುಗಿಸಿಡಲು ನಿರ್ಧರಿಸಿ ಬ್ರಹ್ಮದೇವರು ಅದನ್ನು ಮನುಷ್ಯನ ಹೃದಯದಲ್ಲೇ ಅಡಗಿಸುತ್ತಾನೆ. ಅದನ್ನು ಪ್ರಯತ್ನಪೂರ್ವಕವಾಗಿ ಅರಸುವವನಿಗೆ ಮಾತ್ರ ಅದು ಗೋಚರಿಸುತ್ತದೆ. ಭೂಮಿ, ಆಕಾಶ, ನೀರು ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಹುಡುಕಿದರೂ ತನ್ನೊಳಗಿನ ದಿವ್ಯತೆಯನ್ನು ಮರೆತಿದ್ದಾನೆ. ಈ ತೆರೆಯನ್ನು ಸರಿಸಲು ಗುರು ಬೇಕು ಎಂದು ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವಭಾರತೀ ಮಹಾಸ್ವಾಮೀಜಿ ಅಭಿಪ್ರಾಯಪಟ್ಟರು.

ರೇವಣ್ಣ ನೇತೃತ್ವದಲ್ಲಿ ಬೃಹತ್ ಸಮಾವೇಶ

ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾದ ಜೆಡಿಎಸ್

ಬೆಂಗಳೂರು: ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದಿಂದ ಭಾರಿ ಮುಜುಗರಕ್ಕೆ ಈಡಾಗಿರುವ ದೇವೇಗೌಡರ ಕುಟುಂಬ,

ತಮ್ಮ ಭದ್ರ ಕೋಟೆ ಎನಿಸಿದ್ದ ಹಾಸನವನ್ನು ಲೋಕಸಭಾ ಚುನಾವಣೆಯಲ್ಲಿ ಕಳೆದುಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದೀಗ ಕಳೆದು ಕೊಂಡಿರುವ ವರ್ಚಸ್ಸನ್ನು ಪಡೆಯುವ ನಿಟ್ಟಿನಲ್ಲಿ ರೇವಣ್ಣ ನೇತೃತ್ವದಲ್ಲಿ ಬೃಹತ್ ಸಮಾವೇಶಕ್ಕೆ ದೇವೇಗೌಡರ ಕುಟುಂಬ ಮುಂದಾಗಿದೆ.

ಹಾಸನದಲ್ಲಾಗಿರುವ ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾಗಿರುವ ದೇವೇಗೌಡರ ಕುಟುಂಬ ಇದೀಗ ಬೃಹತ್ ಸಮಾವೇಶಕ್ಕೆ ವೇದಿಕೆ ಸಿದ್ಧಪಡಿಸಿಕೊಂಡಿದೆ. ಈ ಬಗ್ಗೆ ಭಾನುವಾರ ಮಾತನಾಡಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ರೇವಣ್ಣ ನೇತೃತ್ವದಲ್ಲಿ ಬೃಹತ್ ಸಮಾವೇಶ ನಡೆಸುವುದಾಗಿ ಹೇಳಿದ್ದಾರೆ. ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಹಾಗೂ ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ ನ್ಯಾಯಾಂಗ ಬಂಧನದಲ್ಲಿದ್ದು, ಇದು ಜೆಡಿಎಸ್ ಕಾರ್ಯಕರ್ತರನ್ನು ಕುಗ್ಗಿಸಿದೆ. ಇದರಿಂದ ಪಕ್ಷ ಸಂಘಟನೆಗೆ ಭಾರಿ ಹೊಡೆತ ಬಿದ್ದಿದೆ. ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿ, ಪಕ್ಷ ಸಂಘಟನೆಗೆ ಚುರುಕು ನೀಡುವ ನಿಟ್ಟಿನಲ್ಲಿ ಬೃಹತ್ ಸಮಾವೇಶಕ್ಕೆ ತೀರ್ಮಾನಿಸಲಾಗಿದೆ.

ಹಾಸನ ಜಿಲ್ಲೆ ಋಣ ತೀರಿಸುತ್ತೇವೆ

ಈ ಬಗ್ಗೆ ಮಾತನಾಡಿರುವ ಅವರು, ಹಾಸನದಲ್ಲಿ ಬೃಹತ್ ಸಮಾವೇಶ ಮಾಡುವಂತೆ ಶಾಸಕರ ಒತ್ತಾಯವಿದೆ. ಕಲಾಪ ಮುಗಿದ ನಂತರ ಹಾಸನದಲ್ಲಿ ಮಾಜಿ ಸಚಿವ ರೇವಣ್ಣ ಅವರ ನೇತೃತ್ವದಲ್ಲೇ ಬೃಹತ್ ಸಮಾವೇಶ ಮಾಡುತ್ತೇನೆ. ರೇವಣ್ಣ ಕುಟುಂಬದಲ್ಲಿ ಕುಟುಂಬದಲ್ಲಿ ಕೆಲವು ಸಮಸ್ಯೆಗಳಿವೆ, ಆದರೆ ರೇವಣ್ಣ ಅವರು ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಯಾರು ಮರೆಯುವಂತಿಲ್ಲ. ಎಲ್ಲರಿಗಿಂತ ಒಂದು ಹೆಜ್ಜೆ ಹೆಚ್ಚು ಅಭಿವೃದ್ಧಿ ಮಾಡಿದ್ದಾರೆ. ಬೆಂಗಳೂರಿನ ಮದರ್ ಡೈರಿ ಮೀರಿಸುವ ರೀತಿಯಲ್ಲಿ ಹಾಸನದಲ್ಲಿ ಮೆಗಾ ಡೈರಿ ನಿರ್ಮಾಣ ಮಾಡುತ್ತಿದ್ದಾರೆ. ರೈತರಿಗೆ ಆರ್ಥಿಕ ಶಕ್ತಿ ತುಂಬಲು ಮೆಗಾ ಡೈರಿ ಮಾಡುತ್ತಿದ್ದಾರೆ. ರೇವಣ್ಣ ಅವರ ನೇತೃತ್ವದಲ್ಲಿ, ಶಾಸಕರುಗಳನ್ನೊಳಗೊಂಡು ನಾನು ಸೇರಿದಂತೆ ಪಕ್ಷ ಸಂಘಟನೆ ಮಾಡುತ್ತೇವೆ. ಹಾಸನ ಜಿಲ್ಲೆಯ ಜನರ ಋಣವನ್ನು ತೀರಿಸುತ್ತೇವೆ ಎಂದು ತಿಳಿಸಿದರು.

ಆಷಾಢಮಾಸದಲ್ಲಿ ವಿಶೇಷವಾಗಿ ನಡೆಯುವ ಚಾಮರಾಜನಗರ ನಗರದ ಚಾಮರಾಜೇಶ್ವರಸ್ವಾಮಿಯ ಬ್ರಹ್ಮ ರಥೋತ್ಸವ ಅಪಾರ ಜನಸ್ತೋಮದೊಂದಿಗೆ ವೈಭವದಿಂದ ನಡೆಯಿತು.

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆರೋಪ

ಸರಕಾರಕ್ಕೆ ಜನಪರ ಕಾಳಜಿ ಇಲ್ಲ

ಬೆಳಗಾವಿ: ಅತಿವೃಷ್ಟಿ ಪರಿಹಾರ ಕಾರ್ಯದಲ್ಲಿ ರಾಜ್ಯ ಕಾಂಗ್ರೆಸ್ ಸರಕಾರ ಬೇಕಾಬಿಟ್ಟಿ ವರ್ತನೆ ತೋರುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಕಿಡಿ ಕಾರಿದರು. ಸುದ್ದಿಗಾರರೊಂದಿಗೆ

ಮಾತನಾಡಿ, ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ಜನಸಾಮಾನ್ಯರ ಮೇಲೆ ನಿಜವಾದ ಕಾಳಜಿಯೇ ಇಲ್ಲ. ರಾಜ್ಯದಲ್ಲಿ ಅತಿವೃಷ್ಟಿ ತೀವ್ರವಾಗಿದ್ದರೂ ಪರಿಹಾರ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ. ಸಿದ್ದರಾಮಯ್ಯ ಸರಕಾರ ಅತ್ಯಂತ ಕಡಿಮೆ ಮೊತ್ತದ ಪರಿಹಾರ ಘೋಷಿಸುತ್ತಿದೆ ಎಂದು ದೂರಿದರು.

ರಾಜ್ಯ ಸರಕಾರದ ಎಲ್ಲಾ ಉಸ್ತುವಾರಿ ಸಚಿವರು ತಮ್ಮ ಸ್ವಕ್ಷೇತ್ರಗಳಿಗೆ ಸೀಮಿತವಾಗಿದ್ದಾರೆ. ಬಿಜೆಪಿ ಸರಕಾರದಲ್ಲಿ ಹಿಂದೆ ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಅತಿವೃಷ್ಟಿ ಸಂತ್ರಸ್ತರಿಗೆ ಮನೆ ಕಳೆದುಕೊಂಡವರಿಗೆ 5 ಲಕ್ಷ ರು.ಪರಿಹಾರ ಕೊಟ್ಟಿದ್ದರು. ಆದರೆ ಈಗ ಸಿದ್ದರಾಮಯ್ಯ ಸರಕಾರ ಅದನ್ನು ಒಂದು ಲಕ್ಷಕ್ಕೆ ಇಳಿಸಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಅರ್ಧಂಬರ್ಧ ಗ್ಯಾರಂಟಿ, ಜನರ ಬದುಕಿಗೆ ಬರೆ

ಅಧಿಕಾರಕ್ಕಾಗಿ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ, ಈಗ ಅರ್ಧಂಬರ್ಧ ಗ್ಯಾರಂಟಿಗಳನ್ನು ನೀಡಿದೆ. ಅದನ್ನು ಸರಿದೂಗಿಸಲು ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿ ಜನಸಾಮಾನ್ಯರ ಬದುಕಿಗೆ ಬರೆ ಎಳೆದಿದೆ. ರಾಜ್ಯದಲ್ಲಿ ಶತಾಯಗತಾಯ ಅಧಿಕಾರಕ್ಕೆ ಬರಲೆಂದು ಮುಂದಾಲೋಚನೆ ಇಲ್ಲದೆ ಸುಳ್ಳು ಭರವಸೆಗಳನ್ನು ನೀಡಿದ ಕಾಂಗ್ರೆಸ್ ಈಗ ಅಧಿಕಾರಕ್ಕೆ ಬಂದ ಮೇಲೆ ಗ್ಯಾರೆಂಟಿಗಳನ್ನು ನಿಭಯಿಸಲಾಗದೆ ಪರದಾಡುತ್ತಿದೆ ಎಂದು ಪ್ರಲ್ಹಾದ್ ಜೋಶಿ ಟೀಕಿಸಿದರು.

ಮುಖ್ಯಮಂತ್ರಿ ಬೆದರಿಕೆ ಹಾಸ್ಯಾಸ್ಪದ

ಚಿಕ್ಕಮಗಳೂರು: ಹಗರಣ ಪ್ರಕರಣ ಮುಚ್ಚಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬ್ಲ್ಯಾಕ್ ಮೇಲ್ ತಂತ್ರಕ್ಕೆ ಮುಂದಾಗಿದ್ದಾರೆ. ನಾನು ಹಗರಣ ಮಾಡಿದ್ದೀನಿ, ನಿಮ್ಮ ಹಗರಣ ತೆಗೆಯುತ್ತೇನೆ ಎನ್ನುವ ವರಸೆಯಲ್ಲಿ ಮಾತನಾಡುತ್ತಿದ್ದು, ಸಿ.ಎಂ

ಬೆದರಿಕೆಗೆ ಮುಂದಾಗಿರುವುದು ಆಶ್ಚರ್ಯ ಮತ್ತು ಹಾಸ್ಯಾಸ್ಪದ ವಾಗಿದೆ ಎಂದು ಶಾಸಕ ಸುನೀಲ್ ಕುಮಾರ್ ಟೀಕಿಸಿದ್ದಾರೆ.

ಭಾನುವಾರ ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ವಾಲ್ಮೀಕಿ, ಮುಡಾ ಹಗರಣ ಬರುವತನಕ ಬಿಜೆಪಿ ಹಗರಣ ಗೊತ್ತಿರಲಿಲ್ಲವೇ..? ನಿಮ್ಮದೇ ಸರಕಾರ ಇರುವಾಗ ಇಲ್ಲಿಯವರೆಗೂ ಏಕೆ ತನಿಖೆ ಮಾಡಲಿಲ್ಲ. ನಿಮ್ಮ ಕಾಲಬುಡಕ್ಕೆ ಬಂದಾಗ ಬಿಜೆಪಿ ಬಗ್ಗೆ ಹೇಳುತ್ತಿದ್ದೀರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿ.ಎಂ ಸದನದ ಒಳಗೆ ಎಷ್ಟೊಂದು ಸುಳ್ಳು ಹೇಳಿದ್ದಾರೆ. ಕಾರ್ಕಳ ಪರಶುರಾಮ ಥೀಮ್ ಪಾರ್ಕ್ ಕಾಮಗಾರಿಯಲ್ಲಿ 11 ಕೋಟಿ ಅವ್ಯವಹಾರ ಎಂದಿದ್ದಾರೆ. ಆದರೆ, ಸರಕಾರ ಇನ್ನೂ 11 ಕೋಟಿ ಬಿಡುಗಡೆ ಮಾಡಿಲ್ಲ. ಹಣ ಬಿಡುಗಡೆ ಮಾಡದೆ ಅವ್ಯವಹಾರ ಹೇಗೆ ಆಗುತ್ತದೆ? ಸದನದ ಒಳಗೆ ಇಷ್ಟು ಸುಳ್ಳುಹೇಳುವ ಮುಖ್ಯಮಂತ್ರಿ ಎಂದೂ ಕಂಡಿಲ್ಲ ಎಂದು ಲೇವಡಿ ಮಾಡಿದರು.

ಸಿಎಂ ವಿರುದ್ಧ ಸಂಸದ ಜಗದೀಶ್ ಶೆಟ್ಟರ್ ವಾಗ್ದಾಳಿ

ಭಂಡತನಕ್ಕೆ ಮತ್ತೊಂದು ಹೆಸರೇ ಸಿದ್ದು

ಹುಬ್ಬಳ್ಳಿ: ಭಂಡತನಕ್ಕೆ ಮತ್ತೊಂದು ಹೆಸರೇ ಸಿದ್ದರಾಮಯ್ಯ ಎಂದು ಬಿಜೆಪಿ ಸಂಸದ ಜಗದೀಶ್ ಶೆಟ್ಟರ್ ವಾಗ್ದಾಳಿ ಮಾಡಿದ್ದಾರೆ. ವಾಲ್ಮೀಕಿ ನಿಗಮದ ಹಗರಣ ಕುರಿತು ಪ್ರತಿಕ್ರಿಯಿಸಿದ ಶೆಟ್ಟರ್,

ಸಿದ್ದರಾಮಯ್ಯನವರು ಮೊದಲು ಏನೂ ಆಗಿಲ್ಲ ಎನ್ನುತ್ತಿದ್ದರು. ಈಗ ಆಗಿದೆ ಎನ್ನುತ್ತಿದ್ದಾರೆ. ಮಾಜಿ ಸಚಿವ ನಾಗೇಂದ್ರ ಅವರು ಮಾಡಿರುವ ಭ್ರಷ್ಟಾಚಾರದ ಕುರಿತ ದಾಖಲೆಗಳು ಒಂದೊಂದಾಗಿ ಹೊರಗೆ ಬರುತ್ತಿವೆ ಎಂದರು.

ಮುಡಾದಲ್ಲಿ ಪತ್ನಿ ಹೆಸರಿನಲ್ಲಿ ಬೇರೆ ಜಾಗ ತೆಗೆದುಕೊಂಡಿದ್ದಾರೆ. ಇವು ಇನ್ನೂ ಅಧಿವೇಶನದಲ್ಲಿ ಚರ್ಚೆಗೆ ಬಂದಿಲ್ಲ. ಇದರ ಮಧ್ಯೆ ಹಿಂದಿನ ಸರಕಾರದ ಹಗರಣಗಳು ಹೊರಗೆ ಬರಲಿವೆ ಎಂದು ಪ್ರತಿಪಕ್ಷವನ್ನು ಹೆದರಿಸುತ್ತಿದ್ದಾರೆ. ಹಿಂದಿನ ಸರಕಾರದಲ್ಲಿ ಹಗರಣ ಆಗಿದ್ದರೆ, ನಿಮ್ಮ ಸರಕಾರ ಬಂದು ವರ್ಷವಾಯಿತು, ತನಿಖೆಗೆ ಒಪ್ಪಿಸಲಿಲ್ಲ ಏಕೆ ಎಂದು ಶೆಟ್ಟರ್ ಪ್ರಶ್ನಿಸಿದರು.

ವರದಿ ಕೊಟ್ಟ ನಂತರ ಸದನದಲ್ಲಿ ಮಂಡನೆ ಮಾಡಬೇಕು. ಇದಕ್ಕೂ ಮೊದಲೇ ತಾವು ನಿರಪರಾಧಿ ಎಂದು ಹೇಳುತ್ತಿದ್ದಾರೆ. ನೀವು ನಿರಪರಾಧಿ ಆಗಿದ್ದರೆ ಅರ್ಕಾವತಿ ವರದಿ ಮಂಡನೆ ಮಾಡಿ. ನೀವು ಮಾಡದೇ ಇದ್ದರೆ ತಪ್ಪಿತಸ್ಥರು ಎಂದಾಗುತ್ತದೆ. ವಿತಂಡ ವಾದ ಮಾಡಬಾರದು. ಇವೆಲ್ಲ ಪ್ರಕರಣಗಳಿಂದ ಜನರ ದಾರಿತಪ್ಪಿಸಲು ಕನ್ನಡಿಗರಿಗೆ ಮೀಸಲು ವಿಷಯ ಮುನ್ನೆಲೆಗೆ ತಂದಿದ್ದಾರೆ.
-ಜಗದೀಶ್ ಶೆಟ್ಟರ್, ಸಂಸದ

ಅರ್ಕಾವತಿ ಪ್ರಕರಣ ಮುಚ್ಚಿದ್ದು ಯಾರು..?

ಹಿಂದಿನ ಸರಕಾರದ ಹಗರಣ ಬಿಡುತ್ತೇವೆ ಎನ್ನುವುದು ಒಳ್ಳೆಯದಲ್ಲ. ಈಗ ಆಗಿರುವ ಹಗರಣವನ್ನು ಎಸ್ಐಟಿ, ನಿವೃತ್ತ ನ್ಯಾಯಾಧೀಶರು ಅಥವಾ ಸಿಬಿಐ ತನಿಖೆಗೆ ಒಪ್ಪಿಸುವ ಧೈರ್ಯ ಇದೆಯೇ? ಅರ್ಕಾವತಿ ಡಿನೋಟಿಫಿಕೇಷನ್ ಪ್ರಕರಣ ಹೊರಗಡೆ ತಂದಿದ್ದು ನಾನು. ಆಗ ಕೆಂಪಣ್ಣ ಆಯೋಗದಿಂದ ತನಿಖೆ ಮಾಡಿಸಲಾಯಿತು. ವರದಿ ಕೊಟ್ಟಿದ್ದರೂ ಅದನ್ನು ಸಿದ್ದರಾಮಯ್ಯ ಮುಚ್ಚಿಟ್ಟರು ಎಂದು ಆರೋಪಿಸಿದರು.

ಕಾಂಗ್ರೆಸ್ ವಿರುದ್ಧ ಪ್ರತಿಪಕ್ಷದ ನಾಯಕ ಆರ್. ಅಶೋಕ ವಾಗ್ದಾಳಿ

ರಾಜ್ಯ ಸರಕಾರದಿಂದ ದಲಿತರ ಹಣ ಲೂಟಿ

ಹಾಸನ: ಈ ಜಾತಿಯವನಾದರೆ ಕಳ್ಳತನ ಮಾಡಬಹುದು, ಆ ಜಾತಿಯವನಾದರೆ ಕಳ್ಳತನ ಮಾಡಬಾರದು ಎಂದು ಸಂವಿಧಾನದಲ್ಲಿ ಇದೆಯಾ ಎಂದು ಪ್ರತಿಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಸರಕಾರ ಹಗರಣದಲ್ಲಿ ಸಿಲುಕಿದ್ದು, ಹೊರಬರಲು ಆಗುತ್ತಿಲ್ಲ. ದಲಿತರ ಹಣವನ್ನು ದುರುಪಯೋಗ ಮಾಡುತ್ತಿದ್ದಾರೆ. ವಾಲ್ಮೀಕಿ ನಿಗಮ, ಮುಡಾ ಹಗರಣದಲ್ಲೂ ದಲಿತರ ಹಣವೇ ಲೂಟಿಯಾಗಿದೆ ಎಂದು ಆರೋಪಿಸಿದರು.

ಹಿಂದುಳಿದ ವರ್ಗಗಳ ನಾಯಕ ಎಂಬ ಕಾರಣಕ್ಕೆ ಸಿದ್ದರಾಮಯ್ಯ ಅವರಿಗೆ ವಿಧಾನಸಭೆಯಲ್ಲಿ ಮಾತನಾಡಲು ಅವಕಾಶ ನೀಡುತ್ತಿಲ್ಲ ಎಂಬ ಸಚಿವ ರಾಜಣ್ಣ ಆರೋಪಕ್ಕೆ ಪ್ರತಿಕ್ರಿಯಿಸಿ, ಸಿದ್ದರಾಮಯ್ಯ ಮಾತನಾಡುವಾಗ ಡೆತ್ ನೋಟ್ ಓದಿದರು. ಆದರೆ, ಸಚಿವರು, ಶಾಸಕರು, ವಾಲ್ಮೀಕಿ ನಿಗಮದ ಅಧ್ಯಕ್ಷರ ಹೆಸರನ್ನು ಬಿಟ್ಟು ಓದುತ್ತಾರೆ ಎಂದರು.

ಸರಕಾರ ದಿವಾಳಿಯಾಗಿದೆ. ಅವರ ಬಳಿ ದುಡ್ಡಿಲ್ಲ. ಅಂದಾಜು ವೆಚ್ಚ ತಯಾರಿಸದೆ ಗ್ಯಾರಂಟಿ ಯೋಜನೆ ತಂದಿದ್ದಾರೆ. ಅದಕ್ಕೆ ಈಗ ದಲಿತರ ಹಣ ಹುಡುಕುತ್ತಿದ್ದಾರೆ. ಒಕ್ಕಲಿಗರು, ಲಿಂಗಾಯತರು, ಬ್ರಾಹ್ಮಣರ ನಿಗಮಗಳಿದ್ದು, ಅಲ್ಲಿನ ಹಣವನ್ನೂ ಬಳಸಿಕೊಳ್ಳಿ. ಈ ಸರಕಾರ ಕೋಮಾದಲ್ಲಿದ್ದು, ಇಂತಹ ಜಾತಿಯವರು ಲೂಟಿಹೊಡೆದರೆ, ಕಳ್ಳತನ ಮಾಡಿದರೆ, ಕ್ರಮ ತೆಗೆದುಕೊಳ್ಳುವಂತಿಲ್ಲ ಎಂಬ ಕಾನೂನು ಮಾಡಿಬಿಡಿ.
-ಆರ್.ಅಶೋಕ್, ಪ್ರತಿಪಕ್ಷ ನಾಯಕ

ಹಗರಣದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ: ಸಚಿವ ಕೆ.ಎಚ್. ಮುನಿಯಪ್ಪ

ಸಿಎಂ ವಿರುದ್ಧ ಆರೋಪ ರಾಜಕೀಯ ಪಿತೂರಿ

ಕೋಲಾರ: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮಾಡಿರುವ ಆರೋಪ ರಾಜಕೀಯ

ಪಿತೂರಿ ಎಂದು ರಾಜ್ಯ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಗುರು ಪೂರ್ಣಿಮೆ ಪ್ರಯುಕ್ತ ನಗರದ ಸಾಯಿಬಾಬಾ ದೇವಾಲಯಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ವಾಲ್ಮೀಕಿ ಹಗರಣದ 187 ಕೋಟಿ ರು. ಹಗರಣದಲ್ಲಿ 40 ಕೋಟಿ ಜಮಾ ಆಗಿದೆ. ಎಲ್ಲವನ್ನೂ ವಾಪಸ್ ಪಡೆಯಲು ಸರಕಾರ ಕ್ರಮ ಕೈಗೊಂಡಿದ್ದು, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿದೆ ಎಂದರು. ಕಾನೂನಿನಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಹಣ ಯಾರು ಲೂಟಿ ಮಾಡಿದ್ದಾರೋ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಹಾಸ್ಟೆಲ್‌ಗಳಿಗೆ ಗುಣಮಟ್ಟದ ಅಕ್ಕಿ ಪೂರೈಕೆ

ಶಾಲೆಗಳಿಗೆ ಕಳಪೆ ಅಕ್ಕಿಯನ್ನು ಪೂರೈಸಲಾಗುತ್ತಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಹಾಸ್ಟೆಲ್, ಶಾಲೆಗಳಿಗೆ ಗುಣಮಟ್ಟದ ಅಕ್ಕಿಯನ್ನು ನೀಡುವ ಬಗ್ಗೆ ಸದನದಲ್ಲಿ ಚರ್ಚಿಸಲಾಗಿದೆ. ಯಾವುದೇ ಕಾರಣಕ್ಕೂ ಕಳಪೆ ಗುಣಮಟ್ಟದ ಅಕ್ಕಿಯನ್ನು ನೀಡಿಲ್ಲ. ಆಹಾರ ಮತ್ತು ನಾಗರಿಕ ಸರಬರಾಜು ಸಚಿವಾಲಯವು ಅನ್ಯ ರಾಜ್ಯಗಳಿಂದ ಅಕ್ಕಿ ತರಲು ಶ್ರಮಿಸುತ್ತಿದ್ದು, ಅದರಂತೆ ಗುಣಮಟ್ಟದ ಅಕ್ಕಿ ವಿತರಿಸಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಸ್ಪಷ್ಟಪಡಿಸಿದರು.

ಎಲ್ಲ ಸರಕಾರಗಳ ಭ್ರಷ್ಟಾಚಾರ ತನಿಖೆ ಆಗಲಿ

ದಾವಣಗೆರೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಬ್ಲ್ಯಾಕ್ ಮೇಲ್ ಮಾಡುವ ಬದಲು ಎಲ್ಲ ಸರಕಾರಗಳ ಅವಧಿಯ ಭ್ರಷ್ಟಾಚಾರ, ಹಗರಣಗಳ ತನಿಖೆ ಮಾಡಿಸಲಿ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಒತ್ತಾಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲ ಸರಕಾರಗಳ ಅವಧಿಯಲ್ಲಿ ನಡೆದಿರುವ ಹಗರಣ, ಭ್ರಷ್ಟಾಚಾರದ ತನಿಖೆ ಮಾಡಿಸುತ್ತೇವೆ ಎಂದು ಸಿದ್ದರಾಮಯ್ಯ ಬ್ಲ್ಯಾಕ್ ಮೇಲ್ ಮಾಡುವ ಬದಲಿಗೆ ಅವರದ್ದೇ ಸರಕಾರ, ಅಧಿಕಾರ ಇದೆ. ಕಾಂಗ್ರೆಸ್ ಮಾತ್ರವಲ್ಲ ಅಧಿಕಾರ ನಡೆಸಿದ ಎಲ್ಲ ಪಕ್ಷಗಳ ಸರಕಾರದ ಅವಧಿಯಲ್ಲಿನ ಹಗರಣ, ಭ್ರಷ್ಟಾಚಾರಗಳ ಬಗ್ಗೆ ತನಿಖೆ ನಡೆಸಲಿ ಬೇಡ ಅಂದವರು ಯಾರು ಎಂದು ಪ್ರಶ್ನಿಸಿದರು.

ವಾಲ್ಮೀಕಿ ಹಗರಣದ ತನಿಖೆಯನ್ನು ಎಸ್ಐಟಿ ಮೂಲಕ ಮಾಡಿಸಿ, ಮಾಜಿ ಸಚಿವ ನಾಗೇಂದ್ರಗೆ ಕ್ಲೀನ್ ಚಿಟ್ ನೀಡುವ ಕೆಲಸ ಸಿದ್ದರಾಮಯ್ಯ ಮಾಡಿದ್ದಾರೆ. ಎಸ್ಐಟಿ ಅಂದ್ರೆ ಸಿದ್ದರಾಮಯ್ಯ ಇನ್ವೆಸ್ಟಿಗೇಷನ್ ಟೀಂ ಎಂದು ದೂರಿದರು. ರಾಜ್ಯದಲ್ಲಿ ಅತಿವೃಷ್ಟಿಯಿಂದಾಗಿ ಸಂಪೂರ್ಣ ಮನೆಗಳು ಬಿದ್ದವರಿಗೆ ಮನೆಗೆ ನೆರವು, ಮನೆ ಬಾಡಿಗೆ ಕಟ್ಟಲು ಹಣ ನೀಡುತ್ತಿದ್ದೆವು. ಆದರೆ, ಸುಳ್ಳು ಪ್ರಚಾರ, ಭರವಸೆ, ಬೋಗಸ್ ಆಶ್ವಾಸನೆ ನೀಡುವ ಕೆಲಸವನ್ನು ಕಾಂಗ್ರೆಸ್ ಸರಕಾರ ಮಾಡುತ್ತಿದೆ. ಪರಿಶಿಷ್ಟರಿಗೆ ಮೀಸಲಿಟ್ಟ ಹಣವನ್ನು ಕಾಂಗ್ರೆಸ್ ಸರಕಾರ ಬಳಸಿಕೊಳ್ಳುತ್ತಿದೆ ಎಂದು ದೂರಿದರು.

ಸದನದಲ್ಲಿ ಸಮರ ಇಂದು?

← ಮೊದಲಪುಟದಿಂದ

ಈ ವಿಷಯವನ್ನು ಈಗಾಗಲೇ ಅಜೆಂಡಾದಲ್ಲಿ ಸೇರಿಸಿರುವುದರಿಂದ, ಟರ್ಮಿನಲ್ ಹಗರಣವನ್ನು ಮುಂದಿಟ್ಟುಕೊಂಡು ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಲು ಕಾಂಗ್ರೆಸ್ ತೀರ್ಮಾನಿಸಿದೆ. ಇದಾದ ಬಳಿಕ ಇದೇ ರೀತಿಯ ಬೇರೆ ಬೇರೆ ಹಗರಣಗಳನ್ನು ಮುಂದಿಟ್ಟುಕೊಂಡು ಬಿಜೆಪಿ ಬಾಯಿ ಮುಚ್ಚಿಸುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್ ನಾಯಕರಿದ್ದಾರೆ.

ಬಿಜೆಪಿ ನಾಯಕರು ಮುಡಾ ಹಗರಣವನ್ನು ಪ್ರಸ್ತಾಪಿಸುವ ಲೆಕ್ಕಾಚಾರದಲ್ಲಿದ್ದಾರೆ. ನಿಲುವಳಿ ಸೂಚನೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲು ಬಿಜೆಪಿ ಮುಂದಾದರೆ, ಪ್ರಕರಣ ನ್ಯಾಯಾಂಗ ತನಿಖೆಯ ಹಂತದಲ್ಲಿರುವುದರಿಂದ ಚರ್ಚಿಸಲು ಅವಕಾಶವಿಲ್ಲವೆಂದು ಹೇಳಿ ಚರ್ಚೆಗೆ ಅವಕಾಶ ನೀಡದೇ ಇರುವ ಸಾಧ್ಯತೆಯಿದೆ ಎನ್ನಲಾಗಿದೆ.

ಮುಡಾ ಬಗ್ಗೆ ಪ್ರಸ್ತಾಪಕ್ಕೆ ಬಿಜೆಪಿಗೆ ಆತಂಕ

ಸದನಕ್ಕೆ ಮೊದಲು ಬಿಜೆಪಿ ನಾಯಕರು ಮುಡಾ ಹಗರಣವನ್ನು ಮುಂದಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಇಕ್ಕಟ್ಟಿಗೆ ಸಿಲುಕಿಸುವ ಲೆಕ್ಕಾಚಾರದಲ್ಲಿದ್ದರು. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಗೆ ನಿವೇಶನ ಹಂಚಿಕೆಯಾಗಿರುವ ಸಮಯ ಅಥವಾ ಲೇಔಟ್‌ನಲ್ಲಿಯೇ, ಬಿಜೆಪಿ ಹಾಗೂ ಜೆಡಿಎಸ್‌ನ ಹಲವು ನಾಯಕರು ನಿವೇಶನಗಳನ್ನು ಪಡೆದುಕೊಂಡಿದ್ದಾರೆ. ಇದರೊಂದಿಗೆ ರಾಜ್ಯದ ವಿವಿಧ ನಗರಗಳಲ್ಲಿನ ಅಭಿವೃದ್ಧಿ ಪ್ರಾಧಿಕಾರಗಳಲ್ಲಿಯೂ ಅಕ್ರಮ ನಡೆದಿರುವ ದಾಖಲೆಗಳು ಕಾಂಗ್ರೆಸ್ ನಾಯಕರ ಬಳಿಯಿರುವುದರಿಂದ, ಈ ಪ್ರಕರಣವನ್ನು ಕೈಗೆತ್ತಿಕೊಂಡರೆ 'ಬ್ಯಾಕ್ ಫೈರ್' ಆಗುವ ಆತಂಕದಲ್ಲಿ ಬಿಜೆಪಿಗರಿದ್ದಾರೆ. ಆದ್ದರಿಂದ ಈ ವಿಷಯವನ್ನು ಯಾವ ರೀತಿ ಪ್ರಸ್ತಾಪಿಸಬೇಕು ಎನ್ನುವ ಗೊಂದಲಕ್ಕೆ ನಾಯಕರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಐಟಿಯಲ್ಲಿ 14 ತಾಸು ಕೆಲಸ!

← ಮೊದಲಪುಟದಿಂದ

ಒಂದು ವೇಳೆ 14 ಗಂಟೆ ಕೆಲಸದ ಅವಧಿಗೆ ಒಪ್ಪಿಗೆ ನೀಡಿದರೆ ಉದ್ಯೋಗಿಗಳ ಆರೋಗ್ಯದ ಮೇಲೆ ಪರಿಣಾಮ ಉಂಟಾಗಲಿದೆ. ಈಗಾಗಲೇ ಶೇ.45ರಷ್ಟು ಐಟಿ ಉದ್ಯೋಗಿಗಳು ಒತ್ತಡದ ಕಾರಣ ಮಾನಸಿಕ ಕಿರಿಕಿರಿ ಅನುಭವಿಸುತ್ತಿದ್ದಾರೆ. ಶೇ.55ರಷ್ಟು ಉದ್ಯೋಗಿಗಳು ದೈಹಿಕ ಸಮಸ್ಯೆ ಎದುರಿಸುತ್ತಿದ್ದಾರೆ. ಒಂಬತ್ತು ಗಂಟೆ ಎನ್ನುವ ನಿಯಮವಿದ್ದರೂ, ಅನೇಕ ಕಂಪನಿಗಳು ಈಗಾಗಲೇ 10 ಗಂಟೆಗೂ ಹೆಚ್ಚು ಕಾಲ ದುಡಿಸಿಕೊಳ್ಳುತ್ತಿದ್ದಾರೆ. ಒಂದು ವೇಳೆ 12 ಗಂಟೆಗಳ ಕಾಲ ಅವಕಾಶ ನೀಡಿದರೆ, ಇಡೀ ದಿನ ಕಚೇರಿಯಲ್ಲಿಯೇ ಇರುವಂತೆ ಸೂಚಿಸುವ ಸಾಧ್ಯತೆಯಿದೆ. ಆಗ ಆರೋಗ್ಯ ಇನ್ನಷ್ಟು ಹದಗೆಡಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಪ್ರಸ್ತಾವನೆಯಲ್ಲಿ ಏನಿದೆ?: ಕರ್ನಾಟಕದಲ್ಲಿ ಪ್ರಸ್ತುತ ಒಂಬತ್ತು ಗಂಟೆ ಕೆಲಸದೊಂದಿಗೆ ಎರಡು ಗಂಟೆ ಒಟಿ ಮಾಡಲು ಅವಕಾಶವಿದೆ. ಆದರೀಗ ಇದನ್ನು 12ಗಂಟೆ ಕೆಲಸ ಹಾಗೂ ಎರಡು ಗಂಟೆ ಹೆಚ್ಚುವರಿ ಕೆಲಸ ಮಾಡಲು ಅವಕಾಶ ನೀಡಬೇಕು. ಇದಕ್ಕಾಗಿ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸ್ಥಾಪನೆ ಕಾಯಿದೆ-1961ಕ್ಕೆ ತಿದ್ದುಪಡಿ ತರಬೇಕು ಎಂದು ಸರಕಾರಕ್ಕೆ ಸಲ್ಲಿಕೆ ಮಾಡಿರುವ ಪ್ರಸ್ತಾವನೆಯಲ್ಲಿ ಮನವಿ ಮಾಡಿವೆ. ಹೊಸ ಪ್ರಸ್ತಾವನೆಯಂತೆ ಐಟಿ ಉದ್ಯೋಗಿಗಳು, ಬಿಪಿಓಗಳಲ್ಲಿ 12 ಗಂಟೆಗೂ ಅಧಿಕ ಕೆಲಸ ಮಾಡಲು ಅವಕಾಶ ನೀಡಬೇಕು. ಅಲ್ಲದೇ ನಿಯಮಿತವಾಗಿ ಮೂರು ತಿಂಗಳು 125 ಗಂಟೆ ಮೀರದಂತೆ ಕೆಲಸವಿರಬೇಕು ಎಂದು ಹೇಳಲಾಗಿದೆ. ರಾಜ್ಯ ಸರಕಾರ ಈ ಪ್ರಸ್ತಾವನೆಗೆ ಅವಕಾಶ ನೀಡಿದರೆ, ಈಗಿರುವ 3 ಶಿಫ್ಟ್‌ಗಳ ಬದಲಿಗೆ ಎರಡು ಶಿಫ್ಟ್‌ಗಳಿಗೆ ಇಳಿಯಲಿದೆ. ಇದರಿಂದ ಉದ್ಯೋಗಿಗಳು ಕೆಲಸ ಕಳೆದುಕೊಳ್ಳುವ ಸಾಧ್ಯತೆಯಿದೆ ಎಂದು ಆತಂಕವಿದೆ.

ಸಿಎಂ ಈಗ ಏಕಾಂಗಿ

ಬಳ್ಳಾರಿ: ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಒಂಟಿಯಾಗಿದ್ದಾರೆ. ಸಿಎಂ ಪತ್ರಿಕಾಗೋಷ್ಠಿ ಮಾಡಿದಾಗ ಅವರ ಪಕ್ಕದಲ್ಲಿ ಕೂರಲು ಅವರ ಪಕ್ಷದ ನಾಯಕರು, ಮಂತ್ರಿಗಳು ಹಿಂಜರಿಯುತ್ತಿದ್ದಾರೆ. ಅಷ್ಟೇ ಅಲ್ಲಾ ವಿಧಾನಸಭೆಯಲ್ಲೂ ಕೂಡ ಸಿದ್ದರಾಮಯ್ಯನವರು ಒಂಟಿಯಾಗಿದ್ದಾರೆ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಏನಾದರು ಮಾತನಾಡಿದರೆ ಅದನ್ನು ಬೆಂಬಲಿಸಲು ಯಾವ ಶಾಸಕರು, ಸಚಿವರು ಎದ್ದು ನಿಲ್ಲುತ್ತಿಲ್ಲ. ಸಿದ್ದರಾಮಯ್ಯ ಈ ಹಗರಣಗಳಲ್ಲಿ ಸಿಕ್ಕಿ ಹಾಕಿಕೊಂಡರೆ ಎಂದು ಭಯದಿಂದ ಎಲ್ಲರೂ ಅವರನ್ನು ಬಿಟ್ಟು ದೂರ ಸರಿಯುತ್ತಿದ್ದಾರೆ ಎಂದರು.

ಟ್ವೀಟೂ-ಖಾರಾ

ಅಮೃತಾ ಸಿಂಗ್
ಬಿಜೆಪಿ ನಾಯಕಿ

ಭಾರತದ ಜತೆ ಬಂಗಾಳ ಉತ್ತಮ ಸಂಬಂಧ ಹೊಂದಬೇಕೆಂದು ಬಯಸುತ್ತೇನೆ ಎಂದು ಸಿಎಂ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಇದರರ್ಥ ಪ.ಬಂಗಾಳ ರಾಜ್ಯ ಭಾರತದ ಅಂಗವೆಂದು ಪರಿಗಣಿಸುವುದಿಲ್ಲ ಎಂದು ನಾವು ಭಾವಿಸಬೇಕೇ...?

ವೈ.ಎಸ್ ರಜಪೂತ್

ಮಮತಾ ಬ್ಯಾನರ್ಜಿಯವರ ಪ್ರತ್ಯೇಕತಾ ವಾದಿ ಚಿಂತನೆಯನ್ನು ಈ ಹೇಳಿಕೆ ಬಿಂಬಿಸುತ್ತದೆ. ಸಂವಿಧಾನದ 356ನೇ ವಿಧಿಯಂತೆ ಬಂಗಾಳದಲ್ಲಿ ತಕ್ಷಣವೇ ರಾಷ್ಟ್ರಪತಿ ಆಡಳಿತ ಹೇರಬೇಕೆಂದು ನಾನು ಕೇಂದ್ರ ಸರಕಾರಕ್ಕೆ ಒತ್ತಾಯಿಸುತ್ತೇನೆ.

ಸಮಾಚಾರ ಸಣ್ಣದಲ್ಲ

ನಾಯಿ ಎಳೆದೊಯ್ದ ವ್ಯಕ್ತಿ: ಎಫ್ಐಆರ್

ಉಡುಪಿ: ಉಡುಪಿಯಲ್ಲಿ ವ್ಯಕ್ತಿಯೊಬ್ಬ ತನ್ನ ಬೈಕ್‌ಗೆ ನಾಯಿಯನ್ನು ಕಟ್ಟಿ ಎಳೆದೊಯ್ದಿರುವ ಘಟನೆ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ. ಈ ಕೃತ್ಯದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಪ್ರಾಣಿಹಕ್ಕುಗಳ ಕಾರ್ಯಕರ್ತರು ತೀವ್ರವಾಗಿ ಖಂಡಿಸಿದ್ದಾರೆ. ಕಾಪು ತಾಲೂಕಿನ ಶಿರ್ವದಲ್ಲಿ ಶನಿವಾರ ಈ ಘಟನೆ ನಡೆದಿತ್ತು. ನಾಯಿಯನ್ನು ಆರು ಕಿಲೋಮೀಟರ್ ವರೆಗೆ ಎಳೆದೊಯ್ದು ಅಮಾನವೀಯ ವರ್ತನೆ ತೋರಿದ ಆರೋಪಿ ಅಬ್ದುಲ್ ಖಾದರ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ. ಶಿರ್ವ ಗ್ರಾ.ಪಂ ಕಟ್ಟಡದ ಎದುರು ಈ ಘಟನೆ ನಡೆದಿದೆ. ಪ್ರಾಣಿ ದಯಾ ಸಂಘದ ಸದಸ್ಯೆ ಮಂಜುಳಾ ಕರ್ಕೇರ ಅವರು ವಾಟ್ಸ್‌ಆ್ಯಪ್‌ನಲ್ಲಿ ವಿಡಿಯೊ ನೋಡಿ ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸರು ಆತನ ವಿರುದ್ಧ ಸೆಕ್ಷನ್ 325 ಬಿಎನ್‌ಎಸ್ ಮತ್ತು ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ.

ನಾಪತ್ತೆಯಾಗಿದ್ದ ಯುವಕನ ಶವ ಪತ್ತೆ

ಪುತ್ತೂರು: ಸರ್ವೆ ಗೌರಿ ಹೊಳೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಶಂಕಿಸಲಾಗಿದ್ದ ಕುದ್ಮಾರು ಗ್ರಾಮದ ತೆಕ್ಕಿತ್ತಡಿ ನಿವಾಸಿ ಸನ್ಮಿತ್ (21) ಮೃತದೇಹ ಪತ್ತೆಯಾಗಿದೆ. ಸರ್ವೆಯ ಗೌರಿಹೊಳೆಯ ಸೇತುವೆ ಬಳಿ ಮೃತದೇಹ ಪತ್ತೆಯಾಗಿದೆ. ಜು.19ರ ರಾತ್ರಿಯಿಂದ ಸನ್ಮಿತ್ ಕಾಣೆಯಾಗಿದ್ದು, ಆತನ ಸ್ಕೂಟರ್ ಮತ್ತಿತರ ವಸ್ತು ಸರ್ವೆ ಗೌರಿ ಹೊಳೆಯ ಸಮೀಪ ಪತ್ತೆಯಾಗಿತ್ತು. ಮೃತ ಸನ್ಮಿತ್ ತಂದೆ ಚಂದ್ರಗೌಡ ನೀಡಿದ ದೂರಿನಂತೆ ಜು.20ರ ಶನಿವಾರ ಬೆಳಗ್ಗಿನಿಂದಲೇ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಮೃತದೇಹಕ್ಕಾಗಿ ಗೌರಿ ಹೊಳೆಯಲ್ಲಿ ಶೋಧನೆ ಕೈಗೊಂಡಿದ್ದರು. ಅಗ್ನಿಶಾಮಕ ದಳದ ಸಿಬ್ಬಂದಿಗಳು ಮೃತದೇಹ ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

ಮನೆಯ ಗೋಡೆ ಕುಸಿತ

ತೀರ್ಥಹಳ್ಳಿ: ತಾಲೂಕಿನ ಸುತ್ತಮುತ್ತ ಧಾರಾಕಾರವಾಗಿ ಮಳೆಯಾಗಿದ್ದು ಹಲವು ಕಡೆ ಮನೆಗಳು ಕುಸಿತಗೊಂಡಿವೆ. ಪಟ್ಟಣದ ಕುರುವಳ್ಳಿ ವಾರ್ಡ್ ನಂಬರ್ 14 ರ ಆನೆಗುಂಡಿ ರಸ್ತೆಯ ನಾಗರಕಟ್ಟೆ ಸಮೀಪದ ಸುನಂದಾ ಶೆಟ್ಟಿ ಅವರ ಮನೆಯ ಗೋಡೆ ಕುಸಿತಗೊಂಡಿದ್ದು ಇನ್ನೂ ಉಳಿದ ಗೋಡೆಯು ಬಿರುಕು ಬಿಟ್ಟು ಕುಸಿಯುವ ಹಂತದಲ್ಲಿದ್ದು ಅಪಾರ ನಷ್ಟ ಉಂಟಾಗಿದೆ. ಈಗಾಗಲೇ ಘಟಾನ ಸ್ಥಳಕ್ಕೆ ಪಟ್ಟಣ ಪಂಚಾಯಿತಿ ಸದಸ್ಯರಾದ ಮಂಜುಳಾ ನಾಗೇಂದ್ರ, ಕಂದಾಯ ಇಲಾಖೆ ಅಧಿಕಾರಿ ಮೋಹನೇಶ್ ಸೇರಿದಂತೆ ಸಂಬಂಧ ಪಟ್ಟ ಅಧಿಕಾರಿಗಳು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದಾರೆ.

{ **ಶೋಭಾ ಕರಂದ್ಲಾಜೆ** } ಸಂಸದೆ

ಕರ್ನಾಟಕ ಸರಕಾರ ಗೋಲ್ಮಾಲ್ ಸರಕಾರ. ದೊಡ್ಡ ಪ್ರಮಾಣದ ಅವ್ಯವಹಾರ ನಡೆದಿದೆ. ಪ್ರತಿದಿನ ಒಂದೊಂದು ಇಲಾಖೆಯ ಅವ್ಯವಹಾರಗಳು ಹೊರಬರ್ತಿವೆ. ವಾಲ್ಮೀಕಿ ನಿಗಮ ಹಗರಣ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಳ್ಳುವವರೆಗೂ ಆಚೆ ಬಂದಿರಲಿಲ್ಲ. ರಾಜ್ಯದ ಬಡವರ ಹಣವನ್ನು ಚುನಾವಣಾ ಅವ್ಯವಹಾರ ಹಣವನ್ನಾಗಿ ಮಾಡಿದ್ದಾರೆ.

ಬೆಳಗಾವಿ, ಖಾನಾಪುರ ತಾಲೂಕಿನ ಶಾಲೆಗಳಿಗೆ ಎರಡು ದಿನ ರಜೆ | ನಿಪ್ಪಾಣಿಯಲ್ಲಿ ಗೋಡೆ ಕುಸಿದು ವ್ಯಕ್ತಿ ಸಾವು

ಕರಾವಳಿ, ಮಲೆನಾಡಿನಲ್ಲಿ ಮುಂದುವರಿದ ಮಳೆ

ಬೆಂಗಳೂರು: ರಾಜ್ಯಾದ್ಯಂತ ಮಳೆಯಾಟ ಮುಂದುವರಿದಿದ್ದು, ಜನರು ತತ್ತರಿಸಿ ಹೋಗಿದ್ದಾರೆ. ಕರಾವಳಿ ಮತ್ತು ಮಲೆನಾಡು ಭಾಗದ ಜಿಲ್ಲೆಗಳಲ್ಲಿ ಸಾಕಷ್ಟು ಹಾನಿಯಾಗಿದೆ. ಮಳೆಗೆ ಮನೆಯಿಂದ ಹೊರಬರಲು ಆಗದೆ ಒಳಗೆ ಕೂರಲು ಆಗದೆ ಪರದಾಡುತ್ತಿದ್ದಾರೆ. ಮುಂದಿನ ಐದು ದಿನಗಳ ಮಳೆ ಮುನ್ಸೂಚನೆಯನ್ನು ಇರುವುದರಿಂದ ಅಧಿಕಾರಿಗಳು ಕಟ್ಟೆಚ್ಚರ ವಹಿಸಿದ್ದಾರೆ.

ಬೆಳಗಾವಿ ಹಾಗೂ ಚಿಕ್ಕೋಡಿ ಪ್ರದೇಶದಲ್ಲಿ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದು ಕೃಷ್ಣಾ, ಧೂದ್‌ಗಂಗಾ, ವೇದಗಂಗಾ, ಹೀರಣ್ಯಕೇಶಿ ನದಿಗಳ ನೀರಿನ ಮಟ್ಟದಲ್ಲಿ ಗಣನೀಯ ಏರಿಕೆ ಖಂಡಿದೆ. ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಸುರಿಯುತ್ತಿದ್ದು

ಕೃಷ್ಣಾ ನದಿಗೆ ಸದ್ಯ 85 ಸಾವಿರ ಕ್ಯೂಸೆಕ್ ನೀರು ಒಳ ಹರಿವು ಹೆಚ್ಚಾಗಿದೆ. ನದಿ ನೀರಿನ ಮಟ್ಟ ಏರಿಕೆಯಾದ ಹಿನ್ನೆಲೆ ಚಿಕ್ಕೋಡಿ ಉಪ ವಿಭಾಗ ವ್ಯಾಪ್ತಿಯ 7 ಸೇತುವೆಗಳು ಜಲಾವೃತಗೊಂಡಿವೆ. ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಮನೆಯೊಂದರ ಗೋಡೆ ಕುಸಿದು ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ಜಿಲ್ಲೆಯ ನಿಪ್ಪಾಣಿ ತಾಲೂಕಿನ ಜತ್ರಾಟ್ ವೇಸ್ ಗ್ರಾಮದಲ್ಲಿ ನಡೆದಿದೆ. ತಿರುಪತಿ ರಾಜಾರಾಮ ಹತ್ಕರ (50) ಸಾವನ್ನಪ್ಪಿದ ವ್ಯಕ್ತಿ. ಮೃತ ವ್ಯಕ್ತಿ ತಿರುಪತಿ ಮೂಲತಃ ತಾಳಿಕೋಟೆ ಗ್ರಾಮದವರು.

ಹಾವೇರಿಯಲ್ಲಿ ಯುವತಿಗೆ ಗಾಯ: ಜಿಲ್ಲೆಯಾದ್ಯಂತ ಮಳೆ ಮುಂದುವರೆದಿದ್ದು, ತಾಲೂಕಿನ ಬರಡಿ ಗ್ರಾಮದಲ್ಲಿ ಮನೆಯ ಗೋಡೆ ಕುಸಿದು ಯುವತಿಯ ಮೈಮೇಲೆ ಬಿದ್ದಿದೆ. 18 ವರ್ಷದ ಹೊನ್ನವ್ವ ತಳವಾರ ಗಂಭೀರ ಗಾಯಗೊಂಡಿದ್ದು, ಹಾವೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಿ, ಬಳಿಕ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಸ್ಥಳಕ್ಕೆ ತಹಸೀಲ್ದಾರ್ ಶಂಕರ್ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ನಿರಂತರ ಮಳೆ ಹಿನ್ನೆಲೆಯಲ್ಲಿ ಜನರು ಹಾಳಾಗಿರುವ ಮನೆಗಳನ್ನು ಬಿಟ್ಟು, ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಜಿಲ್ಲಾಡಳಿತ ಮನವಿ ಮಾಡಿದೆ.

ಯುವಕ ನೀರುಪಾಲು

ಜಾನುವಾರು ತೊಳೆಯಲು ಹೋಗಿದ್ದ ಯುವಕ ನೀರುಪಾಲಾದ ಘಟನೆ ದಾವಣಗೆರೆಯಲ್ಲಿ ನಡೆದಿದೆ. ಹರಿಹರ ತಾಲೂಕಿನ ಧೂಳೆಹೊಳೆ ಗ್ರಾಮದ ಬಳಿಯ ತುಂಗಭದ್ರಾ ನದಿಯಲ್ಲಿ ಘಟನೆ ನಡೆದಿದ್ದು, ಇಂಗಳಗೊಂದಿ ಜಯಪ್ಪ (32) ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟಿದ್ದಾರೆ. ನದಿಯ ಮಟ್ಟ ಹೆಚ್ಚಾಗಿದ್ದನ್ನು ಗಮನಿಸದೆ ಜಯಪ್ಪ ಜಾನುವಾರುಗಳ ಮೈತೊಳೆಯಲು ಮುಂದಾಗಿದ್ದರು. ಇದ್ದಕ್ಕಿದ್ದಂತೆ ನೀರಿನ ಸೆಳೆತಕ್ಕೆ ಸಿಲುಕಿ ಕೊಚ್ಚಿಹೋಗಿದ್ದಾರೆ. ಧೂಳೆಹೊಳೆಯಿಂದ 2 ಕಿ.ಮೀ. ದೂರದಲ್ಲಿ ಶವ ಪತ್ತೆಯಾಗಿದೆ. ಮಲೆಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಪ್ಪಾಣಿ ತಾಲೂಕಿನ ಕಾರದಗಾ ಗ್ರಾಮದ ಸ್ಮಶಾನಕ್ಕೆ ಜಲದಿಗ್ಬಂಧನ ಉಂಟಾಗಿದೆ.

ಕಾರಿನ ಬಾನೆಟ್ ಮೇಲೆ ಬಿದ್ದ ಮರ: ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆ ಮುಂದುವದಿದ್ದು, ಚಲಿಸುತ್ತಿದ್ದ ಕಾರಿನ ಮೇಲೆ ಬೃಹತ್ ಮರವೊಂದು ಉರುಳಿಬಿದ್ದಿದ್ದು ಅದೃಷ್ಟವಶಾತ್ ಇಬ್ಬರ ಪ್ರಾಣ ಉಳಿದಿದೆ. ಎನ್.ಆರ್.ಪುರ ತಾಲೂಕಿನ ಬಾಳೆಹೊನ್ನೂರು ಸಮೀಪದ ದೇವದಾನ ಎಸ್ಟೇಟ್ ಬಳಿ ಘಟನೆ ನಡೆದಿದ್ದು, ಚಲಿಸುತ್ತಿದ್ದ ಕಾರಿನ ಬಾನೆಟ್ ಮೇಲೆ ಬೃಹತ್ ಮರ ಬಿದ್ದಿದೆ. ಪವಾಡಸದೃಶ ರೀತಿಯಲ್ಲಿ ಕಾರಿನಲ್ಲಿದ್ದ ಇಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಎತ್ತು ಸಾವು

ಗದ್ದೆಯಲ್ಲಿ ವಿದ್ಯುತ್ ಸ್ಪರ್ಶಿಸಿ ಎತ್ತೊಂದು ಮೃತಪಟ್ಟಿರುವ ಘಟನೆ ಕೊಡಗಿನ ಸೋಮವಾರಪೇಟೆ ತಾಲೂಕಿನ ದೊಡ್ಡಳ್ಳಿ ಗ್ರಾಮದಲ್ಲಿ ಘಟನೆ ನಡೆದಿದೆ. ಮತ್ತೊಂದು ಎತ್ತು ಹಾಗೂ ರೈತನ ಕುಟುಂಬ ಹಾಗೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗದ್ದೆಯಲ್ಲಿ ಉಳುಮೆ ಸಂದರ್ಭದಲ್ಲಿ ಕರೆಂಟ್ ಶಾಕ್ ಹೊಡೆದಿದೆ. ಈ ವೇಳೆ ಒಂದು ಎತ್ತು ಮೃತಪಟ್ಟರೆ, ಕುಂಬಗೌಡನ ಸದಾ ಅವರ ಪತ್ನಿ ವೀಣಾ, ಮತ್ತೊಂದು ಎತ್ತು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಭಾರಿ ಮಳೆ ಹಿನ್ನೆಲೆಯಲ್ಲಿ ಕಂಬದಿಂದ ವಿದ್ಯುತ್ ಸೋರಿಕೆಯಾಗಿದ್ದೇ ಅವಘಡಕ್ಕೆ ಕಾರಣ ಎನ್ನಲಾಗಿದೆ. ಸ್ಥಳಕ್ಕೆ ಚೆಸ್ಕಾಂ ಸಿಬ್ಬಂದಿ ದೌಡಾಯಿಸಿ ಪರಿಶೀಲನೆ ನಡೆಸಿದ್ದಾರೆ.

ಮೂರು ನದಿಗಳಿಗೆ ಅಪಾರ ಪ್ರಮಾಣದ ನೀರು: ಬೆಳಗಾವಿ ಹಾಗೂ ಮಹಾರಾಷ್ಟ್ರ ಭಾಗದಲ್ಲಿ ಮಳೆ ಹೆಚ್ಚಾಗುತ್ತಿದ್ದಂತೆ ಬಾಗಲಕೋಟೆ ಜಿಲ್ಲೆಯ ಮೂರು ನದಿಗಳಿಗೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದ್ದು, ನದಿಪಾತ್ರದ ಜನರಿಗೆ ಎಚ್ಚರವಾಗಿರುವಂತೆ ಸೂಚನೆ ನೀಡಲಾಗಿದೆ. ಬೆಳಗಾವಿ ಪಶ್ಚಿಮ ಘಟ್ಟದಲ್ಲಿ ಮಳೆ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದಂತೆ ಘಟಪ್ರಭಾ ಹಾಗೂ ಮಲಪ್ರಭಾ ನದಿಗಳಿಗೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿರುವುದರಿಂದ ನದಿದಡದ ಕೆಲ ಗ್ರಾಮಗಳ ರಸ್ತೆಮೇಲೆ ನೀರು ಬಂದಿರುವುದರಿಂದ ಸಂಚಾರಕ್ಕೆ ತೊಂದರೆಯಾಗುತ್ತಿದೆ.

ಎರಡು ದಿನ ಶಾಲೆಗಳಿಗೆ ರಜೆ: ಬೆಳಗಾವಿ ತಾಲೂಕಿನಲ್ಲಿ ಅಂಗನವಾಡಿ ಕೇಂದ್ರ, ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಜು.22 ಮತ್ತು ಜು.23 ರಂದು ರಜೆ ಘೋಷಿಸಲಾಗಿದೆ. ಅದೇ ರೀತಿ ಖಾನಾಪುರ ತಾಲೂಕಿನಲ್ಲಿ ಅಂಗನವಾಡಿ, ಪ್ರಾಥಮಿಕ-ಪ್ರೌಢ ಶಾಲೆ ಹಾಗೂ ಪಿಯು ಕಾಲೇಜುಗಳಿಗೂ ಜು.22 ಮತ್ತು 23 ರಂದು ರಜೆ ಘೋಷಿಸಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಆದೇಶ ಹೊರಡಿಸಿದ್ದಾರೆ. ಎಲ್ಲಾ ಸರಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಿಗೆ ರಜೆ ನೀಡಲಾಗಿರುತ್ತದೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ತಂಡಗಳ ಕಾರ್ಯಕ್ಕೆ ಮೆಚ್ಚುಗೆ

ಶಿರೂರು ಗುಡ್ಡ ಕುಸಿತ: ಸಿಎಂ ಪರಿಶೀಲನೆ

ಶಿರಸಿ/ ಅಂಕೋಲಾ: ಭೂಕುಸಿತದ ಮಣ್ಣು ತೆರವು ಮತ್ತು ಶೋಧ ಕಾರ್ಯಾಚರಣೆಗೆ ಎಸ್.ಡಿ.ಆರ್. ಎಫ್ ನಿಂದ 46 ಜನ ಎನ್.ಡಿ.ಆರ್.ಎಫ್ ನಿಂದ 24 ಜನ ಹಾಗೂ 44 ಜನ ಮಿಲಿಟರಿಯವರು ಹಾಗೂ ನೌಕಾಪಡೆಯವರೂ ಕೂಡ ಕೈಜೋಡಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಭಾನುವಾರ ಜಿಲ್ಲೆಯ ಅಂಕೋಲಾ ತಾಲೂಕಿನ ಶಿರೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಗೋವಾ ಮತ್ತು ಅಂಕೋಲಾ ನಡುವೆ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಜುಲೈ 16 ರಂದು ಭೂ ಕುಸಿತವಾಗಿದೆ. ಭೂ ಕುಸಿತದಿಂದ 10 ಜನ ಕಾಣೆಯಾಗಿದ್ದಾರೆ. ಅದರಲ್ಲಿ ಏಳು ಜನರ ಹೆಣಗಳು ಪತ್ತೆಯಾಗಿದ್ದು ಇನ್ನೂ ಮೂವರು ಕಾಣೆಯಾಗಿದ್ದು ಅವರ ಪತ್ತೆಗಾಗಿ ಪರಿಹಾರ ಕಾರ್ಯಾಚರಣೆ ಜಾರಿಯಲ್ಲಿದೆ ಎಂದು ವಿವರಿಸಿದರು. ನೌಕಾದಳ ಹಾಗೂ ರಕ್ಷಣಾ ತಂಡದವರಿಗೆ ಎಲ್ಲೆಡೆ ಹುಡುಕುವಂತೆ ಸೂಚನೆ ನೀಡಲಾಗಿದೆ ಎಂದರು. 10 ಜನರು ಕಾಣೆಯಾಗಿದ್ದಾರೆ. ಘಟನೆ ನಡೆದ ದಿನವೇ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯರನ್ನೂ ಹಾಗೂ ಶಾಸಕರನ್ನು ಸ್ಥಳಕ್ಕೆ ಕಳುಹಿಸಲಾಗಿದೆ ಎಂದರು.

ಅವೈಜ್ಞಾನಿಕ ಕಾಮಗಾರಿ; ತಪ್ಪಿತಸ್ಥರ ವಿರುದ್ಧ ಕ್ರಮ: ಭೂ ಕುಸಿತವು ಪ್ರಕೃತಿ ವಿಕೋಪವಲ್ಲ ಐ.ಆರ್.ಬಿ ಸಂಸ್ಥೆಯ ಅವೈಜ್ಞಾನಿಕ ಕಾಮಗಾರಿಯಿಂದಾಗಿ ಆಗಿದೆ. ಅವರ ವಿರುದ್ಧ ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಯಾರೇ ತಪ್ಪು ಮಾಡಿದರೂ ಕೂಡ ಅವರ ಮೇಲೆ ಕ್ರಮ ವಹಿಸಲಾಗುವುದು, ರಸ್ತೆ ನಿರ್ಮಾಣ ಮಾಡಿರುವವರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು. ಪರಿಹಾರ ಕಾಮಗಾರಿ ಮುಗಿದ ಮೇಲೆ ಪ್ರಕರಣದ ಬಗ್ಗೆ ಗಮನಹರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲು ಒತ್ತಾಯ: ಕೇಂದ್ರ ಸರಕಾರ ರಸ್ತೆ ಪೂರ್ಣಗೊಳ್ಳದಿದ್ದರೂ ಟೋಲ್ ಸಂಗ್ರಹ ಮಾಡುತ್ತಿದ್ದಾರೆ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿ ಕೇಂದ್ರ ರಸ್ತೆ ಸಾರಿಗೆ ಸಚಿವರೊಂದಿಗೆ ನಾನು ಮಾತನಾಡುತ್ತೇನೆ. ಕಳಪೆ ಕೆಲಸ ವಾಗಿದ್ದಾರೆ ಅದನ್ನು ಕೂಡಲೇ ಸರಿಪಡಿಸುವ ಕೆಲಸ ಮಾಡಬೇಕು ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಲಾಗುವುದು ಎಂದರು.

ರಾಜ್ಯ ಸರಕಾರ ವಿಳಂಬ ಮಾಡಿಲ್ಲ: ಕೇರಳದ ಲಾರಿ ಇಲ್ಲಿ ಸಿಕ್ಕಿಹಾಕಿಕೊಂಡಿರುವುದರಿಂದ ಕೇರಳ ಪೊಲೀಸರು ಹಾಗೂ ಮಾಧ್ಯಮದವರು ರಾಜ್ಯ ಸರಕಾರ ವಿಳಂಬ ಕಾರ್ಯಾಚರಣೆ ಮಾಡುತ್ತಿದೆ ಎಂದು ಆರೋಪಿಸಿರುವ ಬಗ್ಗೆ ಮಾತನಾಡಿ ರಾಜ್ಯ ಸರಕಾರ ಯಾವುದನ್ನೂ ವಿಳಂಬ ಮಾಡಿಲ್ಲ. ಎಲ್ಲವನ್ನೂ ತ್ವರಿತವಾಗಿ ಮಾಡುತ್ತಿದ್ದೇವೆ. ಕೇರಳದ ಅರ್ಜುನ್ ಎಂಬುವರು ಕಾಣೆಯಾಗಿದ್ದು, ತಮ್ಮ ರಾಜ್ಯದವರೆಂದು ಅವರೆಲ್ಲಾ ಬಂದಿರಬಹುದು.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ನಡೆದ ಗುಡ್ಡ ಕುಸಿತ ಸ್ಥಳ ಹಾಗೂ ಕಡಲ್ಕೊರೆತದ ಸ್ಥಳಕ್ಕೆ ಸಿಎಂ ಸಿದ್ದರಾಮಯ್ಯ ಭೇಟಿನೀಡಿ ಪರಿಶೀಲಿಸಿದರು.

ಯಾರೇ ತಪ್ಪು ಮಾಡಿದರೂ ಕ್ರಮ

ಯಾರೇ ತಪ್ಪು ಮಾಡಿದ್ರೂ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಗುತ್ತಿಗೆದಾರರಿಗೆ ಸಿಎಂ ಎಚ್ಚರಿಕೆ ನೀಡಿದರು. ರಸ್ತೆ ಪೂರ್ಣಮಾಡದಿದ್ದರೂ ಟೋಲ್ ಕಲೆಕ್ಷನ್ ಮಾಡಲಾಗುತ್ತಿದೆ. ರಕ್ಷಣಾ ಕಾರ್ಯಾಚರಣೆ ತಡವಾಗುತ್ತಿಲ್ಲ. ಬಹಳ ವರ್ಷಗಳಿಂದ ಭೂಕುಸಿತ ಆಗಿಲ್ಲ, ಈಗ ಆಗಿದೆ. ಘಟನೆ ಸಂಬಂಧಿಸಿ ನಾವು ಯಾವುದೇ ರಾಜಕಾರಣ ಮಾಡಲ್ಲ. ಬಿಜೆಪಿ ಮೇಲೆ ಆರೋಪ ಮಾಡೋ ಕೆಸರೆರಚಾಟ ಮಾಡಲ್ಲ. ನಾವು ಕೊಡುವ ಪರಿಹಾರದಿಂದ ಜೀವ ವಾಪಸ್ ಬರಲ್ಲ, ಇದು ಪ್ರಾಕೃತಿಕ ಘಟನೆ. ಮೃತದೇಹಗಳನ್ನು ಹುಡುಕುವ ಕೆಲಸ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಪ್ರಕೃತಿ ವಿಕೋಪದ ಸಂದರ್ಭದಲ್ಲಿ ರಾಜಕಾರಣ ಮಾಡುವುದಿಲ್ಲ. ಕೇಂದ್ರ ಸರಕಾರದ ತಂಡ ಎನ್.ಡಿ.ಆರ್. ಎಫ್ ಕೂಡ ಇಲ್ಲಿ ಕಾರ್ಯಾಚರಣೆ ಮಾಡುತ್ತಿದೆ. ನೌಕಾ ತಂಡವೂ ಇದೆ. ಇಲ್ಲಿ ಇನ್ಯಾರ ಮೇಲೆಯೂ ದೋಷ ಹೊರಿಸಲು ನಾನು ಹೋಗುವುದಿಲ್ಲ.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಆದರೆ ನಾವು ವಿಳಂಬ ಮಾಡದೇ, ನಿರ್ಲಕ್ಷ್ಯ ತೋರದೆ ಕೆಲಸ ಮಾಡುತ್ತಿದ್ದೇವೆ ಎಂದರು.

ಉಳುವರೆಯಲ್ಲಿ ಮನೆಗಳ ಹಾನಿ, ಕೂಡಲೇ ಪರಿಹಾರ: ಉಳುವರೆ ಎಂಬ ಗ್ರಾಮದಲ್ಲಿ ಮಳೆಯಿಂದಾಗಿ ಏಳು ಮನೆಗಳು ಹಾನಿಯಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಕೂಡಲೇ ಪರಿಹಾರ ನೀಡಲಾಗುವುದು ಹಾಗೂ ಪರ್ಯಾಯ ಸ್ಥಳವನ್ನೂ ನೀಡಲಾಗುವುದು ಎಂದರು.

ಮೃತರ ಕುಟುಂಬಕ್ಕೆ 5 ಲಕ್ಷ: ವಿಧಾನಸಭಾ ಅಧಿವೇಶನ ನಡೆಯುತ್ತಿದ್ದುದರಿಂದ ಇಂದು ಭೇಟಿ ನೀಡಿದ್ದೇನೆ. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಡಳಿತ ಎಲ್ಲಾ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದ್ದೆ. ಸಾವನ್ನಪ್ಪಿದವರ ಕುಟುಂಬಕ್ಕೆ 5 ಲಕ್ಷ ಪರಿಹಾರ ನೀಡಬೇಕೆಂದು ಘೋಷಿಸಲಾಗಿದೆ. ಈಗಾಗಲೇ ಅದನ್ನು ವಿತರಿಸಲಾಗಿದೆ. ಒಂದು ವೇಳೆ ಭೂ ಕುಸಿತದಲ್ಲಿ ಇನ್ಯಾರಾ ದರೂ ಸಾವನ್ನಪಿದ್ದಾರೆ ಅವರಿಗೂ 5 ಲಕ್ಷ ರು.ಗಳ ಪರಿಹಾರ ನೀಡಲಾಗುವುದು ಎಂದು ಸಿಎಂ ಹೇಳಿದರು.

ಅರ್ಜುನ್‌ಗಾಗಿ ಶೋಧ

ಶಿರೂರು ಗುಡ್ಡ ಕುಸಿತ ಪ್ರಕರಣಕ್ಕೆ ಸಂಬಂಧಿಸಿದಂತೆ ದುರಂತ ನಡೆದ ಸ್ಥಳಕ್ಕೆ ಸಚಿವ ಕೃಷ್ಣ ಬೈರೇಗೌಡ ಭಾನುವಾರ ಭೇಟಿ ನೀಡಿದ್ದು, ಕಾರ್ಯಾಚರಣೆ ಪರಿಶೀಲಿಸಿದರು. ಅಂಕೋಲಾದ ಶಿರೂರು ಬಳಿ ಘಟನಾ ಸ್ಥಳ'ದಲ್ಲಿ ಕೇರಳದ ಟ್ರಕ್ ಚಾಲಕ ಅರ್ಜುನ್‌ನಗಾಗಿ ನಡೆಯುತ್ತಿರುವ ಶೋಧ ಕಾರ್ಯಾಚರಣೆಯನ್ನು ಕಂದಾಯ ಸಚಿವ ಕೃಷ್ಣ ಬೈರೇಗೌಡ ಪರಿಶೀಲಿಸಿ ದರು. ಈ ವೇಳೆ ಮಾತನಾಡಿದ ಸಚಿವರು, ಕರ್ನಾಟಕದ ಹಲವೆಡೆ ಎಡಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಕಾರವಾರ ಬಳಿ ಗುಡ್ಡ ಕುಸಿತ ಘಟನೆ ನಡೆದಿದೆ. 8-10 ಮಂದಿ ನಾಪತ್ತೆಯಾಗಿದ್ದು, 6 ಮೃತ ದೇಹಗಳು ಪತ್ತೆ ಯಾಗಿವೆ. ಅಗತ್ಯವಿದ್ದಲ್ಲಿ, ನಾವು ರಸ್ತೆಗಳನ್ನು ತೆರವುಗೊಳಿಸಲು ಕಾರ್ಯಾಚರಣೆಯನ್ನು ಮುಂದುವರಿಸಲು ಹೆಲಿಕಾಪ್ಟರ್ ನೆರವು ಪಡೆ ಯುತ್ತೇವೆ. ಜಾರಿದ ಅವಶೇಷಗಳು, ಇಳಿಜಾರು ಮತ್ತಷ್ಟು ಜಾರುವ ಸಾಧ್ಯತೆಯಿದೆ. ಆದ್ದರಿಂದ, ರಕ್ಷಣಾ ಕಾರ್ಯಾಚರಣೆಯನ್ನು ಎಚ್ಚರಿಕೆಯಿಂದ ನಡೆಸಲಾಗುತ್ತಿದೆ ಎಂದರು.

ನೆರೆಸಂತ್ರಸ್ತ ಪ್ರದೇಶಗಳಿಗೆ ಸಿಎಂ ಭೇಟಿ ವಿಳಂಬ

ಶಿರೂರಿನ ಗುಡ್ಡ ಕುಸಿದ ಪ್ರದೇಶಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಉಳುವರೆ: ಶಿರೂರಿನಲ್ಲಿ ಗುಡ್ಡ ಕುಸಿದು ದುರಂತ ಸಂಭವಿಸಿದ ಘಟನೆ ಗಂಭೀರವಾದದ್ದು. ಅಧಿವೇಶನ ಇದ್ದರೂ ಮುಖ್ಯಮಂತ್ರಿ ಘಟನೆ ನಡೆದ ತಕ್ಷಣವೇ ಬರಬೇಕಿತ್ತು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಗುಡ್ಡ ಕುಸಿತದಿಂದ ಮನೆಗಳು ನಾಮಾವಶೇಷವಾದ ಉಳುವರೆ ಗ್ರಾಮದಲ್ಲಿ ಸಂತ್ರಸ್ತ ಕುಟುಂಬಗಳಿಗೆ ಭಾನುವಾರ ಸಾಂತ್ವನ ನೀಡಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು , ಮಣ್ಣು ತೆರವು, ಕಣ್ಮರೆ ಯಾದವರ ಪತ್ತೆ ಕಾರ್ಯ ವಿಳಂಬವಾಗಿದೆ. ಇದಕ್ಕೆ ರಾಜ್ಯ ಸರಕಾರದ ನಿರ್ಲಕ್ಷ್ಯ ಕಾರಣ. ಕೇಂದ್ರ ಸರಕಾರ ಸೇನೆಯ ತುಕಡಿ ನಿಯೋಜಿಸುವ ಮೂಲಕ ಕಣ್ಮರೆಯಾದವರ ಕುಟುಂಬಕ್ಕೆ ಸ್ಪಂದಿ ಸಿದೆ. ದುರಂತದಲ್ಲಿ ಮನೆ ಕಳೆದುಕೊಂಡವರಿಗೆ ಶಾಶ್ವತ ಪರಿಹಾರ ಕಲ್ಪಿಸಲು ಸರಕಾರ ತಕ್ಷಣ ಕ್ರಮ ವಹಿಸಲಿ ಎಂದರು.

ಮಳೆ ಹಾನಿ ಪ್ರದೇಶಕ್ಕೆ ಕುಮಾರಸ್ವಾಮಿ, ಆರ್.ಅಶೋಕ ಭೇಟಿ

ಮಳೆ ಅನಾಹುತಗಳಿಗೆ ಸರಕಾರ ಸ್ಪಂದಿಸಲಿ

ದೊಡ್ಡತಪ್ಪಲು ಗುಡ್ಡ ಕುಸಿತ ಪ್ರದೇಶಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ,ಆರ್.ಅಶೋಕ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಹಾಸನ: ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಗುಡ್ಡ ಕುಸಿತಕ್ಕೆ ಸಂಬಂಧಿಸಿ ಸಕಲೇಶಪುರ ದೊಡ್ಡತಪ್ಪಲು ಗುಡ್ಡ ಕುಸಿತ ಪ್ರದೇಶಕ್ಕೆ ಭಾನುವಾರ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ವಿಪಕ್ಷ ನಾಯಕ ಆರ್.ಅಶೋಕ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಎಚ್.ಡಿ. ಕುಮಾರಸ್ವಾಮಿ, ಕಳೆದ ಐದಾರು ದಿನಗಳಿಂದ ದೊಡ್ಡಮಟ್ಟದ ಮಳೆ ಆರಂಭವಾಗಿದೆ. 2018ರಲ್ಲಿ ನಾನು ಸಿಎಂ ಆಗಿದ್ದಾಗ ಇದೇ ರೀತಿ ಮಳೆಯಾಗಿತ್ತು. 2018ರ ನಂತರ ಈಗ ಈ ರೀತಿ ಮಳೆಯಾಗಿದೆ. ಒಂದೆಡೆ ಜಲಾಶಯ ಗಳು ತುಂಬಿದ್ದು ಪಕ್ಕದ ರಾಜ್ಯಗಳ ಜತೆ ಸಂಘರ್ಷಕ್ಕೆ ಒಂದು ವರ್ಷ ವಿರಾಮ ಸಿಕ್ಕಿದೆ. ಮಳೆಯಿಂದ ಆಗಿರುವ ಅನಾಹುತಗಳು, ಸಮಸ್ಯೆ ಗಳಿಗೆ ಸರಕಾರ ಸ್ಪಂದಿಸಬೇಕು. ಅಂಕೋಲದ ಶಿರೂರಿನಲ್ಲಿ ಮಳೆ ಮುಂದುವರೆದರೆ ಇನ್ನೂ ಭೂಕುಸಿತ ವಾಗುತ್ತದೆ. ಸಕಲೇಶಪುರ ದಿಂದ ಉದ್ದಕ್ಕೂ ಭೂಕುಸಿತ ವಾಗುತ್ತಲೇ ಇದೆ ಎಂದರು.

ಎಂಟು ವರ್ಷದ ಹಿಂದಿನಿಂದ ಪಶ್ಚಿಮಘಟ್ಟದಲ್ಲಿ ಗುತ್ತಿಗೆದಾರ ಕೆಲಸ ಮಾಡುತ್ತಿದ್ದಾನೆ. ಕಳಪೆ ಹಾಗೂ ಅವೈಜ್ಞಾನಿಕವಾಗಿ ಕಾಮಗಾರಿ ಮಾಡಲಾಗುತ್ತಿದೆ. ಕೇಂದ್ರದ ಭೂಸಾರಿಗೆ ಸಚಿವರಿಗೆ ಎಲ್ಲಾ ಮಾಹಿತಿ ಕೊಡುತ್ತೇನೆ. ಗಡ್ಕರಿ ಅವರ ಪಾತ್ರವೂ ಇಲ್ಲಿ ಹೆಚ್ಚಿದೆ. ವೈಜ್ಞಾನಿಕವಾಗಿ ಕಾಮಗಾರಿ ಮಾಡಲು ಗಡ್ಕರಿ ಜೊತೆ ಚರ್ಚೆ ಮಾಡುತ್ತೇನೆ. ಸ್ಥಳಕ್ಕೆ ಒಮ್ಮೆ ಭೇಟಿನೀಡಲು ಮನವಿ ಮಾಡುತ್ತೇನೆ. ರಾಜ್ಯ ಸರ್ಕಾರದ ಮಂತ್ರಿಗಳು ಭೇಟಿನೀಡಿ ಜನಗಳಿಗೆ ಮಾನಸಿಕವಾಗಿ ಧೈರ್ಯ ತುಂಬಬೇಕು.
-ಎಚ್.ಡಿ. ಕುಮಾರಸ್ವಾಮಿ,
ಕೇಂದ್ರ ಸಚಿವ

ಉಡುಪಿ ಕಡಲ್ಕೊರೆತ: ಐದು ಕೋಟಿ ರು. ಪರಿಹಾರ

ಉಡುಪಿ: ಜಿಲ್ಲೆಯ ವಿವಿಧೆಡೆ ಕಲ್ಕೊರೆತ ಸಂಭವಿಸಿದ್ದು, ತಕ್ಷಣ 5 ಕೋಟಿ ಪರಿಹಾರ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು. ಕಡಲ್ಕೊರೆತ ಉಂಟಾಗಿರುವ ಮತ್ತು ನೆರೆಯಿಂದ ಹಾನಿ ಸಂಭವಿಸಿರುವ ಪ್ರದೇಶಗಳಿಗೆ ಭಾನುವಾರ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಅವರು ಸುದ್ದಿಗಾರರ ಜೊತೆ ಮಾತನಾಡಿ, ಹಳೇ ಬಾಕಿ ಬಿಡುಗಡೆಗೂ ಪ್ರಸ್ತಾವನೆ ಸಲ್ಲಿಸಲಿದ್ದೇವೆ ಎಂದರು. ಇಲ್ಲೇ ಮನೆ ಮಾಡಿ ಇರಲು ತಯಾರಿದ್ದೇನೆ. ನನಗೂ ಜವಾಬ್ದಾರಿ ಇದೆ, ಅಧಿವೇಶನ ನಡಿತಾ ಇದೆ. ಭಾನುವಾರ ರಜೆ ಇದ್ದಾಗಲೂ ಬಂದಿದ್ದೇನೆ. ನನ್ನ ಅವಶ್ಯಕತೆ ಇದ್ದಾಗ ಇಲ್ಲಿಗೆ ಬರುತ್ತೇನೆ. ರಾಜ್ಯ ಸರಕಾರ ಹಾಗೂ ಜಿಲ್ಲಾಡಳಿತ ಎಚ್ಚರವಾಗಿದೆ. ಪರಿಹಾರ ಮೊತ್ತವನ್ನು ಸರಕಾರ ಶೀಘ್ರ ಬಿಡುಗಡೆ ಮಾಡುತ್ತದೆ ಎಂದರು.

ಮಳೆಹಾನಿ ಪ್ರದೇಶಕ್ಕೆ ಮಧು ಬಂಗಾರಪ್ಪ ಭೇಟಿ

ಭಾರಿ ಮಳೆಯಿಂದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಹಿರೇನಲ್ಲೂರು ಬಳಿ ವರದಾ ನದಿ ಹಾಗೂ ಮಾವಿನಹೊಳೆ ಉಕ್ಕಿ ಹರಿಯುತ್ತಿವೆ. ಇದರಿಂದ ಸಾವಿರಾರು ಎಕರೆ ಭತ್ತದ ಗದ್ದೆ, ಅಡಿಕೆ, ಬಾಳೆತೋಟಗಳು ಜಲಾವೃತವಾಗಿವೆ. ಭಾನುವಾರ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಭೇಟಿ ನೀಡಿ ಹಾನಿಯ ಪ್ರಮಾಣ ವೀಕ್ಷಣೆ ಮಾಡಿದರು. ಕಾನಲೆ, ಬೀಸನಗದ್ದೆ, ಸೈದೂರು ಸುತ್ತಲೂ ಕನ್ನೆ ಹೊಳೆ, ವರದಾ ಅಬ್ಬರ ಸೃಷ್ಟಿಸಿರುವ ಅವಾಂತರವನ್ನು ವೀಕ್ಷಿಸಿ ಬೆಳೆಗಳಿಗೆ ಆಗಿರುವ ಹಾನಿಯ ಬಗ್ಗೆ ಸ್ಥಳೀಯರಿಂದ ಮಾಹಿತಿ ಪಡೆದರು.

ಅಂಕೋಲಾ ಶಿರೂರು ಗುಡ್ಡ ಕುಸಿತ ಪ್ರದೇಶಕ್ಕೆ ರಕ್ಷಣಾ ಕಾರ್ಯಾಚರಣೆ ಗೆ ಆಗಮಿಸಿದ ಸೇನಾ ತಂಡ

ವಿಶ್ವವಾಣಿ

ಸಂಪಾದಕೀಯ

ಅಭಿವೃದ್ಧಿ ಹೆಸರಲ್ಲಿ ಪ್ರಕೃತಿ ನಾಶ

2018ರ ಆಗಸ್ಟ್‌ನಲ್ಲಿ ಕೊಡಗು ಮತ್ತು ಚಿಕ್ಕಮಗಳೂರಿನ ಗುಡ್ಡಬೆಟ್ಟಗಳ ಕುಸಿತದಿಂದಾಗಿ ಹಲವಾರು ಮಂದಿ ಜೀವ ಕಳೆದುಕೊಂಡು, ಅನೇಕ ಹಳ್ಳಿಗಳು ನಾಪತ್ತೆಯಾಗಿದ್ದವು. 2019ರ ಆಗಸ್ಟ್‌ನಲ್ಲಿ ಸಕಲೇಶಪುರ-ಸುಬ್ರಹ್ಮಣ್ಯದಲ್ಲಿ ರೈಲ್ವೆ ಹಳಿಗುಂಟ 35ಕ್ಕೂ ಹೆಚ್ಚು ಸ್ಥಳಗಳಲ್ಲಿ ಸರಣಿ ಭೂಕುಸಿತ ಸಂಭವಿಸಿತ್ತು. ಈ ವರ್ಷ ಆಗಸ್ಟ್‌ಗೆ ಮೊದಲೇ ಭಾರಿ ಅಬ್ಬರದ ಮಳೆ ಬಿದ್ದಿದ್ದು, ಕರಾವಳಿ ಭಾಗದ ಅನೇಕ ಕಡೆಗಳಲ್ಲಿ ಗುಡ್ಡ ಕುಸಿತ, ನೆರೆಹಾವಳಿ, ಭತ್ತದ ಗದ್ದೆಗಳ ನಾಶ, ಭೂಕುಸಿತ, ಮನೆಯೊಳಗೆ ನೀರು ಬರುವುದು, ಸೇತುವೆ ಧ್ವಂಸದಂತಹ ಹತ್ತು ಹಲವು ದುರಂತಗಳು ನಿತ್ಯ ವರದಿಯಾಗುತ್ತಿದ್ದು, ಜನ-ಜಾನುವಾರುಗಳು ಬಲಿಯಾಗಿವೆ. ಇದಕ್ಕೆಲ್ಲಾ ಸುರಿಯುತ್ತಿರುವ ಮಳೆಯೇ ಕಾರಣ ಎನ್ನಲಾಗಿದೆಯಾದರೂ ಹಿಂದಿನ ದಶಕಕ್ಕೆ ಹೋಲಿಸಿದರೆ ಈಗ ಕರಾವಳಿಯಲ್ಲಿ ಮೊದಲಿನಷ್ಟು ಮಳೆಯಿಲ್ಲ. ಆದರೆ ಮೊದಲಿಗಿಂತಲೂ ಹೆಚ್ಚು ಅನಾಹುತಗಳು ಸಂಭವಿಸುತ್ತಿವೆ. ಹಾಗಾದರೆ ಇದಕ್ಕೆ ವಾಸ್ತವ ಕಾರಣ ಏನು ಎಂಬುದನ್ನು ಯೋಚಿಸಬೇಕಾದ ಅಗತ್ಯವಿದೆ. ಹೆಚ್ಚುತ್ತಿರುವ ಜನಸಾಂದ್ರತೆ ಮತ್ತು ವ್ಯಾಪಾರ-ವಹಿವಾಟುಗಳಿಗೆ ತಕ್ಕಂತೆ ಕಳೆದ ಎರಡು ದಶಕಗಳಿಂದ ಈ ಘಟ್ಟಸಾಲಿನ ಉದ್ದಕ್ಕೂ ಅಭಿವೃದ್ಧಿಯ ಮಹಾ ಅಭಿಯಾನ ನಡೆದಿದೆ. ಸಮುದ್ರತೀರಕ್ಕೆ ಸಮಾನಾಂತರವಾಗಿ ಹೆದ್ದಾರಿ, ರೈಲು ಮಾರ್ಗ, ಸುರಂಗ, ಸೇತುವೆಗಳ ನಿರ್ಮಾಣ ನಿರಂತರ ನಡೆಯುತ್ತಲೇ ಇದೆ. ಹಿಂದೆಂದೂ ಕಂಡಿರದಷ್ಟು ದೊಡ್ಡ ಪ್ರಮಾಣದಲ್ಲಿ ಎಲ್ಲೆಂದರಲ್ಲಿ ಬೃಹತ್ ಯಂತ್ರೋಪಕರಣಗಳು ಭೂಸ್ವರೂಪವನ್ನು ಬದಲಿಸುವಲ್ಲಿ ತೊಡಗಿವೆ. ನಗರ ನಿರ್ಮಾಣ, ಪ್ರವಾಸಿಧಾಮ ಮತ್ತು ವಿರಾಮಧಾಮಗಳ ನಿರ್ಮಾಣ, ಗಣಿಗಾರಿಕೆ, ವಿದ್ಯುತ್ ಮಾರ್ಗ, ನೀರಾವರಿ ಕಾಲುವೆ, ಅತಿಕ್ರಮ ಸಾಗುವಳಿಯಂತಹ ಚಟುವಟಿಕೆಗಳು ಎಗ್ಗಿಲ್ಲದೆ ಸಾಗಿವೆ. ಇವೆಲ್ಲವುಗಳ ಒಟ್ಟಾರೆ ಪರಿಣಾಮವಾಗಿ ನಮಗೆ ಹವಾಮಾನ ವೈಪರೀತ್ಯದ ರೂಪದಲ್ಲಿ ಮತ್ತೆ ಮತ್ತೆ ಕಾಣುತ್ತಿದೆ. ಇಂಥ ಸೂಕ್ಷ್ಮ ಪ್ರದೇಶಗಳಲ್ಲಿ ನಿರ್ಮಾಣ ಕಾರ್ಯ ಕೈಗೊಳ್ಳುವಾಗ ಏನೆಲ್ಲ ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕು, ಎಲ್ಲೆಲ್ಲಿ ಮನುಷ್ಯರ ಹಸ್ತಕ್ಷೇಪ ಇರಲೇಬಾರದು ಎಂಬ ಬಗ್ಗೆ ಬಹಳಷ್ಟು ಮಾರ್ಗಸೂಚಿಗಳಂತೂ ಲಭ್ಯ ಇವೆ. ಆದರೆ ಅವ್ಯಾವವೂ ಪಾಲನೆಯಾಗುತ್ತಿಲ್ಲ. ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿ ನಾಶ ಮಾಡುವುದನ್ನು ಇನ್ನಾದರೂ ಬಿಡದಿದ್ದರೆ, ಇಂತಹ ಪ್ರಕರಣಗಳು ಮರುಕಳಿಸುತ್ತಲೇ ಇರುತ್ತವೆ.

ಸೊಂಪಾದಕೀಯ

ಆಪರೇಷನ್ ಅಬಾರ್ಶನ್

ಇದು ಒಬ್ಬ ಅಡ್ಡಕಸುಬಿ ಡಾಕ್ಟರ್‌ನ ಕರ್ಮ ಕಾಂಡ. ಭ್ರೂಣ ಹತ್ಯೆ ಮಹಾಪಾಪ ಅನ್ನೋ ಮಾತುಗಳ ನಡುವೆ ಒಬ್ಬ ಮಹಾ ವೈದ್ಯ ಕಳೆದ ಮೂರು ವರ್ಷಗಳಲ್ಲಿ ಬರೋಬ್ಬರಿ 900 ಅಬಾರ್ಷನ್ ಮಾಡಿದ್ದಾನೆ. ಈಗ ಪೊಲೀಸರ ಅತಿಥಿ ಆಗಿದ್ದಾನೆ. ಆದರೆ ವೈದ್ಯೋ ನಾರಾಯಣೋ ಹರಿ ಅನ್ನೋ ಕಾಲದಲ್ಲಿ, ಅದರಲ್ಲೂ ಭ್ರೂಣ ಪತ್ತೆ ಕಾನೂನಿಗೆ ವಿರುದ್ಧ ಅನ್ನೋ ಕಾಲದಲ್ಲಿ ಈತ ಭ್ರೂಣ ಪತ್ತೆ ಮಾಡಿದ್ದಲ್ಲದೆ, ಅದನ್ನು ಪತ್ತೆ ಇಲ್ಲದಂತೆ ಕೂಡಾ ಮಾಡಿ ಈಗ ಅನುಭವಿಸುತ್ತಿದ್ದಾನೆ. ಆದರೂ 3 ವರ್ಷಗಳಲ್ಲಿ 900 ಅಂದ್ರೆ, ಪ್ರತಿವರ್ಷಕ್ಕೆ 300 ಅಬಾರ್ಷನ್. ಅದರಲ್ಲೂ ಈತ ಕರ್ನಾಟಕದಲ್ಲಿ ಇರೋ ಡಾಕ್ಟರ್. ಹಾಗಾಗಿ ಸರಿ ಸುಮಾರು ನಮ್ಮ ರಾಜ್ಯದಲ್ಲೇ ಇಷ್ಟಾದರೆ ಇನ್ನು ದೇಶ, ಪ್ರಪಂಚದಲ್ಲಿ ಪ್ರತಿನಿತ್ಯ ಅದೆಷ್ಟು ಅಬಾರ್ಷನ್ ಕೆಲಸ ನಡೆಯುತ್ತಿದೆಯೋ ದೇವರೇ ಬಲ್ಲ. ಅಲ್ಲದೆ ಈ ಡಾಕ್ಟರ್ ಪ್ರತಿ ಅಬಾರ್ಷನ್‌ಗೆ 30 ಸಾವಿರ ರುಪಾಯಿ ಚಾರ್ಜ್ ಮಾಡುತ್ತಿದ್ದನಂತೆ. ಅಲ್ಲಿಗೆ ಈತ ವರ್ಷಕ್ಕೆ ಎಷ್ಟು ಕಮಾಯಿ ಮಾಡುತ್ತಿದ್ದ ಲೆಕ್ಕ ಹಾಕಿ. ಈ ರೀತಿ ಭ್ರೂಣ ಹತ್ಯೆ ಮಾಡಿ, ಡಾಕ್ಟರ್ ಅಂದ್ರೆ ಜೀವ ಉಳಿಸಿಯೇ ದುಡ್ಡು ಮಾಡಬೇಕಿಲ್ಲ, ಜೀವ ತೆಗೆದು ಕೂಡಾ ಡಾಕ್ಟರ್‌ಗಳು ದುಡ್ಡು ಮಾಡಬಹುದು ಅನ್ನೋದಕ್ಕೆ ಕೆಟ್ಟ ಉದಾಹರಣೆ ಆಗಿದ್ದಾನೆ. ಈ ಮಹಾನುಭಾವ ನಗರದ ಹೊರವಲಯದಲ್ಲಿ ಇರೋ ಕಬ್ಬಿನಿಂದ ಬೆಲ್ಲ ತೆಗೆಯೋ ಜಾಗವೊಂದರಲ್ಲಿ ಯಾರಿಗೂ ಗೊತ್ತಿಲ್ಲದಂತೆ ಈ ಕೆಲಸ ಮಾಡುತ್ತಿದ್ದನಂತೆ. ಕಬ್ಬಿನಿಂದ ಬೆಲ್ಲ ತೆಗೆಯೋ ಜಾಗದಲ್ಲಿ ತಾಯಿಯ ಗರ್ಭಕೋಶದಿಂದ ಮಗು ತೆಗೆಯೋ ಭಂಡ ಕೆಲಸ ಮಾಡಿದ ಈತ ಮತ್ತು ಈತನ ಸಹಚರರು ಈಗ ಪೊಲೀಸರ ಅತಿಥಿ ಆಗಿದ್ದಾರೆ. ಹೆಣ್ಣು ಗರ್ಭಿಣಿ ಆದ್ರೆ ಅದನ್ನ ಸಿಹಿ ಸುದ್ದಿ ಅಂತಾರೆ. ಅಂತಾದ್ರಲ್ಲಿ ಸಿಹಿಯಾದ ಬೆಲ್ಲ ತಯಾರಾಗೋ ಜಾಗದಲ್ಲಿ ಸ್ವೀಟ್ ನ್ಯೂಸ್ ಅನ್ನು ಹಾಳು ಮಾಡೋ ಮನೆಹಾಳು ಕೆಲಸ ಮಾಡುತ್ತಿದ್ದ ಈ ಡಾಕ್ಟರ್ ಅನ್ನೋ ಹಂತಕ ಈಗ ಕ್ರಿಮಿನಲ್ ಎನಿಸಿಕೊಳ್ಳುವ ಹಂತಕ್ಕೆ ಬಂದಿದ್ದಾನೆ. ಆಲೆಮನೆಯಲ್ಲಿ ಅನಧಿಕೃತ ಕೊಲೆಗಳನ್ನು ಮಾಡಿದ ಈತ ಈಗ ಪೊಲೀಸು, ಕೋರ್ಟು ಅಂತ ಅಲೆಯೋ ಪರಿಸ್ಥಿತಿ ಬಂದಿದೆ. ಪೊಲೀಸರು ಮಾಡಿದ ಈ ಆಪರೇಶನ್ ಅಬಾರ್ಶನ್‌ನಿಂದಾಗಿ ಈತನ ಇಲ್ಲೀಗಲ್ ಆಪರೇಷನ್‌ಗಳಿಗೆ ಕಡಿವಾಣ ಬಿದ್ದಿದೆ.

ಸಂಪಾದಕರ ಸದ್ಯಶೋಧನೆ

ಹೀಗಿದ್ದರು ಖುಷವಂತ ಸಿಂಗ್

ಖುಷವಂತ ಸಿಂಗ್ ಅವರು 'ದಿ ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ' ಸಂಪಾದಕರಾಗಿದ್ದಾಗ, ಪತ್ರಿಕೆಗೆ ಆಗಾಗ ವಾಸುದೇವ ಬನ್ಸೆ ಎಂಬುವವರು ಬರೆಯುತ್ತಿದ್ದರು. ಮೂಲತಃ ಬನ್ಸೆ ಅವರು ಸಂಸ್ಕೃತ ಪ್ರಾಧ್ಯಾಪಕರಾಗಿದ್ದರು. ಕೆಲ ಕಾಲ ಪುಣೆಯ ಪ್ರತಿಷ್ಠಿತ ಕಾಲೇಜೊಂದರಲ್ಲಿ ಇಂಗ್ಲಿಷ್ ವಿಷಯವನ್ನೂ ಕಲಿಸುತ್ತಿದ್ದರು. ಅವರಿಗೆ ಆ ಎರಡೂ ಭಾಷೆಗಳಲ್ಲಿ ಪ್ರಭುತ್ವವಿತ್ತು. ಅವರ ಇಂಗ್ಲಿಷ್ ಲೇಖನವನ್ನು ಓದಿ, ಖುಷವಂತ ಸಿಂಗ್ ಅವರೇ ಖುದ್ದಾಗಿ ಸಂಪರ್ಕಿಸಿ, 'ಈ ವಿಷಯದ ಬಗ್ಗೆ ಒಂದು ಲೇಖನವನ್ನು ಬರೆದುಕೊಡಬಹುದಾ?' ಎಂದು ಕೇಳುತ್ತಿದ್ದರು. ಸ್ವತಃ ಸಂಪಾದಕರೇ ಕೇಳಿದಾಗ ಬನ್ಸೆ ಅವರು ಇಲ್ಲ ಎಂದು ಹೇಳುತ್ತಿರಲಿಲ್ಲ. ನಿಗದಿತ ಸಮಯದೊಳಗೆ ತಮ್ಮ ಲೇಖನವನ್ನು ಕಳಿಸಿಕೊಡುತ್ತಿದ್ದರು. ಆದರೆ ಬನ್ಸೆಯವರದ್ದೊಂದು ತಕರಾರು ಇತ್ತು. 'ಯಾವ ಕಾರಣಕ್ಕೂ ನನ್ನ ಲೇಖನವನ್ನು ಎಡಿಟ್ ಮಾಡಬಾರದು ಅಥವಾ ಮಾರ್ಪಡಿಸಬಾರದು. ನಾನು ಬರೆದಂತೆ ಯಥಾವತ್ತಾಗಿ ಪ್ರಕಟಿಸಬೇಕು' ಎಂದು ತಾಕೀತು ಮಾಡುತ್ತಿದ್ದರು. ಈ ವಿಷಯದಲ್ಲಿ ಖುಷವಂತ ಸಿಂಗ್ ಕೂಡ ಕಟ್ಟುನಿಟ್ಟು. 'ನೀವು ಲೇಖನವನ್ನು ಕಳಿಸಿದ ಬಳಿಕ ನಮಗೆ ಯಾವುದೇ ನಿರ್ದೇಶನ ನೀಡುವಂತಿಲ್ಲ. ಅದು ಸಂಪಾದಕ ಮಂಡಳಿಯ ನಿಷ್ಕರ್ಷೆಗೆ ಬಿಟ್ಟ ವಿಚಾರ. ನಾವು ಉದ್ದೇಶಪೂರ್ವಕವಾಗಿ ಲೇಖನವನ್ನು ಮಾರ್ಪಾಟು ಮಾಡುವುದಿಲ್ಲ. ಆದರೆ ಯಾವ ಲೇಖನವನ್ನೂ ಎಡಿಟ್ ಮಾಡದೇ ಮುದ್ರಣಕ್ಕೆ ಕಳಿಸುವುದಿಲ್ಲ. ಒಂದು ಲೇಖನವನ್ನು ಹೇಗೆ ನಡೆಸಿಕೊಳ್ಳಬೇಕು ಎಂಬುದು ಸಂಪಾದಕ ಮಂಡಳಿಗೆ ಬಿಟ್ಟ ವಿಚಾರ. ನೀವು ಅದನ್ನು ಪ್ರಶ್ನಿಸಕೂಡದು' ಎಂದು ನೇರಾನೇರ ಹೇಳಿಬಿಟ್ಟರು. ಖುಷವಂತ ಸಿಂಗ್ ಅವರಿಂದ ಇಂಥ ನೇರ ಮತ್ತು ತುಸು ಒರಟು ಪ್ರತಿಕ್ರಿಯೆಯನ್ನು ಬನ್ಸೆ ನಿರೀಕ್ಷಿಸಿರಲಿಲ್ಲ. 'ಹಾಗಾದರೆ ನಾನು ನಿಮ್ಮ ಪತ್ರಿಕೆಗೆ ಬರೆಯುವುದಿಲ್ಲ. ನನ್ನ ಲೇಖನದ ಒಂದು ಪದವನ್ನೂ ಎಡಿಟ್ ಮಾಡುವ ಸಾಮರ್ಥ್ಯವಿರುವವರು ನಿಮ್ಮ ಸಂಪಾದಕ ಮಂಡಳಿಯಲ್ಲಿ ಇದ್ದರೆ ತೋರಿಸಿ. ಯಾರೋ ತಿದ್ದಿದ ಲೇಖನ ನನ್ನ ಹೆಸರಿನಲ್ಲಿ ಪ್ರಕಟವಾಗುವುದನ್ನು ನಾನು ಸಹಿಸುವುದಿಲ್ಲ. ನನಗೆ ನಿಮ್ಮ ಪತ್ರಿಕೆಯಲ್ಲಿ ಲೇಖನ ಪ್ರಕಟವಾಗಲೇಬೇಕು ಎಂಬ ಯಾವ ಇರಾದೆಯೂ ಇಲ್ಲ. ನೀವು ಕೇಳಿದಿರಿ ಎಂದು ಬರೆದುಕೊಟ್ಟೆ' ಎಂದು ಅಷ್ಟೇ ಖಾರವಾಗಿ ಬನ್ಸೆಯವರು ಪ್ರತಿಕ್ರಿಯಿಸಿದರು. ಅಲ್ಲಿಗೆ ಪತ್ರಿಕೆಯೊಂದಿಗೆ ಬನ್ಸೆಯವರ ಸಂಬಂಧ ಕಡಿದು ಹೋಯಿತು. ಇಂಥ ಅಹಂಕಾರದ ಸ್ವಭಾವದ ವ್ಯಕ್ತಿಯನ್ನು ನಿಭಾಯಿಸುವುದು ಕಷ್ಟ ಎಂದು ಖುಷವಂತ ಸಿಂಗ್ ತಮ್ಮ ಸಹೋದ್ಯೋಗಿಗಳೊಂದಿಗೆ ಮಾತಾಡಿಕೊಂಡರು. ಸುಮಾರು ಒಂದು ವರ್ಷದವರೆಗೆ ಬನ್ಸೆಯವರನ್ನು ಸಿಂಗ್ ಸಂಪರ್ಕಿಸಲಿಲ್ಲ. ಬನ್ಸೆಯವರು ಸಹ ಲೇಖನವನ್ನು ಕಳಿಸಲಿಲ್ಲ. ಆದರೆ ಸಿಂಗ್ ಮಾತ್ರ ಬನ್ಸೆಯವರನ್ನು ಮರೆತಿರಲಿಲ್ಲ. ಒಂದು ಸಣ್ಣ ಕಾರಣಕ್ಕೆ ಒಬ್ಬ ಉತ್ತಮ ಲೇಖಕ ಮತ್ತು ವಿದ್ವಾಂಸರ ಲೇಖನದಿಂದ ತಮ್ಮ ಪತ್ರಿಕೆ ವಂಚಿತವಾಗುತ್ತಿದೆಯಲ್ಲ ಎಂಬ ನೋವು ಅವರನ್ನು ಕಾಡುತ್ತಿತ್ತು. ಹಾಗಂತ ಬನ್ಸೆಯವರನ್ನು ಸಂಪರ್ಕಿಸಲು ಅವರ ಮನಸ್ಸು ಒಪ್ಪುತ್ತಿರಲಿಲ್ಲ. ಅವರನ್ನು ಸಂಪರ್ಕಿಸಿದರೆ ಪುನಃ ಕಟ್ಟಳೆ ವಿಧಿಸುತ್ತಾರೆಂದು ಅವರಿಗೆ ಗೊತ್ತಿತ್ತು. ಕೊನೆಗೊಂದು ದಿನ ಸಿಂಗ್ ಬನ್ಸೆಯವರನ್ನು ಸಂಪರ್ಕಿಸಿ, 'ಪತ್ರಿಕೆಗೆ ನಿಮ್ಮ ಲೇಖನ ಬೇಕು. ನೀವು ಆಗಾಗ ಬರೆಯಬೇಕು' ಎಂದಷ್ಟೇ ಹೇಳಿದರು. ಆದರೆ ಬನ್ಸೆ ಮಹಾಜಿಗುಟ. 'ನನ್ನ ಲೇಖನಕ್ಕೆ ನಾನೇ ಸಂಪಾದಕ. ಅನ್ಯರು ಎಡಿಟ್ ಮಾಡುವಂತಿಲ್ಲ. ಇದನ್ನು ನೀವು ಮನ್ನಿಸುವುದಾದರೆ ಮಾತ್ರ ನಾನು ಬರೆಯಲು ಸಿದ್ಧ' ಎಂದು ಪುನಃ ಷರತ್ತು ಹಾಕಿದರು. ಆದರೆ ಸಂಪಾದಕ ಸಿಂಗ್ ಇದಕ್ಕೆ ಒಪ್ಪಲಿಲ್ಲ. 'ಎಡಿಟಿಂಗ್ ಎಂಬುದು ಸಂಪಾದಕ ಮಂಡಳಿ ತೀರ್ಮಾನ. ನಮ್ಮ ಹಕ್ಕನ್ನು ನೀವು ಕಸಿಯುವಂತಿಲ್ಲ, ಪ್ರಶ್ನಿಸುವಂತೆಯೂ ಇಲ್ಲ. ನಾವು ರಾಷ್ಟ್ರಪತಿಯವರ ಲೇಖನವನ್ನೂ ಎಡಿಟ್ ಮಾಡುವವರೇ. ಅದನ್ನು ಬೇರೆಯವರು ಪ್ರಶ್ನಿಸುವುದನ್ನು ನಾವು ಇಷ್ಟಪಡುವುದಿಲ್ಲ' ಎಂದು ಬಿಟ್ಟರು.

ಚನ್ನಪಟ್ಟಣದಲ್ಲಿ ಡಿಕೆಸು ವರ್ಸಸ್ ಅನಿತಕ್ಕ?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕೇಂದ್ರದ ಉಕ್ಕು ಮತ್ತು ಭಾರೀ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಇತ್ತೀಚೆಗೆ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದಾರೆ. ಈ ಭೇಟಿಯ ಸಂದರ್ಭದಲ್ಲಿ ಕರ್ನಾಟಕದ ಮೂರು ಕ್ಷೇತ್ರಗಳಿಗೆ ನಡೆಯಲಿರುವ ಉಪಚುನಾವಣೆಯ ಬಗ್ಗೆ ಅವರು ಪ್ರಸ್ತಾಪಿಸಿದರಂತೆ. ಅಂದ ಹಾಗೆ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಕುಮಾರಸ್ವಾಮಿ, ಹಾವೇರಿಯಿಂದ ಬಸವರಾಜ ಬೊಮ್ಮಾಯಿ ಮತ್ತು ಬಳ್ಳಾರಿಯಿಂದ ಕಾಂಗ್ರೆಸ್ಸಿನ ತುಕಾರಾಂ ಗೆದ್ದು ಸಂಸತ್ತಿಗೆ ಹೋಗಿರುವುದರಿಂದ ಅನುಕ್ರಮವಾಗಿ ಅವರು ಪ್ರತಿನಿಧಿಸುತ್ತಿದ್ದ ಚನ್ನಪಟ್ಟಣ, ಶಿಗ್ಗಾಂವಿ ಮತ್ತು ಸಂಡೂರು ವಿದಾನಸಭಾ ಕ್ಷೇತ್ರಗಳಿಗೆ ಸಧ್ಯದಲ್ಲೇ ಉಪಚುನಾವಣೆಗಳು ನಡೆಯಲಿವೆ.

ಹೀಗೆ ಚುನಾವಣೆಗಳು ನಡೆಯಲಿರುವ ಕ್ಷೇತ್ರಗಳ ಪೈಕಿ ಶಿಗ್ಗಾಂವಿ ಮತ್ತು ಸಂಡೂರು ವಿಧಾನಸಭಾ ಕ್ಷೇತ್ರಗಳಿಂದ ಬಿಜೆಪಿ ಅಭ್ಯರ್ಥಿಗಳು ಕಣಕ್ಕಿಳಿಯಬೇಕು ಎಂಬ ವಿಷಯದಲ್ಲಿ ಕುಮಾರಸ್ವಾಮಿ ಅವರ ಅಭ್ಯಂತರವೇನೂ ಇಲ್ಲ. ಯಾಕೆಂದರೆ ಹೇಳಿ ಕೇಳಿ ಅವು ಬಿಜೆಪಿಯ ಪವರ್ ಇರುವ ಕ್ಷೇತ್ರಗಳು. ಇದೇ ರೀತಿ ಚನ್ನಪಟ್ಟಣ ಜೆಡಿಎಸ್ ಪವರ್‌ಫುಲ್ ಆಗಿರುವ ಕ್ಷೇತ್ರ. ಆದರೆ ಸಮಸ್ಯೆ ಎಂದರೆ, ಜೆಡಿಎಸ್ ಪವರ್‌ಫುಲ್ ಆಗಿದ್ದರೂ ಚನ್ನಪಟ್ಟಣ ಕ್ಷೇತ್ರದ ಅಭ್ಯರ್ಥಿಯಾಗಲು ಮಾಜಿ ಸಚಿವ ಬಿಜೆಪಿಯ ಸಿ.ಪಿ.ಯೋಗೇಶ್ವರ್ ಬಯಸುತ್ತಿದ್ದಾರೆ. ಬರೀ ಬಯಸುವುದಷ್ಟೇ ಅಲ್ಲ, ತಮ್ಮ ಬಯಕೆಯನ್ನು ನೇರವಾಗಿಯೇ ಕುಮಾರಸ್ವಾಮಿ ಬಳಿ ಹೇಳಿಕೊಂಡಿದ್ದಾರೆ.

ಹೀಗೆ ಚನ್ನಪಟ್ಟಣದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಯಾಗಲು ಸಿ.ಪಿ.ಯೋಗೇಶ್ವರ್ ಬಯಸುತ್ತಿದ್ದರೂ ಮತ್ತೊಂದು ಕಡೆ ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಮಾಜಿ ಸಿಎಂ ಯಡಿಯೂರಪ್ಪ ಅವರಿಗೆ ಇದು ಇಷ್ಟವಿಲ್ಲ. ಹೀಗಾಗಿ ಅವರು ಕುಮಾರಸ್ವಾಮಿ ಅವರ ಬಳಿ, ಹೇಳಿ ಕೇಳಿ ಚನ್ನಪಟ್ಟಣ ನಿಮ್ಮ ಕ್ಷೇತ್ರ. ಹೀಗಾಗಿ ನೀವು ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟುಕೊಡುವ ಬದಲು ನಿಮ್ಮ ಪಕ್ಷದ ವರನ್ನೇ ಕಣಕ್ಕಿಳಿಸಿ ಎಂದಿದ್ದಾರೆ.

ಇಷ್ಟಾದರೂ ತಮಗೆ ಚನ್ನಪಟ್ಟಣ ಕ್ಷೇತ್ರದ ಟಿಕೆಟ್ ಬೇಕು ಎಂದು ಯೋಗೇಶ್ವರ್ ಬಯಸುತ್ತಿರುವ ರೀತಿ ಕುಮಾರಸ್ವಾಮಿ ಅವರಲ್ಲಿ ಧರ್ಮಸಂಕಟ ಮೂಡಿಸಿದೆ. ಯಾಕೆಂದರೆ ಯೋಗೇಶ್ವರ್ ನೇರವಾಗಿಯೇ ಕುಮಾರಸ್ವಾಮಿ ಅವರ ಬಳಿ ಮಾತನಾಡಿ, ಚನ್ನಪಟ್ಟಣದ ಟಿಕೆಟ್ ನನಗೆ ಕೊಡಿಸಿ ಎಂದು ಮನವಿ ಮಾಡಿದ್ದಾರೆ. ಹೀಗಾಗಿ ಇತ್ತೀಚೆಗೆ ಅಮಿತ್ ಶಾ ಅವರು ದೆಹಲಿಯಲ್ಲಿ ಸಿಕ್ಕಾಗ ವಿಷಯವನ್ನು ಪ್ರಸ್ತಾಪಿಸಿದ ಕುಮಾರಸ್ವಾಮಿ ಅವರು, 'ಸಾರ್, ಉಪಚುನಾವಣೆಗಳ ವಿಷಯ ಹೀಗಿದೆ. ಒಮ್ಮೆ ನಿಮ್ಮ ಗಮನಕ್ಕೆ ತರೋಣ' ಎಂದು ಹೇಳುತ್ತಿದ್ದೇನೆ ಎಂದರಂತೆ. ಹೀಗೆ ಕುಮಾರಸ್ವಾಮಿ ಅವರು ಹೇಳಿದ್ದನ್ನು ಕೇಳಿದ ಅಮಿತ್ ಶಾ: 'ನೋ,ನೋ, ಉಪಚುನಾವಣೆಗಳ ವಿಷಯದಲ್ಲಿ ಯಾವ ಮುಜುಗರವೂ ಬೇಡ, ಯಾಕೆಂದರೆ ವಿಷಯ ಕ್ಲಿಯರ್ ಆಗಿದೆ. ಶಿಗ್ಗಾಂವಿ ಮತ್ತು ಸಂಡೂರು ನಮ್ಮ ಕ್ಷೇತ್ರಗಳು. ಹೀಗಾಗಿ ಅಲ್ಲಿ ನಮ್ಮವರು ಅಭ್ಯರ್ಥಿಗಳಾಗಲಿ, ಚನ್ನಪಟ್ಟಣ ನೀವು ಪ್ರತಿನಿಧಿಸುತ್ತಿದ್ದ ಕ್ಷೇತ್ರ. ಹೀಗಾಗಿ ಅಲ್ಲಿಂದ ನಿಮ್ಮವರೇ ಅಭ್ಯರ್ಥಿಯಾಗಲಿ' ಎಂದು ನೇರವಾಗಿಯೇ ಹೇಳಿದ್ದಾರೆ.

ಹೀಗೆ ಉಪಚುನಾವಣೆಗಳ ವಿಷಯ ಕ್ಲಿಯರ್ ಆದ ಮೇಲೆ ಅಮಿತ್ ಶಾ ಮತ್ತೊಂದು ವಿಷಯಕ್ಕೆ ತಿರುಗಿಕೊಂಡಿದ್ದಾರೆ. 'ದೇಖೋ ಕುಮಾರಸೋಮೀಜಿ. ಹಳೆ ಮೈಸೂರು ಭಾಗದಲ್ಲಿ ನಿಮ್ಮ ಪಕ್ಷವನ್ನು ಮತ್ತಷ್ಟು ಬಲಿಷ್ಠವಾಗಿ ಕಟ್ಟಿ. ಹೇಗಿದ್ದರೂ ಲೋಕಸಭೆ ಚುನಾವಣೆಯಲ್ಲಿ ಮೈತ್ರಿಕೂಟಕ್ಕಿರುವ ಶಕ್ತಿ ಸಾಬೀತಾಗಿದೆ. ರಾಜ್ಯದ ನೂರಾ ನಲವತ್ತೆರಡು ಕ್ಷೇತ್ರಗಳಲ್ಲಿ ನಮಗೆ ಕಾಂಗ್ರೆಸ್ಸಿಗಿಂತ ಹೆಚ್ಚು ಮತಗಳು ಬಂದಿವೆ. ಇದನ್ನು ಗಮನದಲ್ಲಿಟ್ಟುಕೊಂಡು ನುಗ್ಗಿದರೆ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ನಿರಾಯಾಸವಾಗಿ ನಾವು ನೂರೈವತ್ತು ಸೀಟು ಗೆಲ್ಲುತ್ತೇವೆ. ಹೀಗಾಗಿ ಮುಂದಿನ ದಿನಗಳಲ್ಲಿ ನಿಮ್ಮಿಂದ ಯಾವ ನೆರವು ಬೇಕೋ ಕೇಳಿ. ಅದನ್ನು ಕೊಡಲು ನಾವು ರೆಡಿ. ಒಟ್ಟಿನಲ್ಲಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ನಿಮ್ಮ ಪಕ್ಷದಿಂದ 60 ಮಂದಿಯನ್ನು ಗೆಲ್ಲಿಸಿಕೊಂಡು ಬನ್ನಿ. ನಿಮ್ಮಿಂದ ಇದು ಸಾಧ್ಯವಾದರೆ ಅನುಮಾನವೇ ಬೇಡ, ನೀವು ಸಿಎಂ ಆಗುವುದು ಗ್ಯಾರಂಟಿ' ಎಂದಿದ್ದಾರೆ.

ಯಾವಾಗ ಅಮಿತ್ ಶಾ ಈ ಮಾತು ಹೇಳಿದರೋ? ನಂತರ ಕರ್ನಾಟಕಕ್ಕೆ ಬಂದ ಕುಮಾರಸ್ವಾಮಿ ಪಕ್ಷದ ಕಚೇರಿಯಲ್ಲಿ ಮಹತ್ವದ ಸಭೆ ನಡೆಸಿದ್ದಾರೆ. ಮತ್ತು ಈ ಸಭೆಯಲ್ಲಿ ಮಾತನಾಡುವಾಗ ಕರ್ನಾಟಕದ ನೂರು-ನೂರಾ ಹತ್ತು ಕ್ಷೇತ್ರಗಳಲ್ಲಿ ಪಕ್ಷದ ಸಂಘಟನೆಯನ್ನು ಬಲಪಡಿಸಲು ಸಜ್ಜಾಗುವಂತೆ ನಾಯಕರಿಗೆ ರಣವೀಳ್ಯ ನೀಡಿದ್ದಾರೆ.

ಅಗರ್ವಾಲ್ ರವಾನಿಸಿದ ಆ ರಿಪೋರ್ಟು

ಈ ಮಧ್ಯೆ ರಾಜ್ಯ ಬಿಜೆಪಿಯ ಉಸ್ತುವಾರಿ ಹೊಣೆ ಹೊತ್ತಿರುವ ರಾಧಾಮೋಹನ ದಾಸ್ ಅಗರ್ವಾಲ್ ಪಕ್ಷದ ವರಿಷ್ಠರಿಗೆ ಮಹತ್ವದ ವರದಿಯೊಂದನ್ನು ರವಾನಿಸಿದ್ದಾರೆ. ಮುಂದಿನ ದಿನಗಳಲ್ಲಿ ಹಿಂದುಳಿದ ವರ್ಗಗಳಿಗೆ ಒಳಮೀಸಲಾತಿ ಕೊಡಬೇಕು ಎಂಬ ಅಸ್ತ್ರವನ್ನಿಟ್ಟುಕೊಂಡು ಹೋರಾಡಿದರೆ ಮೈತ್ರಿಕೂಟಕ್ಕೆ ಲಾಭವಾಗಲಿದೆ ಎಂಬುದು ಈ ವರದಿ. ಅಂದ ಹಾಗೆ ಇದಕ್ಕೆ ಪುಷ್ಟಿ ನೀಡಿರುವುದು ಲೋಕನೀತಿ-ಸಿಎಸ್‌ಡಿಎಸ್ ಸರ್ವೆ ವರದಿ. ಅದರ ಪ್ರಕಾರ, ಮೊನ್ನೆಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟ ಹತ್ತೊಂಬತ್ತು ಸ್ಥಾನಗಳನ್ನು ಗೆಲ್ಲಲು ಒಕ್ಕಲಿಗ, ಲಿಂಗಾಯತ ಸಮುದಾಯಗಳು ಮಾತ್ರವಲ್ಲ. ಹಿಂದುಳಿದ ಸಮುದಾಯ ನೀಡಿದ ಬೆಂಬಲವೂ ಪ್ರಮುಖ ಕಾರಣ. ಸರ್ವೆಯ ಪ್ರಕಾರ, ಹಿಂದುಳಿದ ವರ್ಗಗಳ ಅರವತ್ತು ಪರ್ಸೆಂಟಿಗೂ ಹೆಚ್ಚು ಮತಗಳು ಮೈತ್ರಿಕೂಟಕ್ಕೆ ಬಂದಿವೆ. ಇತ್ತೀಚಿನವರೆಗೆ ಕಾಂಗ್ರೆಸ್ ಪಕ್ಷದ ಪ್ರಮುಖ ಮತ ಬ್ಯಾಂಕ್ ಆಗಿದ್ದ ಹಿಂದುಳಿದ ವರ್ಗಗಳು ಕೈ ಪಾಳಯದಿಂದ ವಿಮುಖವಾಗಲು ಒಳ ಮೀಸಲಾತಿಯ ಬೇಡಿಕೆಯೇ ಮುಖ್ಯ ಕಾರಣ. ಹಿಂದುಳಿದ ವರ್ಗಗಳ ಮೀಸಲಾತಿಯ ಲಾಭ ಪ್ರಬಲ ಜಾತಿಗಳಿಗೆ ಆಗುತ್ತಿರುವುದರಿಂದ ಪಟ್ಟಿಯಲ್ಲಿರುವ ಇನ್ನೂರಕ್ಕೂ ಹೆಚ್ಚು ಜಾತಿಗಳು ತಲ್ಲಣಗೊಂಡಿವೆ. ಪರಿಣಾಮ? ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮೈತ್ರಿಕೂಟದ ಕಡೆ ವಾಲಿಕೊಂಡಿವೆ.

ಈ ಸಮುದಾಯಗಳ ಪರವಾಗಿ ಧ್ವನಿ ಎತ್ತಿದರೆ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಮೈತ್ರಿಕೂಟ ದೊಡ್ಡ ಮಟ್ಟದ ಶಕ್ತಿ ಪಡೆಯಲಿದೆ. ಅಂದ ಹಾಗೆ ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಮಿನಿಮಮ್ 75 ಸಾವಿರದಷ್ಟಿರುವ ಹಿಂದುಳಿದವರು ಹಂಚಿ ಹೋಗಿದ್ದಾರೇನೋ ನಿಜ. ಆದರೆ ಒಟ್ಟು ಸೇರಿಸಿ ನೋಡಿದರೆ ಪವರ್‌ಫುಲ್ಲಾಗಿದ್ದಾರೆ.

ಹೀಗಾಗಿ ಇವರ ಒಳಮೀಸಲಾತಿಯ ಬೇಡಿಕೆಗೆ ಧ್ವನಿ ಕೊಟ್ಟರೆ ಮೈತ್ರಿಕೂಟದ ಬತ್ತಳಿಕೆಗೆ ಡೆಡ್ಲಿ ಅಸ್ತ್ರ ಸೇರಲಿದೆ ಎಂಬುದು ಅಗರ್ವಾಲ್ ಅವರ ವರದಿ.

ಚನ್ನಪಟ್ಟಣ:ಡಿಕೆಸು ವರ್ಸಸ್ ಅನಿತಕ್ಕ?

ಇನ್ನು ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆಯ ಕಣಕ್ಕೆ ಯಾರು ಇಳಿಯಲಿದ್ದಾರೆ ಎಂಬ ಚರ್ಚೆ ನಡೆಯುತ್ತಲೇ ಇದೆ. ಡಿಕೆಶಿ ಕ್ಯಾಂಪಿಗೆ ತಲುಪಿರುವ ಮಾಹಿತಿಯ ಪ್ರಕಾರ, ಮೈತ್ರಿಕೂಟದ ಕ್ಯಾಂಡಿಡೇಟ್ ಆಗಲು ಪ್ರಯತ್ನಿಸುತ್ತಿದ್ದ ಸಿ.ಪಿ.ಯೋಗೇಶ್ವರ್ ಅವರಿಗೆ ಬಿಜೆಪಿ ವರಿಷ್ಠರು ನೋ ಎಂದಿದ್ದಾರಂತೆ. ನಿಮ್ಮ ವಿಧಾನಪರಿಷತ್ ಸದಸ್ಯತ್ವದ ಅವಧಿ ಇನ್ನೂ ಎರಡು ವರ್ಷ ಬಾಕಿ ಇದೆ. ಹೀಗಿರುವಾಗ ನೀವು ರಾಜೀನಾಮೆ ನೀಡಿ ಮೈತ್ರಿಕೂಟದ ಕ್ಯಾಂಡಿಡೇಟ್ ಆದರೆ ಆ ಸೀಟು ಕಾಂಗ್ರೆಸ್‌ಗೆ ಹೋಗುತ್ತದೆ ಎಂಬುದು ವರಿಷ್ಠರ ಮಾತು.

ಅಲ್ಲಿಗೆ ಮೈತ್ರಿಕೂಟದ ವತಿಯಿಂದ ಜೆಡಿಎಸ್ ಕ್ಯಾಂಡಿಡೇಟ್ ಪಕ್ಕಾ. ಇದೇ ರೀತಿ ಇವತ್ತಿನ ಸ್ಥಿತಿಯಲ್ಲಿ ಪಕ್ಷದ ಕಾರ್ಯಕರ್ತರೊಬ್ಬರನ್ನು ಕಣಕ್ಕಿಳಿಸಿ ರಿಸ್ಕು ತೆಗೆದುಕೊಳ್ಳಲು ಕುಮಾರಸ್ವಾಮಿ ತಯಾರಿಲ್ಲ. ಹೀಗಾಗಿ ಅವರು ತಮ್ಮ ಕುಟುಂಬದ ಸದಸ್ಯರೊಬ್ಬರನ್ನು ಫೀಲ್ಡಿಗೆ ಇಳಿಸುತ್ತಾರೆ.ಹೀಗೆ ಫೀಲ್ಡಿಗಿಳಿಯುವವರು ನಿಖಿಲ್ ಕುಮಾರಸ್ವಾಮಿ ಅದರೂ ಅಚ್ಚರಿಯಿಲ್ಲ. ಹಾಗಾದಾಗ ನಾವು ಪ್ರಬಲ ಕ್ಯಾಂಡಿಡೇಟನ್ನು ನಿಲ್ಲಿಸಲೇಬೇಕು ಎಂಬುದು ಡಿಕೆಶಿ ಕ್ಯಾಂಪಿನ ಮಾತು.

ಆದರೆ ಜೆಡಿಎಸ್ ಕ್ಯಾಂಪಿನ ಪ್ರಕಾರ, ಕೈ ಪಾಳಯದ ಅಭ್ಯರ್ಥಿಯಾಗಿ ಡಿಕೆಶಿ ಸಹೋದರ ಡಿ.ಕೆ.ಸುರೇಶ್ ಸ್ಪರ್ಧಿಸುವುದು ಗ್ಯಾರಂಟಿ. ಹೀಗಾಗಿ ನಾವು ಬಲಿಷ್ಠರನ್ನು ಫೀಲ್ಡಿಗಿಳಿಸಬೇಕು. ಆದರೆ ಅವರು ನಿಖಿಲ್ ಕುಮಾರಸ್ವಾಮಿ ಆಗಿರುವುದಿಲ್ಲ. ಜ್ಯೋತಿಷಿಗಳ ಪ್ರಕಾರ ನಿಖಿಲ್ ಅವರಿಗೆ 2027 ರವರೆಗೆ ಗುರು ಬಲವಿಲ್ಲ.ನಿಜ ಸಂಗತಿ ಎಂದರೆ ಕಳೆದ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲೇ ಜ್ಯೋತಿಷಿಯೊಬ್ಬರು ಇದನ್ನು ಸ್ಪಷ್ಟವಾಗಿ ಹೇಳಿದ್ದರು. ಈ ಸಲ ನಿಖಿಲ್ ಸ್ಪರ್ಧಿಸಿದರೆ ಸೋಲುವುದು ಶತಸಿದ್ಧ ಎಂದಿದ್ದರು.ಅದು ಹಾಗೇ ಆಯಿತು.

ಹೀಗಾಗಿ ಅವರು ಈ ಸಲ ಚನ್ನಪಟ್ಟಣದ ಕಣಕ್ಕಿಳಿಯುವುದಿಲ್ಲ. ಬದಲಿಗೆ 2028 ರಲ್ಲಿ ರಾಮನಗರದ ಕಣಕ್ಕಿಳಿಯುತ್ತಾರೆ. ಪರಿಣಾಮ? ಅಂತಿಮವಾಗಿ ಕಾಂಗ್ರೆಸ್ಸಿನ ಡಿ.ಕೆ. ಸುರೇಶ್ ಅವರ ವಿರುದ್ಧ ಅನಿತಾ ಕುಮಾರಸ್ವಾಮಿ ಸ್ಪರ್ಧಿಸುವುದು ಅನಿವಾರ್ಯವಾಗಬಹುದು.

ಅಂದ ಹಾಗೆ ಉಪಚುನಾವಣೆಯ ಮಾತು ಶುರುವಾದಾಗ ಚನ್ನಪಟ್ಟಣದಿಂದ ಡಾ.ಮಂಜುನಾಥ್ ಅವರ ಪತ್ನಿ ಅನಸೂಯ ಅವರನ್ನು ಕಣಕ್ಕಿಳಿಸುವ ಯೋಚನೆ ಇತ್ತಾದರೂ ಈಗ ಆ ಯೋಚನೆಯನ್ನು ಕೈ ಬಿಡಲಾಗಿದೆ. ಅರ್ಥಾತ್, ಅನಸೂಯ ಮೇಡಂ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕನಕಪುರ ಕ್ಷೇತ್ರದ ಕಣಕ್ಕಿಳಿಯಲಿದ್ದಾರೆ.

ತ್ರಿಮೂರ್ತಿಗಳ ಪಡೆ ರೆಡಿಯಾಗಿದೆ

ಈ ಬಾರಿ ವಿಧಾನಮಂಡಲ ಅಧಿವೇಶನದಲ್ಲಿ ಸರಕಾರದ ವಿರುದ್ಧ ಹೋರಾಡುತ್ತಿರುವ ಬಿಜೆಪಿ ನಾಯಕರಿಗೆ ಒಂದು ವಿಷಯ ಪಕ್ಕಾ ಆಗಿದೆ. ಅದೆಂದರೆ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣವಿರಲಿ, ಮೂಡಾ ಹಗರಣವಿರಲಿ, ಮತ್ತೊಂದಿರಲಿ. ಅಂದ ಹಾಗೆ ದಿಲ್ಲಿಯಿಂದ ಬರುವ ಡೈರೆಕ್ಷನ್ನುಗಳ ಹಿಂದೆ ತ್ರಿಮೂರ್ತಿಗಳಿದ್ದಾರಂತೆ. ಅವರೆಂದರೆ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ, ಪ್ರಹ್ಲಾದ್ ಜೋಶಿ ಮತ್ತು ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್.

ಈ ಬಾರಿಯ ಅಧಿವೇಶನದಲ್ಲಿ ಸಿದ್ದರಾಮಯ್ಯ ಅವರ ಸರಕಾರವನ್ನು ಮುಜುಗರಕ್ಕೆ ಸಿಲುಕಿಸಬೇಕು. ಅದು ದಲಿತ ವಿರೋಧಿ ಎಂದು ರಾಷ್ಟ್ರ ಮಟ್ಟದಲ್ಲಿ ಪ್ರಚಾರವಾಗುವಂತೆ ನೋಡಿಕೊಳ್ಳಬೇಕು ಅಂತ ಡೈರೆಕ್ಷನ್ನು ಕೊಡುತ್ತಿರುವ ಈ ತ್ರಿಮೂರ್ತಿಗಳಿಗೆ ಮೊನ್ನೆ ಒಂದು ಅನುಮಾನ ಶುರುವಾಯಿತಂತೆ. ಸಿದ್ದರಾಮಯ್ಯ ಅವರನ್ನು ಸಂಕಷ್ಟಕ್ಕೆ ಸಿಲುಕಿಸಿರುವ ಮೂಡಾ ಹಗರಣದ ವಿಷಯದಲ್ಲಿ ನಮ್ಮವರು ಮೃದುವಾಗಬಹುದು. ಈ ಸಂದರ್ಭವನ್ನು ಬಳಸಿಕೊಂಡು ಅವಧಿಗೂ ಮುನ್ನ ಅಧಿವೇಶನ ಬರಕಾಸ್ತಾಗುವಂತೆ ಸರಕಾರ ಮಾಡಬಹುದು ಎಂಬುದು ಈ ಅನುಮಾನ.

ಹೀಗಾಗಿಯೇ ಶನಿವಾರ ರಾತ್ರಿ ರಾಜ್ಯದ ನಾಯಕರಿಗೆ ಸಂದೇಶ ರವಾನಿಸಿದ ತ್ರಿಮೂರ್ತಿಗಳ ಪಡೆ, ಅಧಿವೇಶನದಲ್ಲಿ ಅಹೋರಾತ್ರಿ ಧರಣಿ ನಡೆಸಿ. ಒಂದು ವೇಳೆ ಸದನ ಕಲಾಪವನ್ನೇ ಅನಿರ್ದಿಷ್ಟಾವಧಿಯವರೆಗೆ ಮುಂದೂಡುವ ಕೆಲಸವಾದರೆ ಬೀದಿ ಹೋರಾಟಗಳಿಗೆ ಸಜ್ಜಾಗಿ ಎಂದಿದೆಯಂತೆ.

ನಿಸ್ಪೃಹ ಹೃದಯದ ವನ್ಯರಕ್ಷಕ ಜಿ.ವಿ.ರೆಡ್ಡಿ

ಸ್ಮರಣೆ

ಡಾ.ಕೆ.ಉಲ್ಲಾಸ ಕಾರಂತ
vveditoped@gmail.com

ಅರಣ್ಯ ಸಂರಕ್ಷಕ ಗೋಡಿಲ್ಲ ವಿಶ್ವನಾಥ ರೆಡ್ಡಿಯವರನ್ನು ನಾನು ಮೊದಲು ಭೇಟಿಯಾಗಿದ್ದು 1997ರಲ್ಲಿ. ರಾಜಸ್ಥಾನದ ರಣಥಂಬೋರ್ ರಾಷ್ಟ್ರೀಯ ಉದ್ಯಾನದಲ್ಲಿ ನಾನು ಹುಲಿಗಳ ಸಮೀಕ್ಷೆ ನಡೆಸಲು ಕ್ಯಾಮೆರಾ ಟ್ರ್ಯಾಪ್‌ಗಳನ್ನು ಅಳವಡಿಸುತ್ತಿದ್ದೆ. ಆಗಿನ ಅರಣ್ಯ ಸಂರಕ್ಷಣಾಧಿಕಾರಿಗಳು ಹುಲಿಗಳ ಗಣತಿಗೆ 'ಪಗ್ ಮಾರ್ಕ್ ಸೆನ್ಸಸ್' (ಹೆಜ್ಜೆ ಗುರುತಿನ ಗಣತಿ) ವಿಧಾನವನ್ನೇ ಕಡ್ಡಾಯವಾಗಿ ಅನುಸರಿಸಬೇಕೆಂದು ಹೇಳುತ್ತಿದ್ದರು. ಆ ವಿಧಾನ ಆಗಲೇ ಹಳತಾಗಿತ್ತು. ಆದರೂ ನಿಯಮಗಳ ನೆಪವೊಡ್ಡಿ ಪಗ್‌ಮಾರ್ಕ್ ವಿಧಾನವನ್ನೇ ಗಣತಿಗೆ ಬಳಸುತ್ತಿದ್ದರು. ಅಂತಹ ಅಧಿಕಾರಶಾಹಿಯ ಒಂದು ಭಾಗ ಜಿ.ವಿ.ರೆಡ್ಡಿ ಕೂಡ ಆಗಿದ್ದರು. ಆದರೆ ನಾನು ಆಗಲೇ ಪಗ್‌ಮಾರ್ಕ್ ವಿಧಾನವನ್ನು ವೈಜ್ಞಾನಿಕವಾಗಿ ಟೀಕಿಸುವುದಕ್ಕೆ ಪ್ರಸಿದ್ಧನಾಗಿದ್ದೆ! ಹೀಗಾಗಿ ಆ ಪದ್ಧತಿಯ ಬೆಂಬಲಿಗರು ನನ್ನನ್ನು 'ಧರ್ಮದ್ರೋಹಿ'ಯಂತೆ ನೋಡುತ್ತಿದ್ದರು.

ರೆಡ್ಡಿಯವರು ಆ ಸಮಯದಲ್ಲೇ ರಣಥಂಬೋರ್‌ನ ದಂತಕತೆಯಾಗಿದ್ದರು. ಬೇಟೆಗಾರರು, ಮರಗಳ್ಳರು, ಹಸು ಮೇಯಿಸುವವರ ಕೈಲಿ ಸಿಲುಕಿ ನಲುಗುತ್ತಿದ್ದ ರಣಥಂಬೋರ್ ಉದ್ಯಾನವನ್ನು ಅವರು ಯಶಸ್ವಿಯಾಗಿ ರಕ್ಷಿಸಿದ್ದರು. ಅವರು ರಣಥಂಬೋರ್‌ಗೆ ಹೋಗುವುದಕ್ಕೂ ಮುನ್ನ ಆ ರಾಷ್ಟ್ರೀಯ ಉದ್ಯಾನವೇ ಹೆಚ್ಚುಕಮ್ಮಿ ಅವಸಾನದ ಅಂಚಿಗೆ ಹೋಗಿತ್ತು. ರೆಡ್ಡಿಯವರು ಹೋದ ಮೇಲೆ ಅದಕ್ಕೆ ಮತ್ತೆ ಜೀವಕಳೆ ಮರಳಿತ್ತು. ಹೀಗಾಗಿ ಅವರು ಅಲ್ಲಿ ಹೀರೋ ಆಗಿದ್ದರು. ಅವರು ಕೂಡ ಹುಲಿ ಗಣತಿಗೆ ಪಗ್‌ಮಾರ್ಕ್ ವಿಧಾನವನ್ನು ಬೆಂಬಲಿಸಿದ್ದ ಅಧಿಕಾರಿಯೇ ಆಗಿದ್ದರೂ, ಅವರೊಬ್ಬ ನುರಿತ ಸಸ್ಯಶಾಸ್ತ್ರಜ್ಞನೂ ಆಗಿದ್ದರಿಂದ ವೈಜ್ಞಾನಿಕ ಸುಧಾರಣೆಗೆ ಯಾವತ್ತೂ ಮುಕ್ತ ಮನಸ್ಸು ಹೊಂದಿದ್ದರು. ಹೀಗಾಗಿ ನಾನು ಪ್ರಾಣಿಗಳ ಗಣತಿಗೆ ಎಲ್ಲೆಡೆ ವ್ಯಾಪಕವಾಗಿ ಬಳಕೆಗೆ ತರಲು ಪ್ರಯತ್ನಿಸುತ್ತಿದ್ದ ಕ್ಯಾಮೆರಾ ಟ್ರ್ಯಾಪ್ ವಿಧಾನದ ನಿಖರತೆ ಹಾಗೂ ಪ್ರಾಯೋಗಿಕ ಯಶಸ್ಸು ಅವರ ಗಮನ ಸೆಳೆದಿತ್ತು. ಕ್ರಮೇಣ ಅವರು ನನ್ನ ವಿಧಾನವನ್ನು ಮೆಚ್ಚಿಕೊಳ್ಳತೊಡಗಿದ್ದರು. ಈ ಕಾರಣಕ್ಕಾಗಿಯೇ ಅವರು ಮುಂದಿನ ವರ್ಷಗಳಲ್ಲಿ ಮೂರು ವರ್ಷಗಳ ಅಧ್ಯಯನ ರಜೆ ಪಡೆದು ನನ್ನ ಮಾರ್ಗದರ್ಶನದಲ್ಲಿ ನಾಗರಹೊಳೆಯಲ್ಲಿ ಪಿಎಚ್.ಡಿ ಮಾಡಲು ಬಂದಿದ್ದರು. ರಣಥಂಬೋರ್ ಉದ್ಯಾನವನ್ನು ನೋಡಿಕೊಳ್ಳುವ ಜವಾಬ್ದಾರಿಯ ಹೊರೆಯನ್ನು ಬದಿಗಿಟ್ಟು ಬನ್ನಿ ಎಂದು ನಾನೇ ಹೇಳಿದ್ದೆ. ಅದಕ್ಕವರು ಒಪ್ಪಿಕೊಂಡು ಬಂದಿದ್ದರು.

ರೆಡ್ಡಿಯವರನ್ನು ಬಹಳ ಹತ್ತಿರದಿಂದ ತಿಳಿಯಲು ನನಗೆ ಅವಕಾಶವಾಗಿದ್ದೇ ಆಗ. ನಿಜವಾಗಿಯೂ ಅವರೊಬ್ಬ ಪ್ರಾಮಾಣಿಕ ಮತ್ತು ವಿನಯವಂತ ವ್ಯಕ್ತಿ. ಅರಣ್ಯ ಇಲಾಖೆಯಲ್ಲಿ ಕನ್ಸರ್‌ವೇಟರ್ ರ‍್ಯಾಂಕ್‌ನ ಹಿರಿಯ ಅಧಿಕಾರಿಯಾಗಿದ್ದರೂ ಅವರು ನಾಗರಹೊಳೆಯಲ್ಲಿ ಫಾರೆಸ್ಟ್ ಗಾರ್ಡ್‌ಗಳ ಎರಡು ಕೋಣೆಯ ಗುಡಿಸಲಿನಂತಹ ಮನೆಯಲ್ಲಿ ಉಳಿದುಕೊಂಡಿದ್ದರು. ತಮ್ಮ ಕುಟುಂಬವನ್ನು ದೂರದ ಮೈಸೂರಿನಲ್ಲಿ ಬಿಟ್ಟು ಬಂದು ನಾಗರಹೊಳೆಯ ಕಾಡಿನಲ್ಲಿ ಪ್ರಾಣಿಗಳನ್ನು ಹುಡುಕುತ್ತಾ ಬುಡಕಟ್ಟು ಸಹಾಯಕರ ಜತೆಗೆ ಹೆಜ್ಜೆ ಹಾಕುತ್ತಿದ್ದರು. ತಮಗೆ ಬೇಕಾದ ದತ್ತಾಂಶಗಳನ್ನು ಸಂಗ್ರಹಿಸಲು ನುರಿತ ಜೀವಿಶಾಸ್ತ್ರಜ್ಞರು ಹಾಗೂ ಅವರ ಸಹಾಯಕರು ಕಾಡಿನಲ್ಲಿ ಅಲೆಯುವಂತೆ ರೆಡ್ಡಿ ಕೂಡ ತಾವೇ ಸ್ವತಃ ಕಾಡಿನಲ್ಲಿ ನಡೆದು ಹೋಗುತ್ತಿದ್ದರು. ಕೊನೆಗೆ ಪ್ರತಿಷ್ಠಿತ ಸ್ಪ್ರಿಂಜರ್ ಮಾನೋಗ್ರಾಫ್ ಸರಣಿಯಲ್ಲಿ ಅತ್ಯುತ್ತಮ ಸಂಶೋಧನಾ ಪ್ರಬಂಧವನ್ನು ಮಂಡಿಸಿ ಮಣಿಪಾಲ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದರು. ವನ್ಯಜೀವಿಗಳನ್ನು ಹಾಗೂ ಅವುಗಳ ಆವಾಸವನ್ನು ಸಂರಕ್ಷಣೆ ಮಾಡಬೇಕೆಂದರೆ ಅದು ಸಂಪೂರ್ಣವಾಗಿ ಮಾನವನ ಮೇಲಿನ ಪರಿಣಾಮಗಳ ಪ್ರಭಾವದಿಂದ ಹೊರಗಿರಬೇಕು. ಯಾವುದೇ ರೀತಿಯ ಸಂರಕ್ಷಣಾ ವಿಧಾನವನ್ನು ಅಳವಡಿಸಿಕೊಂಡರೂ ಅದರಿಂದ ಮನುಷ್ಯನ ಮೇಲಾಗುವ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳಬಾರದು ಎಂದು ಅವರ ಸಂಶೋಧನೆ ಸ್ಪಷ್ಟವಾಗಿ ಹೇಳುತ್ತಿತ್ತು.

ಸಾಮಾನ್ಯವಾಗಿ ನಮ್ಮ ದೇಶದ ಅಧಿಕಾರಶಾಹಿ ವ್ಯವಸ್ಥೆಯಲ್ಲಿ ಒಳ್ಳೆಯ ಅಧಿಕಾರಿಗಳು ಯಾವುದೋ ನಿಷ್ಪ್ರಯೋಜಕ ಹುದ್ದೆಗಳಲ್ಲಿ ಕೊಳೆಯುತ್ತಿರುತ್ತಾರೆ. ಹಾಗೆಯೇ ಪಿಎಚ್.ಡಿ ಮುಗಿಸಿದ ನಂತರ ರೆಡ್ಡಿ ಕೂಡ ವನ್ಯಜೀವಿ ಸಂರಕ್ಷಣೆ ಅಥವಾ ವಿಜ್ಞಾನ ಆಧಾರಿತ ಅರಣ್ಯ ಸಂರಕ್ಷಣೆಗೆ ಸಂಬಂಧವೇ ಇಲ್ಲದ ಹುದ್ದೆಗಳಲ್ಲಿ ಕೆಲಸ ಮಾಡಬೇಕಾಯಿತು. ಆ ಸಮಯದಲ್ಲಿ ಇಂಡೋನೇಷ್ಯಾದಲ್ಲಿ ಬಹಳ ದೊಡ್ಡ ಪ್ರಮಾಣದ ಅರಣ್ಯ ಸಂರಕ್ಷಣೆ ಯೋಜನೆಯೊಂದು ಜಾರಿಯಾಗುವುದರಲ್ಲಿತ್ತು. ಅಲ್ಲಿ ನನ್ನ ಸ್ನೇಹಿತ ಹಾಗೂ ವನ್ಯಜೀವಿ ಸಂರಕ್ಷಣೆಯಲ್ಲಿ ಜಾಗತಿಕ ಮಟ್ಟದಲ್ಲಿ ಬಹಳ ದೊಡ್ಡ ಹೆಸರು ಮಾಡಿದ್ದ ಮೈಕ್ ಗ್ರಿಫಿತ್ ಅವರಿಗೆ ನಾನು ಜಿ.ವಿ.ರೆಡ್ಡಿಯವರ ಹೆಸರು ಸೂಚಿಸಿದ್ದೆ. ಅಂತಾರಾಷ್ಟ್ರೀಯ ಹಣಕಾಸಿನ ನೆರವು ಪಡೆದು ಸುಮಾ



ತ್ರದಲ್ಲಿ ಜಾರಿಗೊಳ್ಳುತ್ತಿದ್ದ ಯೋಜನೆ ಅದಾಗಿತ್ತು. ಅಲ್ಲಿ ರೆಡ್ಡಿಯವರು 15,000 ಚದರ ಕಿಲೋಮೀಟರ್ ವಿಸ್ತೀರ್ಣದ ಗುನುಂಗ್ ಲ್ಯೂಸರ್ ನ್ಯಾಷನಲ್ ಪಾರ್ಕ್ ಅನ್ನು ಬೇಟೆಗಾರರು ಹಾಗೂ ಅರಣ್ಯ ಕಳ್ಳರಿಂದ ರಕ್ಷಿಸಬೇಕಿತ್ತು. ಈ ಕಳ್ಳರಿಂದಾಗಿ ಅಲ್ಲಿನ ರೈನೋಸಾರ್, ಹುಲಿ, ಆನೆ ಹಾಗೂ ಒರಾಂಗುಟನ್‌ಗಳಿಗೆ ಅಪಾಯ ಬಂದೊದಗಿತ್ತು. ರೆಡ್ಡಿ ಆ ಸವಾಲನ್ನು ತೆಗೆದುಕೊಂಡರು. ಇಂಡೋನೇಷ್ಯಾಕ್ಕೆ ಹೋಗಿ ಬದ್ಧತೆಯಿಂದ ಕೆಲಸ ಮಾಡಿ, ವನ್ಯಜೀವಿ ಸಂರಕ್ಷಣೆಯಲ್ಲಿ ತಮಗಿದ್ದ ಎಲ್ಲ ಅನುಭವಗಳನ್ನೂ ಬಳಸಿ ರಾಷ್ಟ್ರೀಯ ಉದ್ಯಾನವನ್ನು ಮತ್ತೆ ವನ್ಯಜೀವಿ ಸಂಪತ್ತಿನಿಂದ ನಳನಳಿಸುವಂತೆ ಮಾಡಿದರು. ಅಲ್ಲಿ ಅವರು ಸನ್ಯಾಸಿಯಂತೆ ಬದುಕುತ್ತಿದ್ದ ರೀತಿ, ಅವರ ಮಿತವ್ಯಯ, ತತ್ವಜ್ಞಾನಿಯಂತೆ ನಡೆದುಕೊಳ್ಳುವ ಅವರ ಮನಸ್ಥಿತಿಯನ್ನು ನೋಡಿದ ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ರೆಡ್ಡಿಯವರ ಸರಳತೆಗೆ ಮಾರುಹೋಗಿದ್ದರು. ಅವರೆಲ್ಲರೂ ಇವರನ್ನು 'ಪಾ ರೆಡ್ಡಿ' ಎಂದು ಕರೆಯುತ್ತಿದ್ದರು. ಇಂಡೋನೇಷ್ಯಾದ ಭಾಷೆಯಲ್ಲಿ ಅದು ಕೂಡು ಕುಟುಂಬದ ಹಿರಿಯ ವ್ಯಕ್ತಿಯನ್ನು ಗೌರವದಿಂದ ಕರೆಯುವ ರೀತಿಯಾಗಿತ್ತು.

ಅಲ್ಲಿಂದ ಭಾರತಕ್ಕೆ ಮರಳಿದ ಬಳಿಕ ಇಲ್ಲಿನ 'ವ್ಯವಸ್ಥೆ' ಮತ್ತೆ ರೆಡ್ಡಿಯವರನ್ನು ಕಡೆಗಣಿಸಿತು. ವನ್ಯಜೀವಿ ಸಂರಕ್ಷಣೆಯಲ್ಲಿ ಅವರಿಗಿದ್ದ ವೈಜ್ಞಾನಿಕ ಹಾಗೂ ಆಡಳಿತಾತ್ಮಕ ಕೌಶಲಗಳನ್ನು ಸರಕಾರ ಗುರುತಿಸಲಿಲ್ಲ. ದೇಶದಲ್ಲಿ ಸಾಕಷ್ಟು ಸದ್ದು ಮಾಡುತ್ತಿದ್ದ ಮಹತ್ವಾಕಾಂಕ್ಷಿ ಹುಲಿ ಸಂರಕ್ಷಣಾ ಯೋಜನೆಗೆ ಅವರನ್ನು ಮುಖ್ಯಸ್ಥರನ್ನಾಗಿ ನೇಮಿಸಬಹುದಿತ್ತು. ಆ ಹುದ್ದೆಗೆ ರೆಡ್ಡಿ ಯೋಗ್ಯರಾಗಿದ್ದರು. ಆದರೆ ಅಲ್ಲೂ ಕಡೆಗಣಿಸಿದರು. ಹೀಗಾಗಿ ಸರಕಾರೇತರ ವ್ಯವಸ್ಥೆಯಲ್ಲಿ ವನ್ಯಜೀವಿ ಸಂರಕ್ಷಣೆಗೆ ಕೆಲಸ ಮಾಡುವುದಕ್ಕೆ ಅವರನ್ನು ಕರೆತರಲು ನಾನು ಸಾಕಷ್ಟು ಪ್ರಯತ್ನ ಮಾಡಿದೆ. ನಾನು ಮೂರು ದಶಕಗಳ ಕಾಲ ಮುಖ್ಯಸ್ಥನಾಗಿ ಕೆಲಸ ಮಾಡಿದ್ದ ಡಬ್ಲ್ಯುಸಿಎಸ್ ಇಂಡಿಯಾಕ್ಕೆ ಅವರನ್ನು ಉತ್ತರಾಧಿಕಾರಿ ಮಾಡಬೇಕೆಂದು ಬಯಸಿದ್ದೆ. ಆದರೆ ಆರಂಭಿಕ ದಿನಗಳಲ್ಲಿ ಅವರಿಗೆ ಮಾರ್ಗದರ್ಶಕರೂ, ಗುರುಗಳೂ ಆಗಿದ್ದ ವಲ್ಮೀಕ್ ಥಾಪರ್ ಹಾಗೂ ರಣಥಂಬೋರ್‌ನ ಇನ್ನಿತರ ಹುಲಿ ವೀಕ್ಷಕರ ಅಣತಿಯಂತೆ ಆ ಪ್ರಯತ್ನವನ್ನೂ ಕೈಬಿಡಬೇಕಾಯಿತು. ನಂತರ ಅವರೇ ಕೊನೆಗೂ 'ವ್ಯವಸ್ಥೆ'ಗೆ ಮನವರಿಕೆ ಮಾಡಿಕೊಟ್ಟು ರೆಡ್ಡಿಯವರನ್ನು ರಾಜಸ್ಥಾನದ ಚೀಫ್ ವೈಲ್ಡ್‌ಲೈಫ್ ವಾರ್ಡನ್ ಹುದ್ದೆಗೆ, ನಂತರ ರಾಜಸ್ಥಾನದ ಅರಣ್ಯ ಇಲಾಖೆಯ ಮುಖ್ಯಸ್ಥ ಹುದ್ದೆಗೆ ಏರಿಸುವಲ್ಲಿ ಯಶಸ್ವಿಯಾದರು. ಎರಡೂ ಹುದ್ದೆಗಳಲ್ಲೂ ರೆಡ್ಡಿ ಅಪರಿಮಿತ ಬದ್ಧತೆ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿ ಕೆಲ ವರ್ಷಗಳ ಹಿಂದೆ ನಿವೃತ್ತರಾಗಿದ್ದರು.

ರೆಡ್ಡಿಯವರ ಅದ್ಭುತವಾದ ವೃತ್ತಿಜೀವನದ ಉದ್ದಕ್ಕೂ, ಅವರ ಎಲ್ಲಾ ಏಳುಬೀಳುಗಳಲ್ಲೂ, ತುಂಬಾ ಗಟ್ಟಿಗಾತಿಯಾದ ಪತ್ನಿ ಶೋಭಾ ಬೆಂಬಲವಾಗಿ ನಿಂತಿದ್ದರು. ಅವರಿಂದಾಗಿಯೇ ರೆಡ್ಡಿ ಅರಣ್ಯ ಸಂರಕ್ಷಣೆಯಲ್ಲಿ ತಮ್ಮನ್ನು ಆ ಮಟ್ಟಕ್ಕೆ ತೊಡಗಿಸಿಕೊಳ್ಳಲು ಸಾಧ್ಯವಾಯಿತು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ರೆಡ್ಡಿಯವರು ನಿವೃತ್ತಿಯಾದ ಬಳಿಕ ಒಂದು ವಾರ ಅವರ ಜೊತೆಗೆ ರಾಜಸ್ಥಾನದಲ್ಲಿ ಉಳಿದುಕೊಂಡು ಅಲ್ಲಿನ ವನ್ಯಜೀವಿ ಸಂಪತ್ತನ್ನು ವೀಕ್ಷಿಸುವ ಅವಕಾಶ ನನಗೆ ಸಿಕ್ಕಿತ್ತು. ಆಗ ಅವರು ಅಲ್ಲಿನ ಅರಣ್ಯ ಇಲಾಖೆಯಲ್ಲಿ ಎಷ್ಟು ಜನಪ್ರಿಯರಾಗಿದ್ದರು ಎಂಬುದನ್ನು ಖುದ್ದಾಗಿ ನೋಡಿದ್ದೆ. ಎಲ್ಲಿಗೇ ಹೋದರೂ ಫಾರೆಸ್ಟ್ ವಾಚರ್‌ಗಳು, ಗಾರ್ಡ್‌ಗಳು ಹಾಗೂ ರೇಂಜರ್‌ಗಳು ಅಕ್ಷರಶಃ ರೆಡ್ಡಿಯವರ ಕಾಲಿಗೆ ಬೀಳುತ್ತಿದ್ದರು. ಅವರ ಜತೆಗೆ ಕೆಲಸ ಮಾಡುವಾಗ ರೆಡ್ಡಿಯವರು ತೋರಿದ್ದ ಉದಾರ ಮನೋಭಾವ ಹಾಗೂ ಬೆಂಬಲದ ಒಂದೆರಡಾದರೂ ಘಟನೆಗಳನ್ನು ಮೆಲುಕು ಹಾಕುತ್ತಿದ್ದರು. ಹಾಗೆ ಕಾಲಿಗೆ ಬಿದ್ದು ಹೊಗಳುವವರಲ್ಲಿ ಯಾವುದೋ ತಪ್ಪಿಗೆ ರೆಡ್ಡಿಯವರಿಂದ ಕಠಿಣ ಶಿಕ್ಷೆಗೊಳಗಾಗಿದ್ದ ಅಧಿಕಾರಿಗಳು ಅಥವಾ ಸಿಬ್ಬಂದಿಯೂ ಇರುತ್ತಿದ್ದರು! ಅವರಿಗೆಲ್ಲ ರೆಡ್ಡಿಯವರು ನನ್ನನ್ನು ತೋರಿಸಿ 'ಇವರು ನನ್ನ ಗುರು' ಎಂದು ಪರಿಚಯಿಸುತ್ತಿದ್ದುದು ನನಗೊಂಥರಾ ಹೆಮ್ಮೆ ಅನ್ನಿಸುತ್ತಿತ್ತು. ಇಷ್ಟಕ್ಕೂ ನಾನೇನೂ ಅವರಿಗೆ ಗುರುವಾಗಿರಲಿಲ್ಲ. ವನ್ಯಜೀವಿ ಸಂರಕ್ಷಣೆಯ ವಿಜ್ಞಾನದಲ್ಲಿ ಕೆಲವು ಹೊಸ ತಂತ್ರಗಳನ್ನಷ್ಟೇ ನಾನು ಕಲಿಸಿಕೊಟ್ಟಿದ್ದೆ. ಅದನ್ನೇ ಅವರು ಹೋದಲ್ಲಿ ಬಂದಲ್ಲಿ ಹೇಳಿ ನನ್ನನ್ನು ಮೆರೆಸುತ್ತಿದ್ದರು.

ಅಂತಹ ಒಬ್ಬ ನಿಸ್ಪೃಹ ಹೃದಯದ ಪ್ರಾಮಾಣಿಕ ಹಾಗೂ ದಕ್ಷ ಅರಣ್ಯ ಸಂರಕ್ಷಕ ಸ್ನೇಹಿತನನ್ನು ಮೊನ್ನೆ ಜುಲೈ 14ರಂದು ನಾವು ಕಳೆದುಕೊಂಡೆವು. ವನ್ಯಜೀವಿ ಸಂರಕ್ಷಣೆಯಲ್ಲಿ ಅವರು ತೋರಿದ್ದ ನೈತಿಕ ಬದ್ಧತೆ, ಸಮರ್ಪಣಾ ಮನೋಭಾವ, ಕರ್ತವ್ಯಪರತೆ ಹಾಗೂ ಪರಿಶುದ್ಧವಾದ ವಿನಯವಂತಿಕೆ ಸದಾ ನನ್ನ ನೆನಪಿನಲ್ಲಿ ಹಸಿರಾಗಿ ಉಳಿಯಲಿದೆ.

(ಲೇಖಕರು: ಹವ್ಯಾಸಿ ಬರಹಗಾರರು ಹಾಗೂ ವೈಲ್ಡ್‌ಲೈಫ್ ಸೈನ್ಸ್ ಎಷ್ಯಾದ ವಿಜ್ಞಾನಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹಣ ತೆರಿಗೆದಾರರದು!

ಎರಡು ವಿಭಿನ್ನ ಪ್ರಕರಣಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದೇನೆ. ಒಂದು ತುಂಬಾ ಹಳೆಯದಾದರೂ ಈಗಲೂ ಪ್ರಸ್ತುತವೆನಿಸುವ ವಿಷಯ; ಯಾವುದೋ ಒಂದು ರಾಜ್ಯದ ಸಾರಿಗೆ ಸಂಸ್ಥೆಯ ನಿರ್ವಾಹಕರೊಬ್ಬರು 13 ರುಪಾಯಿಯ ಲೆಕ್ಕಾಚಾರ ತಪ್ಪಿಸಿದ್ದಾರೆಂದು ಅವರ ವಿರುದ್ಧ ಶಿಸ್ತುಕ್ರಮ ಜರುಗಿಸಿ ಉದ್ಯೋಗದಿಂದ ವಜಾ ಮಾಡಲಾಗಿತ್ತು. ಅವರು ನ್ಯಾಯಾಲಯದಲ್ಲಿ ದಾವೆ ಹೂಡಿದಾಗ, ಉಚ್ಚ ನ್ಯಾಯಾಲಯ ಇಷ್ಟು ಸಣ್ಣ ಮೊತ್ತಕ್ಕೆ ಉದ್ಯೋಗದಿಂದ ವಜಾ ಮಾಡುವಂತಹ ದೊಡ್ಡ ಶಿಕ್ಷೆ ಅಗತ್ಯವಿರಲಿಲ್ಲ ಬದಲಿಗೆ ಒಂದಿಷ್ಟು ದಂಡ, ವೇತನ ಹಿಂಬಡ್ತಿ ಮುಂತಾದ ಯಾವುದಾದರೂ ಶಿಕ್ಷೆ ನೀಡುವಂತೆ ಸೂಚಿಸಿತ್ತು. ಸಾರಿಗೆ ಸಂಸ್ಥೆ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿ, ವಿಚಾರಣೆ ನಡೆದು, ಇಲ್ಲಿ ಮೊತ್ತ ಹೆಚ್ಚು - ಕಡಿಮೆ ವಿಷಯ ಮುಖ್ಯವಲ್ಲ, ಸಾರ್ವಜನಿಕರ ಹಣವನ್ನು ದುರುಪಯೋಗ ಪಡಿಸಿದ ಲೋಪ ಮಾತ್ರ ಮುಖ್ಯವಾಗುತ್ತದೆ ಎಂದು ರಾಜ್ಯ ಉಚ್ಚನ್ಯಾಯಾಲಯದ ತೀರ್ಪನ್ನು ತಳ್ಳಿ ಹಾಕಿತು. ಎರಡನೇಯದು ಇತ್ತೀಚಿನ ವಾಲ್ಮೀಕಿ ನಿಗಮದಲ್ಲಿ ನಡೆದಿತ್ತೆಂದು ಹೇಳಲಾಗುವ ಅವ್ಯವಹಾರದ ಮೊತ್ತ 187 ಕೋಟಿ ರು. ಎಂದು ವಿಪಕ್ಷಗಳು ಆರೋಪಿಸುತ್ತಿವೆ ಹಾಗೂ ಮಾಧ್ಯಮಗಳೂ ಈ ಬಗ್ಗೆ ಸಾಕಷ್ಟು ಪ್ರಚಾರ ನೀಡುತ್ತಿವೆ. ಈ ವಿಷಯಕ್ಕೆ ಸಂಬಂಧಿಸಿ ಮಾನ್ಯ ಮುಖ್ಯಮಂತ್ರಿಯವರು ವಿಧಾನಸಭೆಯಲ್ಲಿ ಮಾತನಾಡುತ್ತಾ ಪ್ರಸ್ತಾವಿತ ವಾಲ್ಮೀಕಿ ನಿಗಮದಲ್ಲಿ ದುರುಪಯೋಗ ಆಗಿದೆಯೆಂದು ಹೇಳಲಾದ ಮೊತ್ತ ವಿಪಕ್ಷಗಳು ಆರೋಪಿಸಿರುವಂತೆ 187 ಕೋಟಿ ರು. ಯಲ್ಲ, ಕೇವಲ 89 ಕೋಟಿ ರು. ಎಂದು ಹೇಳಿದ್ದಾರೆಂದು ವರದಿಯಾಗಿದೆ. ಇನ್ನೊಂದೆಡೆ ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ಬೇರೆ ಬೇರೆ ನಿಗಮದ ಹಣ ದುರುಪಯೋಗದ ಪ್ರಕರಣಗಳು ನಡೆದಿದ್ದು ಅದರ ಮೊತ್ತ ಈಗ ಹೇಳಲಾಗುವ ಮೊತ್ತಕ್ಕಿಂತ ಹೆಚ್ಚು ಎನ್ನುತ್ತಾರೆ. ಒಟ್ಟಿನಲ್ಲಿ ನೀವು ಜಾಸ್ತಿ ತಿಂದಿದ್ದೀರಿ, ನಾವು ಅಷ್ಟು ತಿಂದಿಲ್ಲ, ಇಷ್ಟೇ ತಿಂದಿದ್ದು ಇತ್ಯಾದಿ: ಹಾಗಾದರೆ ಜನಸಾಮಾನ್ಯರು ತೆರಿಗೆ ಕಟ್ಟುವುದು ಇವರುಗಳು ಸ್ಪರ್ಧೆಗೆ ಬಿದ್ದಂತೆ ಹಣವನ್ನು ಪೋಲು ಮಾಡುವುದಕ್ಕೆ ಎಂದರ್ಥವೇ? ಇದಕ್ಕೂ ಮಿಗಿಲಾಗಿ, ಅದೆಷ್ಟೋ ಪ್ರಕರಣಗಳಲ್ಲಿ, ಅಂತಿಮವಾಗಿ ಗುತ್ತಿಗೆ ಇದನ್ನು ನೌಕರರು ಮಾಡಿದ್ದು ಎಂದು ಹೇಳಿ, ಯಾರನ್ನೋ ಬಲಿಪಶು ಮಾಡಿ ಕೈ ತೊಳೆದುಕೊಳ್ಳುತ್ತಾರೆ! ಹಾಗಾದರೆ ಸಾರ್ವಜನಿಕರ ಹಣದ ದುರುಪಯೋಗಕ್ಕೆ ಉತ್ತರದಾಯಿತ್ವ ಯಾರಿಗೂ ಇಲ್ಲವೇ?

-ಮೋಹನದಾಸ ಕಿಣಿ ಕಾಪು

ಭವನಕ್ಕಿಂತ ದೊಡ್ಡದ್ದೇ?

ಬೆಂಗಳೂರಿನ ಜಿಟಿ ಮಾಲ್‌ನಲ್ಲಿ ಸಿನಿಮಾ ನೋಡಲು ಪಂಚೆ ತೊಟ್ಟು ಬಂದ ರೈತ ಫಕೀರಪ್ಪನನ್ನು ಒಳಗೆ ಪ್ರವೇಶಿಸಲು ಬಿಡಲಿಲ್ಲ ಎಂಬ ಸಂಗತಿ ಪ್ರತಿಯೊಬ್ಬರು ಆತ್ಮವಿಮರ್ಶೆ ಮಾಡಿಕೊಳ್ಳುವಂತಹದ್ದು. ಇಂತಹ ಪ್ರಕರಣಗಳು ಬೆಳಕಿಗೆ ಬರುವುದು ಬಹಳಷ್ಟು ವಿರಳ. ಪಂಚೆ ನಮ್ಮ ಸಂಸ್ಕೃತಿಯಾಗಿದ್ದು, ಅದನ್ನು ಪಾಲಿಸುವುದರಲ್ಲಿ ತಪ್ಪೇನಿದೆ ಎಂಬುದೇ ಅರ್ಥವಾಗುತ್ತಿಲ್ಲ. ವಸ್ತ್ರ ಸಂಹಿತೆ ಎಂಬುದು ಸಾರ್ವಜನಿಕ ಸ್ಥಳಗಳಲ್ಲಿ ಹೇರಲು ಅವಕಾಶವಿಲ್ಲ. ಸಂಸತ್‌ನಲ್ಲಿ ಪಂಚೆ ತೊಟ್ಟು ಪ್ರಮಾಣ ವಚನಮಾಡಲು ಅವಕಾಶವಿದೆ. ಕೆಲವೊಂದು ದೇವಸ್ಥಾನದಲ್ಲಿ ಪಂಚೆ ತೊಟ್ಟು ಬರದಿದ್ದರೆ ಭಕ್ತರಿಗೆ ಒಳಗಡೆ ಪ್ರವೇಶವಿರುವುದಿಲ್ಲ. ಹಾಗಾದರೆ ಮಾಲ್‌ಗಳು ಸಂವಿಧಾನದ ದೇವಾಲಯವಾದ ಭಾರತದ ಸಂಸತ್ ಭವನ ಹಾಗೂ ದೇವಸ್ಥಾನಕ್ಕಿಂತ ದೊಡ್ಡದ್ದೇ? ಇಂದು ಬೆಂಗಳೂರಿನಲ್ಲಿರುವ ಶೇಕಡಾ 80 ಯುವ ಉದ್ಯೋಗಿಗಳು ರೈತರ ಮಕ್ಕಳೇ ಎಂಬುದನ್ನು ಯಾರು ಮರೆಯಬಾರದು. ಕೆಲವು ದಿನಗಳ ಹಿಂದೆ ನಮ್ಮ ಬೆಂಗಳೂರು ಮೆಟ್ರೋ ಒಳಗೆ ರೈತನೊಬ್ಬನನ್ನು ಒಳಗೆ ಪ್ರವೇಶಿಸಲು ಬಿಟ್ಟಿರಲಿಲ್ಲ. ಜನರಿಗೆ ಪಂಚೆಯ ಬಗ್ಗೆ ಅಸಡ್ಡೆಯೋ ಅಥವಾ ರೈತ ಎಂಬ ತಾತ್ಸಾರವೋ ತಿಳಿಯದು. ವ್ಯಕ್ತಿ ಹಾಕಿಕೊಂಡ ಬಟ್ಟೆ ಮೇಲೆ ಆತನ ವ್ಯಕ್ತಿತ್ವ ನಿರ್ಧರಿಸುವ ಮನಸ್ಥಿತಿ ಖಂಡನೀಯ. ಮನುಷ್ಯ- ಮನುಷ್ಯನಿಗೆ ಬೆಲೆ ಕೊಡದ ಮೇಲೆ ಇನ್ನೂ ಶೋಕಿಗಾಗಿ ಇರುವ ಇಂತಹ ಮಾಲ್‌ಗಳನ್ನು ಪ್ರವೇಶಿಸುವ ಮೊದಲು ನಾವೆಲ್ಲ ಯೋಚಿಸಬೇಕು. ನಮ್ಮ ಹೆತ್ತವರು ಪಂಚೆ ಹಾಕಿದ್ದಕ್ಕೆ ನಾವು ಇಂದು ಸೂಟು-ಬೂಟು ಹಾಕಲು ಸಾಧ್ಯವಾಗಿದೆ ಎಂಬ ಸತ್ಯವನ್ನು ಇವರಿಗ್ಯಾರು ತಿಳಿಸುವವರು ಹೇಳಿ?

-ಸುರೇಂದ್ರ ಪೈ ಭಟ್ಕಳ

ಅನ್ನದಾತನಿಗೆ ಅನ್ಯಾಯ

ತನ್ನ ಬೆವರಿಳಿಸಿ ಜನರಿಗೆ ಅನ್ನ ನೀಡುವ ನಾಡಿನ ಅನ್ನದಾತನಿಗೆ ಇಂದಿನ ಸರಕಾರವಂತೂ ಪ್ರತಿಯಾಗಿ ಅನ್ಯಾಯವನ್ನು ಮಾಡುತ್ತಾ ಸಾಗುತ್ತಿದೆ. ಐದು ಗ್ಯಾರಂಟಿಗಳಿಂದ ಹಣಕಾಸು ಇಲಾಖೆ ಈಗ ನರಳುತ್ತಿದೆ. ಹೇಗಾದರೂ ಮಾಡಿ ಹಣಹೊಂದಿಸುವ ಮುಖ್ಯಮಂತ್ರಿಗಳ ಸೂಚನೆಯ ಮೇರೆಗೆ ಎಲ್ಲ ಮೂಲಗಳಿಂದ ಈ ಯೋಜನೆಗಳಿಗೆ ಹಣ ಹೊಂದಿಸುವಲ್ಲಿ ನಿರತವಾಗಿರುವ ಆರ್ಥಿಕ ಇಲಾಖೆ ಡಿಸೇಲ್, ಪೆಟ್ರೋಲ್ ಮೇಲಿನ ತೆರಿಗೆಯನ್ನು ಈಗಾಗಲೇ ಹೆಚ್ಚಿಸಿದೆ. ಮತ್ತೆ ಅಬಕಾರಿ ಸುಂಕವನ್ನು ಏರಿಕೆ ಮಾಡುವ ಮೂಲಕ ಸಂಪನ್ಮೂಲ ಸಂಗ್ರಹಣೆಗೆ ಮುಂದಾಗಿದೆ. ಅದೂ ಸಾಲದೆಂಬಂತೆ ಈಗ ಸರಕಾರದ ಕಣ್ಣು ನಾಡಿನ ರೈತರ ಮೇಲೆ ಬಿದ್ದಿದೆ. ಹನಿ ನೀರಾವರಿ ಅಳವಡಿಸಿಕೊಂಡಿರುವ ರೈತರಿಗೆ ಶೇ. 90ರಷ್ಟು ಸಹಾಯಧನ ನೀಡುವುದಾಗಿ ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಿತ್ತು, ಆದರೆ ಇದೀಗ ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆ ಸಹಾಯಧನವನ್ನು ಹೆಚ್ಚಿಸುವ ಬದಲು ಶೇ. 75ರಿಂದ ಶೇ. 55ಕ್ಕೆ ಇಳಿಸಿ ರೈತರಿಗೆ ಅನ್ಯಾಯ ಮಾಡುತ್ತಿದೆ. ತಮ್ಮ ಸರಕಾರದ ಯೋಜನೆಗಳ ಖರ್ಚುವೆಚ್ಚವನ್ನು ತಾವೇ ಭರಿಸಬೇಕೇ ಹೊರತು, ಈಗಾಗಲೇ ಮಳೆಯ ಅಭಾವ, ಬರಗಾಲದಂತಹ ಹತ್ತು ಹಲವಾರು ಕಷ್ಟದ ಕಡಲಿನಲ್ಲಿ ಮುಳುಗಿರುವ ರೈತರಿಗೆ ಅನ್ಯಾಯವೆಸಗುವುದು ಯಾವುರ ನ್ಯಾಯ?

- ಮಲ್ಲಮ್ಮ ವಿಜಯಪುರ

ತಪ್ಪು ಮಾಡದವ್ರು ಯಾರವ್ರೆ?

To err is human. ತಪ್ಪು ಮಾಡುವುದು ಮಾನವ ಸಹಜ ಗುಣಗಳಲ್ಲೊಂದು. ಇದನ್ನೆಲ್ಲ ಕೇಳುತ್ತ ಬಂದಿದ್ದ ನಮಗೆ ಸದ್ಯ ಈ ಮಾತು ಎಷ್ಟು ಸರಿ ಎಂಬುದರ ಅರಿವಾದಂತಿದೆ.

ವಾಲ್ಮೀಕಿ ನಿಗಮ ಹಗರಣ, ಮುಡಾ ಹಗರಣಗಳ ಬಗ್ಗೆ ವಿಪಕ್ಷದಿಂದ ಬಿರುಸಿನ ಚರ್ಚೆಯಾಗುತ್ತಿರುವಾಗಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿ ವಿರುದ್ಧವೇ ಮುಗಿಬಿದ್ದಿದ್ದಾರೆ. ವಾಲ್ಮೀಕಿ ಹಗರಣದ ಮಾತನ್ನಾಡುವ. ಬಿಜೆಪಿ ಅಧಿಕಾರ ಅವಧಿಯಲ್ಲಿ ನಡೆದ 21 ಪ್ರಕರಣಗಳ ಭ್ರಷ್ಟಾಚಾರದ ವರದಿಯನ್ನು ಬಹಿರಂಗ ಪಡಿಸಿ, ಬಿಜೆಪಿ ನಾಯಕರ ಬಾಯಿ ಮುಚ್ಚಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ. ವಾಲ್ಮೀಕಿ ಹಗರಣದ ಪ್ರಮುಖ ಆರೋಪಿ ಪದ್ಮನಾಭ, 2018-18 ನೇ ಸಾಲಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕರಾಗಿದ್ದಾಗಲೇ ಕೋಟಿ ಕೋಟಿ ರು.ಅವ್ಯವಹಾರ ನಡೆಸಿದ ಆರೋಪದ ಮೇಲೆ ಅಮಾನತ್ತಾಗಿದ್ದರೂ ಮತ್ತೇಕೆ ಅವರಿಗೆ ಉನ್ನತ ಹುದ್ದೆ ನೀಡಲಾಗಿತ್ತು ಎಂದು ಬಿಜೆಪಿಗರನ್ನೇ ಪ್ರಶ್ನಿಸಿದ್ದಾರೆ.

ಪರಿಶಿಷ್ಟ ಜಾತಿ, ಪಂಗಡ ಹಾಗೂ ದಮನಿತ ಸಮುದಾಯದವರಿಗೆ ಒದಗಿಸಿದ ಪ್ರತಿ ಪೈಸೆಯನ್ನೂ 'ಖರ್ಚು' ಮಾಡುತ್ತೇವೆ ಅಂದಿದ್ದಾರೆ ಮುಖ್ಯಮಂತ್ರಿಗಳು. ಈಗಲೂ ಆಗಿರುವುದೇ ಅದೇ. ಹಣವೇನೋ ಖರ್ಚಾಗಿದೆ ಆದರೆ ಯಾರ ಕಿಸೆ ಸೇರಿದೆ ಎಂಬುದೇ ಅವರ ಸದ್ಯದ ಗೊಂದಲಕ್ಕೆ ಕಾರಣ.

- ಶಂಕರನಾರಾಯಣ ಭಟ್ ಹೊನ್ನಾವರ

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

● **ನಾಗೇಶ ಕುಮಾರ ಬಿ., ಬೆಂಗಳೂರು**
ಭಟ್ರೇ, ಸಿದ್ದರಾಮಯ್ಯನವರು ಯಾರಿಗಾದರೂ ಹೆದರುತ್ತಾರಾ?
- ನಾನು ಕರ್ನಾಟಕಕ್ಕೇ ಬಂದ್ರೆ ನಡುಕ ಅಂತ ಕುಮಾರಸ್ವಾಮಿ ಹೇಳಿದ್ದು ಕೇಳಿಯೂ ಈ ಪ್ರಶ್ನೆನಾ?!

● **ಆರತಿ ಸೀತಾರಾಮ, ಮೈಸೂರು**
ಭಟ್ರೇ, ನಿಮ್ಮ ಹಾರ್ಟ್ ಮೊದಲಿನ ಸ್ಥಿತಿಗೆ ಬಂತಾ?
- ಮೊದಲಿನ ಸ್ಥಿತಿಗೆ ಬರಲು ಅದೇನು ಇಲೆಸ್ಟಿಕ್ಕಾ?!

● **ರವಿ ಮೇಗರಹಳ್ಳಿ, ಶಿವಮೊಗ್ಗ**
ಭಟ್ರೇ, ಪ್ರದೀಪ್ ಈಶ್ವರ್ ಕೈಗೆ ಕಬ್ಬಿಣದ ರಾಡ್ ಕೊಟ್ರೆ ಹೇಗೆ?
- ಮಾತಿನಲ್ಲಿ ಮೊಟಕುತ್ತಿದ್ದವರು ಇನ್ನು ಮುಂದೆ ರಾಡ್‌ನಲ್ಲಿ ಮೊಟಕಬಹುದು!

● **ಚೈತ್ರಾ, (ಇಮೇಲ್ ಮೂಲಕ)**
ಭಟ್ರೇ, ವಿವಾಹಿತ ಗಂಡಸರು ಹೆಚ್ಚು ಕಾಲ ಬದುಕುತ್ತಾರಂತೆ?
- ಹಾಗೇನಿಲ್ಲ, ಅವರಿಗೆ ಹೆಚ್ಚು ಕಾಲ ಬದುಕಿದಂತೆ ಭಾಸವಾಗುತ್ತದೆ!

● **ರಾಮೇಗೌಡ ಬಾಣಸವಾಡಿ, ಬೆಂಗಳೂರು**
ಭಟ್ರೇ, ನಿಜವಾದ ಶ್ರೀಮಂತ ಯಾರು?
- ನಿನ್ನೆ ರಾತ್ರಿ ಗಡದ್ದಾಗಿ ನಿದ್ದೆ ಮಾಡಿದವ!

● **ಕೆ.ವಿ.ಮೂರ್ತಿ, ಮಂಡ್ಯ**
ಭಟ್ರೇ, ಮನುಷ್ಯನಿಗೆ ವಯಸ್ಸಾದರೂ ಬಾರದಿರುವುದು ಏನು?
- ಬುದ್ಧಿ !

● **ನಾಗೇಂದ್ರ ಕೆ.ರಾವ್, ಶಿವಮೊಗ್ಗ**
ಭಟ್ರೇ, ಬ್ರಾಹ್ಮಣರನ್ನು ಸಹನಶೀಲರು ಅಂತಾರಲ್ಲ?
- ಸಹನಶೀಲರು ಅಂದ್ರೆ, ಪರವಾಗಿಲ್ಲ.. ಕೈಲಾಗದವರು ಅಂದ್ರೆ, ಮೈ ಪರಚಿಕೊಳ್ತಾರೆ!

● **ಭರತ್ ಶೆಟ್ಟಿ,ಮಂಗಳೂರು**
ಭಟ್ರೇ, ಹೆಂಡತಿಯ ಅಡುಗೆ ರುಚಿ ಮುಂದೆ ಯಾವುದೂ ಇಲ್ಲ ಅಂತಾರಲ್ಲ?
- ದರ್ಶನಗೆ ಜೈಲೂಟವೇ ಗತಿ ಎಂದಾಗ ಎಲ್ಲ ಗಂಡಸರಿಗೂ ಹಾಗೆ ಅನಿಸಿತಪ್ಪ!

● **ಪ.ವಿ.ವಿಜಯ, ಸಾಗರ**
ಭಟ್ರೇ, ಚೆನ್ನಾಗಿ ಮಳೆ-ಬೆಳೆಯಾಗಿ ಕರ್ನಾಟಕ ಸುಭಿಕ್ಷವಾಗಿದೆಯಲ್ಲ?
- ಸುಮ್ಮಿರು, ನಾನು ಹೇಳಿದ್ದರಿಂದಲೇ ಹೀಗಾಗಿದೆ ಎಂದು ಸೋಮಯಾಜಿ ಹೇಳಿಯಾರು!

● **ಗಣೇಶ ಮಲ್ಲೇಶ್ವರ, (ಇಮೇಲ್ ಮೂಲಕ)**
ಭಟ್ರೇ, ಅವಳೇಕೆ ಕ್ಷಣಕ್ಷಣಕ್ಕೂ ಕಾಡ್ತಾಳೆ?
- ಸೆಕೆಂಡ್ ಅಂಡ್ ಫೋರ್ಥ್ ಸ್ಯಾಟರ್‌ಡೇ ಮಾತ್ರ ಕಾಡಲು ಅವಳೇನು ಸರಕಾರೀ ನೌಕರಳಾ?!

ಭಾರತೀಯ ಚಿತ್ರರಂಗದ ಮೊದಲ ರಾಣಿ

ಸಿನಿಮಾದಲ್ಲಿ ಪುರುಷರೇ ಮಹಿಳೆಯರ ಪಾತ್ರವನ್ನೂ ನಿಭಾಯಿಸುತ್ತಿದ್ದ ಕಾಲ ಅದು. ಕಾರಣ, ಮಹಿಳೆಯರು ಚಿತ್ರರಂಗದಲ್ಲಿ ಕೆಲಸ ಮಾಡಿದರೆ ಸಮಾಜದ ಕೆಂಗಣ್ಣಿಗೆ ಗುರಿಯಾಗಬೇಕಾಗಿತ್ತು. ಅಂಥಕಾಲದಲ್ಲಿ ದೇವಿಕಾ ಚಿತ್ರರಂಗ ಪ್ರವೇಶಿಸಿದ್ದಳು. ಕೇವಲ ಅಭಿನಯಕ್ಕಷ್ಟೇ ಸೀಮಿತವಾಗದೆ, ಚಿತ್ರ ನಿರ್ಮಾಣಕ್ಕೂ ಕೈಹಾಕಿದ್ದಳು.

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ನೀವು ಇಂಟರ್‌ನೆಟ್‌ನಲ್ಲಿ The Longest Kiss ಎಂದು ಹುಡುಕಿದರೆ ಮೊದಲು ಕಾಣುವುದು ಪ್ರೇಮಿಗಳ ದಿನಾಚರಣೆಯ ಸಂದರ್ಭದಲ್ಲಿ ಸುದೀರ್ಘವಾಗಿ ಚುಂಬಿಸಿದ ಜೋಡಿಯ ವಿಷಯ. ಥಾಯ್ಲೆಂಡ್‌ನ ಎಕ್ಕಚಾಯ್ಮತ್ತು ಲಕ್ಷಣಾತಿರನರದ ದಂಪತಿ ಐವತ್ತೆಂಟು ಗಂಟೆ ಮೂವತ್ತೈದು ನಿಮಿಷ ಐವತ್ತೆಂಟು ಸೆಕೆಂಡು ಗಳವರೆಗೆ ಸುದೀರ್ಘವಾಗಿ ಚುಂಬಿಸಿದರಂತೆ. ಆ ಸ್ಪರ್ಧೆಯ ಅಂತಿಮ ಹಂತದಲ್ಲಿ ಒಟ್ಟೂ ಒಂಬತ್ತು ಜೋಡಿಗಳು ಪಾಲ್ಗೊಂಡಿದ್ದವಂತೆ. ಅದರಲ್ಲಿ ಜಯಗಳಿಸಿ ಗಿನ್ನಿಸ್ ದಾಖಲೆ ನಿರ್ಮಿಸಿದವರು ತಿರನರತ್ಜೋಡಿ.

ವಿಷಯ ಏನೆಂದರೆ, ಲೇಖಕಿ ಈಶ್ವರ್ ದೇಸಾಯಿ The Longest Kiss - The life and times of Devikaa raani ಎಂಬ ಒಂದು ಪುಸ್ತಕ ಬರೆದಿದ್ದಾರೆ. ಈ ಹೆಸರಿನ ಒಂದು ಪುಸ್ತಕವಿದೆ, ಓದಲು ಯೋಗ್ಯವಾಗಿದೆ ಎಂಬ ಮಿತ್ರರೊಬ್ಬರ ಸಲಹೆಯ ಮೇರೆಗೆ ಅಮೆಝೂನ್‌ನಿಂದ ಪುಸ್ತಕ ತರಿಸಿಕೊಳ್ಳಬೇಕೆಂದು ಹುಡುಕುತ್ತಿರುವಾಗ ಇದು ಕಂಡದ್ದೇ ವಿನಾ ಅದೇ ಪ್ರಮುಖ ವಿಷಯವಲ್ಲ. ಇರಲಿ, ದೇಸಾಯಿ ಬರೆದ ಈ ಪುಸ್ತಕದ ಕಥಾನಾಯಕಿ ದೇವಿಕಾರಾಣಿ. ಆಕೆ ಮೂವತ್ತು ಮತ್ತು ನಲವತ್ತರ ದಶಕದಲ್ಲಿ ಹಿಂದಿ ಚಿತ್ರರಂಗವನ್ನು ಅಕ್ಷರಶಃ ಆಳಿದ ಮಹಾರಾಣಿಯೂ ಹೌದು.

ಹಿಂದಿ ಚಿತ್ರರಂಗದಲ್ಲಿ ಇಂದು ಸಾಕಷ್ಟು ಹೆಸರು ಮಾಡಿದ ಅಭಿನೇತ್ರಿಯರಿದ್ದಾರೆ. ಅವರ ನಡುವೆ ಈ ದೇವಿಕಾ ರಾಣಿಯಾರು ಎಂದು ಕೇಳಿದರೆ ಇಂದಿನ ಯುವಪೀಳಿಗೆಗಂತೂ ಖಂಡಿತ ಗೊತ್ತಿರಲಿಕ್ಕಿಲ್ಲ. ಅದೇ ಮೂವತ್ತು, ನಲವತ್ತರ ದಶಕದ ಹಿಂದಿ ಸಿನಿಮಾ ನೋಡಿದವರಲ್ಲಿ ಈ ಹೆಸರು ಕೇಳಿದರೆ, ಅವರ ಇಳಿವಯಸ್ಸಿನಲ್ಲೂ ಒಮ್ಮೆ ಮಿಂಚಿನ ಸಂಚಾರವಾಗುತ್ತದೆ. ಹಿಂದಿ ಚಿತ್ರರಂಗದ ಡ್ರೀಮ್ ಗರ್ಲ್ ಎಂದರೆ ಹೇಮಾಮಾಲಿನಿ ಎನ್ನುವವರೇ ಹೆಚ್ಚು. ಆದರೆ, ಹೇಮಾಮಾಲಿನಿ ಎರಡನೆಯ ಡ್ರೀಮ್ ಗರ್ಲ್. ಅದಕ್ಕೂ ಕೆಲವು ದಶಕಗಳ ಹಿಂದೆಯೇ ಬಾಲಿವುಡ್‌ನ ಮೊದಲ ಡ್ರೀಮ್ ಆಗಿ ಮೆರೆದವಳು ದೇವಿಕಾರಾಣಿ.

ನಮ್ಮ ತಲೆಮಾರಿನವರು ಆಕೆಯ ಚಿತ್ರಗಳನ್ನು ಹೆಚ್ಚು ನೋಡೇ ಇಲ್ಲ ಎಂದರೂ ತಪ್ಪಿಲ್ಲ. ಅದಕ್ಕೆ ನಾನೂ ಹೊರತಲ್ಲ. ಎಂಬತ್ತರ ದಶಕದಲ್ಲಿ ದೂರದರ್ಶನದಲ್ಲಿ ಜನಪ್ರಿಯ ಕಾರ್ಯಕ್ರಮ ಚಿತ್ರಹಾರ್ ಬರುತ್ತಿತ್ತು. ಅದರಲ್ಲಿ ಮೈಬನ ಕಿಚಿಡಿಯಾ ಬನಕೆ ಬನ ಬನ ಬೋಲೂರೆ ಒಂದು ಕಾಯಂ ಹಾಡು. ಬಣ್ಣದ ಟಿವಿಯಲ್ಲಿ ಏನಿಲ್ಲ ವೆಂದರೂ ಒಂದು ನೂರು ಸಲವಾದರೂ ಆ ಕಪ್ಪು ಬಿಳುಪಿನ ಹಾಡು ನೋಡಿದ ನೆನಪು. ಅದನ್ನೂಅಶೋಕ ಕುಮಾರ್ ಆಗಿ ಸಹಿಸಿಕೊಂಡಿದ್ದೇ ಶಿವಾಯ್ ಜತೆಗಿರುವ ನಾಯಕಿ ಯಾರೆಂದು ಒಮ್ಮೆಯೂ ತಲೆಕೆಡಿಸಿಕೊಂಡಿರಲಿಲ್ಲ. ದೇವಿಕಾರಾಣಿ ಅಭಿನಯಿಸಿದ ಅಚೂತ್ ಕನ್ಯಾ ಮತ್ತು ಅಂಜಾನಿ ಬಿಟ್ಟು ಇನ್ಯಾವ ಚಿತ್ರವನ್ನೂ ನೋಡಿಲ್ಲ. ಆ ಎರಡು ಸಿನಿಮಾ ನೋಡಿದ್ದೂ ನಟ ಅಶೋಕ್ಕು ಮಾಡಿದ್ದಾನೆಂಬ ಕಾರಣಕ್ಕಾಗಿಯೇ ಹೊರತು ದೇವಿಕಾ ಇದ್ದಾಳೆಂಬ ಕಾರಣಕ್ಕಾಗಿ ಅಲ್ಲ.

ಏಕೆಂದರೆ ಆಗ ಆಕೆಯ ಕುರಿತಾಗಲಿ, ಆಕೆಯ ಸಾಹಸದ ಕುರಿತಾಗಲಿ ತಿಳಿದಿರಲಿಲ್ಲ. ಅದು ತಿಳಿದದ್ದು ಇತ್ತೀಚೆಗೆ ಕಿಶ್ವರ್ ದೇಸಾಯಿ ಬರೆದ ಪುಸ್ತಕ ಓದಿದ ನಂತರವೇ. ಸಿನಿಮಾದಲ್ಲಿ ಪುರುಷರೇ ಮಹಿಳೆಯರ ಪಾತ್ರವನ್ನೂ ನಿಭಾಯಿಸುತ್ತಿದ್ದ ಕಾಲ ಅದು. ಕಾರಣ, ಮಹಿಳೆಯರು ಚಿತ್ರರಂಗದಲ್ಲಿ ಕೆಲಸ ಮಾಡಿದರೆ ಸಮಾಜದ ಕೆಂಗಣ್ಣಿಗೆ ಗುರಿಯಾಗಬೇಕಾಗಿತ್ತು. ಅಂಥಕಾಲದಲ್ಲಿ ದೇವಿಕಾ ಚಿತ್ರರಂಗ ಪ್ರವೇಶಿಸಿದ್ದಳು. ಕೇವಲ ಅಭಿನಯಕ್ಕಷ್ಟೇ ಸೀಮಿತವಾಗದೆ, ಚಿತ್ರ ನಿರ್ಮಾಣಕ್ಕೂ ಕೈಹಾಕಿದ್ದಳು. ಇಂದು ಅಶೋಕ್ ಕುಮಾರ್, ದಿಲೀಪ್ ಕುಮಾರರಂತಹ ನಟರು ಹೆಸರು ಮಾಡಿದ್ದರೆ ಅದಕ್ಕೆ ದೇವಿಕಾ ರಾಣಿಯೂ ಕಾರಣ ಎನ್ನುವುದನ್ನು ಮರೆಯುವಂತಿಲ್ಲ.

ಅವಳು ಹುಟ್ಟಿದ ಪರಿವಾರ, ಪರಿಸರ ಇದಕ್ಕೆಲ್ಲ ಕಾರಣ ಎನ್ನುವುದನ್ನೂ ಅಲ್ಲಗಳೆಯುವಂತಿಲ್ಲ. ದೇವಿಕಾ ಹುಟ್ಟಿದ್ದು 1908ರ ಮಾರ್ಚ್ 30ರಂದು ವಲ್ಟೈರ್ (ಈಗಿನ ವಿಶಾಖಪಟ್ಟಣಂ)ನಲ್ಲಿ. ಆಕೆ ನಮ್ಮ ರಾಷ್ಟ್ರ ಗೀತೆ ಬರೆದ ಕವಿ ರವೀಂದ್ರನಾಥ ಠಾಗೋರರ ಸೋದರ ಮೊಮ್ಮಗಳು. ಅವಳ ತಂದೆ ಮನ್ಮಥನಾಥ ಚೌಧರಿ ಮದ್ರಾಸ್ ಪ್ರೆಸಿಡೆನ್ಸಿಯ ಮೊದಲ ಜನರಲ್ ಸರ್ಜನ್ ಆಗಿದ್ದರು. ಮನೆ ಯಲ್ಲಿ ಹಣಕ್ಕೆ, ಸಿರಿತನಕ್ಕೆ ಯಾವುದೇ ಕೊರತೆ ಇರಲಿಲ್ಲವಾದ್ದರಿಂದ, ಒಂಬತ್ತು ವರ್ಷದವಳಾಗಿದ್ದಾಗಲೇ ದೇವಿಕಾರಾಣಿಯನ್ನು ವಿದ್ಯಾಭ್ಯಾಸಕ್ಕೆಂದು ಇಂಗ್ಲೆಂಡಿಗೆ ಕಳಿಸಲಾಯಿತು. ಪ್ರಾಥಮಿಕ ಶಿಕ್ಷಣ ಮುಗಿಸಿದ ದೇವಿಕಾ, ರಾಯಲ್ ಅಕಾಡೆಮಿ ಆಫ್ ಡ್ರಾಮಾಟ್ರಿಕ್ಸ್‌ನಲ್ಲಿ ಅಭಿನಯದ ತರಬೇತಿ ಪಡೆದಳು. ಅಲ್ಲಿ ಅವಳಿಗೆ ಹಿಮಾಂಶುರಾಯ್ ಪರಿಚಯವಾಯಿತು. ಭಾರತದಲ್ಲಿ ಬ್ಯಾರಿಸ್ಟರ್ ಆಗಿದ್ದ ಹಿಮಾಂಶು ಚಿತ್ರೋದ್ಯಮದ ಕಡೆ ಆಕರ್ಷಿತರಾಗಿದ್ದರು. ತಮ್ಮ ಮೊದಲ ಮೂಕಿಚಿತ್ರ ಎ ಥ್ರೋ ಆಫ್ ಡೈಸ್ ಚಿತ್ರ ನಿರ್ಮಾಣದ ಕುರಿತು ಯೋಚಿಸುತ್ತಿದ್ದರು. ಅದರ ನಿಮಿತ್ತ ಇಂಗ್ಲೆಂಡಿಗೆ ಬಂದಾಗ ಅವರಿಗೆ ದೇವಿಕಾ ರಾಣಿಯ ಪರಿಚಯವಾಯಿತು. ಆಕೆಯ ಅಸಾಧಾರಣ ಕೌಶಲ ಕಂಡು ತನ್ನ ಚಿತ್ರ ನಿರ್ಮಾಣದಲ್ಲಿ ಸಹಕರಿಸುವಂತೆ ಹಿಮಾಂಶು ಕೇಳಿಕೊಂಡರು. ಅದಕ್ಕೆ ಒಪ್ಪಿದ ದೇವಿಕಾ ವಸ್ತ್ರ ವಿನ್ಯಾಸಕಿ ಮತ್ತು ಕಲಾ ನಿರ್ದೇಶಕಳಾಗಿ ಸೇರಿಕೊಂಡಳು. ಚಿತ್ರೀಕರಣ ಮುಗಿಸಿ, ಮುಂದಿನ ಕೆಲಸಕ್ಕೆ ಇಬ್ಬರೂ ಜರ್ಮನಿಗೆ ಹೋದರು. ಅಲ್ಲಿಯ ತಂತ್ರಜ್ಞಾನ ಕಂಡು ಬೆರಗಾದ ದೇವಿಕಾ, ಚಿತ್ರ ನಿರ್ಮಾಣದ ಹೆಚ್ಚಿನ ತರಬೇತಿ ಪಡೆದಳು. ಚಿತ್ರಮುಗಿಯುವ ಹೊತ್ತಿಗೆ ದೇವಿಕಾ ಮತ್ತು ಹಿಮಾಂಶು ಪರಸ್ಪರ ಆಕರ್ಷಿತರಾಗಿದ್ದರು. 1929ರಲ್ಲಿ ದೇವಿಕಾ, ವಯಸ್ಸಿನಲ್ಲಿ ತನಗಿಂತ ಹದಿನಾರು ವರ್ಷ ಹಿರಿಯ ಪ್ರಾಯದ ಹಿಮಾಂಶುವನ್ನು ಮದುವೆಯಾದಳು.

ವಿವಾಹದ ನಂತರ ಇಬ್ಬರೂ ಕೆಲಕಾಲ ಜರ್ಮನಿಯಲ್ಲಿ ಉಳಿದರು. ಅಲ್ಲಿ ಜರ್ಮನ್ ಮೋಶನ್ ಪಿಕ್ಚರ್ ಪ್ರೊಡಕ್ಷನ್ ಕಂಪನಿಯಲ್ಲಿ ಕೆಲವು ಖ್ಯಾತ ನಿರ್ದೇಶಕರ ಜೊತೆ ಕೆಲಸ ಮಾಡಿದರು. ಹಿಮಾಂಶು ಆಗಾಗ ನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ಸಂದರ್ಭ ಒದಗಿ ಬಂದಾಗ ದೇವಿಕಾ ಕೂಡ ಹಿಮಾಂಶು ಜತೆ ಅಭಿನಯಿಸುತ್ತಿದ್ದರು. ಅವರಿಬ್ಬರ ಜೋಡಿ ಜರ್ಮನಿಯಲ್ಲಷ್ಟೇ ಅಲ್ಲ, ಯೂರೋಪ್‌ನ ಇನ್ನೂಕೆಲವು ದೇಶಗಳಲ್ಲಿ ಜನಪ್ರಿಯವಾಯಿತು.

ಮದುವೆಯಾಗಿ ನಾಲ್ಕು ವರ್ಷದ ನಂತರ ಇಬ್ಬರೂ ಭಾರತದಲ್ಲಿ ನೆಲೆಸಲು ನಿರ್ಧರಿಸಿದರು. ಹಿಮಾಂಶು ತಮ್ಮ ಮೊದಲ ಟಾಕಿ ಚಿತ್ರದ ಸಿದ್ಧತೆ ನಡೆಸಿದರು. ಇಂಗ್ಲೆಂಡ್ ಮತ್ತು ಜರ್ಮನಿಯ ಮಿತ್ರರೊಂದಿಗೆ ಸೇರಿ ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲಿ ನಿರ್ಮಿಸಲಾಗುತ್ತಿದ್ದ ಚಿತ್ರಕ್ಕೆ ಸ್ವತಃ ತಾವೇ ನಾಯಕರಾಗಿ, ದೇವಿಕಾರನ್ನು ನಾಯಕಿಯನ್ನಾಗಿ ಆಯ್ದುಕೊಂಡರು ಹಿಮಾಂಶು. ಕರ್ಮ ಚಿತ್ರ ಬಿಡುಗಡೆಯಾದಾಗ ಇಂಗ್ಲೆಂಡಿನಲ್ಲಷ್ಟೇ ಅಲ್ಲ, ಇತರ ಯೂರೋಪ್ ದೇಶಗಳಲ್ಲೂ ಸದ್ದು ಮಾಡಿತು. ರಾತ್ರಿ ಬೆಳಗಾಗುವುದರೊಳಗೆ ದೇವಿಕಾ ಇಂಗ್ಲೆಂಡಿನಲ್ಲಿ ತಾರೆಯಾಗಿದ್ದಳು. ಆ ಚಿತ್ರದಲ್ಲಿ ದೇವಿಕಾ ಒಂದು ಹಾಡನ್ನೂ ಹಾಡಿದ್ದರು. ಇಂಗ್ಲೆಂಡ್‌ನಲ್ಲಿ ಜನಪ್ರಿಯವಾದ ಆ ಹಾಡು, ಭಾರತದ ಚಲನಚಿತ್ರಗಳಲ್ಲೇ ಮೊದಲ ಇಂಗ್ಲೀಷ್ ಹಾಡು ಎಂದು ದಾಖಲಾಯಿತು. ಆ ಚಿತ್ರದಲ್ಲಿ ದೇವಿಕಾ ಮತ್ತು ಹಿಮಾಂಶು ಚುಂಬನದ ದೃಶ್ಯವೂ ಸಾಕಷ್ಟು ಸುದ್ದಿ ಯಾಯಿತು. ಕರ್ಮ ಚಿತ್ರದ ನಾಲ್ಕು ನಿಮಿಷಗಳ ಆದೃಶ್ಯ, ಹಿಂದಿ ಚಿತ್ರರಂಗದ ಸುದೀರ್ಘ ಚುಂಬನ ಎಂಬ (ಕು)ಖ್ಯಾತಿಗೂ ಪಾತ್ರವಾಯಿತು. ಬಹುಶಃ ಇದೇ ಕಾರಣವೋ ಏನೋ, ಚಿತ್ರ ಭಾರತದಲ್ಲಿ ನಡೆಯಲೇ ಇಲ್ಲ. ಅಂದು ಭಾರತದ ಪ್ರೇಕ್ಷಕ ಇದನ್ನೆಲ್ಲ ಸ್ವೀಕರಿಸುವ ಮನಃಸ್ಥಿತಿಯಲ್ಲಿರಲಿಲ್ಲವೋ ಏನೋ, ವಿದೇಶದಲ್ಲಿ ಸೊಲ್ಲೆಬ್ಬಿಸಿದ್ದ ಚಿತ್ರ ಭಾರತದಲ್ಲಿ ಸೋತಿತ್ತು. ಆದರೆ ದೇವಿಕಾ ಗೆದ್ದಿದ್ದಳು. ದೇವಿಕಾ ಕರ್ಮ ಚಿತ್ರದ ತನ್ನ ಅಭಿನಯದಿಂದ ವಿಮರ್ಶಕರ ಮನಗೆದ್ದಿದ್ದಳು. ಎಲ್ಲಿಯವರೆಗೆ ಎಂದರೆ, ಅಂದು ಸರೋಜಿನಿ ನಾಯ್ಡು ಕೂಡ ದೇವಿಕಾಳನ್ನು ಸೌಂದರ್ಯ ಮತ್ತು ಪ್ರತಿಭೆಯುಳ್ಳ ಮಹಿಳೆ ಎಂದು ಹೊಗಳಿದರು.

ಯೂರೋಪ್‌ನಲ್ಲಿ ಕರ್ಮ ಚಿತ್ರದ ಯಶಸ್ಸಿನ ಉತ್ಸಾಹದಲ್ಲಿದ್ದ ಹಿಮಾಂಶು, ಕೆಲವು ಮಿತ್ರರೊಂದಿಗೆ ಸೇರಿ ಮುಂಬೈನಲ್ಲಿ ಹದಿನೆಂಟು ಎಕರೆ ಜಮೀನು ಖರೀದಿಸಿ ಬಾಂಬೆ ಟಾಕೀಸ್ ಸಂಸ್ಥೆಯನ್ನು ಹುಟ್ಟು ಹಾಕಿದರು. ಬಾಂಬೆ ಟಾಕೀಸ್‌ನ ಮೊದಲ ಚಿತ್ರ ಜವಾನಿ ಕಿ ಹವಾದಲ್ಲಿ ದೇವಿಕಾ ನಾಯಕಿಯಾದರೆ ನಜ್ಮ್-ಉಲ್-ಹಸನ್ ನಾಯಕನಾಗಿದ್ದ. ಒಂದೆಡೆ ಚಿತ್ರದ ಸಂಪೂರ್ಣ ಚಿತ್ರೀಕರಣ ರೈಲಿನಲ್ಲಿ ನಡೆಯುತ್ತಿದ್ದರೆ, ಇನ್ನೊಂದೆಡೆ ದೇವಿಕಾ ಹಸನ್‌ನ ಪ್ರೇಮದ ಕೂಪದಲ್ಲಿ ಇಳಿಯುತ್ತಾ ಹೋದಳು. ಇಬ್ಬರೂ ಜತೆಯಾಗಿ ಎರಡನೆಯ ಚಿತ್ರ ಜೀವನ್ನಯ್ಯಾ ಮುಗಿಸುವುದಕ್ಕಿಂತ ಮೊದಲೇ ಮುಂಬೈ ಬಿಟ್ಟುಹೋಗಿದ್ದರು. ಅಲ್ಲಿಯವರೆಗೂ ಹಿಮಾಂಶುಗೆ ಅವರಿಬ್ಬರ ನಡುವಿನ ಪ್ರೀತಿಯ ವಿಷಯವೇ ತಿಳಿದಿರಲಿಲ್ಲ. ಚಿತ್ರೀಕರಣಕ್ಕೆ ಸಾಕಷ್ಟು ಹಣ ಖರ್ಚಾಗಿತ್ತು. ಚಿತ್ರ ಮುಗಿಸುವುದು ಅನಿವಾರ್ಯವಾಗಿತ್ತು. ದೇವಿಕಾ ಮತ್ತು ಹಸನ್ ಕೋಲ್ಕತಾದ ಒಂದು ಹೋಟೆಲಿನಲ್ಲಿ ಉಳಿದುಕೊಂಡಿದ್ದರು. ಮಿತ್ರರ ಮಧ್ಯಸ್ಥಿಕೆಯಿಂದಾಗಿ ದೇವಿಕಾ ಹಿಂತಿರುಗಿ ಮನೆಗೆ ಬಂದಳು. ಆದರೆ ಆರ್ಥಿಕ ಸ್ವಾತಂತ್ರ್ಯವನ್ನು ಬಯಸಿದ್ದಳು ಹಿಮಾಂಶು ಅದಕ್ಕೆ ಒಪ್ಪಿದ್ದರು. ಆದರೆ, ಒಂದೇ ಸೂರಿನ ಅಡಿಯಲ್ಲಿ ಇರುತ್ತಿದ್ದರೂ ಅವರಿಬ್ಬರ ನಡುವಿನ ಪ್ರೀತಿ ಮಾತ್ರ ಮೊದಲಿನಂತೆ ಸಿಹಿಯಾಗಿರಲಿಲ್ಲ. ಇತ್ತ ಹಿಮಾಂಶು ಹಸನ್‌ನನ್ನು ಬಾಂಬೆ ಟಾಕೀಸ್‌ನಿಂದ ತೆಗೆದು ಹಾಕಿದರು. ಇಲ್ಲಿಂದ ಮುಂದೆ ಹಸನ್‌ಗೆ ಚಿತ್ರರಂಗದಲ್ಲಿ ಅವಕಾಶಗಳೇ ಸಿಗಲಿಲ್ಲ. ಜೀವನ್ನಯ್ಯಾ ಚಿತ್ರದ ಹಸನ್ ಪಾತ್ರಕ್ಕೆ ಬೇರೆ ನಾಯಕನಟನ ಶೋಧ ನಡೆಯುತ್ತಿತ್ತು. ಆಗ ಸಿಕ್ಕಿದ್ದೇ ಹಿಂದಿ ಚಿತ್ರರಂಗದ ದಾದಾ ಮೋನಿ, ಅಶೋಕ್‌ಕುಮಾರ್. ಮುಂದೆ ಅಶೋಕ್ ಕುಮಾರ್ ಮತ್ತು ದೇವಿಕಾರಾಣಿ ಜೋಡಿಯೂ ಹಿಂದಿ ಚಿತ್ರರಂಗದಲ್ಲಿ ಹೆಸರು ಮಾಡಿದ್ದು ಈಗ ಇತಿಹಾಸ.

ಬಾಂಬೆಟಾಕೀಸ್ ಸಾಕಷ್ಟು ಚಿತ್ರ ನಿರ್ಮಾಣ ಮಾಡಿ ಅಶೋಕ್ ಕುಮಾರ್, ದಿಲೀಪ್ ಕುಮಾರ್, ರಾಜ್‌ಕಪೂರ್, ಮಧು ಬಾಲಾ, ಮಮ್ತಾಜ್ ಮೊದಲಾದವರನ್ನು ಚಿತ್ರರಂಗಕ್ಕೆ ಪರಿಚಯಿಸಿತು. 1940ರಲ್ಲಿ ಹಿಮಾಂಶು ರಾಯ್ ನಿಧನರಾದ ನಂತರ ದೇವಿಕಾರಾಣಿ ಬಾಂಬೆ ಟಾಕೀಸ್‌ನ ಉಸ್ತುವಾರಿ ವಹಿಸಿಕೊಂಡು ಅನೇಕ ಚಿತ್ರ ನಿರ್ಮಿಸಿದರು. ಸ್ವಾತಂತ್ರ್ಯ ಪೂರ್ವದಲ್ಲೇ ಬ್ರಿಟಿಷರ ವಿರುದ್ಧ ಹೋರಾಟದ ಚಿತ್ರ ನಿರ್ಮಿಸಿ ಸುದ್ದಿ ಮಾಡಿದರು. ಈ ನಡುವೆ ಕೆಲವು ಭಿನ್ನಾಭಿಪ್ರಾಯದಿಂದಾಗಿ ಅಶೋಕ್‌ಕುಮಾರ್ ಮತ್ತು ಕೆಲವು ಖ್ಯಾತ ನಟರು ಬಾಂಬೆ ಟಾಕೀಸ್ ಬಿಟ್ಟು ಹೋದರು. 1945ರಲ್ಲಿ ಬಾಂಬೆ ಟಾಕೀಸ್ ಸ್ಥಗಿತಗೊಳಿಸಿದ ದೇವಿಕಾ ರಷ್ಯಾದ ವರ್ಣ ಚಿತ್ರಕಾರ ಸ್ವೆಟೊಸ್ಲಾವ್ರೋರಿಚ್‌ರನ್ನು ಮದುವೆಯಾಗಿ ಮಧುಚಂದ್ರಕ್ಕೆಂದು ಹಿಮಾಲಯದ ತೊಪ್ಪಲಿಗೆ ಹೋಗಿದ್ದರು. ಆಕಾಲದಲ್ಲಿ ಅದೂ ಕೂಡ ದೊಡ್ಡ ಸುದ್ದಿಯಾಗಿತ್ತು. ಕಾರಣ, ಆ ಕಾಲದಲ್ಲಿ ಮದುವೆಯಾದವರಲ್ಲಿ ಶೇಕಡಾ ಹತ್ತರಷ್ಟು ಮಾತ್ರ ಮಧುಚಂದ್ರಕ್ಕೆ ಹೋಗುತ್ತಿದ್ದರು! (ಇದು ಆಕಾಲದಲ್ಲಿ ಬಾಂಬೆ ವಿಶ್ವವಿದ್ಯಾಲಯದ ಸಮಾಜಶಾಸ್ತ್ರಜ್ಞ ಪ್ರೊ. ಗೋವಿಂದು ಘುರ್ಯೆರ್ ನಡೆಸಿದ ಸಮೀಕ್ಷೆಯ ವರದಿ)

ಮದುವೆಯ ನಂತರ ಕೆಲವು ವರ್ಷ ದಂಪತಿಗಳು ಮನಾಲಿಯಲ್ಲಿ ಉಳಿದರು. ಕ್ರಮೇಣ ಬೆಂಗಳೂರಿನ ಬಳಿ ನಾಲ್ಕು ನೂರ ಐವತ್ತು ಎಕರೆಯ ಎಸ್ಟೇಟ್ ಖರೀದಿಸಿ, ಸಿನಿಮಾ ಪ್ರಪಂಚದಿಂದ ದೂರ ಉಳಿದರು. 1993ರಲ್ಲಿ ರೋರಿಚ್ ನಿಧನರಾದರು. ಅದಾಗಿ ಒಂದೇ ವರ್ಷದಲ್ಲಿ ದೇವಿಕಾ ಕೂಡ ಕೊನೆಯುಸಿರೆಳೆದಳು. ದೇವಿಕಾಗೆ ಸಂತಾನವಿರಲಿಲ್ಲವಾದ್ದರಿಂದ ಕೆಲವು ವರ್ಷಗಳ ನಂತರ ಆಕೆಯ ಎಸ್ಟೇಟ್ ಅನ್ನು ಕರ್ನಾಟಕ ಸರಕಾರ ತನ್ನ ಸ್ವಾಧೀನಕ್ಕೆ ಒಳಪಡಿಸಿಕೊಂಡಿತು.

ದೇವಿಕಾರಾಣಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ. ಸಿನಿಮಾರಂಗದಲ್ಲಿ ಸಲ್ಲಿಸಿದ ಸೇವೆಗೆ ನೀಡುವ ದಾದಾ ಸಾಹೇಬ್‌ಫಾಲ್ಕೆ ಪ್ರಶಸ್ತಿಯನ್ನುಮೊದಲು ಪಡೆದ ಶ್ರೇಯವೂ ದೇವಿಕಾರಾಣಿಗೆ ಸಲ್ಲುತ್ತದೆ. 2011ರಲ್ಲಿ ಭಾರತ ಸರಕಾರ ಆಕೆಯನ್ನು ಭಾರತದ ಚಿತ್ರರಂಗದ ಪ್ರಥಮ ಮಹಿಳೆ ಎಂಬ ಗೌರವ ನೀಡಿ ಅಂಚೆ ಚೀಟಿಯನ್ನೂ ಬಿಡುಗಡೆ ಮಾಡಿದೆ.

ದೇವಿಕಾ ಪಯಣ ಹಲವಾರು ತಿರುವುಗಳಲ್ಲಿ ತಿರುಗಿದೆ. ಇಳಿಮೋರೆಯಲ್ಲಿ ಇಳಿದಿದೆ, ಏರನ್ನೂ ಹತ್ತಿದೆ. ಏನೇ ಆದರೂ ಭಾರತೀಯ ಚಿತ್ರ ರಂಗವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕರೆದೊಯ್ಯುವಲ್ಲಿ ದೇವಿಕಾರಾಣಿಯ ಪಾತ್ರವೂ ಇದೆ. ಸುಮಾರು ಒಂಬತ್ತು ದಶಕದ ಹಿಂದೆಯೇ ಮಹಿಳಾ ಸಬಲೀಕರಣಕ್ಕೆ ಉತ್ತಮ ಉದಾಹರಣೆ ದೇವಿಕಾರಾಣಿ.

ದೇವಿಕಾರಾಣಿಯ ಜೀವನದ ಇನ್ನಷ್ಟು ಕುತೂಹಲಕಾರಿ ಘಟನೆಗಳನ್ನು ಕಿಶ್ವರ್ ದೇಸಾಯಿ ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಚಲನಚಿತ್ರಾಸಕ್ತರು ಓದಬಹುದಾದ ಒಂದು ಉತ್ತಮ ಕೃತಿ - The Longest Kiss.

ಪ್ರಸ್ತುತ

ಡಾ. ಪವಿತ್ರ ಆರ್. ಎಚ್.

ಮತ್ತೊಂದು ಬಜೆಟ್: ಅದರ ಮೇಲೆ ಜನರ ನಿರೀಕ್ಷೆಗಳೇನು?

2024-25ನೇ ಸಾಲಿನ ಕೇಂದ್ರ ಬಜೆಟ್ ದಿನಗಣನೆ ಆರಂಭವಾಗಿದೆ. ಎಂದಿನಂತೆ ಈ ಬಾರಿಯೂ ಬಜೆಟ್ ಬಗ್ಗೆ ಕುತೂಹಲ ಇದ್ದೇ ಇದೆ. ಈ ವರ್ಷ ಫೆಬ್ರವರಿಯಲ್ಲಿ ಚುನಾವಣೆಗೂ ಮುನ್ನ 2024-25 ಆರ್ಥಿಕ ವರ್ಷದ ಮಧ್ಯಾಂತರ/ಲೇಖಾನುದಾನ ಬಜೆಟ್ ಮಂಡಿಸಲಾಗಿದ್ದು, ಮಂಬರುವ ಪೂರ್ಣ ಬಜೆಟ್ ಯಾವ ರೀತಿ ಇರಲಿದೆ ಎಂಬ ಸಣ್ಣ ನೋಟವನ್ನು ಇದು ನೀಡಿದೆ. ಇದು ಮುಂದಿನ ಬಜೆಟ್‌ಗೆ ಪೂರ್ಣ ಮಟ್ಟವನ್ನು ನೀಡಿದೆ. ಇತ್ತೀಚೆಗೆ ಮುಕ್ತಾಯಗೊಂಡ ಚುನಾವಣಾ ನಂತರ ರಾಜಕೀಯ ರೂಪುಗೊಂಡಿರುವ ಹೊಸ ರಾಜಕೀಯ ಚಿತ್ರಣ 2025 ರ ಆರ್ಥಿಕ ವರ್ಷದ ಬಗ್ಗೆ ಮತ್ತಷ್ಟು ನಿರೀಕ್ಷೆ ಹುಟ್ಟು ಹಾಕಿದೆ.

ನಮ್ಮ ಸಂಸತ್ ಚುನಾವಣಾ ಪ್ರಕ್ರಿಯೆಗಳು ಮುಗಿದ ಬೆನ್ನಲ್ಲೇ, ಹಲವು ಪ್ರಮುಖ ರಾಜ್ಯಗಳಲ್ಲಿ ಶೀಘ್ರದಲ್ಲಿ ಚುನಾವಣೆಗಳು ನಡೆಯಲಿವೆ. ಇದರ ಹೊರತಾಗಿ ಜಾಗತಿಕ ರಾಜಕೀಯ ವಿದ್ಯಮಾನಗಳೂ ಹೆಚ್ಚು ಅನಿಶ್ಚಿತವಾಗಿವೆ. ಈಗ ನಡೆಯುತ್ತಿರುವ ಭೌಗೋಳಿಕ-ರಾಜಕೀಯ ಸಂಘರ್ಷದ ಹಾದಿಗಳು 2025 ಮತ್ತು ಅದರಾಚೆಗೂ ವಿಸ್ತಾರವಾಗುವ ಸಾಧ್ಯತೆ ಇದೆ.

ಆದ್ದರಿಂದ, ಜಾಗತಿಕ ಅನಿಶ್ಚಿತತೆಯ ನಡುವೆ ಭಾರತದ ದೊಡ್ಡ ಆರ್ಥಿಕತೆಯ ಸ್ಥಾನಕ್ಕೆ ಒತ್ತಾಸೆಯಾಗಲು ಕೇಂದ್ರ ಬಜೆಟ್ ಮತ್ತು ಸರಕಾರದ ಒಟ್ಟಾರೆ ನೀತಿಗಳು ಹೇಗಿರಬೇಕು? ಇಲ್ಲಿ ಎರಡು ಮುಖ್ಯ ಪ್ರಶ್ನೆಗಳು ಏಳುತ್ತವೆ. ಒಂದು, ಆರ್ಥಿಕ ಬೆಳವಣಿಗೆಯ ದೇಶೀಯ ಚಾಲಕರನ್ನು ರಕ್ಷಿಸುವುದು ಹೇಗೆ? ಇನ್ನೊಂದು, ಕಾರ್ಮಿಕ ವಲಯಲ್ಲಿ ದೊಡ್ಡ ಮಟ್ಟದಲ್ಲಿ ಮುಂದೆ ಹೊಸ ಸೇರ್ಪಡೆಗಳು ಆಗುವಾಗ ಸಾಕಷ್ಟು ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಗೆ ಖಾಸಗಿ ವಲಯಕ್ಕೆ ಬೆಂಬಲದ ವಾತಾವರಣವನ್ನು ಸೃಷ್ಟಿಸುವುದು ಹೇಗೆ ಎನ್ನುವುದು.

ಕೋವಿಡ್ ಸಾಂಕ್ರಾಮಿಕ ಕಾಯಿಲೆಯ ನಂತರ, ಸರಕಾರ ಮಾಡುತ್ತಿರುವ ಬಂಡವಾಳ ವೆಚ್ಚ ಗಣನೀಯವಾಗಿ ಏರಿಕೆ ಕಂಡಿದ್ದು, ಇದು ಜಿಡಿಪಿ ವಿಸ್ತರಣೆಗೆ ಸಹಾಯ ಮಾಡಿದೆ.

ಮಧ್ಯಂತರ-3 ಬಜೆಟ್, 2025 ನೇ ಆರ್ಥಿಕ ವರ್ಷದಲ್ಲಿ ಸರಕಾರದ ಬಂಡವಾಳ ವೆಚ್ಚವನ್ನು ಶೇಕಡ 17 ರಷ್ಟು ಹೆಚ್ಚಾಗುವಂತೆ ಮಾಡಿದೆ, ಪೂರ್ಣ ಬಜೆಟ್‌ನಲ್ಲಿ ಇದನ್ನೇ ಮುಂದುವರಿಸುವ ನಿರೀಕ್ಷೆ ಇದೆ. ಬಜೆಟ್‌ನಲ್ಲಿ ರಸ್ತೆಗಳು, ರೈಲ್ವೆ, ಬಂದರು ಮತ್ತು ವಿಮಾನ ನಿಲ್ದಾಣಗಳು ಸೇರಿದಂತೆ ಸಾರಿಗೆ ಮೂಲಸೌಕರ್ಯ ಯೋಜನೆಗಳಿಗೆ ಹೆಚ್ಚು ಅನುದಾನ ಹಂಚಿಕೆ ಮಾಡುವ ಸಾಧ್ಯತೆ ಇದೆ ಎಂದು ಇಂಡಿಯನ್ ಕ್ರೆಡಿಟ್ ರೇಟಿಂಗ್ ಕಂಪನಿ (ಐಸಿಆರ್‌ಎ) ಹೇಳಿದೆ.

ಬಂಡವಾಳ ವೆಚ್ಚಕ್ಕೆ ಉತ್ತೇಜನ

ಕೇಂದ್ರ ಸರಕಾರವು ರಾಜ್ಯ ಬಜೆಟ್‌ಗಳಿಗೆ ನೇರವಾಗಿ ಮತ್ತು ಬಡ್ಡಿರಹಿತ ಸಾಲಗಳನ್ನು ನೀಡುವುದರೊಂದಿಗೆ ಬಂಡವಾಳ ವೆಚ್ಚವನ್ನು ಹೆಚ್ಚಳ ಮಾಡಿದೆ.

2025ನೇ ಹಣಕಾಸು ವರ್ಷದ ಅನಂತರವೂ ಲಭ್ಯವಿರುವ ಹಣಕಾಸಿನ ಪರಿಸ್ಥಿತಿಗೆ ಅನುಗುಣವಾಗಿ ಬಂಡವಾಳ ವ್ಯಯವನ್ನು ಜಾಸ್ತಿ ಮಾಡುವುದಕ್ಕೆ ಆದ್ಯತೆ ನೀಡುತ್ತದೆ ಎಂದು ನಾವು ನಿರೀಕ್ಷಿಸುತ್ತೇವೆ.

ಖಾಸಗಿ ವೆಚ್ಚವು (ಬಳಕೆ) ಭಾರತದ ಜಿಡಿಪಿಗೆ ಶೇ.60ರಷ್ಟು ಕೊಡುಗೆ ನೀಡುತ್ತದೆ. ನಿರೀಕ್ಷಿತ ಜನಸಂಖ್ಯಾ ಲಾಭಾಂಶದೊಂದಿಗೆ, ದೇಶೀಯ ಬಳಕೆ ಬೆಳವಣಿಗೆಯು ಭಾರತದ ಆರ್ಥಿಕ ಪ್ರಗತಿಯು ವೇಗ ಮುಂದುವರಿಯಲು ಮುಖ್ಯ ಕಾರಣವಾಗಿದೆ.

ನಮ್ಮ ರಫ್ತು ಪಾಲುದಾರರಲ್ಲಿ ತುಂಬಾ ಹಳೆಯದಾದ ಸೊಸೈಟಿಗಳಿದ್ದು ಇವು ನಾವು ಮುಂದೆ ಏನು? ಎಷ್ಟು? ಮತ್ತು ಯಾರಿಗೆ? ರಫ್ತು ಮಾಡುತ್ತೇವೆ ಎಂಬುದರ ಮೇಲೆ ಪರಿಣಾಮ ಬೀರುತ್ತದೆ.

ಅಷ್ಟೇನೂ ಹಿತಕರವಲ್ಲದ ಅಂಶವೆಂದರೆ, 2019ರ ಮತ್ತು 2024ರ ಹಣಕಾಸು ವರ್ಷಗಳ ನಡುವೆ, ಖಾಸಗಿ ವೆಚ್ಚದ ಪ್ರಮಾಣ ಶೇ.4ರಷ್ಟನ್ನು ಸಂಯುಕ್ತ ವಾರ್ಷಿಕ ಅಭಿವೃದ್ಧಿ (ಸಿಎಜಿಆರ್) ದರ ದಾಖಲಿಸಿದೆ. 2024 ಹಣಕಾಸು ವರ್ಷದಲ್ಲಿ ಒಟ್ಟಾರೆ ಬಳಕೆಯ ಬೆಳವಣಿಗೆ ಕಳಪೆಯಾಗಿತ್ತು, ನಗರ ಪ್ರದೇಶಗಳಲ್ಲಿ ಹೆಚ್ಚಿನ ಬೇಡಿಕೆಯ ಹೊರತಾಗಿಯೂ, ಉಳಿದ ನಗರ ವಿಭಾಗಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಹಕರ ಎಚ್ಚರಿಕೆಯ ಮನೋಭಾವ ವೆಚ್ಚದ ಮೇಲೆ ಪರಿಣಾಮ ಬೀರಿದೆ. ಪಿಎಂ ಕಿಸಾನ್, ಎಂಜಿಎನ್ ಆರ್‌ಇಜಿಎ (ಎಂನರೇಗಾ) ಅಥವಾ ಪಿಎಂ ಆವಾಸ್ ಯೋಜನೆಯಂತಹ ಯೋಜನೆಗಳ ಮೇಲೆ ಹೆಚ್ಚಿನ ವೆಚ್ಚಗಳು ಗ್ರಾಮೀಣ ಭಾಗದಲ್ಲಿ ವೆಚ್ಚ ಮಾಡಲು ಪ್ರೇರೇಪಿಸುವ ಸಾಧ್ಯತೆ ಇದೆ. ಇದು ಮತ್ತೊಂದು ಅಸಮರ್ಪಕ ಮುಂಗಾರಿಗೆ ಬೆಲೆಯನ್ನು ತೆರುತ್ತಿದೆ.

ಹೆಚ್ಚುವರಿಯಾಗಿ, ವೈಯಕ್ತಿಕ ಆದಾಯ ತೆರಿಗೆಗೆ ಹೆಚ್ಚಿನ ಮಿತಿ ನೀಡುವುದರಿಂದ ವೇತನ ಪಡೆಯುವವರಲ್ಲಿ ಖಂಡಿತವಾಗಿಯೂ ಕೊಂಚ ನಿರಾಳದ ಭಾವನೆಯನ್ನು ಮೂಡಿಸಲಿದೆ. ಪಾವತಿ ಮಾಡಬೇಕಾದ ತೆರಿಗೆ ಕಾಡಿಮೆಯಾಗುವುದರಿಂದ ಜನರು ಖರ್ಚಿನತ್ತ ಹೆಚ್ಚು ಒಲವು ತೋರುವ ಸಾಧ್ಯತೆ ಇದೆ. ಇದು ಸಣ್ಣ ಅವಧಿಯಲ್ಲಿ ಚಟುವಟಿಕೆಗಳನ್ನು ಹೆಚ್ಚಿಸುತ್ತದೆ. ಕುಟುಂಬಗಳು ಎದುರಿಸುತ್ತಿರುವ ಆತಂಕಗಳನ್ನು ಕಡಿಮೆಗೊಳಿಸಲು ಕೌಶಲ ಮತ್ತು ಕೌಶಲದ ಕಡೆಗೆ ಸ್ಪಷ್ಟ ದೃಷ್ಟಿಯನ್ನು ಹೊಂದಿರುವ ಶಿಕ್ಷಣದ ಮೇಲೆ ಖರ್ಚು ಮಾಡುವುದರ ಜೊತೆಗೆ ಆರೋಗ್ಯದ ಮೇಲೆ ಖರ್ಚು ಮಾಡುವುದನ್ನು ಮಧ್ಯಮಾವಧಿಯಲ್ಲಿ ಹೆಚ್ಚಿಸಬೇಕಾಗಿದೆ.

ಕಾರ್ಮಿಕ ಬಲದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ತ್ವರಿತವಾಗಿ ಸುಧಾರಿಸುವ ಇನ್ನೊಂದು ನಿರ್ಣಾಯಕ ಅಂಶ ಶಿಶುಪಾಲನೆಯ ಅಗತ್ಯಗಳನ್ನು ನೀಗಿಸುವುದಾಗಿದೆ.

ಜನಸಂಖ್ಯೆಯ ಲಾಭವನ್ನು ಸಮರ್ಪಕವಾಗಿ ಅರಿತುಕೊಳ್ಳಲು, ಉತ್ತಮ ಪಾವತಿ ಕೊಡುವ ಸಾಮಾನ್ಯ ವಲಯದ ಉದ್ಯೋಗಗಳನ್ನು ಸೃಷ್ಟಿಸಲು ಅನುವು ಮಾಡಿಕೊಡುವ ವಾತಾವರಣವನ್ನು ಸಷ್ಟಿಸುವತ್ತ ಮಧ್ಯಮ ಅವಧಿಯಲ್ಲಿ ನೀತಿಗಳನ್ನು ರೂಪಿಸಬೇಕು.

ಕೊನೆಯದಾಗಿ, ನಮ್ಮ ಒಟ್ಟು ಆಮದುಗಳನ್ನು ಕಡಿಮೆ ಮಾಡಲು, ಹೊಸ-ತಂತ್ರಜ್ಞಾನದ ಹೊಸ-ಯುಗದ ವಲಯಗಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರನ್ನು ಬಳಸಿಕೊಳ್ಳುವ ಸಾಂಪ್ರದಾಯಿಕ ಉತ್ಪಾದನಾ ವಲಯಗಳಿಗೂ ಪ್ರೋತ್ಸಾಹ ನೀಡುವ ಯೋಜನೆಗಳ ಬಗ್ಗೆ ಹೆಚ್ಚಿನ ಗಮನವನ್ನು ನಾವು ನಿರೀಕ್ಷಿಸುತ್ತೇವೆ. ಇತ್ತೀಚಿನ ವರ್ಷಗಳಲ್ಲಿ ಜಾಗತಿಕ ಸಾಮರ್ಥ್ಯ ಕೇಂದ್ರಗಳು ಸೇವೆಗಳ ರಫ್ತುಗಳ ದೊಡ್ಡ ಮೂಲವಾಗಿ ಹೊರಹೊಮ್ಮಿವೆ. ಹೀಗಾಗಿ ಸರಕಾರ ಸೇವಾ ವಲಯಕ್ಕೆ ಪೂರಕ ವಾತಾವರಣವನ್ನು ಸೃಷ್ಟಿಸುವುದು ಕೂಡ ಅಷ್ಟೇ ಮುಖ್ಯವಾಗುತ್ತದೆ.

(ಲೇಖಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗದ ಸಹ ಪ್ರಾಧ್ಯಾಪಕರು)

ಪ್ರಚೋದನಕಾರಿ ರಾಜಕಾರಣ; ಎಂದಿಗೂ ಅಪಾಯಕಾರಿ

ಅಭಿಮತ
ಎಸ್.ಪ್ರಕಾಶ್ ಶೇಷರಾಘವಾಚಾರ್
sprakashbjpgmail.com

ಪೆನ್ಸಿಲ್ವೇನಿಯಾದಲ್ಲಿ ಚುನಾವಣಾ ಪ್ರಚಾರದಲ್ಲಿ ಅಮೆರಿಕ ಅಧ್ಯಕ್ಷೀಯ ಚುನಾವಣೆಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ತೊಡಗಿದ್ದಾಗ ಅವರ ಮೇಲೆ ಹತ್ಯೆ ಯತ್ನ ನಡೆದು ಕೂದಲೆಳೆಯ ಅಂತರದಲ್ಲಿ ಅವರು ಪಾರಾಗುತ್ತಾರೆ. ಟ್ರಂಪ್ ಅಮೆರಿಕದ ಮಾಜಿ ಅಧ್ಯಕ್ಷರು ಅವರಿಗೆ ಸಿಕ್ರೇಟ್ ಸರ್ವಿಸ್ ಏಜೆಂಟರ ಭದ್ರತೆ ಇದ್ದರೂ ಕೂಡಾ ಗಂಭೀರ ಭದ್ರತಾ ವೈಫಲ್ಯವಾಗುತ್ತದೆ.

ಬಲಪಂಥೀಯ ವಿಚಾರಧಾರೆಯನ್ನು ಬೆಂಬಲಿಸುವ ಟ್ರಂಪ್ ತಮ್ಮ ನಿಷ್ಠುರ ಅಥವಾ ಅತಿರೇಕದ ಹೇಳಿಕೆಗಳಿಗೆ ತಮ್ಮ ಅಧ್ಯಕ್ಷೀಯ ಅವಧಿಯಲ್ಲಿ ಹಲವಾರು ವಿವಾದಗಳನ್ನು ಮೈಮೇಲೆ ಎಳೆದುಕೊಂಡಿದ್ದರು. ಭಾರತದ ಬಗ್ಗೆ ಹೇಳಬೇಕೆಂದರೆ ಟ್ರಂಪ್ ಮತ್ತು ಮೋದಿಯರ ಜತೆಗಿನ ಆತ್ಮೀಯ ಸಂಬಂಧ ಮೋದಿ ವಿರೋಧಿಗಳಿಗೆ ಮತ್ತು ಕಾಂಗ್ರೆಸ್ ಪಾರ್ಟಿಯ ನಾಯಕರಿಗೆ ಅರಗಿಸಿಕೊಳ್ಳಲಾಗದೆ ಅವರನ್ನು ಅನಗತ್ಯವಾಗಿ ಟೀಕಿಸುವುದು ಸಾಮಾನ್ಯವಾಗಿತ್ತು.

ಭಾರತಕ್ಕೆ ಟ್ರಂಪ್ ಭೇಟಿ ನೀಡಿದ ಸಂದರ್ಭದಲ್ಲಿ ದೆಹಲಿಯಲ್ಲಿ ಭೀಕರ ಕೋಮು ಗಲಭೆಯನ್ನು ನಡೆಯುತ್ತದೆ. ಗಲಭೆಯಲ್ಲಿ 54 ಹೆಚ್ಚು ಜನರ ಪ್ರಾಣ ಹೋಗಿ ದೆಹಲಿಯು ಹತ್ತಿ ಉರಿಯುತ್ತದೆ. ರಾಜಕೀಯ ಪ್ರೇರಿತ ಮತ್ತು ಭಾರತದ ಗೌರವಕ್ಕೆ ಮಸಿ ಬಳೆಯುವ ದುರುದ್ದೇಶದಿಂದ ಈ ಗಲಭೆ ಮಾಡಿಸಲಾಗುತ್ತದೆ.

ಜನಸಂಖ್ಯೆಗಿಂತ ಬಂದೂಕಗಳೇ ಹೆಚ್ಚಿರುವ ಅಮೆರಿಕದಲ್ಲಿ ಅತ್ಯಾಧುನಿಕ ಆಯುಧ ಹೊಂದುವುದು ಸುಲಭವು. ಸೂಕ್ತ ಸುರಕ್ಷತಾ ಕ್ರಮಗಳು ಕೈಗೊಳ್ಳುವುದರಲ್ಲಿಯೂ ವಿಫಲವಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಅನೇಕ ಬಾರಿ ಶೂಟ್ ಔಟ್ ನಡೆದು ಹತ್ತಾರು ಪ್ರಾಣಿಗಳು ಬಲಿಯಾಗಿದೆ. ತನ್ನ ನಾಗರಿಕರ ಸುರಕ್ಷತೆಯ ಜವಾಬ್ದಾರಿಯು ಅಮೆರಿಕಗೆ ಸೇರಿದ ಹೊಣೆ ಹೀಗಾಗಿ ನಾವು ಅದರ ಬಗ್ಗೆ ಟೀಕೆ ಟಿಪ್ಪಣಿ ಮಾಡುವುದರಲ್ಲಿ ಅರ್ಥವಿಲ್ಲ.

ಟ್ರಂಪ್ ಮೇಲೆ ನಡೆದ ಹತ್ಯಾ ಪ್ರಯತ್ನವು ನಮ್ಮ ದೇಶದಲ್ಲಿಯೂ ನಡೆದಿರುವ ರಾಜಕೀಯ ಹತ್ಯೆಗಳ ಕಾರಣಗಳ ಬಗ್ಗೆ ಮತ್ತು ಅದರ ಹಿಂದಿನ ಉದ್ದೇಶಗಳ ವಿಶ್ಲೇಷಣೆ ಅಗತ್ಯವಿದೆ. ಅಮೆರಿಕ ಅಧ್ಯಕ್ಷೀಯ ಚುನಾವಣಾ ಪ್ರಚಾರದ ಅಂಶಗಳು ಮತ್ತು ಭಾರತದಲ್ಲಿ ನಡೆದ ಚುನಾವಣಾ ಪ್ರಚಾರದ ವಿಷಯ ಹೋಲಿಕೆ ಮಾಡಿದರೆ ಅನೇಕ ಸಾಮ್ಯಗಳನ್ನು ಕಾಣಬಹುದು.

ಜೋ ಬೈಡೆನ್ ಈ ಬಾರಿ ಸೋಲುವ ಪ್ರಬಲ ಮುನ್ಸೂಚನೆಯಿರುವುದರಿಂದ ಟ್ರಂಪ್ ಪುನರಾಯ್ಕೆಯಾದರೆ ಪ್ರಜಾಪ್ರಭುತ್ವ ಅಪಾಯದಲ್ಲಿರುತ್ತದೆ ಎಂದು ಬೈಡನ್ ಆರೋಪಿಸುತ್ತಿದ್ದಾರೆ. ಇದೇ ವರಸೆಯನ್ನು ಎಲ್ಲೋ ಕೇಳಿರುವ ಹಾಗಿದೆಯಲ್ಲವಾ? ಹೌದು ಭಾರತದಲ್ಲಿ ಮೋದಿಯವರು ಪುನರಾಯ್ಕೆಯಾದರೆ ಪ್ರಜಾಪ್ರಭುತ್ವ ಅಪಾಯದಲ್ಲಿರುವುದು ಎಂಬುದೂ ಕಾಂಗ್ರೆಸ್ ಪಾರ್ಟಿಯ ಪ್ರಮುಖ ಅಸ್ತ್ರವಾಗಿತ್ತು.

ಬೈಡನ್ ತಮ್ಮ ಭಾಷಣದಲ್ಲಿ ಡೋನಾಲ್ಡ್ ಟ್ರಂಪ್ ಒಬ್ಬ ಸರ್ವಾಧಿಕಾರಿಯೆಂದು ಆರೋಪಿಸುತ್ತಿದ್ದಾರೆ. ಕಾಂಗ್ರೆಸ್ ನೇತೃತ್ವದ ಇಂಡಿ ಮೈತ್ರಿಕೂಟವು ಇದೇ ಆರೋಪವನ್ನು ಮೋದಿಯವರ ವಿರುದ್ಧ ಮಾಡುತ್ತಲೇ ಇದ್ದಾರೆ.

ಟ್ರಂಪ್ ಗೆದ್ದರೆ ಮುಂದೆ ಚುನಾವಣೆ ಇರುವುದಿಲ್ಲ ಮತ್ತು ಸಂವಿಧಾನ ರದ್ದು ಮಾಡುತ್ತಾರೆ ಎಂದು ಬೈಡನ್ ಆರೋಪಿಸುತ್ತಿದ್ದಾರೆ. ಭಾರತದಲ್ಲಿ ಅಕ್ಷರ ಪದ ವ್ಯತ್ಯಾಸವಿಲ್ಲದೆ. ಮೋದಿ ಗೆದ್ದರೆ ಇದೇ ಕಡೆಯ ಚುನಾವಣೆ ಮತ್ತು ಸಂವಿಧಾನ ರದ್ದು ಪಡಿಸುತ್ತಾರೆ ಎಂಬುದೆ ರಾಹುಲ್ ಗಾಂಧಿಯವರ ಚುನಾವಣಾ ಪ್ರಚಾರದ ಪ್ರಮುಖ ಅಂಶವಾಗಿತ್ತು.

ಅಮೆರಿಕದಲ್ಲಿ ವರ್ಣಭೇಧ ನೀತಿಯ ಬಗ್ಗೆ ಡೆಮಾಕ್ರಟಿಕ್ ಪಕ್ಷವು ಟ್ರಂಪ್ ವಿರುದ್ಧ ಪ್ರಮುಖ ಅಸ್ತ್ರವಾಗಿಸಿದೆ. ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಮೀಸಲಾತಿ ರದ್ದು ಮಾಡುತ್ತಾರೆ ಎಂಬ ಸುಳ್ಳಿನ ಪ್ರಚಾರ ಕೈಗೊಂಡು ದಲಿತ ಸಮಾಜದವರಲ್ಲಿ ಭಯ ಭಿತ್ತಿಸುವ ಪ್ರಯತ್ನ ನಡೆಯಿತು. ಪ್ರತಿಸ್ಪರ್ಧಿಯ ಬಗ್ಗೆ ಜನರಲ್ಲಿ ಭೀತಿ ಹುಟ್ಟು ಹಾಕಿದ್ದರ ಫಲ ಟ್ರಂಪ್‌ರವರನ್ನು ಹತ್ಯೆ ಮಾಡುವ ಅತಿರೇಕ ತಲುಪುತ್ತದೆ.

2013 ರಲ್ಲಿ ಮೋದಿಯವರು ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಘೋಷಣೆಯಾದ ತರುವಾಯ ಅವರ ಜನಪ್ರಿಯತೆಗೆ ಭಯ ಬಿದ್ದು ಮೋದಿಯವರು ಪಟ್ನಾದಲ್ಲಿ ಉದ್ದೇಶಿಸಲಿದ್ದ ಸಭೆಗೆ ಮುನ್ನ ಬಾಂಬ್ ಸ್ಫೋಟವಾಗುತ್ತದೆ ಮತ್ತು ವೇದಿಕೆಯ ಕೆಳಗೆ ಸ್ಫೋಟಗೊಳ್ಳದ ಬಾಂಬ್ ಪತ್ತೆಯಾಗುತ್ತದೆ. ಒಬ್ಬ ವ್ಯಕ್ತಿಯ ಬಗ್ಗೆ ಇಲ್ಲದ ಸಲ್ಲದ ಕೈಗೊಳ್ಳುವ ಅಪಪ್ರಚಾರದಿಂದ ಇಂತಹ ದುರ್ಘಟನೆಗಳಿಗೆ ಕಾರಣವಾಗುತ್ತದೆ.

2024 ರಲ್ಲಿ ವಾರಣಾಸಿಯ ರೋಡ್ ಶೋದಲ್ಲಿ ಮೋದಿಯವರ ಕಾರಿನ ಮೇಲೆ ಮೊಬೈಲ್ ಎಸೆಯಲಾಗುತ್ತದೆ. ಈ ದುರಾದೃಷ್ಟಕರ ಘಟನೆಯು ಸರ್ವತ್ರ ಖಂಡನೆಗೆ ಅರ್ಹವಾಗಿತ್ತು. ದುರ್ದೈವ ರಾಹುಲ್ ಗಾಂಧಿಯವರು ಅಪರೋಕ್ಷವಾಗಿ ಮೋದಿಯವರ ಜನಪ್ರಿಯತೆ ಕುಗ್ಗಿದೆ ಎಂದು ವ್ಯಾಖ್ಯಾನಿಸಲು ಉದಾಹರಿಸಿ ಈ ದುರಾದೃಷ್ಟಕರ ಸಂಗತಿಗೆ ಸಮರ್ಥನೆ ಕೊಡುತ್ತಾರೆ.

1948ರಲ್ಲಿ ಭಾರತ ಸ್ವಾತಂತ್ರ ಪಡೆದು ಇನ್ನು ಜಗತ್ತಿನಲ್ಲಿ ಕಣ್ಣು ಬಿಡುತ್ತಿರುವ ವೇಳೆಯಲ್ಲಿ ದೇಶ ವಿಭಜನೆಯಿಂದ ಹಿಂದೂಗಳ ಮಾರಣ ಹೋಮ ನಡೆಯಿತು ಇದಕ್ಕೆ ಗಾಂಧಿಯವರೆ ಕಾರಣ ಎಂದು ನಾಥುರಾಮ್ ಗೋಡ್ಸೆ ದೆಹಲಿಯ ಬಿರ್ಲಾ ಭವನದಲ್ಲಿ ಗಾಂಧಿಯವರನ್ನು ಅಮಾನುಷವಾಗಿ ಗುಂಡಿಟ್ಟು ಕೊಲ್ಲುತ್ತಾನೆ. ದೇಶಕ್ಕೆ ಸ್ವಾತಂತ್ರ ಕೊಡಿಸಲು ತನ್ನ ಜೀವನವನ್ನೇ ಮುಡಿಪಾಗಿಟ್ಟದ್ದ ಗಾಂಧಿಯನ್ನು ಗೋಡ್ಸೆಯು ದೇಶ ವಿಭಜನೆಯನ್ನು ನೆಪವಾಗಿಸಿಕೊಂಡು ಮಹಾಪರಾಧವನ್ನು ಎಸೆಗುತ್ತಾನೆ.

1968ರಲ್ಲಿ ಜನಸಂಘದ ಅಧ್ಯಕ್ಷರಾಗಿದ್ದ ದೀನದಯಾಳ್ ಉಪಾಧ್ಯಾಯರವರನ್ನು ಅವರು ಪ್ರಯಾಣಿಸುತ್ತಿದ್ದ ರೈಲು ಡಬ್ಬಿಯಲ್ಲಿ ಅಮಾನುಷವಾಗಿ ಕತ್ತರಿಸಿ ಕೊಲ್ಲಲಾಗುತ್ತದೆ. ಇವರ ನೇತೃತ್ವದಲ್ಲಿ ದೇಶದೆಲ್ಲೆಡೆ ಜನಸಂಘದ ಜನಪ್ರಿಯತೆಯು ಏರುಮುಖ ಕಾಣುತ್ತಿರುತ್ತದೆ. ಅಂತಹ ಸಂದರ್ಭದಲ್ಲಿ ದೀನದಯಾಳ ಉಪಾಧ್ಯಾಯರನ್ನು ಕ್ರೂರವಾಗಿ ಕೊಲ್ಲುತ್ತಾರೆ. ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ಇವರ ಹತ್ಯೆಯ ತನಿಖೆಯ ಬಗ್ಗೆ ತೋರಿಸಿದ ಉದಾಸೀನತೆಯ ಕಾರಣ ದೀನದಯಾಳ್ ಹತ್ಯೆಯ ಅಪರಾಧಿಗಳು ಮತ್ತು ಈ ಸಂಚಿನ ಹಿಂದೆ ಇದ್ದ ರೂವಾರಿಗಳು ಪತ್ತೆಯೇ ಆಗುವುದಿಲ್ಲ.

ಪಂಜಾಬ್‌ನ ಅಕಾಲಿ ದಳದ ಪ್ರಾಬಲ್ಯವನ್ನು ಕುಗ್ಗಿಸಲು ಕಾಂಗ್ರೆಸ್ ಭಿಂದ್ರನ್ ವಾಲೆಯೆಂಬ ಭೂತವನ್ನು ಸೃಷ್ಟಿಸುತ್ತಾರೆ. ಕಾಂಗ್ರೆಸ್ ಬೆಂಬಲದಿಂದ ಬೆಳೆದ ಭಿಂದ್ರನ್ ವಾಲೆಯು ದಂದದಾನಿ ಖಾಸ್ಲ ಎಂಬ ಸಂಸ್ಥೆ ಹುಟ್ಟುಹಾಕುತ್ತಾನೆ. ಕಾಂಗ್ರೆಸ್ ಇವನ ಚಟುವಟಿಕೆಗೆ ಹಣ ಸಹಾಯ ಮಾಡುತ್ತಿತ್ತು ಎಂದು ಪ್ರಬಲ ಕಾಂಗ್ರೆಸ್ ಬೆಂಬಲಿಗ ಕ್ಯಾರವಾನ್ ಪಾಕ್ಷಿಕ ಪತ್ರಿಕೆ ಸಂಪಾದಕ ಹರತೋಶ್ ಸಿಂಗ್ ಬಾಲ್ ಅವರು ಭಿಂದ್ರನ್ ವಾಲೆಯು ಬೆಳೆದು ಭೂತವಾದ ಹೆಜ್ಜೆಯ ಬಗ್ಗೆ ಖಜಚಿಠಿಜಿಟ್ಟಿಜಿಥಿ ಛ್ಟಿಛಿಜಿಚಿಞ ಪುಸ್ತಕದಲ್ಲಿ ಬರೆಯುತ್ತಾರೆ. 1980ರ ಚುನಾವಣೆಯಲ್ಲಿ ಈತ ಇಂದಿರಾ ಗಾಂಧಿಯೊಂದಿಗೆ ವೇದಿಕೆಯನ್ನು ಹಂಚಿಕೊಂಡಿದ್ದ ಎಂಬ ಮಾಹಿತಿ ನೀಡುತ್ತಾರೆ.

ಖಾಲಿಸ್ತಾನ ಸ್ಥಾಪನೆಯ ಪ್ರತಿಪಾದಕನಾಗಿ ಭಯೋತ್ಪಾದಕತೆಯನ್ನು ಪಂಜಾಬ್‌ನಲ್ಲಿ ಹರಡುತ್ತಾನೆ. ಅಂತಿಮವಾಗಿ ಅಕಾಲ್ ತಕ್ತ್‌ನಲ್ಲಿ ಅಡಗಿದ್ದ ಇವನನ್ನು ಬಗ್ಗು ಬಡಿಯಲು ಸುವರ್ಣ ಮಂದಿರದೊಳಗೆ ಸೇನೆಯನ್ನು ನುಗ್ಗಿಸಿ ಕೊಲ್ಲ ಬೇಕಾಗುತ್ತದೆ. ಇದರ ಪ್ರತೀಕಾರವಾಗಿ ಇಂದಿರಾ ಗಾಂಧಿಯವರು ತಮ್ಮ ಸಿಖ್ಖ್ ಅಂಗರಕ್ಷಕರ ಗುಂಡಿಗೆ ಬಲಿಯಾಗುತ್ತಾರೆ. ವಿಪರ್ಯಾಸವೆಂದರೆ ಮುಂದಾಲೋಚನೆಯಿಲ್ಲದೆ ಕ್ಷುಲ್ಲಕ ರಾಜಕೀಯ ಲಾಭಕ್ಕೆ ತಾವೇ ಸೃಷ್ಟಿಸಿದ ಭೂತವು ಅವರನ್ನು ಬಲಿ ಪಡೆಯುತ್ತದೆ.

1995ರಲ್ಲಿ ಪಂಜಾಬ್ ಮುಖ್ಯಮಂತ್ರಿ ಬೇಂತ್ ಸಿಂಗ್ ರವರನ್ನು ಸಿಖ್ಖ್ ಉಗ್ರಗಾಮಿಗಳು ಬಾಂಬ್ ಸ್ಫೋಟಿಸಿ ಹತ್ಯೆ ಮಾಡುತ್ತಾರೆ. ಚುನಾವಣೆಯಲ್ಲಿ ಗೆಲುವಿಗಾಗಿ ಪಂಜಾಬ್‌ನಲ್ಲಿ ನಡೆದಿರುವ ವಿಭಜಕ ರಾಜಕೀಯದ ಫಲ ಇಂದಿರಾ ಗಾಂಧಿಯವರನ್ನು ಹತ್ಯೆಗೈದ ಬೇಂತ್ ಸಿಂಗ್ ಪುತ್ರ ಸರ್ಬಜಿತ್ ಸಿಂಗ್ ಖಾಸ್ಲ ಲೋಕಸಭೆಗೆ ಚುನಾಯಿತನಾಗಿದ್ದಾನೆ.

ಎಲ್‌ಟಿಟಿಇ ಭಯೋತ್ಪಾದಕರಿಂದ ರಾಜೀವ್ ಗಾಂಧಿಯವರು ಅಮಾನುಷವಾಗಿ ಹತ್ಯೆಯಾಗುತ್ತಾರೆ. ರಾಜೀವ್ ಗಾಂಧಿಯವರು ಎಲ್‌ಟಿಟಿಇ ಮುಖ್ಯಸ್ಥ ಪ್ರಭಾಕರನ್ ರವರನ್ನು ಬಲವಂತವಾಗಿ ಭಾರತಕ್ಕೆ ಕರಸಿ ಶ್ರೀಲಂಕಾ ಶಾಂತಿ ಒಪ್ಪಂದಕ್ಕೆ ಸಹಿ ಮಾಡಿಸುತ್ತಾರೆ. ಶಾಂತಿ ಒಪ್ಪಂದವು ಸೂಸುತ್ರವಾಗಿ ಜಾರಿಗೆ ತರಲು ಭಾರತೀಯ ಸೈನ್ಯವನ್ನು ಜಾಫ್ನಾದಲ್ಲಿ ನಿಯೋಜನೆಯಾಗುತ್ತದೆ. ಇದೊಂದು ಆತ್ಮಘಾತುಕ ನಿರ್ಧಾರವಾಗುತ್ತದೆ. ಶಾಂತಿ ಸ್ಥಾಪಿಸಲು ಹೋಗಿದ್ದ ಐಪಿಕೆಎಫ್ ಪಡೆಯು ತಮಿಳು ಏಲಂನವರೊಂದಿಗೆ ಯುದ್ಧ ಮಾಡಬೇಕಾದ ಭೀಕರ ಸನ್ನಿವೇಶದಲ್ಲಿ ಸಿಲುಕಿಕೊಳ್ಳುತ್ತಾರೆ. ಭಾರತೀಯ ಸೇನೆಯು ಜಾಫ್ನಾದಿಂದ ಹೊರ ಬರುವುದರಲ್ಲಿ 1,800 ಸೈನಿಕರು ಹುತಾತ್ಮರಾಗಿರುತ್ತಾರೆ.

1991ರ ಲೋಕಸಭಾ ಚುನಾವಣೆಯಲ್ಲಿ ಮತ್ತೆ ರಾಜೀವ್ ಗಾಂಧಿಯವರು ಪುನರಾಯ್ಕೆಯಾಗುವ ಸಾಧ್ಯತೆಯು ದಟ್ಟವಾದಾಗ ಶ್ರೀಲಂಕಾಕ್ಕೆ ಸೈನಿಕರನ್ನು ಕಳುಹಿಸಿ ತಮ್ಮ ಹೋರಾಟಗಾರರನ್ನು ಕೊಲ್ಲಲು ರಾಜೀವ್ ಗಾಂಧಿ ಕಾರಣ ಎಂದು ಎಲ್‌ಟಿಟಿಇ ಅವರನ್ನು ಮಾನವ ಬಾಂಬ್ ಬಳಸಿ ಶ್ರೀಪೆರಂಬದೂರಿನಲ್ಲಿ ಹತ್ಯೆ ಮಾಡುತ್ತದೆ.

ಇಂದಿರಾ ಗಾಂಧಿಯವರು ಮತ್ತು ರಾಜೀವ್ ಗಾಂಧಿಯವರು ಅಂದಿನ ಪರಿಸ್ಥಿತಿಯಲ್ಲಿ ಕೈಗೊಂಡ ನಿರ್ಧಾರಗಳು ಅವರ ಜೀವಕ್ಕೆ ಕುತ್ತು ತಂದಿತು ಯಾವುದೇ ಹತ್ಯೆಯನ್ನು ಸಮರ್ಥಿಸುವುದು ನಾಗರಿಕ ಸಮಾಜದ ಲಕ್ಷಣವಾಗುವುದಿಲ್ಲ. ಅಸಮಾಧಾನಕ್ಕೆ ನೂರು ಕಾರಣಗಳಿದ್ದರು ಅದಕ್ಕೆ ಉತ್ತರ ಹತ್ಯೆಯಲ್ಲ.

ಕರ್ನಾಟಕದಲ್ಲಿ ಭಟ್ಕಳದ ಸಜ್ಜನ ಶಾಸಕ ಡಾ. ಯು. ಚಿತ್ತರಂಜನ್ ರವರನ್ನು 1996 ರಲ್ಲಿ ಮೂಲಭೂತವಾದಿಗಳು ಗುಂಡಿಟ್ಟು ಹತ್ಯೆ ಮಾಡುತ್ತಾರೆ. ಅವರ ಕೊಲೆಯಾಗಿ 28 ವರ್ಷ ಕಳೆದರು ಅಪರಾಧಿಗಳು ಪತ್ತೆಯಾಗಿಲ್ಲ. ಅವರನ್ನು ಜನರು ಮರೆತಿದ್ದಾರೆ ಬಿಜೆಪಿಯು ಮರೆತು ಮುಂದೆ ಹೋಗಿದೆ.

ಸಾಮಾಜಿಕ ತಾಣದಲ್ಲಿ ದಿನನಿತ್ಯ ವಿಷ ಕಾರುವ ಮತ್ತು ಸುಳ್ಳು ಸಂಗತಿಗಳನ್ನು ಹಂಚಿಕೊಳ್ಳುವ ಪರಿಣಾಮ ಇಂದು ವ್ಯಕ್ತಿಗಳ ಪ್ರಾಣಕ್ಕೆ ಕುತ್ತಾಗುತ್ತಿದೆ. ನೂಪುರ್ ಶರ್ಮಾ ವಿವಾದಿತ್ಮಕ ಹೇಳಿಕೆಯನ್ನು ಹೇಳಿದರು ಎಂದು ಆಕೆಯನ್ನು ಮೂಲಭೂತವಾದಿಗಳು ಗುರಿಯಾಗಿಸಿದ್ದಾರೆ . ಫೇಸ್‌ಬುಕ್‌ನಲ್ಲಿ ಆಕೆಯನ್ನು ಸಮರ್ಥಿಸಿಕೊಂಡ ಜೈಪುರದ ಕನ್ಹಯ್ಯಲಾಲ್ ಸರ್ ತನ್ ಪೇ ಜುದಾ ಎಂದು ಆತನ ತಲೆಯನ್ನು ಕತ್ತರಿಸಿ ಕೊಲ್ಲಲಾಗುತ್ತದೆ.

ಸಾಮಾಜಿಕ ಜಾಲ ತಾಣದಲ್ಲಿ ಪ್ರಚೋದನಕಾರಿ ಬರಹ ಮತ್ತು ಹಂಚಿಕೊಳ್ಳುವ ವಿಷಯ ಸಂಬಂಧಿಸಿದ ವ್ಯಕ್ತಿಗಳ ಜೀವಕ್ಕೆ ಅಪಾಯವೊಡ್ಡುವ ಸಂಭವ ದಟ್ಟವಾಗಿರುವುದು. ರಾಜಕೀಯ ನಾಯಕರಾಗಲಿ ಅಥವಾ ಸಕ್ರಿಯ ಜಾಲತಾಣ ಕಾರ್ಯಕರ್ತರು ಅತ್ಯಂತ ಜವಾಬ್ದಾರಿಯಿಂದ ವಿಷಯವನ್ನು ಹಂಚಿಕೊಳ್ಳಬೇಕು ಎಂಬುದನ್ನು ಅರಿತುಕೊಳ್ಳಬೇಕು. ಬೇಜವಾಬ್ದಾರಿ ಬರಹಗಳು ಮತ್ತೊಬ್ಬರ ಬದುಕಿಗೆ ಕೊಳ್ಳಿ ಇಡುತ್ತದೆ.

ರಾಜಕೀಯ ನಾಯಕರು ತಮ್ಮ ಸ್ವಾರ್ಥಕ್ಕೆ ತಮ್ಮ ಪ್ರತಿಸ್ಪರ್ಧಿಯನ್ನು ನ್ಯಾಯ ಮಾರ್ಗದಲ್ಲಿ ಸೋಲಿಸಲು ಸಾಧ್ಯವಿಲ್ಲದೆ ಜಾತಿ, ವೃತ್ತಿ, ಧರ್ಮ ಮತ್ತು ಭಾಷೆಯ ಹೆಸರಲ್ಲಿ ಪ್ರಚೋದಿಸಿ ಬೇಳೆ ಬೇಯಿಸಿಕೊಳ್ಳುವ ಹತಾಶೆತನದ ರಾಜಕೀಯದಿಂದ ಹತ್ಯೆಗಳಿಗೆ ಕಾರಣವಾಗುವುದು. ರಾಜಕೀಯ ನಾಯಕರು ಪ್ರಚೋದನಕಾರಿ ಅಜೆಂಡಾವನ್ನು ತೊರೆದು ಜವಾಬ್ದಾರಿಯುತವಾಗಿ ವರ್ತಿಸುವುದು ಅತ್ಯಗತ್ಯವಾಗಿದೆ.

(ಲೇಖಕರು: ಬಿಜೆಪಿ ವಕ್ತಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 208

ಸಮಾಚಾರ ಸಣ್ಣದಲ್ಲ

ರಾಹುಲ್‌ಗೆ ಉಮ್ಮನ್ ಚಾಂಡಿ ಸ್ಮರಣ ಪ್ರಶಸ್ತಿ

ತಿರುವನಂತಪುರಂ: ರಾಯಬರೇಲಿ ಸಂಸದ ರಾಹುಲ್ ಗಾಂಧಿ ಅವರಿಗೆ ಕೇರಳದ 'ಉಮ್ಮನ್ ಚಾಂಡಿ ಸಾರ್ವಜನಿಕ ಸೇವಕ' ಪ್ರಶಸ್ತಿ ಸಂದಿದೆ. ಕೇರಳ ಮಾಜಿ ಮುಖ್ಯ

ಮಂತ್ರಿ ದಿ.ಉಮ್ಮನ್ ಚಾಂಡಿ ಅವರ ನೆನಪಿಗಾಗಿ ವಾರ್ಷಿಕ ಸಂಸ್ಮರಣಾ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿ ನೀಡಲಾಗುತ್ತದೆ ಎಂದು ಉಮ್ಮನ್ ಚಾಂಡಿ ಫೌಂಡೇಶನ್ ಭಾನುವಾರ ಪ್ರಕಟಿಸಿದೆ. ರಾಹುಲ್ ಗಾಂಧಿ ಅವರಿಗೆ ಪ್ರಶಸ್ತಿ ಜತೆಗೇ 1 ಲಕ್ಷ ರು ನಗದು ಪುರಸ್ಕಾತ ಹಾಗೂ ಕಲಾವಿದ-ಚಿತ್ರ ನಿರ್ಮಾಪಕ ನೆಮೊಮ್ ಪುಷ್ಪರಾಜ್ ನಿರ್ಮಾಣದ ಕಲಾಕೃತಿಯನ್ನು ಪ್ರದಾನ ಮಾಡಲಾಗುತ್ತದೆ. 'ಭಾರತ್ ಜೋಡೊ' ಅಭಿಯಾನ ಮೂಲಕ ಜನರ ಸಮಸ್ಯೆಗಳನ್ನು ಆಲಿಸಿ ಪರಿಹಾರ ದೊರಕಿಸಲೆತ್ನಿಸಿದ ರಾಹುಲ್ ಗಾಂಧಿ ಅವರೇ ಈ ಪ್ರಶಸ್ತಿಗೆ ಸೂಕ್ತ ವ್ಯಕ್ತಿ ಎಂದು ಶಶಿ ತರೂರ್ ಸೇರಿ ಪರಿಣತ ತೀರ್ಪುಗಾರರು ಅಭಿಪ್ರಾಯಪಟ್ಟಿದ್ದಾರೆ ಎನ್ನಲಾಗಿದೆ.

ಆರ್ಮ್‌ಸ್ಟ್ರಾಂಗ್ ಕೊಲೆ: ಮತ್ತೊಬ್ಬ ಆರೋಪಿ ಸೆರೆ

ಚೆನ್ನೈ: ಬಿಎಸ್‌ಪಿ ತಮಿಳುನಾಡು ಘಟಕ ಅಧ್ಯಕ್ಷ ಆರ್ಮ್‌ಸ್ಟ್ರಾಂಗ್ ಕೊಲೆ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯನ್ನು ಚೆನ್ನೈ ಪೊಲೀಸರು ಬಂಧಿಸಿದ್ದಾರೆ.

ಆರೋಪಿ ವಕೀಲ ಎಂದು ತಿಳಿದುಬಂದಿದೆ. ಕೊಲೆ ಪ್ರಕರಣದ ಪ್ರಮುಖ ಆರೋಪಿಗಳ ಮೊಬೈಲ್ ಫೋನ್ ನಾಶ ಮಾಡಲು ಯತ್ನಿಸಿದ್ದ ಆರೋಪದಡಿ ಬಂಧಿಸಲಾಗಿದೆ. ಆರ್ಮ್‌ಸ್ಟ್ರಾಂಗ್ ಕೊಲೆ ಕೇಸ್‌ನಲ್ಲಿ ಈವರೆಗೆ 14 ಮಂದಿ ಬಂಧನವಾಗಿದೆ. ಪೊಲೀಸ್ ವಿಚಾರಣೆ ವೇಳೆ ಆರೋಪಿ ಅರುಲ್ ಎಂಬಾತ 6 ಮೊಬೈಲ್ ಫೋನ್‌ಗಳನ್ನು ಹರಿಧರನ್ ಎಂಬವರಿಗೆ ನಾಶ ಮಾಡಲು ನೀಡಿದ್ದಾಗಿ ಹೇಳಿದ್ದ. ಹೇಳಿಕೆ ಆಧರಿಸಿ 37 ವರ್ಷದ ವಕೀಲ, ಎಐಎಡಿಎಂಕೆ ಯುನಿಯನ್ ಸಮಿತಿ ಸದಸ್ಯ ಹರಿಧರನ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಕೊಲೆಯ ಮುಖ್ಯ ಆರೋಪಿಗಳು ನೀಡಿದ್ದ ಮೊಬೈಲ್ ಫೋನ್‌ಗಳನ್ನು ಹರಿಧರನ್, ಕೊಸಸ್ಥಲೈ ನದಿಗೆ ಬಿಸಾಡಿದ್ದಾಗಿ ಹೇಳಿದ್ದಾನೆ. ವಿಶೇಷ ದಳದ ಸಿಬ್ಬಂದಿ 3 ಫೋನ್‌ಗಳನ್ನು ಪತ್ತೆಹಚ್ಚಿದ್ದಾರೆ, ಉಳಿದ ಫೋನ್‌ಗಳಿಗೆ ಶೋಧ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಜು.5ರಂದು ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ಆರ್ಮ್‌ಸ್ಟ್ರಾಂಗ್‌ರನ್ನು ಅವರ ಮನೆ ಬಳಿಯೇ ಕೊಂದಿದ್ದರು.

ಮೆಟ್ಟೂರು ಅಣೆಕಟ್ಟೆ ನೀರಿನ ಮಟ್ಟ ಏರಿಕೆ

ಚೆನ್ನೈ: ಕರ್ನಾಟಕದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಕಾವೇರಿ ನದಿಯಲ್ಲಿ ಭಾರೀ ಹರಿವು ಇರುವುದರ ಪರಿಣಾಮ ತಮಿಳುನಾಡಿನ ಮೆಟ್ಟೂರಿನ



ಸ್ಟ್ಯಾನ್ಲಿ ಜಲಾಶಯದ ನೀರಿನ ಮಟ್ಟದಲ್ಲಿ ಭಾರಿ ಏರಿಕೆಯಾಗಿದೆ. ತಮಿಳುನಾಡು ರೈತರ ಜೀವನಾಡಿ ಯಾದ ಕಾವೇರಿ ಪ್ರದೇಶದ ಈ ಅಣೆಕಟ್ಟೆ ಭಾನು ವಾರದ ವೇಳೆಗೆ ಅರ್ಧದಷ್ಟು ನೀರಿನಿಂದ ತುಂಬಿಕೊಂಡಿದೆ. ತಮಿಳುನಾಡಿಗೆ ಕಾವೇರಿ ನದಿ ನೀರು ಸೇರುವ ಬಿಳಿಗುಂಡ್ಲು ಪ್ರದೇಶದಲ್ಲಿ ಒಳಹರಿವು 67 ಸಾವಿರ ಕ್ಯೂಸೆಕ್ ಅಡಿಗಳಿಗೆ ಏರಿಕೆಯಾಗಿದೆ. ಧರ್ಮಪುರಿಯ ಹೊಗೇನಕಲ್ ಜಲಪಾತವೂ ಮೈದುಂಬಿದೆ. ಸ್ಟ್ಯಾನ್ಲಿ ಜಲಾಶಯದ ಪೂರ್ಣ ಸಾಮರ್ಥ್ಯ 120 ಅಡಿಗಳು. ಶನಿವಾರ 61.130 ಅಡಿಗಳಷ್ಟು ನೀರು ತುಂಬಿತ್ತು. ಭಾನುವಾರದ ವೇಳೆಗೆ ನೀರಿನ ಮಟ್ಟ ಮತ್ತಷ್ಟು ಏರಿಕೆಯಾಗಿದೆ. ಜಲಾಶಯದ ಹೊರಹರಿವು 1 ಸಾವಿರ ಕ್ಯೂಸೆಕ್‌ಗಳಷ್ಟಿದೆ. ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹ 25.674 ಟಿಎಂಸಿ ಅಡಿಗಳಷ್ಟಿದೆ.

ಚುನಾವಣೆ ಸೋಲು; ಒಪಿಸಿಸಿ ವಿಸರ್ಜನೆ

ಭುವನೇಶ್ವರ: ತಿಂಗಳ ಹಿಂದಷ್ಟೇ ಕೊನೆಗೊಂಡ ಲೋಕಸಭೆ ಮತ್ತು ಒಡಿಶಾ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ರಾಜ್ಯ ಘಟಕ ಅತ್ಯಂತ ಕಳಪೆ ಪ್ರದ



ರ್ಶನ ನೀಡಿದೆ ಎಂದು ಸಿಟ್ಟಾಗಿರುವ ಕಾಂಗ್ರೆಸ್ ಪಕ್ಷದ ವರಿಷ್ಠರು, ಒಡಿಶಾ ಪ್ರದೇಶ ಕಾಂಗ್ರೆಸ್ ಸಮಿತಿಯನ್ನೇ (ಒಪಿಸಿಸಿ) ವಿಸರ್ಜಿಸಿ ಭಾನುವಾರ ಕ್ರಮ ಜರುಗಿಸಿದ್ದಾರೆ. ಶರತ್ ಪಟ್ನಾಯಕ್ ಅಧ್ಯಕ್ಷತೆಯ ಒಡಿಶಾ ಪ್ರದೇಶ ಕಾಂಗ್ರೆಸ್ ಸಮಿತಿ, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ, ಜಿಲ್ಲಾ-ತಾಲೂಕು-ಬ್ಲಾಕ್ ಸಮಿತಿಗಳನ್ನೂ ವಿಸರ್ಜಿಸಲಾಗಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಂದಲೇ ಈ ಆದೇಶ ಭಾನುವಾರ ಹೊರಬಿದ್ದಿದೆ.

{ **ಅಖಿಲೇಶ್ ಯಾದವ್** } ಎಸ್‌ಪಿ ಸಂಸದ

ಕೇಂದ್ರದಲ್ಲಿನ ಎನ್‌ಡಿಎ ಸರಕಾರ ಹೆಚ್ಚು ಕಾಲ ಅಧಿಕಾರದಲ್ಲಿ ಉಳಿಯುವುದಿಲ್ಲ. ಶೀಘ್ರದಲ್ಲೇ ಪತನವಾಗಲಿದೆ. ಕೋಮುವಾದಿ ಶಕ್ತಿಗಳು ಯಾವುದೇ ಬೆಲೆ ತೆತ್ತಾದರೂ ಅಧಿಕಾರದಲ್ಲಿ ಉಳಿಯಲು ಯತ್ನಿಸುತ್ತವೆ. ಸಂಚು ರೂಪಿಸುವ ಮೂಲಕ ದೇಶದಲ್ಲಿ ಅಸ್ಥಿರತೆ ಉಂಟು ಮಾಡಲೆತ್ನಿಸುತ್ತವೆ. ಆದರೆ, ಅವರ ಇಂಥ ಪ್ರಯತ್ನಗಳು ಫಲ ನೀಡುವುದಿಲ್ಲ.

ಸದನದಲ್ಲಿಂದು ಆರ್ಥಿಕ ಸಮೀಕ್ಷೆ ಮಂಡನೆ | ಮಂಗಳವಾರ ಪೂರ್ಣ ಬಜೆಟ್ ಮಂಡನೆ | ಆ.12ರವರೆಗೂ 19 ದಿನಗಳ ಕಲಾಪ

ಸಂಸತ್ ಮುಂಗಾರು ಅಧಿವೇಶನ ಇಂದಿನಿಂದ

ದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನ ಸೋಮವಾರ ಬೆಳಗ್ಗೆ ಆರಂಭವಾಗಲಿದೆ. ಆ.12ರವರೆಗೆ ಮುಂಗಾರು ಅಧಿವೇಶನ ಜರುಗಲಿದ್ದು, 19 ದಿನಗಳ ಕಾಲ ಕಲಾಪ ನಡೆಸುವುದಕ್ಕೆ ಯೋಜಿಸಲಾಗಿದೆ.

ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಅಧಿವೇಶನದ ಮೊದಲ ದಿನ(ಸೋಮವಾರ) ಸಂಸತ್ತಿನಲ್ಲಿ ಆರ್ಥಿಕ ಸಮೀಕ್ಷೆ ಮಂಡಿಸಲಿದ್ದಾರೆ. ಎರಡನೇ ದಿನವಾದ ಮಂಗಳವಾರ 2024-25ನೇ ಹಣಕಾಸು ವರ್ಷದ ಅವಧಿಗೆ ಮುಂಗಡಪತ್ರ ಮಂಡಿಸಿ ಸದನದ ಒಪ್ಪಿಗೆ ಕೋರಲಿದ್ದಾರೆ.

ಇದೇ ವೇಳೆ, ಕೇಂದ್ರ ಸರಕಾರ ಕಾಫಿ ಮತ್ತು ರಬ್ಬರ್ ಬೆಳೆಗಳಿಗೆ ಉತ್ತೇಜನ ನೀಡುವ ತಿದ್ದುಪಡಿ ಅಂಶಗಳನ್ನು ಒಳಗೊಂಡ 2 ಮಸೂದೆಗಳು ಸೇರಿದಂತೆ ಒಟ್ಟು 6 ವಿಧೇಯಕಗಳನ್ನು ಸಂಸತ್ತಿನಲ್ಲಿ ಮಂಡಿಸಲು ಸಿದ್ಧತೆ ಮಾಡಿಕೊಂಡಿದೆ. ಬ್ರಿಟಿಷ್ ಆಡಳಿತ ಕಾಲದ, 90 ವರ್ಷಗಳಷ್ಟು ಹಳೆಯದಾದ ವಿಮಾನಯಾನ ಕಾಯ್ದೆಗೂ ತಿದ್ದುಪಡಿ ತರಲಾಗಿದ್ದು, ಆ ವಿಧೇಯಕವೂ ಇದೇ ಅಧಿವೇಶನದಲ್ಲಿ ಮಂಡನೆಯಾಗಲಿದೆ.

ಒಡಿಶಾಗೆ ವಿಶೇಷ ವರ್ಗದ ಸ್ಥಾನಮಾನದ ಬೇಡಿಕೆಯನ್ನು ಲೋಕಸಭೆಯಲ್ಲಿ ಕೈಗೆತ್ತಿಕೊಳ್ಳುವಂತೆ ತಮ್ಮ ಪಕ್ಷದ ಸಂಸದರಿಗೆ ಒಡಿಶಾ ಮಾಜಿ ಮುಖ್ಯಮಂತ್ರಿ, ಬಿಜೆಡಿ ನಾಯಕ ನವೀನ್ ಪಟ್ನಾಯಕ್ ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಬಹಿ ಖಾತಾ-ಡಿಜಿಟಲ್ ಬಜೆಟ್ ರೂಢಿ

ವಿತ್ತ ಸಚಿವೆ ನಿರ್ಮಲಾ 7ನೇ ಮುಂಗಡಪತ್ರ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಮೊದಲ ಮತ್ತು 2ನೇ ಸರಕಾರದ ಅವಧಿಯಲ್ಲಿ ಈವರೆಗೆ 6 ಬಜೆಟ್‌ಗಳನ್ನು ಮಂಡಿಸಿರುವ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಗ ಳವಾರ 7ನೇ ಮುಂಗಡಪತ್ರವನ್ನು ಸಂಸತ್ತಿನಲ್ಲಿ ಮಂಡಿಸಲಿದ್ದಾರೆ.

ಇದಕ್ಕೂ ಮುನ್ನ ಅತ್ಯಧಿಕ ಬಾರಿ ಕೇಂದ್ರ ಸರಕಾರದ ಬಜೆಟ್‌ಗಳನ್ನು ಮಂಡಿಸಿದವರಲ್ಲಿ ಮೊರಾರ್ಜಿ ದೇಸಾಯಿ ಮೊದಲಿಗರಾಗಿದ್ದಾರೆ. ಅವರು ಒಟ್ಟು 10 ಬಜೆಟ್‌ಗಳನ್ನು ಮಂಡಿಸಿದ್ದಾರೆ. ಕಾಂಗ್ರೆಸ್ ಪಕ್ಷದ ನೇತೃತ್ವದ 2 ಅವಧಿಯ ಯುಪಿಎ ಸರಕಾರ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರಗಳ ಅವಧಿಯಲ್ಲಿ ಒಟ್ಟು 9 ಬಾರಿ ಬಜೆಟ್‌ಗಳನ್ನು ಮಂಡಿಸಿದ ಖ್ಯಾತಿ ಪಿ. ಚಿದಂಬರಂ ಅವರಿಗೆ ಸಲ್ಲುತ್ತದೆ.

ಪಶ್ಚಿಮ ಬಂಗಾಳದ ಹಿರಿಯ ರಾಜಕಾರಣಿ, ಕಾಂಗ್ರೆಸ್ ಮುಖಂಡರಾಗಿದ್ದ ಪ್ರಣವ್ ಮುಖರ್ಜಿ ಒಟ್ಟು 8 ಮುಂಗಡಪತ್ರಗಳನ್ನು ಮಂಡಿಸಿದ್ದಾರೆ.

ಆರ್ಥಿಕ ತಜ್ಞ ಎನಿಸಿಕೊಂಡಿದ್ದ, ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ಸೇವೆ ಸಲ್ಲಿಸಿದ್ದ ಮನಮೋಹನ್ ಸಿಂಗ್ ಅವರು 5 ಬಾರಿ ಮುಂಗಡಪತ್ರ ಮಂಡಿಸಿದ್ದಾರೆ. ಪ್ರಧಾನಿ ಪಿ.ವಿ.ನರಸಿಂಹರಾವ್ ಅವರ ಸರಕಾರದ ಅವಧಿಯಲ್ಲಿ ಉದಾರೀಕರಣ ಮತ್ತು ಆರ್ಥಿಕ ಸುಧಾರಣೆ ಪ್ರಕ್ರಿಯೆಗೂ ನಾಂದಿ ಹಾಡಿದವರು ಎಂಬ ಖ್ಯಾತಿಗೂ ಪಾತ್ರರಾಗಿದ್ದಾರೆ. ಅಟಲ್ ಬಿಹಾರಿ ವಾಯಪೇಯಿ ಅವರ ಸಂಪುಟದಲ್ಲಿ ಹಣಕಾಸು ಸಚಿವರಾಗಿದ್ದ ಯಶವಂತ್ ಸಿನ್ಹಾ 5 ಬಜೆಟ್ ಮಂಡಿಸಿದ್ದಾರೆ.

ಡಿಜಿಟಲ್ ಬಜೆಟ್

ಈವರೆಗೂ ವಿತ್ತ ಸಚಿವರು ಬಜೆಟ್ ಪ್ರತಿಯನ್ನು ಕೆಂಪು ಬಣ್ಣದ ಸೂಟ್‌ಕೇಸ್‌ನಲ್ಲಿಟ್ಟು ಸದನಕ್ಕೆ ಬರುತ್ತಿದ್ದರೆ, ಆ ಸಂಪ್ರದಾಯವನ್ನು 'ಬಹಿ ಖಾತಾ' ಮೂಲಕ ಬದಲಿಸಿದವರು ನಿರ್ಮಲಾ ಸೀತಾರಾಮನ್. 2019ರ ಜು.5ರಂದು ಬಜೆಟ್ ಮಂಡನೆಗೆ ಬರುವಾಗ ಕೆಂಪುವಸ್ತ್ರದಲ್ಲಿ ಸುತ್ತಿದ್ದ ಮುಂಗಡಪತ್ರದ ಪ್ರತಿಯನ್ನು ಸಂಸತ್ತಿಗೆ ತಂದರು. 2021ರಲ್ಲಿ ಡಿಜಿಟಲ್ ಪ್ರತಿ ಇರುವ ಟ್ಯಾಬ್ಲೆಟ್ ಅನ್ನು ಕೆಂಪುವಸ್ತ್ರದಲ್ಲಿ ಸುತ್ತಿ ತಂದರು. ಆ ಮೂಲಕ ಸದನದಲ್ಲಿ ಕಾಗದರಹಿತ ಬಜೆಟ್ ಮಂಡನೆಯ ದಾಖಲೆ ನಿರ್ಮಿಸಿದರು. ಡಿಜಿಟಲ್ ಇಂಡಿಯಗೆ ಬಜೆಟ್ ಮಂಡನೆಯನ್ನೂ ಸೇರಿಸಿದರು.

ಸರ್ವಪಕ್ಷ ಸಭೆಯಲ್ಲಿ ಜೆಡಿಯು, ವೈಎಸ್‌ಆರ್ ಕಾಂಗ್ರೆಸ್ ಒತ್ತಾಯ | ಡೆಪ್ಯುಟಿ ಸ್ಪೀಕರ್ ವಿಚಾರ ಚರ್ಚೆ

ವಿಶೇಷ ಸ್ಥಾನಮಾನಕ್ಕೆ ಬಿಹಾರ, ಆಂಧ್ರ ಆಗ್ರಹ

ದೆಹಲಿ: ಸಂಸತ್ತಿನ ಬಜೆಟ್ ಅಧಿವೇಶನಕ್ಕೂ ಮುನ್ನ ಕೇಂದ್ರ ಸರಕಾರ ಭಾನುವಾರ ಕರೆದಿದ್ದ ಸರ್ವಪಕ್ಷ ಸಭೆಯಲ್ಲಿ ರಾಜ್ಯಗಳಿಗೆ ವಿಶೇಷ ಸ್ಥಾನಮಾನ, ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ, ಇ.ಡಿ ಮತ್ತು ಸಿಬಿಐ ಸಂಸ್ಥೆಗಳ ದುರ್ಬಳಕೆ ಮತ್ತು ಉಪ ಸಭಾಪತಿ ಸ್ಥಾನಕ್ಕೆ ಸಂಬಂಧಿಸಿದ ವಿಷಯಗಳು ಪ್ರಸ್ತಾಪವಾದವು.

ಆಂಧ್ರಪ್ರದೇಶಕ್ಕೆ ವಿಶೇಷ ಸ್ಥಾನಮಾನ ಘೋಷಿಸುವಂತೆ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ನಾಯಕರು ಒತ್ತಾಯಿಸಿದರೆ, ಬಿಹಾರಕ್ಕೆ ವಿಶೇಷ ಸ್ಥಾನಮಾನಕ್ಕೆ ಜೆಡಿಯು ನಾಯಕರು ಒತ್ತಾಯಿಸಿದರು. ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ, ಇ.ಡಿ ಮತ್ತು ಸಿಬಿಐ ಸಂಸ್ಥೆಗಳ ದುರ್ಬಳಕೆ ಮತ್ತು ಡೆಪ್ಯುಟಿ ಸ್ಪೀಕರ್ ಆಯ್ಕೆ ವಿಚಾರ ಪ್ರಸ್ತಾಪಿಸಿದರೆ, ಉತ್ತರ ಪ್ರದೇಶದ ಕನ್ವರ್ ಭಕ್ತರ ಯಾತ್ರೆಯ ಮಾರ್ಗದಲ್ಲಿನ ಉಪಹಾರ ಗೃಹಗಳಲ್ಲಿ ಮಾಲೀಕರ ಹೆಸರನ್ನು ಫಲಕದಲ್ಲಿ ಪ್ರಕಟಿಸಬೇಕೆಂಬ ವಿಚಾರವಾಗಿ ಸಮಾಜವಾದಿ ಪಕ್ಷದ ಸಂಸದ ರಾಮ್ ಗೋಪಾಲ್ ಯಾದವ್ ಸಭೆಯಲ್ಲಿ ಚರ್ಚಿಸಿದರು.

ಸಂಸತ್ತಿನ ಉಭಯ ಸದನಗಳನ್ನು ಸುಗಮವಾಗಿ ನಡೆಸಲು ಪ್ರತಿಪಕ್ಷದವರು ಸಹಕಾರ ನೀಡಬೇಕು ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮನವಿ ಮಾಡಿದರು. ಅದಕ್ಕೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ನಾಯಕ ಗೌರವ್ ಗೊಗೊಯ್, ಸಂಸತ್ತಿನಲ್ಲಿ ಸಮಸ್ಯೆಗಳನ್ನು ಪ್ರಸ್ತಾಪಿಸಲು ಪ್ರತಿಪಕ್ಷಗಳಿಗೆ ಹೆಚ್ಚಿನ ಅವಕಾಶ ಕೊಡಬೇಕು ಎಂದು ಗಮನ ಸೆಳೆದರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಸಭೆಯಲ್ಲಿ ಸರಕಾರದ ದೃಷ್ಟಿಕೋನ ಪ್ರಸ್ತುತಪಡಿಸಿದರು. ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ, ಕೇಂದ್ರ ಸಚಿವ-ಎಲ್‌ಜೆಪಿ ನಾಯಕ ಚಿರಾಗ್ ಪಾಸ್ವಾನ್, ಕಾಂಗ್ರೆಸ್ ನಾಯಕರಾದ ಜೈರಾಮ್ ರಮೇಶ್ ಮತ್ತು ಕೆ.ಸುರೇಶ್, ಗೌರವ್ ಗೊಗೊಯ್, ಆರ್‌ಜೆಡಿ ಪಕ್ಷದ ಅಭಯ್ ಕುಶ್ವಾಹ, ಜೆಡಿಯುನ ಸಂಜಯ್ ಝಾ, ಎಎಪಿಯ ಸಂಜಯ್ ಸಿಂಗ್, ಎಸ್ಪಿ ನಾಯಕ ರಾಮ್ ಗೋಪಾಲ್ ಯಾದವ್ ಮತ್ತು ಎನ್ಸಿಪಿಯ ಪ್ರಫುಲ್ ಪಟೇಲ್, ಎಐಎಂಐಎಂ ಪಕ್ಷದ ಅಸಾದುದ್ದೀನ್ ಓವೈಸಿ ಸೇರಿದಂತೆ ವಿವಿಧ ಪಕ್ಷಗಳ ನಾಯಕರು ಭಾಗವಹಿಸಿದ್ದರು.

ಟಿಎಂಸಿ ಗೈರು:

ಇಂಡಿಯ ಒಕ್ಕೂಟದ ಪಕ್ಷಗಳ ಸಂಸದರು ಭಾನುವಾರ ಸರ್ವಪಕ್ಷ ಸಭೆಯಲ್ಲಿ ಭಾಗವಹಿಸಿದ್ದರೂ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸದಸ್ಯರು ಮಾತ್ರ ಹಾಜರಿರಲಿಲ್ಲ. ಜು.21ರಂದು ಪಶ್ಚಿಮ ಬಂಗಾಳದಲ್ಲಿ ಹುತಾತ್ಮರ ದಿನ ಆಚರಿಸುತ್ತಿರುವುದರಿಂದ ಸಭೆಗೆ ಹಾಜರಾಗುವುದಿಲ್ಲ ಎಂದು ಮೊದಲೇ ಮಾಹಿತಿ ನೀಡಿದ್ದರು.

ಡೆಪ್ಯುಟಿ ಸ್ಪೀಕರ್ ಹುದ್ದೆ

ಪ್ರತಿಪಕ್ಷದವರಿಗೇ ಲೋಕಸಭೆಯಲ್ಲಿನ ಉಪ ಸಭಾಧ್ಯಕ್ಷರ ಸ್ಥಾನ ಬಿಟ್ಟುಕೊಡಬೇಕು ಎಂದು ಕಾಂಗ್ರೆಸ್ ನಾಯಕರು ಸಭೆಯಲ್ಲಿ ಬೇಡಿಕೆ ಮಂಡಿಸಿದರು. ಆದರೆ, ಸಭೆ ಈ ಬಗ್ಗೆ ಹೆಚ್ಚಿನ ಚರ್ಚೆ ನಡೆಸಲಿಲ್ಲ ಎಂದು ತಿಳಿದುಬಂದಿದೆ. ಆಂಧ್ರಪ್ರದೇಶಕ್ಕೆ ವಿಶೇಷ ಸ್ಥಾನಮಾನಕ್ಕೆ ವೈಎಸ್ ಆರ್ ಕಾಂಗ್ರೆಸ್ ಪಕ್ಷ ಪಸ್ತಾಪಿಸಿದಾಗ ತೆಲುಗು ದೇಶಂ ಪಕ್ಷದ(ಟಿಡಿಪಿ) ನಾಯಕ ಮೌನವಾಗಿದ್ದರು ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಸಭೆ ಬಳಿಕ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಇಂದಿನಿಂದ ಅಧಿವೇಶನ

ಸಂಸತ್ತಿನ ಬಜೆಟ್ ಅಧಿವೇಶನ ಸೋಮವಾರ ಆರಂಭವಾಗಲಿದೆ. ಆ.12ರವರೆಗೂ ಜರುಗಲಿದೆ. ಒಟ್ಟು 19 ದಿನಗಳ ಅಧಿವೇಶನ ನಡೆಯಲಿದೆ. ಕೇಂದ್ರ ಸರಕಾರ ತಿದ್ದುಪಡಿ ವಿಧೇಯಕಗಳು ಸೇರಿದಂತೆ 6 ವಿಧೇಯಕಗಳನ್ನು ಮಂಡಿಸಲು ಸಿದ್ಧತೆ ಮಾಡಿಕೊಂಡಿದೆ.

ಪ್ರವಾಸಿ ವಾಹನಕ್ಕೆ ಕಸದ ಚೀಲ ಕಡ್ಡಾಯ: ಸಿಕ್ಕಿಂ

ಗ್ಯಾಂಗ್ಟೋಕ್: ಸಿಕ್ಕಿಂ ರಾಜ್ಯಕ್ಕೆ ಬರುವ ಪ್ರವಾಸಿ ವಾಹನಗಳಲ್ಲಿ ಕಸದ ಚೀಲ ಕಡ್ಡಾಯವಾಗಿ ಇರಬೇಕು ಎಂದು ಪ್ರವಾಸೋದ್ಯಮ ಇಲಾಖೆ ಆದೇಶ ಹೊರಡಿಸಿದೆ. ರಾಜ್ಯದಲ್ಲಿ ಪರಿಸರ ಮಾಲಿನ್ಯವಾಗದಂತೆ ತಡೆದು ಪ್ರಕೃತಿ ಸೌಂದರ್ಯ ಕಾಪಾಡಲು ಹಾಗೂ ಸ್ವಚ್ಛತೆಯೆಡೆಗೆ ಜಾಗೃತಿ ಮೂಡಿಸಲು ರಾಜ್ಯ ಸರಕಾರ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ.

ಪ್ರವಾಸೋದ್ಯಮ ಇಲಾಖೆ ಹಾಗೂ ನಾಗರಿಕ ವಿಮಾನಯಾನ ಇಲಾಖೆ ಜಂಟಿಯಾಗಿ ಈ ಆದೇಶ ಹೊರಡಿಸಿವೆ. ಕಸದ ಚೀಲ ಬಳಕೆ ಬಗ್ಗೆ ಪ್ರಯಾಣಿಕರಿಗೆ ತಿಳಿಸುವುದು ಪ್ರವಾಸದ ನಿರ್ವಾಹಕರು, ಪ್ರವಾಸಿ ಏಜೆಂಟ್‌ಗಳು, ಪ್ರವಾಸಿ ವಾಹನಗಳ ಚಾಲಕರ ಜವಾಬ್ದಾರಿ ಎಂದೂ ಹೇಳಲಾಗಿದೆ. ಕಸದ ಚೀಲ ಬಳಕೆ ಕಡ್ಡಾಯಗೊಳಿಸಲು ಪ್ರವಾಸಿ ವಾಹನಗಳ ತಪಾಸಣೆಗೂ ಇಲಾಖೆ ಮುಂದಾಗಿದೆ. ಆದೇಶ ಉಲ್ಲಂಘಿಸಿದಲ್ಲಿ ದಂಡ ವಿಧಿಸುವುದಾಗಿಯೂ ಪ್ರವಾಸೋದ್ಯಮ ಹಾಗೂ ನಾಗರಿಕ ವಿಮಾನಯಾನ ಇಲಾಖೆ ಎಚ್ಚರಿಕೆ ನೀಡಿವೆ.

ಪ್ರಾಕೃತಿಕ ಸೌಂದರ್ಯದ ಗಣಿ ಸಿಕ್ಕಿಂ ಪ್ರವಾಸಕ್ಕೆ ಪ್ರತಿ ವರ್ಷ 20ಲಕ್ಷಕ್ಕೂ ಅಧಿಕ ಪ್ರವಾಸಿಗರು ಆಗಮಿಸುತ್ತಾರೆ. ಹೀಗಾಗಿ ಸ್ವಚ್ಛತೆ ಕಾಯ್ದುಕೊಳ್ಳುವುದು ದೊಡ್ಡ ಸವಾಲಾಗಿದೆ.

ವಿಮೋಚನಾ ಹೋರಾಟಗಾರ ಕುಟುಂಬ ಮೀಸಲು ಶೇ.5ಕ್ಕೆ | ಬುಡಕಟ್ಟು ಮೀಸಲು ಶೇ.2ಕ್ಕೆ

ಮೀಸಲು ಪ್ರಮಾಣ ತಗ್ಗಿಸಿದ ಬಾಂಗ್ಲಾ ಸುಪ್ರೀಂ

ಢಾಕಾ: ಕಳೆದೊಂದು ವಾರದಿಂದ ಬಾಂಗ್ಲಾದೇಶಾದ್ಯಂತ ಹಿಂಸಾತ್ಮಕ ಪ್ರತಿಭಟನೆಗೆ ಕಾರಣವಾಗಿದ್ದ ನೌಕರಿ ಮೀಸಲು ವಿಚಾರದಲ್ಲಿ ಸುಪ್ರೀಂ ಕೋರ್ಟ್ ಭಾನುವಾರ ಮಹತ್ವದ ತೀರ್ಪು ನೀಡಿದೆ. ಬಾಂಗ್ಲಾ ವಿಮೋಚನಾ ಹೋರಾಟಗಾರರ ಕುಟುಂಬದವರಿಗೆ ಶೇ.30ರಷ್ಟಿದ್ದ ಮೀಸಲು ಪ್ರಮಾಣವನ್ನು ಸುಪ್ರೀಂ ಕೋರ್ಟ್ ಶೇ.5ಕ್ಕೆ ತಗ್ಗಿಸಿದೆ.

ನೌಕರಿಗೆ ಸಂಬಂಧಿಸಿದ ಒಟ್ಟಾರೆ ಮೀಸಲು ಪ್ರಮಾಣವನ್ನೇ ಶೇ.7ಕ್ಕೆ ಮಿತಿಗೊಳಿಸಿರುವ ಸುಪ್ರೀಂ ಕೋರ್ಟ್, ಇನ್ನು ಮುಂದೆ ಶೇ.93ರಷ್ಟು ನೌಕರಿಗಳನ್ನು ಪ್ರತಿಭೆ ಆಧರಿಸಿಯೇ ಭರ್ತಿ ಮಾಡಬೇಕು. ಬಾಂಗ್ಲಾ ವಿಮೋಚನಾ ಹೋರಾಟಗಾರರ ಕುಟುಂಬಕ್ಕೆ ಶೇ.5 ಹಾಗೂ ಜನಾಂಗೀಯ ಅಲ್ಪಸಂಖ್ಯಾತರು, ವಿಶೇಷಚೇತನರು, ತೃತೀಯ ಲಿಂಗಿಗಳಿಗೆ ಒಟ್ಟಾರೆ ಶೇ.2ರಷ್ಟು ಮೀಸಲು ನಿಗದಿಗೊಳಿಸಲಾಗಿದೆ ಎಂಬ ಸ್ಪಷ್ಟ ತೀರ್ಪು ಪ್ರಕಟಿಸಿದೆ.

ಈ ಹಿಂದೆ ಹೈಕೋರ್ಟ್ ನೀಡಿದ್ದ ಬಾಂಗ್ಲಾ ವಿಮೋಚನಾ ಹೋರಾಟಗಾರರ ಕುಟುಂಬದ ಮೀಸಲು ನೀತಿ ಮರುಸ್ಥಾಪನೆ ಆದೇಶವನ್ನು ಸರ್ವೋಚ್ಚ ನ್ಯಾಯಾಲಯ 'ಕಾನೂನು ಬಾಹಿರ ಆದೇಶ' ಎಂದು ಪರಿಗಣಿಸಿ ರದ್ದುಗೊಳಿಸಿದೆ.

2018ರಲ್ಲಿ ಪ್ರಧಾನಿ ಷೇಕ್ ಹಸೀನಾ ಸರಕಾರ ವಿಮೋಚನಾ ಹೋರಾಟಗಾರರ ಮೀಸಲು ಸೌಲಭ್ಯವನ್ನು ರದ್ದುಗೊಳಿಸಿತ್ತು. ಆದರೆ ಹೈ ಕೋರ್ಟ್ ಮೀಸಲಾತಿ ನೀತಿ ಮರು ಸ್ಥಾಪನೆಗೆ ಆದೇಶಿಸಿತ್ತು.

ಮೊದಲು ಹೋರಾಟಗಾರ ಕುಟುಂಬಕ್ಕೆ ಶೇ.30 ಮೀಸಲು!

ಬಾಂಗ್ಲಾದೇಶದಲ್ಲಿ ಸರಕಾರಿ ಉದ್ಯೋಗದಲ್ಲಿ ಶೇ.30ರಷ್ಟು ಪಾಲನ್ನು 1971ರ ಬಾಂಗ್ಲಾ ವಿಮೋಚನಾ ಹೋರಾಟಗಾರರ ಕುಟುಂಬದವರಿಗೆ ಮೀಸಲಿಡಲಾಗಿತ್ತು. ಈ ಮೀಸಲು ನೀತಿಗೆ ದೇಶಾದ್ಯಂತದ ವಿದ್ಯಾರ್ಥಿ ಸಂಘಟನೆಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ದೇಶದಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಲು ಇಂಥ ನೀತಿಗಳೇ ಕಾರಣ ಎಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಕ್ಷಣವೇ ಮೀಸಲಾತಿ ರದ್ದುಗೊಳಿಸಬೇಕೆಂದು ಆಗ್ರಹಿಸಿ ದೇಶಾದ್ಯಂತ ಪ್ರತಿಭಟನೆ ನಡೆಸಿದ್ದಾರೆ. ಇದೇ ವಿಚಾರವಾಗಿ ಪ್ರಧಾನಿ ಷೇಕ್ ಹಸಿನಾ ಅವರ ಪಕ್ಷ ಬೆಂಬಲಿತ ಅವಾಮಿ ಲೀಗ್ ಸಂಘಟನೆ ಹಾಗೂ ಮಿಸಲಾತಿ ವಿರೋಧಿ ವಿದ್ಯಾರ್ಥಿಗಳ ನಡುವೆ ಸಂಘರ್ಷವಾಗುತ್ತಿದೆ. ಪರಿಣಾಮ ಹಿಂಸಾಚಾರ ಭುಗಿಲೆದ್ದು ಈವರೆಗೆ 133 ವಿದ್ಯಾರ್ಥಿಗಳು ಸಾವಿಗೀಡಾಗಿದ್ದಾರೆ. 2 ದಿನಗಳಿಂದ ಢಾಕಾ ಸೇರಿ ಹಲವೆಡೆ ಕರ್ಫ್ಯೂ ಹೇರಲಾಗಿದೆ. ಅಗತ್ಯ ಸೇವೆ ಹೊರತು ಪಡಿಸಿ ವಾಣಿಜ್ಯ ವಹಿವಾಟು, ಶಾಲಾ ಕಾಲೇಜು ಸೇರಿದಂತೆ ಎಲ್ಲಾ ಚಟುವಟಿಕೆ ಬಂದ್ ಆಗಿವೆ.

ಕೇರಳದಲ್ಲಿ ನಿಫಾ ವೈರಸ್: 14 ವರ್ಷದ ಬಾಲಕ ಸಾವು

ಕೋಯಿಕ್ಕೋಡ್: ನಿಫಾ ವೈರಸ್ ಸೋಂಕಿಗೆ ತುತ್ತಾಗಿ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದಲ್ಲಿ ಜೀವನ್ಮರಣ ಹೋರಾಟ ನಡೆಸಿದ್ದ ಕೇರಳದ ಮಲಪ್ಪುರಂನ 14 ವರ್ಷದ ಬಾಲಕ ಭಾನುವಾರ ಮೃತಪಟ್ಟಿದ್ದಾನೆ.

ಪಾಂಡಿಕ್ಕಾಡ್‌ನಲ್ಲಿ ನಿಫಾ ವೈರಸ್‌ಗೆ ತುತ್ತಾಗಿದ್ದ ಬಾಲಕ ಭಾನುವಾರ ಬೆಳಗ್ಗೆ ತೀವ್ರ ಹೃದಯ ಸ್ತಂಭನಕ್ಕೆ ಒಳಗಾಗಿ ಮೃತಪಟ್ಟ ಎಂದು ರಾಜ್ಯ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

ಬಾಲಕ ವೆಂಟಿಲೇಟರ್ ಸಪೋರ್ಟ್‌ನಲ್ಲಿದ್ದ. ಭಾನುವಾರ ಬೆಳಗ್ಗೆ ಮೂತ್ರ ವಿಸರ್ಜನೆ ನಿಂತು ಹೋಯಿತು. ಹೃದಯ ಸ್ತಂಭನದ ನಂತರ ಬೆಳಗ್ಗೆ 11.30ರಲ್ಲಿ ಕೊನೆಯುಸಿರೆಳೆದ ಎಂದು ವಿವರ ನೀಡಿದ್ದಾರೆ.

ನಿಫಾ ವೈರಸ್ ಅಂತಾರಾಷ್ಟ್ರೀಯ ಶಿಷ್ಟಾಚಾರ ಪ್ರಕಾರ ಅಂತ್ಯಕ್ರಿಯೆ ನಡೆಯಬೇಕಿದೆ. ಬಾಲಕನ ಪೋಷಕರು, ಕುಟುಂಬದವರ ಜತೆ ಜಿಲ್ಲಾಧಿಕಾರಿ ಚರ್ಚಿಸಿದ ಬಳಿಕ ಅಂತ್ಯಸಂಸ್ಕಾರ ಕುರಿತು ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಚಿವೆ ಹೇಳಿದ್ದಾರೆ.

ಕೇಂದ್ರ ಸರಕಾರದ ಮಾರ್ಗಸೂಚಿ

ದೆಹಲಿ: ನಿಫಾ ಸೋಂಕಿನ ಪ್ರಕರಣಗಳನ್ನು ಆದಷ್ಟೂ ಬೇಗ ಗುರುತಿಸಬೇಕು, ಶಂಕಿತ ಪ್ರಕರಣಗಳಲ್ಲಿ ಸೋಂಕಿತರನ್ನು ಕಡ್ಡಾಯವಾಗಿ ಪ್ರತ್ಯೇಕವಾಗಿರಿಸಬೇಕು. ರಕ್ತದ ಮಾದರಿ ಸಂಗ್ರಹಿಸಿ ತಕ್ಷಣ ಪ್ರಯೋಗಾಲಯಕ್ಕೆ ರವಾನಿಸಬೇಕು, ಸೋಂಕು ದೃಢಪಟ್ಟಲ್ಲಿ ಸೋಂಕಿತರ ಸಂಪರ್ಕಕ್ಕೆ ಬಂದಿದ್ದವರ ಮೇಲೆಯೂ ನಿರಂತರ ನಿಗಾ ಇರಿಸಬೇಕಿದೆ ಎಂದು ಕೇಂದ್ರ ಸರಕಾರ ಭಾನುವಾರ ಹೊರಡಿಸಿದ ಮಾರ್ಗಸೂಚಿಯಲ್ಲಿ ತಿಳಿಸಿದೆ. ಪ್ರಯೋಗಾಲಯ ವರದಿಯಿಂದ ನಿಫಾ ಸೋಂಕು ಖಚಿತವಾದಲ್ಲಿ ಸೋಂಕಿತರ ಮನೆಯವರೆಲ್ಲರ ರಕ್ತದ ಮಾದರಿಗಳನ್ನೂ ಸಂಗ್ರಹಿಸಿ ಸೋಂಕು ಹರಡಿದೆಯೋ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. 12 ದಿನಗಳ ಮುಂಚಿನವರೆಗೂ ರೋಗಿಯ ಸಂಪರ್ಕಕ್ಕೆ ಬಂದವರೆಲ್ಲರ ಮೇಲೆಯೂ ನಿರಂತರ ಗಮನವಿಡಬೇಕು. ಆ ಮೂಲಕ ಸೋಂಕು ಮತ್ತಷ್ಟು ಹರಡದಂತೆ ತಡೆಯಲು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಹೆಚ್ಚುವರಿ ಪ್ರಕರಣಗಳು ಕಂಡುಬಂದಲ್ಲಿ ಆ ಪ್ರದೇಶದ ಟೊಪೊಗ್ರಫಿ ಸಿದ್ಧಪಡಿಸಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೊರಡಿಸಿದ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಒನ್ ಹೆಲ್ತ್ ಮಿಷನ್ ನಿಯೋಜನೆ

ನಿಫಾ ಸೋಂಕು ದೃಢಪಟ್ಟಿರುವ ಕೇರಳ ರಾಜ್ಯಕ್ಕೆ ನೆರವಾಗಲು ಕೇಂದ್ರ ಆರೋಗ್ಯ ಸಚಿವಾಲಯದಿಂದ ನುರಿತ ವೈದ್ಯಕೀಯ ಸಯದಸ್ಯರಿರುವ 'ಒನ್ ಹೆಲ್ತ್ ಮಿಷನ್' ತಂಡವನ್ನು ನಿಯೋಜನೆ ಮಾಡಲಾಗುವುದು ಎಂದು ಕೇಂದ್ರ ಸರಕಾರ ತಿಳಿಸಿದೆ. ಈ ತಂಡವು ರಾಜ್ಯಕ್ಕೆ ತೆರಳಿ ರಾಜ್ಯ ಸರಕಾರದ ತಂಡಕ್ಕೆ ನೆರವಾಗಲಿದೆ. ಸೋಂಕು ಪತ್ತೆ, ಸೋಂಕಿತರ ಸಂಪರ್ಕದ ಕೊಂಡಿಗಳು ಹರಡಿರುವುದರ ಸಂಶೋಧನೆ, ಸೋಂಕು ಹರುಡುತ್ತಿರುವ ವೇಗ ಮತ್ತು ಪ್ರದೇಶಗಳನ್ನು ಕಂಡುಕೊಳ್ಳಲು ತಾಂತ್ರಿಕ ನೆರವು ನೀಡಲಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಸಮಿತಿ(ಐಸಿಎಂಆರ್) ನಿಫಾ ಸೋಂಕಿತರ ಚಿಕಿತ್ಸೆಗಾಗಿ ಅದಾಗಲೇ ಮೋನೊಕ್ಲೋನಾಲ್ ಆಂಟಿ ಬಾಡೀಸ್ ಮದ್ದು ಕಳುಹಿಸಿಕೊಟ್ಟಿದೆ. ಅಲ್ಲದೇ, ರೋಗಿಯ ರಕ್ತದ ಮಾದರಿಗಳನ್ನು ಕ್ಷಿಪ್ರಗತಿಯಲ್ಲಿ ಪರೀಕ್ಷಿಸಲು ಬಯೋಸೇಫ್ಟಿ ಲೆವೆಲ್-3 ಸಂಚಾರಿ ಪ್ರಯೋಗಾಲಯ ವಾಹನವನ್ನೂ ಕಳುಹಿಸಿಕೊಡಲಾಗಿದ್ದು, ಅದಾಗಲೇ ಕೋಯಿಕ್ಕೋಡ್‌ಗೆ ತಲುಪಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ರಾಜಸ್ಥಾನದ ಆಳ್ವಾರ್ ಯಾರ್ಡ್‌ನಲ್ಲಿ ಭಾನುವಾರ ನಸುಕಿನ 2.30ರಲ್ಲಿ ಸರಕು ಸಾಗಣೆ ರೈಲಿನ 3 ಬೋಗಿಗಳು ಹಳಿತಪ್ಪಿದ್ದು, ಹಾನಿಗೀಡಾಗಿವೆ. ಹಳಿಗಳೂ ಹಾನಿಗೊಳಗಾಗಿವೆ. ಯಾವುದೇ ಪ್ರಾಣಹಾನಿ ಆಗಿಲ್ಲ. ಬೆಳಗ್ಗೆ 9 ಗಂಟೆಗೆಲ್ಲಾ ಬೋಗಿಗಳನ್ನು ಹಳಿಗೆ ತಂದು ಸರಿಪಡಿಸಲಾಗಿದೆ.

ರುದ್ರಪ್ರಯಾಗ ಗುಡ್ಡ ಕುಸಿದು 3 ಬಲಿ

ರುದ್ರಪ್ರಯಾಗ: ಕೇದಾರನಾಥ ಯಾತ್ರಾ ಮಾರ್ಗದಲ್ಲಿ ಭಾನುವಾರ ಗುಡ್ಡ ಕುಸಿದಿದ್ದು, ಮೂವರು ಯಾತ್ರಿಕರು ದುರ್ಮರಣಕ್ಕೀಡಾಗಿದ್ದಾರೆ. ಅವಘಡದಲ್ಲಿ 8 ಮಂದಿ ಗಾಯಗೊಂಡಿದ್ದಾರೆ.

ಭಾನುವಾರ ಬೆಳಿಗ್ಗೆ 7.30ರಲ್ಲಿ ಚಿರ್ಬಾಸಾ ಬಳಿ ಗುಡ್ಡದಿಂದ ದೊಡ್ಡ ಬಂಡೆಗಳು ಹಠಾತ್ತನೆ ಉರುಳಿದ್ದರಿಂದ ಗೌರಿಕುಂಡ-ಕೇದಾರನಾಥ ಯಾತ್ರೆ ಮಾರ್ಗದಲ್ಲಿ ಸಾಗುತ್ತಿದ್ದ ಯಾತ್ರಿಕರಲ್ಲಿ ಮೂವರು ಬಂಡೆಗಳಡಿ ಸಿಲುಕಿ ಸ್ಥಳದಲ್ಲೇ ಮೃತಪಟ್ಟರು. 8 ಯಾತ್ರಿಕರು ಗಾಯಗೊಂಡರು. ಗಾಯಾಳುಗಳನ್ನು ಎಸ್‌ಡಿಆರ್‌ಎಫ್ ತಂಡ ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದೆ. ಮೂವರ ಮೃತದೇಹಗಳನ್ನು ಜಿಲ್ಲಾ ಪೊಲೀಸ್ ಇಲಾಖೆಗೆ ಹಸ್ತಾಂತರಿಸಲಾಗಿದೆ. ಅವಘಡದ ಸ್ಥಳದಲ್ಲಿ ರಸ್ತೆ-ಪಾದಚಾರಿ ಮಾರ್ಗದಿಂದ ಬಂಡೆಗಳ ತೆರವು ಕಾರ್ಯ ನಡೆದಿದೆ.

ಘಟನೆ ಬಗ್ಗೆ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಪ್ರತಿಕ್ರಿಯಿಸಿದ್ದು, ಮೂವರು ಯಾತ್ರಿಕರ ಸಾವು ನೋವುಂಟು ಮಾಡಿದೆ. ಗಾಯಾಳುಗಳಿಗೆ ಉತ್ತಮ ಚಿಕಿತ್ಸೆ ನೀಡುವಂತೆ ಸೂಚಿಸಲಾಗಿದೆ. ಅಧಿಕಾರಿಗಳ ಜತೆ ನಿರಂತರ ಸಂಪರ್ಕದಲ್ಲಿದ್ದೇನೆ ಎಂದು 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ.

ಮ.ಪ್ರ.ದಲ್ಲೂ ಹೋಟೆಲ್ ಮಾಲೀಕರ ಹೆಸರಿನ ಫಲಕ

ಭೋಪಾಲ್/ಲಖನೌ: ಗಂಗಾನದಿಯಿಂದ ಶಿವನ ಅಭಿಷೇಕಕ್ಕೆ ಪವಿತ್ರ ಜಲ ಕೊಂಡೊಯ್ಯುವುದಕ್ಕೆ ಹರಿಯಾಣದಿಂದ ಲಕ್ಷಾಂತರ ಯಾತ್ರಿಕರ ಪ್ರಸಿದ್ಧ ಕನ್ವರ್ ಯಾತ್ರೆ ಶುರುವಾಗಿದ್ದು, ಭಕ್ತರ ವ್ರತಪಾಲನೆಗಾಗಿ ಯಾತ್ರೆ ಮಾರ್ಗದ ಉಪಾಹಾರ ಗೃಹಗಳು ಮಾಲೀಕರ ಹೆಸರಿನ 'ಫಲಕ ಪ್ರದರ್ಶನ' ನಿಯಮ ಉತ್ತರ ಪ್ರದೇಶದಲ್ಲಿ ಜಾರಿಗೊಳಿಸಲಾಗಿದೆ. ಈಗ ಅದೇ ನಿಯಮ ಮಧ್ಯಪ್ರದೇಶದ ಉಜ್ಜಯಿನಿಯಲ್ಲೂ ಜಾರಿಗೆ ಬಂದಿದೆ. ಕನ್ವರ್‌ಯಾತ್ರಿಕರಿಗಾಗಿ ಉಪಾಹಾರ ಗೃಹ ಮಾಲೀಕರ ಹೆಸರು- ಮೊಬೈಲ್ ಸಂಖ್ಯೆ ಪ್ರದರ್ಶಿಸುವಂತೆ ಸೂಚಿಸಿದ್ದು, ನಿಯಮ ಉಲ್ಲಂಘಿಸಿದರೆ ಮೊದಲು 2,000 ರು., 2ನೇ ಬಾರಿಯ ತಪ್ಪಿಗೆ 5,000 ರು. ದಂಡ ವಿಧಿಸುವುದಾಗಿ ಉಜ್ಜಯಿನಿ ಮೇಯರ್ ಮುಖೇಶ್ ತತ್ವಾಲ್ ಹೇಳಿದ್ದಾರೆ. ಈವರೆಗೆ ಹಿಂದೂ ಹೆಸರಿದ್ದ ಹಲವು ಹೋಟೆಲ್‌ಗಳ ಹೆಸರು ಉತ್ತರ ಪ್ರದೇಶ ಸರಕಾರದ ಆದೇಶ ಬಳಿಕ ಬದಲಾಗಿವೆ. ದೆಹಲಿ- ಡೆಹ್ರಾಡೂನ್ ಮಾರ್ಗದ ರಾಮ್‌ಪುರಿ ಬಳಿ 25 ವರ್ಷಗಳಿಂದ ಸಲೀಂ ಅವರ ಹೋಟೆಲ್‌ಗೆ 'ಸಂಗಮ್ ರೆಸ್ಟೋರೆಂಟ್' ಹೆಸರಿಟ್ಟಿದ್ದರು. ಈಗ 'ಸಲೀಂ ಪ್ಯೂರ್ ವೆಜ್ ರೆಸ್ಟೋರೆಂಟ್' ಫಲಕ ಹಾಕಿದ್ದಾರೆ. ಹೆಸರು ಪ್ರಕಟಿಸಲು ನನ್ನ ಅಭ್ಯಂತರವಿಲ್ಲ ಎಂದೂ ಮಾಲೀಕ ಸಲೀಂ ಹೇಳಿದ್ದಾರೆ.

ಚುನಾವಣೆಗೆ ಸಿದ್ಧತೆ: ಅಮಿತ್ ಶಾ ವಾಗ್ದಾಳಿ

ಮುಂಬೈ: ಮಹಾರಾಷ್ಟ್ರ ವಿಧಾನಸಭೆಗೆ ಕೆಲ ತಿಂಗಳಷ್ಟೇ ಬಾಕಿ ಇದ್ದು, ರಾಜಕೀಯ ಪಕ್ಷಗಳು ಅದಾಗಲೇ ವಾಗ್ಯುದ್ಧ ಆರಂಭಿಸಿವೆ. ಪುಣೆಯಲ್ಲಿ ಭಾನುವಾರ ಬಿಜೆಪಿ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ(ಎನ್‌ಸಿಪಿ) ಶರದ್ ಬಣದ ನಾಯಕ ಶರದ್ ಪವಾರ್ ಭ್ರಷ್ಟರ ಮುಖ್ಯಸ್ಥ ಇದ್ದಂತೆ. ಶಿವಸೇನೆ(ಯುಬಿಟಿ) ಬಣದ ಮುಖಂಡ ಉದ್ದವ್ ಠಾಕ್ರೆಯು ಔರಂಗಜೇಬ್ ಅಭಿಮಾನಿಗಳ ಸಂಘದ ನಾಯಕನಂತೆ ಎಂದು ಛೇಡಿಸಿದ್ದಾರೆ. ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ದುರಹಂಕಾರಿಯಾಗಿದ್ದಾರೆ. ಅದರಲ್ಲೂ ಲೋಕಸಭೆ ಪ್ರತಿಪಕ್ಷ ನಾಯಕನಾದ ಬಳಿಕ ಅವರ ಅಹಂಕಾರ ಹೆಚ್ಚಾಗಿದೆ. ಸದನದಲ್ಲಿನ ನಡವಳಿಕೆಯಲ್ಲಿ ಶಿಸ್ತು, ಶಿಷ್ಟಾಚಾರ ಕಾಣದಾಗಿದೆ ಎಂದು ಟೀಕಿಸಿದರು. ಅವರ ಈ ಅಹಂಕಾರವನ್ನು ಮುಂಬರುವ ಮಹಾರಾಷ್ಟ್ರ, ಹರಿಯಾಣ, ಜಾರ್ಖಂಡ್ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಮಟ್ಟಹಾಕುತ್ತೇವೆ ಎಂದು ಕಿಡಿಕಾರಿದರು.

ವಿಮಾನದಲ್ಲಿ ಲೈಂಗಿಕ ಕಿರುಕುಳ: ಜಿಂದಾಲ್ ಸಿಇಒ ವಿರುದ್ಧ ಕೇಸ್

ಕೋಲ್ಕತ್ತ: ವಿಮಾನ ಪ್ರಯಾಣದ ವೇಳೆ ಪಕ್ಕದ ಆಸನದಲ್ಲಿದ್ದ 28 ವರ್ಷದ ಯುವತಿಗೆ ಮೊಬೈಲ್ ಫೋನ್ ಮೂಲಕ ಅಶ್ಲೀಲ ವಿಡಿಯೋಗಳನ್ನು ತೋರಿಸಿ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ



ಜಿಂದಾಲ್ ಸಂಸ್ಥೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(ಸಿಇಒ) ದಿನೇಶ್ ಸರೋಗಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಕೋಲ್ಕತ್ತ-ಅಬುದಾಬಿ ಮಾರ್ಗದ ವಿಮಾನದಲ್ಲಿ ಸಿನಿಮಾ ಚಿತ್ರ ಎಂದು ಮೊಬೈಲ್‌ನಲ್ಲಿ ಅಶ್ಲೀಲ ವಿಡಿಯೋಗಳನ್ನು ತೋರಿಸಿ ಕಿರುಕುಳ ನೀಡಿದರು ಎಂದು ಸಂತ್ರಸ್ತೆ 'ಎಕ್ಸ್' ಖಾತೆಯಲ್ಲಿ ಸರಣಿ ಪೋಸ್ಟ್ ಮಾಡಿ ಆರೋಪಿಸಿದ್ದಾರೆ. ಕಿರುಕುಳ ನೀಡಿದ ಅಧಿಕಾರಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) ಸೆಕ್ಷನ್ 74 ಮತ್ತು 75ರಡಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಬಗ್ಗೆ ಜಿಂದಾಲ್ ಸ್ಟೀಲ್ ಮತ್ತು ಪವರ್ ಕಂಪನಿ ಲಿ. ಮುಖ್ಯಸ್ಥ ನವೀನ್ ಜಿಂದಾಲ್ ಪ್ರತಿಕ್ರಿಯಿಸಿದ್ದು ಇಂಥ ಪ್ರಕರಣಗಳನ್ನು ಸಹಿಸಿಕೊಳ್ಳಲು ಸಾಧ್ಯವೇ ಇಲ್ಲ. ಪ್ರಕರಣದ ವಿರುದ್ಧ ಕಂಪನಿಯಿಂದಲೂ ತನಿಖೆ ಆರಂಭಿಸಲಾಗಿದೆ. ಆರೋಪಿ ಅಧಿಕಾರಿಯನ್ನು ಸದ್ಯ ಕಡ್ಡಾಯ ರಜೆ ಮೇಲೆ ಮನೆಗೆ ಕಳುಹಿಸಲಾಗಿದೆ ಎಂದಿದ್ದಾರೆ.

ಸಮಾಚಾರ ಸಣ್ಣದಲ್ಲ

ಸ್ವೀಡಿಷ್ ಓಪನ್: ಬೋರ್ಗೆಸ್ ಚಾಂಪಿಯನ್

ದೆಹಲಿ: ಸ್ವೀಡಿಷ್ ಓಪನ್‌ನಲ್ಲಿ ನುನೊ ಬೋರ್ಗೆಸ್ ಅವರು, ದಿಗ್ಗಜ ರಾಫೆಲ್ ನಡಾಲ್ ಅವರನ್ನು 6-3, 6-2 ಸೆಟ್ಗಳಿಂದ ಸೋಲಿಸುವ ಮೂಲಕ ಚೊಚ್ಚಲ ಪ್ರಶಸ್ತಿ ಗೆದ್ದಿದ್ದಾರೆ. ಸ್ವೀಡಿಷ್ ಓಪನ್‌ನ ಫೈನಲ್‌ನಲ್ಲಿ ನುನೊ ಬೋರ್ಗೆಸ್ ವಿರುದ್ಧ ರಾಫೆಲ್ ನಡಾಲ್ 6-3, 6-2 ಸೆಟ್‌ಗಳಿಂದ ಸೋಲು ಅನುಭವಿಸ ಬೇಕಾಯಿತು. ಪೋರ್ಚುಗೀಸ್ ಆಟಗಾರ ಎಟಿಪಿ ಟೂರ್‌ನಲ್ಲಿ ರಾಫೆಲ್ ನಡಾಲ್ ಅವರ ಸರ್ವ್ ಅನ್ನು 5 ಬಾರಿ ಮುರಿಯುವ ಮೂಲಕ ಮೊದಲ ಗೆಲುವು ದಾಖಲಿಸಿದರು. ಕಳೆದ ಕೆಲವು ವರ್ಷಗಳಿಂದ ನಡಾಲ್ ಗಾಯಗಳಿಂದ ಬಳಲುತ್ತಿದ್ದು, ಈ ಕಾರಣ ದಿಂದಾಗಿ ಅವರ ಶ್ರೇಯಾಂಕವು 261ಕ್ಕೆ ಕುಸಿದಿದೆ. ಒಲಿಂಪಿಕ್ಸ್‌ಗಾಗಿ ತನ್ನ ಫಿಟ್ನೆಸ್‌ಗೆ ಆದ್ಯತೆ ನೀಡುವ ಉದ್ದೇಶದಿಂದ ನಡಾಲ್ ಈ ವರ್ಷ ವಿಂಬಲ್ಡನ್ ಅನ್ನು ಬಿಟ್ಟುಬಿಡಲು ನಿರ್ಧರಿಸಿದ್ದರು. ಇದರ ನಡುವೆ ಶ್ರೇಷ್ಠ ವೃತ್ತಿಜೀವನ ಮತ್ತು ಅಪಾರ ಅನುಭವದ ಹೊರತಾಗಿಯೂ ನಡಾಲ್ 27 ವರ್ಷದ ಪೋರ್ಚುಗೀಸ್ ಆಟಗಾರನ ವಿರುದ್ಧ ಗೆಲುವಿನ ಕೇಕೆ ಹಾಕಲು ಸಾಧ್ಯವಾಗಲಿಲ್ಲ. ಬೋರ್ಹೆಸ್‌ಗೆ ಈ ಗೆಲುವು ಅವರ ವೃತ್ತಿಜೀವನದಲ್ಲಿ ಪ್ರಮುಖ ಮೈಲಿಗಲ್ಲು ಸಾಧಿಸಲು ಕಾರಣವಾಗಿದೆ. ತನ್ನ ಮೊದಲ ಎಟಿಪಿ ಫೈನಲ್‌ನಲ್ಲಿ ಆಡುವಾಗ, ಬೋರ್ಗೆಸ್ ನಡಾಲ್ ವಿರುದ್ಧ ಪ್ರಾಬಲ್ಯ ಸಾಧಿಸು ವಲ್ಲಿ ಯಶಸ್ವಿಯಾದರು. ಮೊದಲ ಸೆಟ್ ಅನ್ನು 46 ನಿಮಿಷಗಳಲ್ಲಿ ಬೋರ್ಗೆಸ್ ಗೆದ್ದರು. ಎರಡನೇ ಸೆಟ್‌ನಲ್ಲಿ ಸತತ ಮೂರು ಗೇಮ್‌ಗಳನ್ನು ಗೆದ್ದು ಪ್ರಶಸ್ತಿಯನ್ನು ಬೋರ್ಗೆಸ್ ಖಚಿತಪಡಿಸಿಕೊಂಡರು.

ಕುಶ್ ಫಾರ್ಮುಲಾ 2 ಸ್ಪ್ರಿಂಟ್ ಚಾಂಪಿಯನ್

ದೆಹಲಿ: ಭಾರತದ ಯುವ ಚಾಲಕ ಕುಶ್ ಮೈನಿ ಅವರು ಹಂಗೇರಿಯನ್ ಗ್ರ್ಯಾನ್‌ಪ್ರೀ ರೇಸ್‌ನಲ್ಲಿ ಚೊಚ್ಚಲ ಫಾರ್ಮುಲಾ 2 ಸ್ಪ್ರಿಂಟ್ ರೇಸ್ ಕಿರೀಟವನ್ನು ಮುಡಿಗೇರಿಸಿಕೊಂಡರು. ನೆದರ್ಲೆಂಡ್ಸ್‌ನ ರಿಚರ್ಡ್ ವರ್ಸ್ಚೂರ್ ಅವರನ್ನು ಆರಂಭದಲ್ಲಿ ವಿಜೇತರೆಂದು ಘೋಷಿಸಲಾಗಿತ್ತು. ಆದರೆ, ತಾಂತ್ರಿಕ ಉಲ್ಲಂಘನೆಯ ಕಾರಣ ಅವರು ಅನರ್ಹಗೊಂಡಿದ್ದ ರಿಂದ ನಂತರದ ಸ್ಥಾನದಲ್ಲಿದ್ದ ಕುಶ್ ಅವರಿಗೆ ಪ್ರಶಸ್ತಿ ಒಲಿಯಿತು. ಪ್ರಸಕ್ತ ಋತುವಿನಲ್ಲಿ ಕುಶ್ ಅವರು ಐದನೇ ಬಾರಿ 'ಪೋಡಿಯಂ ಫಿನಿಷ್' ಮಾಡಿದ್ದು, ಎಫ್2 ಗ್ರಿಡ್‌ನಲ್ಲಿರುವ ಭಾರತದ ಏಕೈಕ ಚಾಲಕ ಅವರಾಗಿದ್ದಾರೆ. ಈ ಪ್ರಶಸ್ತಿಯೊಂದಿಗೆ ಅವರು ಋತುವಿನ ಪಾಯಿಂಟ್ಸ್‌ಗೆ 10 ಅಂಕಗಳನ್ನು ಸೇರಿಸಿ ದರು. ಈ ಬಗ್ಗೆ ಮಾತನಾಡಿದ ಅವರು, ನನ್ನ ಮತ್ತು ತಂಡದ ಹೋರಾಟಕ್ಕೆ ದೊರೆತ ಪ್ರತಿಫಲ ಇದಾಗಿದೆ. ನನ್ನೊಂದಿಗೆ ಉತ್ತಮ ತಂಡ ಇರುವುದರಿಂದ ಈ ಸಾಧನೆ ಸಾಧ್ಯವಾಗಿದೆ' ಎಂದು ಬೆಂಗಳೂರಿನ ಕುಶ್ ಮೈನಿ ಹೇಳಿದ್ದಾರೆ.

ಸಾಯಿರಾಜ್ ಮಧ್ಯಂತರ ಬೌಲಿಂಗ್ ಕೋಚ್ ?

ಬೆಂಗಳೂರು: ಸಾಯಿರಾಜ್ ಬಹುತುಲೆ ಅವರನ್ನು

ಶ್ರೀಲಂಕಾ ಪ್ರವಾಸಕ್ಕೆ ಮಧ್ಯಂತರ ಬೌಲಿಂಗ್ ಕೋಚ್ ಆಗಿ ನೇಮಕ ಮಾಡಲು ಬಿಸಿಸಿಐ ಚಿಂತನೆ ನಡೆಸಿದೆ ಎನ್ನಲಾಗಿದೆ. ಅಧಿಕಾರಿಗಳು ಮಾರ್ನೆ ಮಾರ್ಕೆಲ್ ಅವರೊಂದಿಗೆ ಮಾತುಕತೆ ನಡೆಸಿದ್ದು, ಬಾಂಗ್ಲಾದೇಶ ವಿರುದ್ಧದ ತವರು ಸರಣಿಯಲ್ಲಿ ಅವರು ಪೂರ್ಣ ಸಮಯದ ಆಧಾರದ ಮೇಲೆ ಸೇರುವ ಸಾಧ್ಯತೆ ಇದೆ ಎನ್ನಲಾ ಗಿದೆ. ಹೀಗಾಗಿ ಬಹುತುಲೆ ಅವರು ಜುಲೈ 22ರಂದು ಭಾರತ ತಂಡ ಮತ್ತು ಇತರ ಕೋಚಿಂಗ್ ಗುಂಪಿನೊಂದಿಗೆ ಪ್ರಯಾಣಿಸಲಿದ್ದಾರೆ ಎನ್ನಲಾಗಿದೆ. ಕ್ರಿಕ್‌ಬಜ್ ಪ್ರಕಾರ, ಅಭಿಷೇಕ್ ನಾಯರ್, ರಯಾನ್ ಟೆನ್ ಡೊಸ್ಚಾಟ್ ಮತ್ತು ಟಿ ದಿಲೀಪ್ ಅವರ ನೇಮಕವನ್ನು ಸಹ ಅಂತಿಮಗೊಳಿಸಲಾಗಿದೆ. ಪ್ರಯಾಣದ ದಿನದಂದು ನಿಗದಿಯಾಗಿರುವ ಪತ್ರಿಕಾಗೋಷ್ಠಿಯಲ್ಲಿ ಘೋಷಣೆಯಾಗಲಿದೆ. ಈ ವೇಳೆ ಗೌತಮ್ ಗಂಭೀರ್ ಅವರು ಮುಖ್ಯ ಆಯ್ಕೆದಾರ ಅಜಿತ್ ಅಗರ್ಕರ್ ಅವರೊಂದಿಗೆ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಲಿದ್ದಾರೆ.

ಮಳೆ ಪರಿಣಾಮ 36 ವಿಮಾನ ಹಾರಾಟ ರದ್ದು

ಮುಂಬಯಿ: ಮಹಾರಾಷ್ಟ್ರದಲ್ಲಿ ಭಾರೀ ಮಳೆ ಆದ ಬೆನ್ನಲ್ಲೇ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಭಾನುವಾರ 36 ವಿಮಾನಗಳ ಹಾರಾಟವನ್ನು ರದ್ದುಗೊಳಿಸ ಲಾಯಿತು. ಛತ್ರಪತಿ ಶಿವಾಜಿ ಮಹಾರಾಜ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಂಡಿಗೋ ಮತ್ತು ಏರ್ ಇಂಡಿಯಾ, ವಿಸ್ತಾರಾ ಏರ್ ಲೈನ್ಸ್ ಸಂಸ್ಥೆಗಳು ವಿಮಾನಗಳ ಹಾರಾಟವನ್ನು ರದ್ದುಗೊಳಿ ಸಲಾಗಿದೆ ಎಂದು ವರದಿಯಾಗಿದೆ. ನಗರದಲ್ಲಿ ಆಗಾಗ್ಗೆ ಭಾರೀ ಮಳೆ ಮತ್ತು ಕಡಿಮೆ ಗೋಚರತೆ ಪರಿಣಾಮವಾಗಿ ಭಾನುವಾರದಂದು ಆಗಮಿಸ ಬೇಕಾಗಿದ್ದ ಮತ್ತು ನಿರ್ಗಮಿಸಬೇಕಾಗಿದ್ದ ತಲಾ 18 ವಿಮಾನಗಳ ಹಾರಾಟವನ್ನು ರದ್ದುಗೊಳಿಸಿದೆ.

ಮೊದಲ ಪಂದ್ಯ ಸೋತ ನಂತರ ಭರ್ಜರಿ ಗೆಲುವು ಸಾಧಿಸಿದ ಪಾಕ್ | ಮಿಂಚಿದ ಗುಲ್, ಮುನಿಬಾ

ನೇಪಾಳಗೆ ಸೋಲುಣಿಸಿದ ಪಾಕಿಸ್ತಾನ

ದಾಂಬುಲಾ: ಗುಲ್, ಮುನಿಬಾ ಅವರ ಸ್ಫೋಟಕ ಬ್ಯಾಟಿಂಗ್ ಹಾಗೂ ಸಾದಿಯಾ ಇಕ್ಬಾಲ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಪಾಕಿಸ್ತಾನ ವನಿತಾ ತಂಡವು ನೇಪಾಳ ವನಿತೆಯರ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ್ದಾರೆ.

ಏಷ್ಯಾಕಪ್‌ನ ಎಲ್ಲ ತಂಡಗಳೂ ಮೊದಲ ಪಂದ್ಯ ವನ್ನು ಮುಗಿಸಿ ಎರಡನೇ ಪಂದ್ಯವಡುತ್ತಿದ್ದು, ಸೆಮಿಸ್ ಟಿಕೇಟ್ ಪಡೆಯಲು ಎಲ್ಲ ತಂಡಗಳು ಕಸರತ್ತನ್ನು ನಡೆಸಿವೆ. ಮೊದಲ ಪಂದ್ಯದಲ್ಲಿ ಭಾರತೀಯ ವನಿತೆಯರ ವಿರುದ್ಧ ಸೋಲನುಭವಿಸಿದ್ದ ಪಾಕಿಸ್ತಾನ ತನ್ನ ಎರಡನೇ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸುವ ಮೂಲಕ ಪುಟಿದೆದ್ದಿದೆ. ಅದರಂತೆ ಮೊದಲ ಪಂದ್ಯದಲ್ಲಿ ಯುಎಇ ವಿರುದ್ಧ ಗೆಲುವು ಸಾಧಿಸಿದ್ದ ನೇಪಾಳ ತಂಡಕ್ಕೆ ಆಘಾತ ಉಂಟಾಗಿದೆ. ಇಲ್ಲಿನ ರಂಗಿರಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನೇಪಾಳ ತಂಡವು ಪಾಕ್ ಬೌಲರ್‌ಗಳ ಮಾರಕ ದಾಳಿಗೆ ಸಿಲುಕಿ 6 ವಿಕೆಟ್ ಕಳೆದುಕೊಂಡು 108 ರನ್ ಗಳಿಸಿತು. ಅದನ್ನು ಬೆನ್ನುಹತ್ತಿದ ಪಾಕಿಸ್ತಾನ 11.1 ಓವರ್‌ಗಳಲ್ಲೇ 110 ರನ್ ಗಳಿಸಿ ಗೆಲುವು ಸಾಧಿಸಿತು.

ಕುಸಿದ ನೇಪಾಳ

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನೇಪಾಳ ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ. ಆರಂಭಿಕೆ ಖಡ್ಕಾ ಅವರು 4 ರನ್ ಗಳಿಸಿ ಪೆವಿಲಿಯನ್ ಸೇರಿದರು. ಬಳಿಕ ಬಂದ ಕಬಿತಾ 13 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಸೀತಾ 26 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇಂದು ಬರ್ಮಾ ಅವರು ಶೂನ್ಯ ಸುತ್ತಿದರು. ರುಬಿನಾ 8 ರನ್ ಗಳಿಸಿ ರನೌಟ್‌ಗೆ ಬಲಿಯಾದರು. ಆದರೆ ಈ ವೇಳೆ ಜತೆಗೂಡಿದ ಪೂಜಾ ಹಾಗೂ ಕಬಿತಾ ಅವರು ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದರು. ಅಲ್ಪ ಮೊತ್ತ ಗಳಿಸಿದರೂ ತಂಡ 100ರ ಗಡಿ ದಾಟಿಸಲು ಈ ಜೋಡಿಯ ಪಾತ್ರ ಪ್ರಮುಖವಾಗಿತ್ತು. ಪೂಜಾ 25 ರನ್ ಗಳಿಸಿ ರನೌಟ್‌ಗೆ ಬಲಿಯಾದರು. ಕಬಿತಾ 31 ರನ್ ಗಳಿಸಿ ಅಜೇಯರಾಗಿ ಉಳಿದರು. ಅಲ್ಲದೆ, ತಂಡದ ಗರಿಷ್ಠ ಸ್ಕೋರರ್ ಆದರು.

ಪಾಕ್‌ಗೆ ಭರ್ಜರಿ ಆರಂಭ

ಸಾಧಾರಣ ಗುರಿ ಬೆನ್ನಟ್ಟಿದ ಪಾಕಿಸ್ತಾನಕ್ಕೆ ಭರ್ಜರಿ ಆರಂಭ ಸಿಕ್ಕಿತು. ಆರಂಭಿಕರು ಮೊದಲೇ ಪಂದ್ಯವನ್ನು ಜೇಬಿಗೆ ಹಾಕಿಕೊಂಡರು. ಸ್ಫೋಟಕ ಬ್ಯಾಟಿಂಗ್ ಮಾಡಿದ ಗುಲ್ ಅವರು ಭರ್ಜರಿ ಅರ್ಧಶತಕ 57 ಬಾರಿಸಿ ವಿಕೆಟ್ ಒಪ್ಪಿಸಿದರು. ಮುನಿಬಾ 46 ರನ್ ಗಳಿಸಿ ಅಜೇಯರಾಗಿ ಉಳಿದರು. ಆರಂಭಿಕ ಜೋಡಿ ಬರೋಬ್ಬರಿ 105 ರನ್ ಗಳಿಸಿತು. ಇದರೊಂದಿಗೆ ಪಾಕಿಸ್ತಾನವು ಪಂದ್ಯವನ್ನು ಗೆದ್ದುಕೊಂಡಿತು.

ಮಿಂಚಿದ ಗುಲ್

ಸರಳ ಗುರಿ ಪಡೆದ ಪಾಕಿಸ್ತಾನದಿಂದ ಆರಂಭಿಕರಾಗಿ ಕಣಕ್ಕಿಳಿದ ಗುಲ್ ಫಿರೋಜಾ ಅವರು, ಸ್ಫೋಟಕ ಬ್ಯಾಟಿಂಗ್ ಮಾಡಿದರು. 162 ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟ್ ಬೀಸಿದ ಅವರು, 35 ಎಸೆತಗಳಲ್ಲಿ 10 ಬೌಂಡರಿಗಳೊಮದಿಗೆ 57 ರನ್ ಗಳಿಸಿ ತಂಡದ ಗೆಲುವಿಗೆ ರೂವಾರಿಯಾದರು.

ಸ್ಕೋರ್

ನೇಪಾಳ: 108/6 ಕಬಿತಾ 31★,
ಸೀತಾ 26, ಸಾದಿಯಾ 19/2
ಪಾಕಿಸ್ತಾನ: 110/1 ಗುಲ್ 57, ಮುನಿಬಾ 46★

ಉಪನಿಷತ್, ವೇದ ಪಾಠ ಶಾಲೆಗಳ ಉಲ್ಲೇಖ | ಸರಸ್ವತಿ ನದಿ ಬಗ್ಗೆ ವಿಶೇಷ ಮಾಹಿತಿ

ಭಾರತೀಯ ದೃಷ್ಟಿಕೋನದಲ್ಲಿ ಎನ್‌ಸಿಇಆರ್‌ಟಿ ಪಠ್ಯಪುಸ್ತಕ

ದೆಹಲಿ: 'ಎನ್‌ಸಿಇಆರ್‌ಟಿ' ಭಾರತೀಯ ದೃಷ್ಟಿಕೋನ ಆಧಾರದಲ್ಲಿ ಹೊಸ ಪಠ್ಯಪುಸ್ತಕಗಳನ್ನು ರಚಿಸಿದ್ದು, ಭಾನುವಾರ ಬಿಡುಗಡೆ ಮಾಡಿದೆ. ಈ ಪಠ್ಯಪುಸ್ತಕಗಳ ಆನ್‌ಲೈನ್ ಆವೃತ್ತಿಯನ್ನು 'ಎಕ್ಸ್‌ಪ್ಲೋರಿಂಗ್ ಸೊಸೈಟಿ' ಇಂಡಿಯ ಅಂಡ್ ಬಿಯಾಂಡ್(ಸಮಾಜದ ಅನ್ವೇಷಣೆ , ಭಾರತ ಮತ್ತು ಅದರಾಚೆಗೆ) ಎಂದು ಹೆಸರಿಸಲಾಗಿದೆ.

6ನೇ ತರಗತಿ ವಿದ್ಯಾರ್ಥಿಗಳಿಗೆ ಹೊಸ ಸಮಾಜ ವಿಜ್ಞಾನ ಪಠ್ಯ ಬಿಡುಗಡೆ ಮಾಡಲಾಗಿದೆ. ಭಾರತೀಯ ಮೂಲದ ಹಲವು ವಿಷಯಗಳು, ಉಪನಿಷತ್, ವೇದ ಪಾಠ ಶಾಲೆಗಳ ಬಗ್ಗೆ ಮಾಹಿತಿ ನೀಡಲಾಗಿದೆ. ಜತೆಗೆ ದೇಶದ ಹೆಸರು 'ಭಾರತ್' ಎಂದು ಇದ್ದಿದ್ದು ವಿದೇಶಿಯರು 'ಇಂಡಿಯ' ಎಂದು ಕರೆದರೆಂದು ಉಲ್ಲೇಖಿಸಲಾಗಿದೆ.

ಹರಪ್ಪನ್ ನಾಗರಿಕತೆಯನ್ನು 'ಸಿಂಧು-ಸರಸ್ವತಿ ನಾಗರಿಕತೆ' ಎಂದು ಬರೆಯಲಾಗಿದೆ. ಸರಸ್ಪತಿ ನದಿ ಮತ್ತು ಅದರ ಹರಿವಿನ ಬಗೆಗೂ ವಿಶೇಷ ಮಾಹಿತಿ ಸೇರಿಸಲಾಗಿದೆ. ಭಾರತದಲ್ಲಿ ಈಗ ಸರಸ್ವತಿ ನದಿ 'ಘಗ್ಗರ್' ಹೆಸರಲ್ಲಿದೆ. ಪಾಕಿಸ್ತಾನದಲ್ಲಿ ಈ ನದಿಗೆ ಹಾಕ್ರಾ ಎಂದು ಕರೆಯಲಾಗುತ್ತದೆ ಎಂದು ಉಲ್ಲೇಖಿಸಲಾಗಿದೆ.

14 ಅಧ್ಯಾಯ-5 ಭಾಗ

- ಭಾರತ ಮತ್ತು ವಿಶ್ವ -ಜನ ಮತ್ತು ಭೂಮಿ
- ಪ್ರಾಚೀನ ಹಾಗೂ ವಸ್ತ್ರ
- ಸಾಂಸ್ಕೃತಿಕ ಪರಂಪರೆ ಮತ್ತು ಜ್ಞಾನ ಸಂಪ್ರದಾಯ
- ಆಡಳಿತ ಮತ್ತು ಪ್ರಜಾಪ್ರಭುತ್ವ
- ನಮ್ಮ ಸುತ್ತಲಿನ ಆರ್ಥಿಕ ಜೀವನ

'ಎನ್‌ಸಿಇಆರ್‌ಟಿ' ಈ ವರ್ಷ 3 ಮತ್ತು 6ನೇ ತರಗತಿಗೆ 'ರಾಷ್ಟ್ರೀಯ ಶಿಕ್ಷಣ ನೀತಿ-2020'ರನ್ವಯ ಭಾರತೀಯ ನೆಲದ ಗುಣವಿರುವ ಹೊಸ ಪಠ್ಯಗಳನ್ನು ಬಿಡುಗಡೆ ಮಾಡುವುದಾಗಿ ತಿಳಿಸಿತ್ತು. ಹಲವು ಪುಸ್ತಕಗಳ ಆನ್‌ಲೈನ್ ಆವೃತ್ತಿ ಬಿಡುಗಡೆಯಾಗಿವೆ. ಸದ್ಯದಲ್ಲೇ ಮಾರುಕಟ್ಟೆಗೆ ಬರಲಿವೆ.

ಭಾರತ ಹೆಸರಲ್ಲೇ ಪ್ರತ್ಯೇಕ ಅಧ್ಯಾಯ: ಪಠ್ಯದ 5ನೇ ಅಧ್ಯಾಯ 'ಇಂಡಿಯ-ಎಂದರೆ ಭಾರತ' ಎಂಬ ಹೆಸರಿನಲ್ಲಿದೆ. 'ಭಾರತ'ದ ಹೆಸರು 'ಇಂಡಿಯ' ಎಂದು ಹೇಗೆ ಬದಲಾಯಿತು, ಇತಿಹಾಸದಲ್ಲಿ ಯಾವ ಯಾವ ಹೆಸರುಗಳಲ್ಲಿ ಕರೆಯಲಾಯಿತು, ಪ್ರಾಚೀನ ನಿವಾಸಿಗಳು ನೀಡಿದ ಜಂಬೂದ್ವೀಪ, ಭಾರತಾ ಹೆಸರುಗಳ ಉಲ್ಲೇಖವನ್ನೂ ನೀಡಲಾಗಿದೆ.

ಋಗ್ ವೇದದಲ್ಲಿನ ಭಾರತ ಪದದ ಉಲ್ಲೇಖ ಹಾಗೇ ಮುಂದುವರಿದು ರಾಜ ವಂಶಸ್ಥರು 'ಭಾರತಾ' ಎಂದು ಕರೆದಿರುವ ಬಗೆಗೂ ತಿಳಿಸಿಕೊಡಲಾಗಿದೆ. ಭಾರತಕ್ಕೆ ಬಂದ ವಿದೇಶಿಗರು 'ಸಿಂಧು'(ಇಂಡಸ್) ನದಿ ಹೆಸರಿನ ಮೂಲಕ ಹಿಂದು, ಇಂಡೋಯ್ ಎಂದು ಕರೆದರು. ಬಳಿಕ ಅದು ಇಂಡಿಯಾ ಎಂಬ ಪದ ಬಳಕೆಗೆ ಕಾರಣವಾಯಿತು. ಪರ್ಷಿಯನ್ನರು ಹಿಂದೂಸ್ತಾನ್‌ಎಂದು ಕರೆದ ಬಗೆಗೂ ಪುಸ್ತಕದಲ್ಲಿ ತಿಳಿಸಿಕೊಡಲಾಗಿದೆ.

> ಬಹುಮುಖ ದೃಷ್ಟಿಕೋನ ನಿರ್ವಹಿಸಲು 5 ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸಾಂಸ್ಕೃತಿಕ ಪರಂಪರೆ ಮತ್ತು ಜ್ಞಾನ ಸಂಪ್ರದಾಯ ವಿಷಯ ನಮ್ಮ ಸಾಂಸ್ಕೃತಿಕ ವಿಚಾರಗಳಿಗೆ ಮಾತ್ರ ಸೀಮಿತವಾಗಿಲ್ಲ. ಹಲವು ವಿಷಯಗಳನ್ನು ಇದು ಒಳಗೊಂಡಿದೆ. ಪುಸ್ತಕ ವೈವಿಧ್ಯತೆಯಲ್ಲಿ ಏಕತೆ, ಕುಟುಂಬ ಮತ್ತು ಸಮುದಾಯ, ಉಪನಿಷತ್‌ನ ಶ್ವೇತಕೇತು, ನಚಿಕೇತ, ಗಾರ್ಗಿ ಮತ್ತು ಯಾಜ್ಞವಲ್ಕ್ಯರ ಬಗೆಗೂ ಮಾಹಿತಿ ಒಳಗೊಂಡಿದೆ.
>
> -ದಿನೇಶ್ ಪ್ರಸಾದ್ ಸಾಕ್ಲಾನಿ,
> ಎನ್‌ಸಿಇಆರ್‌ಟಿ ನಿರ್ದೇಶಕ

ಇಂಫಾಲದಲ್ಲಿ ಐಇಡಿ, ಶಸ್ತ್ರಾಸ್ತ್ರಗಳು ಪತ್ತೆ ಸೇನೆ, ಪೊಲೀಸ್ ಜಂಟಿ ಕಾರ್ಯಾಚರಣೆ

ಇಂಫಾಲ್: ಮಣಿಪುರದಲ್ಲಿ ಭಾರತೀಯ ಸೇನೆ ಹಾಗೂ ಪೊಲೀಸ್ ಜಂಟಿ ಕಾರ್ಯಾಚರಣೆ ನಡೆಸಿದ್ದು, 8 ಸುಧಾರಿತ ಸ್ಫೋಟಕಗಳನ್ನು ನಿಷ್ಕ್ರಿಯಗೊಳಿಸಿ ಭಾರಿ ಅನಾಹುತವನ್ನು ತಪ್ಪಿಸಿದೆ. ಈ ಬಗ್ಗೆ ಮಣಿಪುರ, ನಾಗಾಲ್ಯಾಂಡ್, ದಕ್ಷಿಣ ಅರುಣಾಚಲ ರಕ್ಷಣಾ ವಕ್ತಾರರು ಮಾಹಿತಿ ನೀಡಿದ್ದಾರೆ. ಗುಪ್ತಚರ ಮಾಹಿತಿ ಮೇರೆಗೆ ಪೂರ್ವ ಇಂಫಾಲ ಜಿಲ್ಲೆಯಲ್ಲಿ ಶನಿವಾರ ಬಾಂಬ್ ನಿಷ್ಕ್ರಿಯ ದಳ ತಪಾಸಣೆ ನಡೆಸಿ ಸುಮಾರು 33 ಕೆಜಿ ತೂಕದ 8 ಐಇಡಿಗಳನ್ನು ಪತ್ತೆ ಮಾಡಿದ್ದು ಸ್ಫೋಟಕಗಳನ್ನು ನಿಷ್ಕ್ರಿಯಗೊಳಿಸಿದೆ. ಈ ಸ್ಫೋಟಕಗಳು ರೈತರು ಹಾಗೂ ಸಾಕು ಪ್ರಾಣಿಗಳು ನೆಲೆಸಿದ್ದ ಪ್ರದೇಶದಲ್ಲಿ ಪತ್ತೆಯಾಗಿದ್ದು ತ್ವರಿತ ಕಾರ್ಯಾಚರಣೆಯಿಂದ ಸಂಭವಿಸಬಹುದಾಗಿದ್ದ ದೊಡ್ಡ ಅನಾಹುತ ತಪ್ಪಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ಬುಧವಾರ ಕೂಡ ಪೂರ್ವ ಇಂಫಾಲ ಭಾಗದಲ್ಲಿ ತಪಾಸಣೆ ನಡೆಸಿದಾಗ ಗ್ರೆನೇಡ್ ಲಾಂಚರ್, ಐಇಡಿ, 13 ಲಾಂಗ್ ರೇಂಜ್ ಮಾರ್ಟಾರ್ಸ್ ಸೇರಿ ಭಾರಿ ಪ್ರಮಾಣ ಶಸ್ತ್ರಾಸ್ತ್ರಗಳು ಪತ್ತೆಯಾಗಿದ್ದವು. ಹಲವು ಘರ್ಷಣೆಗಳ ಬಳಿಕ ಇಂಫಾಲದಲ್ಲಿ ಭಾರಿ ಭದ್ರತೆ ನಿಯೋಜಿಸಲಾಗಿದ್ದು, ಗಸ್ತು ಕಾರ್ಯಾಚರಣೆ ನಿರಂತರವಾಗಿ ನಡೆಯುತ್ತಿದೆ.

ಒಲಿಂಪಿಕ್ಸ್ ಪಟುಗಳಿಗೆ ಬಿಸಿಸಿಐನಿಂದ 8.5 ಕೋಟಿ ಪ್ರೋತ್ಸಾಹ

ದೆಹಲಿ: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲಿರುವ ಭಾರತದ

ಅಥ್ಲೀಟ್‌ಗಳಿಗೆ ಬಿಸಿಸಿಐ 8.5 ಕೋಟಿ ರು. ಪ್ರೋತ್ಸಾಹ ಧನವನ್ನು ನೀಡಿದೆ. ಭಾನುವಾರ ಬಿಸಿಸಿಐ ಅಧ್ಯಕ್ಷ ಜಯ್ ಶಾ ಆರ್ಥಿಕ ನೆರವು ಘೋಷಿಸಿದ್ದಾರೆ. ಭಾರತೀಯ ತಂಡವು ದೇಶಕ್ಕೆ ಒಲಿಂಪಿಕ್ ವೈಭವ ತರಲು ನೋಡುತ್ತಿ ರುವ ನಡುವೆ ಬಿಸಿಸಿಐ ಐಒಎಗೆ ತಮ್ಮ ಬೆಂಬಲವನ್ನು ನೀಡಿದೆ. ಈ ಬಗ್ಗೆ ಜಯ್ ಶಾ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸುವ ನಮ್ಮ ಅದ್ಭುತ ಕ್ರೀಡಾಪಟುಗಳಿಗೆ ಬಿಸಿಸಿಐ ಬೆಂಬಲ ನೀಡಲಿದೆ ಎಂದು ಘೋಷಿಸಲು ನಾನು ಹೆಮ್ಮೆಪಡುತ್ತೇನೆ. ಅಭಿಯಾನಕ್ಕಾಗಿ ನಾವು ಐಒಎಗೆ 8.5 ಕೋಟಿ ರು.ಗಳನ್ನು ಒದಗಿಸುತ್ತಿದ್ದೇವೆ. ನಮ್ಮ ಇಡೀ ತಂಡಕ್ಕೆ, ನಾವು ನಿಮಗೆ ಶುಭ ಹಾರೈಸುತ್ತೇವೆ. ಭಾರತ ಹೆಮ್ಮೆ ಪಡುವಂತೆ ಮಾಡಿ! ಜೈ ಹಿಂದ್! ಎಂದು ಜಯ್ ಶಾ ಬರೆದುಕೊಂಡಿದ್ದಾರೆ. ಭಾರತೀಯ ಕ್ರೀಡಾಪಟುಗಳು ಉತ್ತಮ ವಾಗಿ ಕಾರ್ಯನಿರ್ವಹಿಸಲು ಮತ್ತು ರಾಷ್ಟ್ರವನ್ನು ಹೆಮ್ಮೆಪಡು ವಂತೆ ಮಾಡಲು ಶುಭಾಶಯಗಳನ್ನು ಕೋರಿದ್ದಾರೆ.

ರಾಜ್ಯಗಳಿಂದಲೂ ಕೊಡುಗೆ

ಭಾರತದಿಂದ ಒಲಿಂಪಿಕ್ಸ್‌ಗೆ ತರಳಲಿರುವ ಕ್ರೀಡಾಪಟುಗಳಿಗೆ ಈ ಬಾರಿ ಪ್ರೋತ್ಸಾಹ ಧನಗಳ ಸರಮಾಲೆಯೇ ಹರಿದು ಬರುತ್ತಿದೆ. ಪ್ರಮುಖವಾಗಿ ಒಲಿಂಪಿಕ್ಸ್ ಅಸೋಶಿಯಷನ್ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನದೊಂದಿಗೆ ಪ್ಯಾರಿಸ್‌ನಲ್ಲಿ ವಿವಿಧ ವ್ಯವಸ್ಥೆಗಳನ್ನು ಮಾಡಿಕೊಟ್ಟಿತ್ತು. ಅದಲ್ಲದೆ, ರಿಲಾಯನ್ಸ್ ವತಿಯಿಂದ ಇಂಡಿಯಾ ಹೌಸ್ ಸಹ ವ್ಯವಸ್ಥೆ ಮಾಡಿದೆ. ಅದಲ್ಲದೆ, ವಿವಿಧ ರಾಜ್ಯ ಸರಕಾರಗಳು ತಮ್ಮ ತಮ್ಮ ರಾಜ್ಯದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನವನ್ನೂ ಸಹ ಬಡುಗಡೆ ಮಾಡಿವೆ.

ಸಂಸತ್ ಮುಂಗಾರು ಅಧಿವೇಶನ: ಮಹತ್ವದ ಸೂಚನೆ

ವಂದೇ ಮಾತರಂ, ಜೈ ಹಿಂದ್ ಘೋಷಣೆ ಕೂಗುವಂತಿಲ್ಲ

ದೆಹಲಿ: ಸಂಸತ್ ಮುಂಗಾರು ಅಧಿವೇಶನ ಸೋಮವಾರ ಆರಂಭವಾಗುತ್ತಿದ್ದು, ಉಭಯ ಸದನಗಳ ಸದಸ್ಯರಿಗೆ ಮಹತ್ವದ ಸೂಚನೆ ನೀಡಲಾಗಿದೆ. ಪರಿಣಾಮಕಾರಿಯಾಗಿ ಕಲಾಪ ನಡೆಸಲು ಸಭಾಧ್ಯಕ್ಷ ಪೀಠದಿಂದ ಬಂದ ಆದೇಶವನ್ನು ನೇರ ಅಥವಾ ಪರೋಕ್ಷವಾಗಿ ಟೀಕಿಸುವಂತಿಲ್ಲ. ಸದನದ ಒಳ-ಹೊರಗೆ ಘೋಷಣೆ ಕೂಗುವಂತಿಲ್ಲ ಎಂದು ಸೂಚನೆ ನೀಡಲಾಗಿದೆ.

ಥ್ಯಾಂಕ್ಸ್, ಥಾಂಕ್ಯೂ ಪದ ಬಳಸದಂತೆ, ವಂದೇ ಮಾತರಂ, ಜೈಹಿಂದ್ ಘೋಷಣೆ ಕೂಗದಂತೆ, ಪ್ರತಿಭಟನೆ ನಡೆಸದಂತೆ, ಅಸಂವಿಧಾನಿಕ ಸನ್ನೆ ಮಾಡದಂತೆ ಉಭಯ ಸದನಗಳ ಸದಸ್ಯರಿಗೆ ಸೂಚನೆ ನೀಡಲಾಗಿದೆ.

'ರಾಜ್ಯಸಭಾ ಸದಸ್ಯರ ಕೈಪಿಡಿ'ಯಲ್ಲಿನ ನಿಯಮಗಳನ್ನು ನೆನಪಿಸಿರುವ ರಾಜ್ಯಸಭಾ ಕಾರ್ಯದರ್ಶಿ, ಸಂಸತ್‌ನ ಸಂಪ್ರದಾಯ, ನಿಯಮಗಳ ಬಗ್ಗೆ ಸದಸ್ಯರ ಗಮನ ಸೆಳೆದಿದ್ದಾರೆ. ಸಭಾಧ್ಯಕ್ಷರು ಯಾವುದಾದರೂ ವಿಚಾರ, ಪದ ಅಸಂವಿಧಾನಿಕ ಎಂದು ಪರಿಗಣಿಸಿದರೆ ತಕ್ಷಣ ಆ ಮಾತನ್ನು ವಾದಿಸದೇ ಹಿಂಪಡೆಯ ಬೇಕು. ಸಂಸತ್ ಪ್ರವೇಶ-ನಿರ್ಗಮನ ವೇಳೆ ಪೀಠಕ್ಕೆ ವಂದಿಸ ಬೇಕೆಂದು ಕೈಪಿಡಿಯಲ್ಲಿ ಉಲ್ಲೇಖಿಸಲಾಗಿದೆ.

ಕನ್ನಡಿಗರ ಕ್ಷಮೆ ಕೋರಿದ ಫೋನ್ ಪೇ ಸಿಇಒ

ದೆಹಲಿ: ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಕಲ್ಪಿಸುವ ಸಂಬಂಧ ರಾಜ್ಯ ಸರಕಾರ ರೂಪಿಸಿದ್ದ ನೀತಿಯನ್ನು ಖಂಡಿಸಿದ್ದ ಫೋನ್ ಪೇ ಸಿಇಒ ಮತ್ತು ಸಂಸ್ಥಾಪಕ ಸಮೀರ್ ನಿಗಮ್ ಅವರು ಭಾನುವಾರ ಭೇಷರತ್ ಆಗಿ ಕ್ಷಮೆಯಾಚಿಸಿದ್ದಾರೆ. ಕಂಪನಿಗಳ 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳಿಗೆ ಕನ್ನಡಿಗರನ್ನು ನೇಮಕ ಮಾಡಿಕೊಳ್ಳುವ ಸಂಬಂಧ ಸರಕಾರವು ಮಸೂದೆ ಮಂಡಿಸಲು ನಿರ್ಧರಿಸಿತ್ತು. ಖಾಸಗಿ ವಲಯದಿಂದ ವ್ಯಾಪಕ ವಿರೋಧ ವ್ಯಕ್ತವಾದ್ದರಿಂದ ತಾತ್ಕಾಲಿಕವಾಗಿ ತಡೆ ಹಿಡಿದಿದೆ. ಮಸೂದೆ ಬಗ್ಗೆ ಪ್ರತಿಕ್ರಿಯಿಸಿದ್ದ ನಿಗಮ್, 'ಸರಕಾರದ ಈ ನಿರ್ಧಾರವು ನಾಚಿಕೆಗೇಡಿನ ಸಂಗತಿಯಾಗಿದೆ' ಎಂದು ಪ್ರತಿಕ್ರಿಯಿಸಿದ್ದರು. ಇದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡಿಗರು ಆಕ್ರೋಶ ವ್ಯಕ್ತಪಡಿಸಿದ್ದರು. ಫೋನ್ ಪೇ ಬದಲಿಗೆ ಬೇರೆ ಯುಪಿಐ ಆ್ಯಪ್ ಬಳಸುವಂತೆ ಅಭಿಯಾನ ಆರಂಭಿಸಿದ್ದರು. ಬಾಯ್ಕಾಟ್ ಫೋನ್ ಪೇ ಅಭಿಯಾನವು ತೀವ್ರಗೊಂಡಿತ್ತು. ಇದರಿಂದ ಎಚ್ಚೆತ್ತುಕೊಂಡಿರುವ ಸಿಇಒ ನಿಗಮ್ ಕನ್ನಡಿಗರ ಕ್ಷಮೆ ಕೋರಿದ್ದಾರೆ.

ಕರ್ನಾಟಕ ರಾಜ್ಯ ಪೊಲೀಸ್ ಅಪರಾಧ ವಿಭಾಗದ ಹೆಚ್ಚುವರಿ ಮಹಾ ನಿರ್ದೇಶಕ ಹರಿಶೇಖರನ್ ಮತ್ತು ಆಲ್ ಇಂಡಿಯಾ ಆಪ್ಥಲ್ಮಿಕ್ ಸೊಸೈಟಿಯ ಡಾ.ಲಲಿತ್ ವರ್ಮಾ ಬೆಂಗಳೂರು ಆಪ್ಥಲ್ಮಿಕ್ ಸೊಸೈಟಿಯ ಬಾಸ್ ಸಮಿಟ್ 2024 ಅನ್ನು ಬೆಂಗಳೂರಿನ ಕೋರಮಂಗಲದ ಸೇಂಟ್ ಜಾನ್ಸ್ ಆಡಿಟೋರಿಯಂನಲ್ಲಿ ಉದ್ಘಾಟಿಸಿದರು.

ಕೋರ್ಟ್ ತೀರ್ಪು ಬಳಿಕ ತಗ್ಗಿದ ಬಾಂಗ್ಲಾ ಹಿಂಸೆ

ಡಾಕಾ: ನೌಕರಿಯಲ್ಲಿ ಮೀಸಲು ನೀತಿ ವಿರೋಧಿಸಿ ಬಾಂಗ್ಲಾದೇಶದಲ್ಲಿ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದ್ದರಿಂದ ಈವರೆಗೆ 150 ಜನರು ಸಾವನ್ನಪ್ಪಿ, 2500ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಗಲಭೆ ಪರಿಸ್ಥಿತಿ ನಿಯಂತ್ರಿಸಲು ಸರಕಾರ ದೇಶಾದ್ಯಂತ ಕರ್ಫ್ಯೂ ವಿಸ್ತರಿಸಿದೆ. ಅನೇಕ ನಗರಗಳಲ್ಲಿ ಮೊಬೈಲ್ ಮತ್ತು ಇಂಟರ್ನೆಟ್ ಸೇವೆ ಕಡಿತಗೊಳಿಸಲಾಗಿದೆ.

ಕರ್ಫ್ಯೂ, ಸಂಚಾರ ನಿರ್ಬಂಧ, ಮೊಬೈಲ್ ಇಂಟರ್ನೆಟ್ ಕಡಿತ ಕ್ರಮಗಳ ಹೊರತಾಗಿಯೂ ಪರಿಸ್ಥಿತಿ ಭಾನುವಾರ ಬೆಳಗ್ಗೆವರೆಗೂ ನಿಯಂತ್ರಣಕ್ಕೆ ಬಂದಿರಲಿಲ್ಲ. ಮಧ್ಯಾಹ್ನ ವೇಳೆಗೆ ಸುಪ್ರೀಂ ಕೋರ್ಟ್, ಒಟ್ಟಾರೆ ಮೀಸಲು ಪ್ರಮಾಣವನ್ನು ಶೇ.7ಕ್ಕೆ ಇಳಿಸಿ ತೀರ್ಪು ನೀಡಿದ ಬಳಿಕ ಪ್ರತಿಭಟನೆಯ ಕಾವು ಸ್ವಲ್ಪ ತಗ್ಗಿದೆ. ಆದರೆ, ಬಾಂಗ್ಲಾ ವಿಮೋಚನಾ ಹೋರಾಟಗಾರರ ಕುಟುಂಬಕ್ಕೆ ನೀಡಿದ್ದ ಮೀಸಲು ಸೌಲಭ್ಯವನ್ನೂ ಪೂರ್ಣ ರದ್ದುಗೊಳಿಸಬೇಕೆಂಬುದು ಪ್ರತಿಭಟನಾಕಾರರ ಬೇಡಿಕೆಯಾಗಿತ್ತು. ಆದರೆ, ಸುಪ್ರೀಂ ಕೋರ್ಟ್ ಹೋರಾಟಗಾರರ ಕುಟುಂಬದವರಿಗೆ

ನೀಡಿದ್ದ ಮೀಸಲು ಸೌಲಭ್ಯವನ್ನು ಪೂರ್ಣ ರದ್ದುಗೊಳಿಸಿಲ್ಲ. ಬದಲಾಗಿ ಶೇ.30ರಷ್ಟಿದ್ದ ನೌಕರಿ ಮೀಸಲು ಪ್ರಮಾಣವನ್ನು ಶೇ.5ಕ್ಕೆ ತಗ್ಗಿಸಿದೆ. ಕೋರ್ಟ್‌ನ ಈ ಕ್ರಮದ ಬಗ್ಗೆ ಪ್ರತಿಭಟನಾಕಾರ ವಿದ್ಯಾರ್ಥಿ ಸಂಘಟನೆಗಳ ನಿರ್ಧಾರ ಏನಿದೆ ಎಂಬುದು ಇನ್ನಷ್ಟೇ ತಿಳಿದು ಬರಬೇಕಿದೆ.

ತಿನ್ನುವ ಸ್ಪರ್ಧೆ: ಅತಿಯಾಗಿ ತಿಂದು ಮಹಿಳೆ ಸಾವು

ಬೀಜಿಂಗ್: ತಿನ್ನುವ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮಹಿಳೆ

ಅತಿಯಾಗಿ ತಿಂದು ಸಾವನ್ನಪ್ಪಿದ ಘಟನೆ ಚೀನಾದಲ್ಲಿ ನಡೆದಿದೆ. ಪ್ಯಾನ್ ಕ್ಸಿಯಾಟಿಂಗ್ ಎಂಬ ಸೋಶಿಯಲ್ ಮೀಡಿಯಾ ಇನ್ಫ್ಲುಯೆನ್ಸರ್ ನೇರಪ್ರಸಾರದಲ್ಲೇ ಸಾವನ್ನಪ್ಪಿದ್ದಾರೆ. 24 ವರ್ಷದ ಈಕೆ ಹಿತೈಷಿಗಳ, ಪೋಷಕರ ಎಚ್ಚರಿಕೆಯನ್ನೂ ಕಡೆಗಣಿಸಿ ಆಗಾಗೆ ಈ ರೀತಿ ತಿನ್ನುವ ಚ್ಯಾಲೆಂಜ್ ಸ್ವೀಕರಿಸುತ್ತಿದ್ದಳು . ಕೆಲವೊಮ್ಮೆ 10 ಗಂಟೆಗಳ ಕಾಲ ನಿರಂತರವಾಗಿ ತಿನ್ನುವ ಚ್ಯಾಲೆಂಜ್‌ಗಳನ್ನು ಕೂಡ ಈಕೆ ತೆಗೆದುಕೊಳ್ಳುತ್ತಿದ್ದಳು ಎಂದು ಸ್ಥಳಿಯ ಮಾಧ್ಯಮಗಳು ವರದಿ ಮಾಡಿವೆ. ಕ್ಸಿಯಾಟಿಂಗ್ ಅತಿಯಾಗಿ ತಿನ್ನುವ ಅಭ್ಯಾಸವನ್ನು ಮಾಡಿಕೊಂಡಿದ್ದು ಒಂದು ಬಾರಿಗೆ 10 ಕೆಜಿಯಷ್ಟು ಆಹಾರ ಸೇವಿಸುತ್ತಿದ್ದಳಂತೆ. ಪ್ಯಾನ್ ಕ್ಸಿಯಾಟಿಂಗ್ ಮರಣೋತ್ತರ ಪರೀಕ್ಷೆಯಲ್ಲಿ ಆಕೆಯ ಹೊಟ್ಟೆ ವಿರೂಪಗೊಂಡಿದ್ದು, ಸಾಕಷ್ಟು ಪ್ರಮಾಣದಲ್ಲಿ ಜೀರ್ಣವಾಗದ ಆಹಾರವಿತ್ತು ಎಂದು ತಿಳಿದು ಬಂದಿದೆ. ಜನಪ್ರಿಯತೆ ಪಡೆಯಲು ಅನಾರೋಗ್ಯಕರ ಚ್ಯಾಲೆಂಜ್ ಸ್ವೀಕರಿಸುವ ಜನರಿಗೆ ಈ ಘಟನೆಯೊಂದು ಎಚ್ಚರಿಕೆಯಾಗಿದೆ.

ಕೇರಳ ವಿದೇಶಾಂಗ ಕಾರ್ಯದರ್ಶಿ ಬಿಜೆಪಿ-ಶಶಿತರೂರ್ ಜಟಾಪಟಿ

ತಿರುವನಂತಪುರಂ: ಕೇರಳ ಸರಕಾರ ರಾಜ್ಯ

ಕೇಡರ್‌ನ ಐಎಎಸ್ ಅಧಿಕಾರಿ ಕೆ.ವಾಸುಕಿ ಅವರನ್ನು ರಾಜ್ಯದ ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕ ಮಾಡಿರುವುದು ಚರ್ಚೆಗೆ ಕಾರಣವಾಗಿದೆ. ವಿದೇಶಾಂಗ ವ್ಯವಹಾರ ಕೇಂದ್ರ ಸರಕಾರದ ಹೊಣೆಗಾರಿಕೆ. ಹಾಗಿರುವಾಗ ಇಂಥದೊಂದು ಹುದ್ದೆ ಸೃಷ್ಟಿಸುವ ಅಧಿಕಾರ ರಾಜ್ಯ ಸರಕಾರಕ್ಕಿಲ್ಲ ಎಂದು ವಿರೋಧಿಸಲಾಗಿದೆ. ಇದು ಕೇರಳ ಸರಕಾರದ ಅಧಿಕಾರ ಅತಿಕ್ರಮಣ ಮತ್ತು ಸಂವಿಧಾನ ವಿರೋಧಿ ನಡೆ ಎಂದು ಬಿಜೆಪಿ ಖಂಡಿಸಿದೆ.

ಕೇರಳ ಸರಕಾರದ ನಡೆ ಅಸಂವಿಧಾನಿಕ, ಅಪಾಯಕಾರಿ. ಸಿಎಂ ಪಿಣರಾಯಿ ವಿಜಯನ್ ಕೇರಳವನ್ನು ಪ್ರತ್ಯೇಕ ರಾಷ್ಟ್ರವಾಗಿಸಲು ಪ್ರಯತ್ನಿಸುತ್ತಿದ್ದಾರೆಯೇ? ಎಂದು ಕೇರಳ ಬಿಜೆಪಿ ಘಟಕ ಅಧ್ಯಕ್ಷ ಕೆ.ಸುಂದರನ್ ಪ್ರಶ್ನಿಸಿದ್ದಾರೆ.

ತರೂರ್ ಸಮರ್ಥನೆ: ಪಿಣರಾಯಿ ಸರಕಾರದ ನಡೆಯನ್ನು ಕಾಂಗ್ರೆಸ್ ಮುಖಂಡ ಶಶಿ ತರೂರ್ ಸಮರ್ಥಿಸಿದ್ದಾರೆ. ರಾಜ್ಯ ಸರಕಾರ ವಿದೇಶದಲ್ಲಿರುವ ತಮ್ಮ ಜನರ ಬಗ್ಗೆ ಕಾಳಜಿ ತೋರಿಸುವುದು ತಪ್ಪಲ್ಲ. ಆದರೆ ವಿದೇಶಾಂಗ ವ್ಯವಹಾರ ಪೂರ್ಣ ಕೇಂದ್ರ ಸರಕಾರದ ಜವಾಬ್ದಾರಿ. ಯಾವುದೇ ರಾಜ್ಯ ಸರಕಾರಕ್ಕೆ ಸ್ವತಂತ್ರ ವಿದೇಶಾಂಗ ಸಂಪರ್ಕ ಇರುವುದಿಲ್ಲ. ತಮ್ಮ ಜನರ ಸುರಕ್ಷೆ ಸಲುವಾಗಿ ರಾಯಭಾರಿ ಕಚೇರಿ ಇಲ್ಲದೆಯೂ ವಿದೇಶಗಳ ಜತೆ ರಾಜ್ಯ ಸರಕಾರ ಸಂಪರ್ಕ ಸಾಧಿಸಬಹುದು ಎಂದಿದ್ದಾರೆ. ಆದರೆ, ಒಬ್ಬ ಅಧಿಕಾರಿಗೆ ನಿರ್ದಿಷ್ಟ ಜವಾಬ್ದಾರಿ ವಹಿಸುವುದು ಅಸಾಮಾನ್ಯ ಎನಿಸುತ್ತದೆ. ವಿದೇಶಾಂಗ ವ್ಯವಹಾರ ಏನಿದ್ದರೂ ಕೇಂದ್ರ ಸರಕಾರದ ಮೂಲಕವೇ ನಡೆಯಬೇಕು ಎಂದು ತರೂರ್ ಹೇಳಿದ್ದಾರೆ.

ನೀಟ್: ಹನ್ನೊಂದು ಸಾವಿರಕ್ಕೂ ಅಧಿಕ ಅಭ್ಯರ್ಥಿಗಳಿಗೆ ಸೊನ್ನೆ

ದೆಹಲಿ: ಈ ವರ್ಷದ ವಿವಾದಿತ ವೈದ್ಯಕೀಯ 'ನೀಟ್-ಯುಜಿ' ಪರೀಕ್ಷೆಯ ಕೇಂದ್ರವಾರು ಫಲಿತಾಂಶಗಳ ಪ್ರಕಾರ 11 ಸಾವಿರಕ್ಕೂ ಅಧಿಕ ಅಭ್ಯರ್ಥಿಗಳು ಶೂನ್ಯ ಅಥವಾ ನೆಗೆಟಿವ್ ಅಂಕಗಳನ್ನು ಗಳಿಸಿದ್ದಾರೆ ಎಂದು ಎನ್‌ಟಿಎ ತಿಳಿಸಿದೆ. ಬಿಹಾರದ ಕೇಂದ್ರವೊಂದರಲ್ಲಿ ಅಭ್ಯರ್ಥಿವೊಬ್ಬರು ಅತಿ ಕಡಿಮೆ ಅಂಕ (ನೆಗೆಟಿವ್ 180) ಗಳಿಸಿದ್ದಾರೆ.

2,250ಕ್ಕೂ ಅಧಿಕ ಅಭ್ಯರ್ಥಿಗಳು ಶೂನ್ಯ ಅಂಕ ಮತ್ತು 9,400ಕ್ಕೂ ಹೆಚ್ಚು ಅಭ್ಯರ್ಥಿಗಳು ನೆಗೆಟಿವ್ ಅಂಕಗಳನ್ನು ಗಳಿಸಿದ್ದಾರೆ. ನೀಟ್-ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಾದದ ಕೇಂದ್ರ ಬಿಂದು ಆಗಿರುವ ಜಾರ್ಖಂಡ್‌ನ ಹಜಾರೀಬಾಗ್‌ನಲ್ಲಿ ಹಲವಾರು ಅಭ್ಯರ್ಥಿಗಳು ಶೂನ್ಯಕ್ಕಿಂತ ಕಡಿಮೆ ಅಂಕ ಗಳಿಸಿದ್ದಾರೆ.

ಪಿಒಕೆಯಲ್ಲಿ ಪಠಾಣ್ ವೇಷದಲ್ಲಿ ಉಗ್ರರು | ಪಾಕ್ ಸೈನಿಕರಿಂದಲೇ ತರಬೇತಿ-ಆಶ್ರಯ

ಗಡಿ ನುಸುಳಲು ಉಗ್ರರಿಗೆ ಪಾಕ್ ಸೇನೆ ನೆರವು

ಪಿಒಕೆ: ಜಮ್ಮು-ಕಾಶ್ಮೀರ ಭಾಗದಲ್ಲಿ ಪಾಕಿಸ್ತಾನ ಬೆಂಬಲಿತ ಭಯೋತ್ಪಾದಕರಿಂದ ಗಡಿ ನುಸುಳುವ ಯತ್ನ ಹೆಚ್ಚಿದೆ. ಉಗ್ರರು ಭಾರತದೊಳಕ್ಕೆ ನುಸುಳಲು ಪಾಕ್ ಸೈನಿಕರೇ ತರಬೇತಿ ನೀಡುತ್ತಿದ್ದಾರೆಂದು ವರದಿಯಾಗಿದೆ. ಉಗ್ರರ ಈ ಯತ್ನ ವಿಫಲಗೊಳಿಸಲು ಆಯಕಟ್ಟಿನ ಜಾಗಗಳಲ್ಲಿ ಭಾರತ ಸೇನಾ ಬಲ ಹೆಚ್ಚಿಸಿದೆ.

ಕೊಟ್ಲಿ ಹಾಗೂ ಪಾಕ್ ಆಕ್ರಮಿತ ಕಾಶ್ಮೀರ ಭಾಗದಲ್ಲಿ ಉಗ್ರರ ಹಲವು ತಂಡಗಳಿಗೆ ಪಾಕ್ ಸೇನೆಯೇ ತರಬೇತಿ ನೀಡುತ್ತಿರುವ ಕೆಲವು ದೃಶ್ಯಗಳು ಭಾರತದ ಮಾಧ್ಯಮಗಳಿಗೆ ಲಭ್ಯವಾಗಿವೆ. ಇಂಡಿಯ ಟಿವಿ ಈ ಬಗ್ಗೆ ಫೋಟೊ ಸಮೇತ ವರದಿ ಮಾಡಿದೆ. ಪಠಾಣರ ವೇಷ ಧರಿಸಿರುವ ಕೆಲವರು ಭಾರತದ ಗಡಿಗೆ ತಾಗಿದಂತಿರುವ ಪಿಒಕೆಯಲ್ಲಿ ತರಬೇತಿ ಪಡೆಯುತ್ತಿರುವ, ಗಡಿ ನುಸುಳುವ ಯತ್ನ ನಡೆಸಿರುವ ಬಗ್ಗೆ ಮಾಧ್ಯಮ ಸಂಸ್ಥೆ ವರದಿ ಪ್ರಕಟಿಸಿದೆ. ಹಿಂದೆ ಕೂಡ ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ) ಭಾಗದಲ್ಲಿ ಉಗ್ರರ ತರಬೇತಿ ಶಿಬಿರಗಳಿರುವ ಬಗ್ಗೆ ಸುಳಿವು ಸಿಕ್ಕಿತ್ತು. ವೈರಲ್ ಆಗಿರುವ ಛಾಯಾಚಿತ್ರಗಳಲ್ಲಿ ಶಸ್ತ್ರಸಜ್ಜಿತ ಉಗ್ರರು ಮತ್ತು ಪಾಕ್ ಕಮಾಂಡೋಗಳು ಗೋಚರಿಸುತ್ತಾರೆ. ಉಗ್ರರಿಗೆ ಭಾರತದ ಗಡಿಯ ಪರಿಚಯ ನೀಡುತ್ತಿದ್ದಾರೆ ಎಂದು ವರದಿಯಾಗಿದೆ.

ಪಠಾಣರ ವೇಷದಲ್ಲಿರುವ ಉಗ್ರರನ್ನು ಬಂಕರ್‌ಗಳಲ್ಲಿ ಇರಿಸಲಾಗಿದೆ. ಇನ್ನೊಂದೆಡೆ ಪಾಕ್ ಸೈನಿಕರು ಉಗ್ರರನ್ನು ಗಡಿ ಬಳಿ ಕರೆತಂದು ಆಶ್ರಯ ನೀಡಿರುವ ಚಿತ್ರವಿದೆ. ಸಿಯಾಲ್‌ಕೋಟ್ ಮೂಲಕ ಉಗ್ರರು ಭಾರತದ ಗಡಿ ದಾಟುತ್ತಿರುವ ಸಾಧ್ಯತೆ ಇದೆ ಎನ್ನಲಾಗಿದೆ. ದಟ್ಟ ಅರಣ್ಯದಲ್ಲಿ ಅಡಗಿರಲು ಉಗ್ರರಿಗೆ ಮಳೆಗಾಲ ನೆರವಾಗುತ್ತದೆ. ಈ ಸಮಯದಲ್ಲಿ ನುಸುಳುವ ಯತ್ನ ಹೆಚ್ಚು ಎಂದು ಹೇಳಲಾ ಗಿದೆ. 50-60 ಉಗ್ರರು ಪಿಒಕೆ ಗಡಿಯಲ್ಲಿ ಕಾಣಿಸಿದ್ದಾರೆ. ಸಂಬಾ, ಹಿರಾನಗರ್, ಕಟುವಾ ಮಾರ್ಗದಲ್ಲಿ ಉಗ್ರರು ಭಾರತದೊಳಕ್ಕೆ ನುಸುಳಲು ಯತ್ನಿಸುತ್ತಿದ್ದಾರೆ ಎಂದು ವರದಿಯಾಗಿದೆ.

ಸಮಾಚಾರ ಸಣ್ಣದಲ್ಲ

ಭಾರತದ ಆರ್ಥಿಕತೆ ಅನಿಶ್ಚಿತ ಸ್ಥಿತಿಯಲ್ಲಿದೆ

ದೆಹಲಿ: ಕೇಂದ್ರ ಸರಕಾರ ಸಂಸತ್ತಿನಲ್ಲಿ ಮಂಡಿಸಿರುವ ಆರ್ಥಿಕ ಸಮೀಕ್ಷೆ ಕೇಳಲಷ್ಟೇ ಚೆಂದ. ಆದರೆ ದೇಶದಲ್ಲಿನ ಆರ್ಥಿಕ ಪರಿಸ್ಥಿತಿ ಹಲವು ವರ್ಷಗಳಿಂದ ಅನಿಶ್ಚಿತ ಪರಿಸ್ಥಿತಿಯಲ್ಲಿದೆ, ಅಪಾಯಕಾರಿ ಸ್ಥಿತಿಯಲ್ಲಿದೆ ಎಂದು ಕಾಂಗ್ರೆಸ್ ಟೀಕೆ ಮಾಡಿದೆ. ಅಸಂಘಟಿತ ವಲಯದ ಕಾರ್ಮಿಕರ ವೇತನ ದಿನಕ್ಕೆ 400 ರು.ಗೆ ಹೆಚ್ಚಳ ಮಾಡಬೇಕು. ಅಂಗನವಾಡಿ ಕಾರ್ಯಕರ್ತೆಯರಿಗೆ ಸಾಮಾಜಿಕ ಯೋಜನೆಗಳ ರಕ್ಷಣೆಯ ಅಗತ್ಯವಿದೆ ಎಂದು ಕಾಂಗ್ರೆಸ್ ಸಂವಹನ ಘಟಕದ ಮುಖ್ಯಸ್ಥ ಜೈರಾಮ್ ರಮೇಶ್ ಹೇಳಿದ್ದಾರೆ. ಆದರೆ, 2023-24 ರ ಆರ್ಥಿಕ ಸಮೀಕ್ಷೆ ದೇಶದ ಆರ್ಥಿಕತೆ ಚೆನ್ನಾಗಿದೆ ಎಂದು ಹೇಳಲು ಬರೆದದ್ದು ಆಗಿದೆ. ದುರದೃಷ್ಟವಶಾತ್ ಆರ್ಥಿಕ ಪರಿಸ್ಥಿತಿ ತುಂಬಾ ಕೆಟ್ಟ ರೀತಿಯಲ್ಲಿದೆ. ಜನರದು ಹತಾಶ ಸ್ಥಿತಿಯಾಗಿದೆ. ಕೆಲವು ಕಟು ಸತ್ಯ ಹೇಗಾದರೂ ಹೊರಬರುತ್ತವೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆಹಾರ ಹಣದುಬ್ಬರ ಶೇ. 10 ರಷ್ಟು ಅನಿಯಂತ್ರಿತವಾಗಿದೆ. ನಿರ್ದಿಷ್ಟ ಆಹಾರ ಸಾಮಗ್ರಿಗಳ ಬೆಲೆ ತ್ವರಿತ ಗತಿಯಲ್ಲಿ ಏರಿಕೆ ಆಗುತ್ತಿವೆ. ಧಾನ್ಯ ಶೇ. 11, ತರಕಾರಿ ಶೇ. 15, ಮಸಾಲೆ ಪದಾರ್ಥ ಶೇ.19 ಮತ್ತು ಹಾಲು ಶೇ.7 ರಷ್ಟು ಹೆಚ್ಚಾಗಿವೆ. ಈ ಪರಿಸ್ಥಿತಿಯಿಂದ ಬಡವರು ಮತ್ತು ಮಧ್ಯಮ ವರ್ಗದವರು ಹೆಚ್ಚು ತೊಂದರೆಗೆ ಒಳಗಾಗಿದ್ದಾರೆ. ಕೋವಿಡ್-19 ರ ನಂತರದ ಆರ್ಥಿಕ ಚೇತರಿಕೆಯಲ್ಲಿ ಅಸಮಾನತೆ ಹೆಚ್ಚಾಗಿದೆ. ಗ್ರಾಮೀಣ ಭಾಗ ಹಿಂದುಳಿದಿದೆ ಎಂದು ರಮೇಶ್ ಟೀಕೆ ಮಾಡಿದ್ದಾರೆ.

ಪಾಕ್ ಗಾಯಕ ದುಬೈನಲ್ಲಿ ಬಂಧನ?

ದುಬೈ: ಪಾಕಿಸ್ತಾನದ ಗಾಯಕ ರಾಹತ್ ಫತೇಹ್ ಅಲಿ ಖಾನ್ ರನ್ನು ದುಬೈನಲ್ಲಿ ಮಾನಹಾನಿ ಪ್ರಕರಣದಲ್ಲಿ ಬಂಧಿಸಲಾಗಿದೆ ಎಂದು ಸುದ್ದಿಯಾಗಿದೆ. ಖಾನ್ ಅವರ ಮಾಜಿ ಮ್ಯಾನೇಜರ್ ಸಲ್ಮಾನ್ ಅಹ್ಮದ್ ಅವರು ನೀಡಿದ ಮಾನಹಾನಿ ದೂರಿನ ಮೇರೆಗೆ ಗಾಯಕನನ್ನು ಬಂಧಿಸಲಾಗಿದೆ ಎಂದು ಪಾಕಿಸ್ತಾನದ ಜಿಯೋ ನ್ಯೂಸ್ ವರದಿ ಮಾಡಿದೆ. ಬಂಧನದ ಬಳಿಕ ಗಾಯಕನನ್ನು ಬುರ್ಜ್ ದುಬೈ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ. ಶೀಘ್ರದಲ್ಲೇ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುತ್ತದೆ ಎಂಬ ವರದಿಗಳು ಹೇಳಿದ್ದವು. ಆದರೆ, ಬಂಧನದ ಸುದ್ದಿಯನ್ನು ರಾಹತ್ ಫತೇಹ್ ಅಲಿ ಖಾನ್ ನಿರಾಕರಿಸಿದ್ದಾರೆ. ದುಬೈಗೆ ಹಾಡು ರೆಕಾರ್ಡ್ ಮಾಡಲು ಬಂದಿದ್ದೇನೆ. ಕೆಲಸ ಅದ್ಭುತವಾಗಿ ಸಾಗುತ್ತಿದೆ. ವದಂತಿಗಳಿಗೆ ಯಾರೂ ಕಿವಿ ಕೊಡಬೇಡಿ ಎಂದು ರಾಹತ್ ಫತೇಹ್ ಅಲಿ ಖಾನ್ ವಿಡಿಯೊ ಮೂಲಕ ಅಭಿಮಾನಿಗಳಿಗೆ ಮನವಿ ಮಾಡಿದ್ದಾರೆ.

ಪ್ಯಾರಿಸ್‌ನಲ್ಲಿ ಭವ್ಯ ರಥೋತ್ಸವ

ಪ್ಯಾರಿಸ್: ಭಾರತದಲ್ಲಿ ದೇವರ ಪೂಜೆ, ಹಬ್ಬಗಳನ್ನು ಮೆರವಣಿಗೆ, ರಥೋತ್ಸವ ಮೂಲಕ ವಿಜೃಂಭಣೆಯಿಂದ ಆಚರಿಸುತ್ತಾರೆ. ಈಗ ಯುರೋಪ್ ಮತ್ತು ಉತ್ತರ ಅಮೆರಿಕಾದಲ್ಲೂ ಇಂಥ ಆಚರಣೆ ನಡೆಯುತ್ತಿದೆ. ಇತ್ತೀಚೆಗೆ ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನ ಬೀದಿಯಲ್ಲಿ ಹಿಂದೂ ಸಮುದಾಯ ರಥ ಎಳೆದು ಮೆರವಣಿಗೆ ನಡೆಸಿದ್ದಾರೆ. ದೇವರ ವಿಗ್ರಹವನ್ನು ರಥದಲ್ಲಿ ಇರಿಸಿ ಮೆರವಣಿಗೆಯಲ್ಲಿ ಸಾಗುತ್ತ ರಸ್ತೆಯಲ್ಲಿ ಸಾವಿರಾರು ತೆಂಗಿನ ಕಾಯಿಗಳನ್ನು ಈಡುಗಾಯಿ ಒಡೆದಿದ್ದಾರೆ. ಆ ದೃಶ್ಯದ ವಿಡಿಯೊ ಸಾಮಾಜಿಕ ಜಾಲ ತಾಣಗಳಲ್ಲಿ ,ಮೀಡಿಯಾದಲ್ಲಿ ವೈರಲ್‌ಆಗಿದೆ.

ಅಭಿನವ್ ಬಿಂದ್ರಾಗೆ ಒಲಿಂಪಿಕ್ ಪ್ರಶಸ್ತಿ

ಬೆಂಗಳೂರು: ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯು ಭಾರತೀಯ ಶೂಟರ್ ಅಭಿನವ್ ಬಿಂದ್ರಾ ಅವರಿಗೆ ಒಲಿಂಪಿಕ್ ಪ್ರಶಸ್ತಿ ನೀಡಿ ಗೌರವಿಸಿದೆ. ಒಲಿಂಪಿಕ್ ಅಭಿಯಾನದ ನೀಡಿದ ಅತ್ಯುತ್ತಮ ಕೊಡುಗೆಗಾಗಿ ಬಿಂದ್ರಾ ಅವರಿಗೆ ಐಒಸಿ ಅತ್ಯುನ್ನತ ಮನ್ನಣೆ ನೀಡಿದೆ. ಈ ಬಗ್ಗೆ ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಸುದ್ದಿ ಹಂಚಿಕೊಂಡಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಭಾರತದ ಮೊದಲ ಅಥ್ಲೀಟ್ ಬಿಂದ್ರಾ, ಶೂಟಿಂಗ್‌ನಲ್ಲಿ ಈ ಸಾಧನೆ ಮಾಡಿದ್ದರು. 41 ವರ್ಷದ ಬಿಂದ್ರಾ, ತಮ್ಮದೇ ಆದ ಪ್ರತಿಷ್ಠಾನವನ್ನು ಹೊಂದಿದ್ದು, ಅದರ ಮೂಲಕ ಅವರು ಕ್ರೀಡಾ ಪಟುಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ. ಒಲಿಂಪಿಕ್ ಅಭಿಯಾನಕ್ಕೆ ನೀಡಿದ ಅತ್ಯುತ್ತಮ ಕೊಡುಗೆಗಳಿಗಾಗಿ ಒಲಿಂಪಿಕ್ ಗೌರವ ಪಡೆದ ಅಭಿನವ್ ಬಿಂದ್ರಾ ಅವರಿಗೆ ಅಭಿನಂದನೆಗಳು. ಅವರ ಸಾಧನೆಯು ನಮಗೆ ಹೆಮ್ಮೆಯ ಸಂಗತಿ. ನೀವು ನಿಜವಾಗಿಯೂ ಅರ್ಹರು ಅವರ ಹೆಸರು ಶೂಟರ್‌ಗಳು ಮತ್ತು ಒಲಿಂಪಿಯನ್‌ಗಳಿಗೆ ಸ್ಫೂರ್ತಿ ನೀಡಿದೆ ಎಂದು ಕ್ರೀಡಾ ಸಚಿವರು ಬರೆದುಕೊಂಡಿದ್ದರೆ.

ಬಾಂಗ್ಲಾದೇಶಕ್ಕೆ ಭರ್ಜರಿ ಗೆಲುವು

ದಂಬುಲಾ: ರಬೆಯಾ ಖಾನ್ ಅವರ ಮಾರಕ ಬೌಲಿಂಗ್ ಹಾಗೂ ಮುರ್ಷಿದಾ ಖಾತುನ್ ಅವರ ಜವಾಬ್ದಾರಿಯುತ ಬ್ಯಾಟಿಂಗ್ ನೆರವಿನಿಂದಾಗಿ ಬಾಂಗ್ಲಾದೇಶ ವನಿತೆಯರು, ಥಾಯ್ಲೆಂಡ್ ವನಿತೆಯರ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ್ದಾರೆ. ಮೊದಲು ಬ್ಯಾಟಿಂಗ್ ಮಾಡಿದ ಥಾಯ್ಲೆಂಡ್, 9 ವಿಕೆಟ್ ಕಳೆದುಕೊಂಡು 96 ರನ್ ಗಳಿಸಿತು. ಅದನ್ನು ಬೆನ್ನುಹತ್ತಿದ ಬಾಂಗ್ಲಾದೇಶವು 17.3 ಓವರ್‌ಗಳಲ್ಲೇ 3 ವಿಕೆಟ್ ಕಳೆದುಕೊಂಡು 100 ರನ್ ಗಳಿಸಿ ಗೆಲುವು ಸಾಧಿಸಿತು.

ವಿಷ್ಣುಗುಪ್ತ ವಿ.ವಿ.ಯಲ್ಲಿ ನಡೆದ ಗ್ರಂಥಮಾಲಿಕೆಯ ಅನಾವರಣದಲ್ಲಿ ರಾಘವೇಶ್ವರ ಶ್ರೀಗಳ ಆಶಯ

ವಿದ್ಯೆಯ ಅನಾವರಣ ಸಮಾಜಕ್ಕೆ ಪ್ರೇರಣೆ

ಗೋಕರ್ಣ: ನಮ್ಮ ಪರಂಪರೆಯ 35ನೇ ಪೀಠಾಧಿಪತಿಗಳಾಗಿದ್ದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಂದ್ರಭಾರತೀ ಮಹಾಸ್ವಾಮಿಗಳ ವಿದ್ಯಾಸಂಪನ್ನತೆ ಅದ್ಭುತ. ಅವರ ವಿದ್ವತ್ತಿನ, ವಿದ್ಯೆಯ ಅನಾವರಣ ಇಡೀ ಸಮಾಜಕ್ಕೆ ಪ್ರೇರಣೆಯಾಗಲಿ ಎಂದು ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿ ಆಶಿಸಿದರು.

ಅಶೋಕೆಯ ವಿಷ್ಣುಗುಪ್ತ ವಿ.ವಿ. ಆವರಣದಲ್ಲಿ ಅನಾವರಣ ಚಾತುರ್ಮಾಸ್ಯದ ಎರಡನೇ ದಿನ ಗುರು ಗ್ರಂಥ ಮಾಲಿಕೆಯ ಅನಾವರಣ ಸಂದರ್ಭದಲ್ಲಿ ಶ್ರೀಗಳು ಆಶೀರ್ವಚನ ನೀಡಿದರು. ಅಮೂಲ್ಯ ಗ್ರಂಥ ಉಳಿಸುವುದೇ ವಿ.ವಿ ಆಶಯ ವಿರಾಟ್ ವಿಶ್ವವಿದ್ಯಾಪೀಠದ ಮೂಲ ಆಶಯವೇ ಇಂಥ ಅಮೂಲ್ಯ ಗ್ರಂಥಗಳನ್ನು ಉಳಿಸುವುದು. ನಮ್ಮ ಬದುಕಿಗೆ ದಾರಿದೀಪವಾಗಬಲ್ಲ ಇಂಥ ಗ್ರಂಥಗಳ ಅನಾವರಣ ಅರ್ಥಪೂರ್ಣ. ಶ್ರೀ ಪರಿವಾರದ ಗುರುಭಿಕ್ಷಾಸೇವೆ ನಡೆದಿದೆ. ಇದು ಪ್ರತಿ ಚಾತುರ್ಮಾಸ್ಯದ ಎರಡನೇ ದಿನದ ವಿಶೇಷ. ಗುರುಸೇವೆಗೆ ಜೀವನವನ್ನೇ ಮುಡಿಪಾಗಿಟ್ಟ ಶ್ರೀ ಪರಿವಾರದ ಸೇವೆ ಶ್ಲಾಘನೀಯ ಎಂದು ಬಣ್ಣಿಸಿದರು.

ಗ್ರಂಥಗಳ ಮಾಲಿಕೆಯ ಅನಾವರಣ: ಇದಕ್ಕೂ ಮುನ್ನ ಗುರುಗ್ರಂಥ ಮಾಲಿಕೆಯ ಅನಾ ವರಣವನ್ನು ವಿದ್ವಾನ್ ಸತ್ಯನಾರಾಯಣ ಶರ್ಮಾ ನೆರವೇರಿಸಿದರು. ಶ್ರೀ ಮಠದ ಪ್ರಶಾಸನಾಧಿಕಾರಿ ಸಂತೋಷ್ ಹೆಗಡೆ, ವಿತ್ತಾಧ್ಯಕ್ಷ ಗಣೇಶ್ ಜೆ.ಎಲ್, ವಿವಿವಿ ಗೌರವಾಧ್ಯಕ್ಷ ಡಿ.ಡಿ.ಶರ್ಮಾ, ಚಾತುರ್ಮಾಸ್ಯ ಸಮಿತಿ ಅಧ್ಯಕ್ಷ ಮಂಜುನಾಥ ಸುವರ್ಣಗದ್ದೆ, ಕೋಶಾಧ್ಯಕ್ಷ ಸುಧಾಕರ್ ಮತ್ತಿತರರು ಉಪಸ್ಥಿತರಿದ್ದರು.

ಕಾಲಕ್ಕೆ ಇರುವ ಶಕ್ತಿ ಯಾರಿಗೂ ಇಲ್ಲ

'ಕಾಲ' ಎಂಬ ವಿಷಯದ ಬಗ್ಗೆ ಪ್ರವಚನ ನೀಡಿದ ಸ್ವಾಮೀಜಿ, ಕಾಲಕ್ಕೆ ಇರುವ ಶಕ್ತಿ ಬೇರಾರಿಗೂ ಇರಲಾರದು. ಸುಖ ಹಾಗೂ ದುಃಖ ಚಕ್ರವಿದ್ದಂತೆ ಎಂದು ಹೇಳಿದರು. ಮಹಾಭಾರತ ಯುದ್ಧದಲ್ಲಿ ಎರಡೂ ಕಡೆಗಳ ಅಸಂಖ್ಯಾತ ಮಂದಿ ಸಾವನ್ನಪ್ಪಿದ ಘಟನೆಯನ್ನು ಸ್ಮರಿಸಿ, ಧರ್ಮರಾಯ ಪಶ್ಚಾತ್ತಾಪ ಪಡುತ್ತಾನೆ. ಮಕ್ಕಳು, ಮೊಮ್ಮಕ್ಕಳು, ಸೋದರರು, ಚಿಕ್ಕಪ್ಪ-ದೊಡ್ಡಪ್ಪಂದಿರು, ಹೆಣ್ಣುಕೊಟ್ಟ ಮಾವಂದಿರು, ಸೋದರಮಾವ, ಗುರುಗಳು, ಅಜ್ಜಂದಿರು ಎಲ್ಲರನ್ನೂ ಸಿಂಹಾಸನಕ್ಕಾಗಿ ಸಾಯಿಸಿದೆ ಎಂದು ದುಃಖಿಸುತ್ತಾನೆ. ದೇಹ ಅಳಿದುಹೋಗುವ ತಪಸ್ಸು ಮಾಡುತ್ತೇನೆ ಎಂಬ ನಿರ್ಧಾರಕ್ಕೆ ಬಂದ. ಆದರೆ ವಾಸ್ತವವಾಗಿ ಕಾಲ ಧರ್ಮರಾಜನಿಂದ ಎಲ್ಲವನ್ನೂ ಮಾಡಿಸಿರುತ್ತಾನೆ. ಪಾಪದ ಲವಲೇಶವೂ ಆತನಿಗೆ ತಟ್ಟುವುದಿಲ್ಲ ಎಂದರು.

ಐಎನ್‌ಎಸ್ ನೌಕೆ ನಾವಿಕ ಕಣ್ಮರೆ

ಮುಂಬೈ: ಮುಂಬೈ ಬಂದರಿನಲ್ಲಿದ್ದ ನೌಕಾಪಡೆಯ ಐಎನ್ ಎಸ್ ಬ್ರಹ್ಮಪುತ್ರ ಹಡಗಿನಲ್ಲಿ ಭಾನುವಾರ ಬೆಂಕಿ ಅವಘಡ ಸಂಭವಿಸಿದೆ. ಆ ಸಂದರ್ಭ ಒಬ್ಬ ನಾವಿಕ ಕಣ್ಮರೆ ಆಗಿದ್ದು, ಅವರಿಗಾಗಿ ಶೋಧ ನಡೆಸಲಾಗುತ್ತಿದೆ. ಹಡಗಿನ ಒಂದು ಭಾಗಕ್ಕೆ ತಗುಲಿದ್ದ ಬೆಂಕಿ ನಂದಿಸಲಾಗಿದೆ. ಮುಂಬೈ ನೌಕಾ ನೆಲೆಯಲ್ಲಿ ಐಎನ್‌ಎಸ್ ಬ್ರಹ್ಮಪುತ್ರ ಕೆಲ ಮರುಜೋಡಣಾ ಕಾರ್ಯಕ್ಕೆ ಒಳಗಾಗಿತ್ತು. ಈ ವೇಳೆ ಭಾನುವಾರ ಸಂಜೆ ಯುದ್ಧ ನೌಕೆಗೆ ಬೆಂಕಿ ತಗುಲಿದೆ. ಅಗ್ನಿಶಾಮಕ ದಳ, ನೌಕಾ ಸಿಬ್ಬಂದಿ ಗಳಿಂದ ಬೆಂಕಿ ನಂದಿಸಲಾಗಿದೆ. ಎಷ್ಟು ಪ್ರಯತ್ನ ಪಟ್ಟರೂ ನೌಕೆಯನ್ನು ಸಹಜ ಸ್ಥಿತಿಗೆ ತರಲು ಸಾಧ್ಯವಾಗಲಿಲ್ಲ, ಇನ್ನೂ ಕೂಡ ಒಂ ದು ಬದಿಗೆ ವಾಲಿದ ರೀತಿ ನೌಕೆ ನಿಂತಿದೆ. ಘಟನೆ ಯಲ್ಲಿ ಓರ್ವ ಕಿರಿಯ ನಾವಿಕ ಕಾಣೆಯಾ ಗಿದ್ದು ಆತನಿಗಾಗಿ ಹುಡುಕಾಟ ನಡೆಸಲಾಗುತ್ತಿದೆ.

ಸೂರ್ಯಕುಮಾರ್ ಅರ್ಹ ನಾಯಕ

ಮುಖ್ಯ ಆಯ್ಕೆಗಾರ ಅಗರ್ಕರ್ ಹೇಳಿಕೆ | ಕೊಹ್ಲಿಯೊಂದಿಗೆ ಉತ್ತಮ ಸಂಬಂಧ: ಗಂಭೀರ್

ಮುಂಬೈ: ಫಿಟ್ನೆಸ್, ಡ್ರೆಸ್ಸಿಂಗ್ ರೂಮ್ನಿಂದ ಬಂದ ಪ್ರತಿಕ್ರಿಯೆಗಳು ಮತ್ತು ಸ್ಥಿರ ಲಭ್ಯತೆಯು ಸೂರ್ಯಕುಮಾರ್ ಯಾದವ್ ಅವರನ್ನು ನಾಯಕನಾಗಿ ಆಯ್ಕೆ ಮಾಡುಲು ಕಾರಣವಾಯಿತು ಎಂದು ಮುಖ್ಯ ಆಯ್ಕೆಗಾರ ಅಜಿತ್ ಅಗರ್ಕರ್ ತಿಳಿಸಿದರು.

ಭಾರತದ ಶ್ರೀಲಂಕಾ ಪ್ರವಾಸಕ್ಕಿಂತ ಮುನ್ನ ಮುಖ್ಯ ಕೋಚ್ ಗೌತಮ್ ಗಂಭೀರ್ ಹಾಗೂ ಅಜಿತ್ ಅಗರ್ಕರ್ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಯಕನ ಆಯ್ಕೆಯಲ್ಲಿ ಫಿಟ್ನೆಸ್ ದೊಡ್ಡ ಸವಾಲಾಗಿತ್ತು. ಎಲ್ಲಾ ಸಮಯದಲ್ಲೂ ಲಭ್ಯವಿರುವ ಆಟಗಾರರನ್ನು ಆಯ್ಕೆ ಮಾಡುವ ಉದ್ದೇಶದಿಂದ ಸೂರ್ಯ ಅವರನ್ನು ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ವಿವರಿಸಿದರು. ಅಲ್ಲದೆ, ಸೂರ್ಯಕುಮಾರ್ ಟಿ20 ಅತ್ಯುತ್ತಮ ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರು. ಅವರು ಎಲ್ಲಾ ಪಂದ್ಯಗಳನ್ನು ಆಡುವ ಸಾಧ್ಯತೆ ಹೆಚ್ಚಿದೆ. ಅವರು ಅರ್ಹ ನಾಯಕರಾಗಿದ್ದಾರೆ, ಅವರು ಈ ಪಾತ್ರಕ್ಕೆ ಹೇಗೆ ಹೊಂದಿಕೊಳ್ಳುತ್ತಾರೆಂದು ನೋಡಬೇಕು ಎಂದು ಅಗರ್ಕರ್ ಹೇಳಿದರು.

ಇದೇ ವೇಳೆ ಮಾತನಾಡಿದ ನೂತನ ಕೋಚ್ ಗೌತಮ್ ಗಂಭೀರ್ ಅವರು ಮಾತನಾಡಿ, ಭಾರತ ತಂಡಕ್ಕೆ ಸೇವೆ ಮಾಡಿವ ಅವಕಾಶ ಮತ್ತೊಮ್ಮೆ ದೊರೆತಿದೆ. ನಾನು ತರಬೇತಿ ಮಾಡುತ್ತಿರುವುದು ಚಾಂಪಿಯನ್ ತಂಡಕ್ಕೆ. ಎಲ್ಲ ಆಟಗಾರರೂ ಉತ್ತಮವಾಗಿದ್ದಾರೆ. ಭಾರತ ತಂಡದೊಂದಿಗಿನ ಹೊಸ ಜರ್ನಿ ಶುರುವಾಗಲಿದೆ. ತಂಡವನ್ನು ವಿಶ್ವಚಾಂಪಿಯನ್ ತಂಡ ಮಾಡುವ ಗುರಿ ನನ್ನದಾಗಿದೆ ಎಂದು ತಿಳಿಸಿದರು. ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ನಾನಾ ವಿಷಯದ ಬಗ್ಗೆ ಮಾತನಾಡಿದರು.

ವಿರಾಟ್ ಕೊಹ್ಲಿ, ರೋಹಿತ್ ಭವಿಷ್ಯ: ವಿರಾಟ್ ಕೊಹ್ಲಿ, ರೋಹಿತ್ ವಿಶ್ವ ದರ್ಜೆಯ ಆಟಗಾರರು. ಈಗಾಗಲೇ ಪ್ರಮುಖ ಟೂರ್ನಿಗಳಲ್ಲಿ ಅವರು ಏನು ಮಾಡಬಲ್ಲರು ಎಂಬುದನ್ನು ಟಿ20 ವಿಶ್ವಕಪ್ ಹಾಗೂ ಏಕದಿನ ವಿಶ್ವಕಪ್ ಮೂಲಕ ತೋರಿಸಿದ್ದಾರೆ. ಮುಂದೆ ಚಾಂಪಿಯನ್ಸ್ ಟ್ರೋಫಿ ಮತ್ತು ಆಸ್ಟ್ರೇಲಿಯಾ ಸರಣಿ ಇದೆ. ಇದಾದ ಬಳಿಕ ಫಿಟ್ನೆಸ್ ಉಳಿಸಿಕೊಂಡರೆ ಅವರಿಬ್ಬರೂ 2027ರ ಏಕದಿನ ವಿಶ್ವಕಪ್ ನಲ್ಲೂ ಕಾಣಿಸಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

ಟೀಂ ಇಂಡಿಯಾದ ನೂತನ ಕೋಚ್ ಆಗಿ ಆಯ್ಕೆಯಾದ ಗೌತಮ್ ಗಂಭಿರ್ ಹಾಗೂ ಮುಖ್ಯ ಆಯ್ಕೆಗಾರ ಅಜಿತ್ ಅಗರ್ಕರ್ ಅವರು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು.

ಬುಮ್ರಾ ಅವರಿಗೆ ವಿರಾಮ ನೀಡಲಾಗಿದೆ: ಶ್ರೀಲಂಕಾ ವಿರುದ್ಧದ ಸರಣಿಗೆ ಜಸ್‌ಪ್ರೀತ್ ಬುಮ್ರಾ ಅವರನ್ನು ಯಾಕೆ ಆಯ್ಕೆ ಮಾಡಿಲ್ಲ ಎಂದು ಕೇಳಿದಾಗ, ಬುಮ್ರಾ ಅವರಿಗೆ ಹೆಚ್ಚಿನ ಕೆಲಸದ ಒತ್ತಡ ನೀಡಲು ನಾವು ಬಯಸುತ್ತಿಲ್ಲ. ವೇಗದ ಬೌಲರ್‌ನ ಕೆಲಸದ ಭಾರವನ್ನು ನಿರ್ವಹಿಸುವುದು ಬಹಳ ಮುಖ್ಯವಾಗುತ್ತದೆ. ಅದರಲ್ಲೂ ಬುಮ್ರಾ ನಮ್ಮ ಪ್ರಮುಖ ಬೌಲರ್. ಹೀಗಾಗಿ ಅವರಗೆ ವಿರಾಮ ನೀಡಲಾಗಿದೆ ಎಂದು ಹೇಳಿದ್ದಾರೆ.

ಟಿಆರ್‌ಪಿಗಾಗಿ ವದಂತಿ

ವಿರಾಟ್ ಕೊಹ್ಲಿ ಜತೆಗಿನ ಸಂಬಂಧ ಹೇಗಿದೆ ಎಂಬ ಪ್ರಶ್ನೆಗೆ ಉತ್ತರ ನೀಡಿದ ಗೌತಮ್, ನಾನು ಕೊಹ್ಲಿ ಉತ್ತಮ ಬಾಂಧವ್ಯ ಹೊಂದಿದ್ದೇವೆ. ನನ್ನ ಹಾಗೂ ವಿರಾಟ್ ಕೊಹ್ಲಿ ನಡುವೆ ಸಂಬಂಧ ಸರಿಯಿಲ್ಲ ಎಂಬುದು ಕೇವಲ ವದಂತಿಗಳು ಅಷ್ಟೇ. ಇದೆಲ್ಲಾ ಟಿಆರ್‌ಪಿಗಾಗಿ ಒಳ್ಳೆಯದು. ನನ್ನ ಹಾಗೂ ಕೊಹ್ಲಿ ನಡುವೆ ಉತ್ತಮ ಸಂಬಂಧವಿದೆ. ನಾವಿಬ್ಬರೂ 140 ಕೋಟಿ ಭಾರತೀಯರನ್ನು ಪ್ರತಿನಿಧಿಸುತ್ತಿದ್ದೇವೆ ಎಂಬುದು ಮುಖ್ಯವಾ ಗುತ್ತದೆ ಎಂದು ಉತ್ತರಿಸಿದರು

ಡ್ರೆಸ್ಸಿಂಗ್ ರೂಮ್ ವಾತಾವರಣ: ಭಾರತ ವಿಶ್ವ ಚಾಂಪಿಯನ್ ಆಗಿದೆ. ಇಂತಹ ಪರಿಸ್ಥಿತಿಯಲ್ಲಿ ಡ್ರೆಸ್ಸಿಂಗ್ ರೂಮಿನ ವಾತಾವರಣವನ್ನು ಉತ್ತಮವಾಗಿರಿಸುತ್ತೇವೆ. ಏಕೆಂದರೆ ತಂಡದ ಗೆಲುವಿನ ಸೂತ್ರವು ಡ್ರೆಸ್ಸಿಂಗ್ ರೂಮ್‌ನಲ್ಲಿರುವ ವಾತಾವರಣವನ್ನು ಅವಲಂಬಿಸಿರುತ್ತದೆ. ಹೀಗಾಗಿ ಡ್ರೆಸ್ಸಿಂಗ್ ರೂಮ್‌ನಲ್ಲಿ ಎಲ್ಲಾ ಆಟಗಾರರನ್ನು ಸಂತೋಷದಿಂದ ಇರುವಂತಹ ವಾತಾವರಣ ಸೃಷ್ಟಿಸಿಕೊಳ್ಳುತ್ತೇವೆ ಎಂದು ಗಂಭೀರ್ ಹೇಳಿದ್ದಾರೆ.

ಟೆಸ್ಟ್‌ನಲ್ಲಿ ಜಡೇಜಾ ಬ್ಯಾಕ್: ಟಿ20 ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿರುವ ಜಡೇಜಾ ಅವರನ್ನು ಏಕದಿನ ತಂಡಕ್ಕೆ ಆಯ್ಕೆ ಮಾಡಲಾಗಿಲ್ಲ. ಭಾರತ ತಂಡಕ್ಕೆ ಮುಂದೆ ಟೆಸ್ಟ್ ಸರಣಿ ಇದೆ. ಆ ಸರಣಿಗಳಲ್ಲಿ ಅಲ್ಲಿ ಅವರ ಪಾತ್ರ ಮುಖ್ಯವಾಗಿರಲಿದೆ. ಹೀಗಾಗಿ ಮುಂಬರುವ ಟೆಸ್ಟ್ ಸರಣಿಯ ಮೂಲಕ ಜಡೇಜಾ ಭಾರತ ತಂಡಕ್ಕೆ ಮರಳಲಿದ್ದಾರೆ ಎಂದು ತಿಳಿಸಿದರು.



ಹಿರಿಯೂರು ತಾಲೂಕಿನ ಕಸ್ತೂರಿ ರಂಗಪ್ಪನಹಳ್ಳಿ ಸಮೀಪದ ನಿತ್ಯಾನಂದ ಆಶ್ರಮದಲ್ಲಿ ನಡೆದ 84ನೇ ಸತ್ಸಂಗ ಹಾಗೂ 8ನೇ ವರ್ಷದ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಶ್ರೀಪೂರ್ಣಾನಂದ ಸ್ವಾಮೀಜಿ ಮಾತನಾಡಿದರು.

ನಿತ್ಯಾನಂದ ಆಶ್ರಮದ ಶ್ರೀಪೂರ್ಣಾನಂದ ಸ್ವಾಮೀಜಿ ಕರೆ

ಸತ್ಕಾರ್ಯದಿಂದಲೇ ಭಗವಂತನ ಸಾಕ್ಷಾತ್ಕಾರ

ಹಿರಿಯೂರು: ನಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ಸತ್ಕಾರ್ಯಗಳನ್ನು ಕೈಗೊಳ್ಳುವುದೇ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವ ಸುಲಭ ವಿಧಾನ ಎಂದು ನಿತ್ಯಾನಂದ ಆಶ್ರಮದ ಶ್ರೀಪೂರ್ಣಾನಂದ ಸ್ವಾಮೀಜಿ ಕರೆ ನೀಡಿದ್ದಾರೆ.

ಹಿರಿಯೂರು ತಾಲೂಕಿನ ಕಸ್ತೂರಿ ರಂಗಪ್ಪನಹಳ್ಳಿ ಸಮೀಪದ ನಿತ್ಯಾನಂದ ಆಶ್ರಮದಲ್ಲಿ ನಿತ್ಯಾನಂದ ಸೇವಾ ಸಮಿತಿ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ 84ನೇ ಸತ್ಸಂಗ ಹಾಗೂ 8ನೇ ವರ್ಷದ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಭಗವಂತನ ಕುರಿತು ವಿಚಾರ ಮಂಡಿಸಿದರು.

ನಿತ್ಯಾನಂದ ಸ್ವಾಮೀಜಿ ಸಂಕಷ್ಟದಲ್ಲಿರುವ ಲಕ್ಷಾಂತರ ಭಕ್ತರ ಪ್ರಾರ್ಥನೆ ಈಡೇರುವಂತೆ ಮಾಡಿದ್ದಾರೆ. ಭಕ್ತರಿಗೆ ಬದುಕಿನಲ್ಲಿ ಮತ್ತು ಭಗವಂತನಲ್ಲಿ ಭರವಸೆ ಉಳಿಯುವಂತೆ ಮಾಡಿದ್ದಾರೆ ಎಂದು ಭಕ್ತಸ್ತೋಮವನ್ನು ಉದ್ದೇಶಿಸಿ ಹೇಳಿದರು.

ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್ ಅವರನ್ನು ಪೂರ್ಣಾನಂದಶ್ರೀಗಳು ಸನ್ಮಾನಿಸಿ ದರು. ನಿತ್ಯಾನಂದ ಸೇವಾ ಸಮಿತಿಯ ಮೂಲಕ ಸ್ಥಳೀಯ ಶಿಕ್ಷಕರನ್ನು ಕೂಡಾ ಸನ್ಮಾನಿಸಲಾಯಿತು. ಸ್ವಾಮೀಜಿ ಮಲ್ಲೇಶ್ವರ ಶರಣರು ಹಾಗೂ ಚಿದಾನಂದ ಭಾರತಿ ಸ್ವಾಮೀಜಿ ಗುರು ಪೂರ್ಣಿಮೆ ದಿನ ಗುರುವಿನ ಮಹತ್ವದ ಬಗ್ಗೆ ಪ್ರವಚನ ನೀಡಿದರು. ಈ ಸಂದರ್ಭದಲ್ಲಿ ಕಸ್ತೂರಿ ರಂಗಪ್ಪನಹಳ್ಳಿಯ ಸರಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿ ವಿತರಿಸಲಾಯಿತು.

ವಿಶ್ವ ದಾಖಲೆ ಬರೆದ ಸ್ಕಾಟ್ಲೆಂಡ್ ವೇಗಿ | ರಬಾಡ ದಾಖಲೆ ಉಡೀಸ್

ಪದಾರ್ಪಣೆ ಪಂದ್ಯದಲ್ಲೇ 7 ವಿಕೆಟ್ ಕಿತ್ತ ಚಾರ್ಲಿ

ದೆಹಲಿ: ಚೊಚ್ಚಲ ಪಂದ್ಯದ ಚೊಚ್ಚಲ ಓವರ್‌ನ ಮೊದಲ ಎರಡು ಎಸೆತಗಳಲ್ಲಿ ಸತತ ಎರಡು ವಿಕೆಟ್‌ಗಳನ್ನು ಉರುಳಿಸುವ ಮೂಲಕ ಸ್ಕಾಟ್ಲೆಂಡ್ ಆಟಗಾರ ಚಾರ್ಲಿ ಕ್ಯಾಸಲ್ ವಿಶ್ವ ದಾಖಲೆ ಬರೆದಿದ್ದಾರೆ.

ಸ್ಕಾಟ್ಲೆಂಡ್‌ನ ಫೋರ್ಥಿಲ್ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ಒಮಾನ್ ಹಾಗೂ ಸ್ಕಾಟ್ಲೆಂಡ್ ನಡುವಿನ ಏಕದಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ ಪರ ಚೊಚ್ಚಲ ಪಂದ್ಯವನ್ನಾಡುತ್ತಿರುವ ಯುವ ವೇಗಿ ಚಾರ್ಲಿ ಕ್ಯಾಸಲ್, ತಮ್ಮ ಮಾರಕ ಬೌಲಿಂಗ್ ಮೂಲಕ ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ದಾಖಲೆಯೊಂದನ್ನು ನಿರ್ಮಿಸಿದ್ದಾರೆ. ಪದಾರ್ಪಣೆ ಪಂದ್ಯದಲ್ಲಿ ಕೇವಲ 5.4 ಓವರ್‌ಗಳನ್ನು ಮಾಡಿದ ಚಾರ್ಲಿ, ಒಂದು ಮೇಡನ್ ಓವರ್ ಸೇರಿದಂತೆ ಕೇವಲ 21 ರನ್ ನೀಡಿ ಬರೋಬ್ಬರಿ 7 ವಿಕೆಟ್ ಕಬಳಿಸಿ ವಿಶ್ವದಾಖಲೆ ನಿರ್ಮಿಸಿದ್ದಾರೆ. ಚಾರ್ಲಿ ಕ್ಯಾಸಲ್‌ಗೂ ಮುನ್ನ ವಿಶ್ವದ ಯಾವೊಬ್ಬ ಬೌಲರ್‌ಗೂ ತಮ್ಮ ಚೊಚ್ಚಲ ಪಂದ್ಯದಲ್ಲಿ ಇಷ್ಟು ವಿಕೆಟ್ ಪಡೆಯಲು ಸಾಧ್ಯವಾಗಿರಲಿಲ್ಲ.

ರಾಬಾಡ ದಾಖಲೆ ಮುರಿದ ಕ್ಯಾಸಲ್: ಚಾರ್ಲಿಗೂ ಮುನ್ನ ಈ ದಾಖಲೆ ದಕ್ಷಿಣ ಆಫ್ರಿಕಾದ ವೇಗಿ ಕಗಿಸೋ ರಬಾಡ ಅವರ ಹೆಸರಿನಲ್ಲಿತ್ತು. ರಬಾಡ ತಮ್ಮ ಚೊಚ್ಚಲ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ನಡೆದ ಏಕದಿನ ಪಂದ್ಯದಲ್ಲಿ ಕೇವಲ 16 ರನ್ ನೀಡಿ 6 ವಿಕೆಟ್ ಕಬಳಿಸಿದ್ದರು. ಇದೀಗ ಆ ದಾಖಲೆಯನ್ನು ಸ್ಕಾಟ್ಲೆಂಡ್‌ನ ಚಾರ್ಲಿ ಕ್ಯಾಸಲ್ ಮುರಿದಿದ್ದಾರೆ.

ವಿವಿಧ ದಾಖಲೆ ಬರೆದ ಚಾರ್ಲಿ: ಚಾರ್ಲಿ ಕ್ಯಾಸಲ್ ತೆಗೆದ 7 ವಿಕೆಟ್‌ಗಳಲ್ಲಿ ಮೊದಲ ಎರಡು ವಿಕೆಟ್‌ಗಳು ಅವರು ಬೌಲಿಂಗ್ ಮಾಡಿದ ಮೊದಲ ಓವರ್‌ನ ಮೊದಲ ಎರಡು ಎಸೆತಗಳಲ್ಲೇ ಬಂದವು. ಅಲ್ಲದೆ, ಮೊದಲ ಓವರ್‌ನ ಮೊದಲ ಎಸೆತದಲ್ಲಿ ವಿಕೆಟ್ ಪಡೆದ 32ನೇ ಬೌಲರ್ ಎನಿಸಿಕೊಂಡಿದ್ದಾರೆ. ಚಾರ್ಲಿ ಕ್ಯಾಸಲ್‌ಗೂ ಮುನ್ನ ಈ ಸಾಧನೆಯನ್ನು ವಿಶ್ವದ 31 ಬೌಲರ್‌ಗಳು ಮಾಡಿದ್ದರು.

ಇದಲ್ಲದೆ ಮೊದಲ ಓವರ್‌ನಲ್ಲಿ ಚಾರ್ಲಿ ಸತತ ಎರಡು ಎಸೆತಗಳಲ್ಲಿ 2 ವಿಕೆಟ್‌ಗಳನ್ನು ಪಡೆದಿದಲ್ಲದೆ ಅದೇ ಓವರ್‌ನಲ್ಲಿ ಮತ್ತೊಂದು ವಿಕೆಟ್ ಕೂಡ ಕಬಳಿಸಿದರು. ಜೊತೆಗೆ ಈ ಓವರ್ ಮೇಡನ್ ಕೂಡ ಆಗಿತ್ತು. ಈ ಮೂಲಕ ಚಾರ್ಲಿ ಮೊದಲ ಓವರ್‌ನಲ್ಲಿ 2 ವಿಕೆಟ್ ಕಬಳಿಸು ವುದರೊಂದಿಗೆ ಯಾವುದೇ ರನ್ ನೀಡಿದ ಮೊದಲ ಬೌಲರ್ ಎನಿಸಿಕೊಂಡರು.

ಚಾರ್ಲಿ ತಂಡದಲ್ಲಿ ಇರಲಿಲ್ಲ: ಚಾರ್ಲಿ ಕ್ಯಾಸಲ್ ಮೊದಲು ತಂಡದಲ್ಲಿ ಆಯ್ಕೆಯಾಗಿರಲಿಲ್ಲ. ಆದರೆ ತಂಡದಲ್ಲಿ ಆಯ್ಕೆಯಾಗಿದ್ದ ಮತ್ತೊಬ್ಬ ವೇಗಿ ಕ್ರಿಸ್ ಸೋಲ್ ಗಾಯಗೊಂಡಿದ್ದರಿಂದ ಚಾರ್ಲಿ ಕ್ಯಾಸಲ್‌ಗೆ ತಂಡದಲ್ಲಿ ಆಡುವ ಅವಕಾಶ ಸಿಕ್ಕಿತ್ತು.

ಮಹಿಳಾ ವಿಶ್ವಕಪ್‌ನಲ್ಲಿ 10 ತಂಡಗಳು ಭಾಗಿ

ದುಬೈ: ಅಕ್ಟೋಬರ್ 3 ರಿಂದ ಬಾಂಗ್ಲಾದೇಶದಲ್ಲಿ ಆರಂಭವಾಗಲಿರುವ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಒಟ್ಟು 10 ಮಹಿಳಾ ತಂಡಗಳು ಕಣಕ್ಕಿಳಿಯಲಿವೆ ಎಂದು ವರದಿಯಾಗಿದೆ. ಈ ಟೂರ್ನಿ ಆರಂಭಕ್ಕೂ ಮುನ್ನ ಮಹತ್ವದ ನಿರ್ಧಾರ ತೆಗೆದುಕೊಂಡಿರುವ ಐಸಿಸಿ, ಪುರುಷರ ಟಿ20 ವಿಶ್ವಕಪ್‌ನಂತೆ ಮಹಿಳೆಯರ ಟಿ20 ವಿಶ್ವಕಪ್‌ನಲ್ಲೂ ಭಾಗವಹಿಸುವ ತಂಡಗಳ ಸಂಖ್ಯೆಯನ್ನು ಹೆಚ್ಚಿಸಲು ತೀರ್ಮಾನಿಸಿದೆ.

2030ರಲ್ಲಿ 16 ತಂಡಗಳು: ಟೂರ್ನಿಯಲ್ಲಿ ಭಾಗವಹಿಸುವ ತಂಡಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು ಎಂದು ಅಂತಾರಾಷ್ಟ್ರೀಯ ಮಂಡಳಿ ಹೊರಡಿಸಿರುವ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರಕಟಣೆಯಂತೆ ಈ ವರ್ಷ ನಡೆಯಲ್ಲಿರುವ ಟಿ20 ವಿಶ್ವಕಪ್‌ನಲ್ಲಿ ಮೊದಲೇ ನಿರ್ಧರಿಸಿರುವಂತೆ 10 ತಂಡಗಳು ಕಣಕ್ಕಿಳಿಯಲಿವೆ. ಆದರೆ ಮುಂದಿನ ಆವೃತ್ತಿಯಲ್ಲಿ ಅಂದರೆ, 2026ರಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಈ ತಂಡಗಳ ಸಂಖ್ಯೆ 12ಕ್ಕೆ ಏರಿಕೆಯಾಗಲಿದ್ದು, ನಂತರ 2030ರ ವೇಳೆಗೆ ಇವುಗಳ ಸಂಖ್ಯೆ 16ಕ್ಕೆ ಏರಿಕೆಯಾಗಲಿದೆ.

ಒಟ್ಟಾರೆ, ಮುಂಬರುವ ವರ್ಷಗಳಲ್ಲಿ ಹೆಚ್ಚು ಹೆಚ್ಚು ದೇಶಗಳು ವಿಶ್ವಕಪ್‌ನಲ್ಲಿ ಭಾಗವಹಿಸುವ ಅವಕಾಶವನ್ನು ಪಡೆಯಲಿವೆ.

ಪುರುಷ ವಿಭಾಗದ ಮಾದರಿ: ಪುರುಷರ ಟಿ20 ವಿಶ್ವಕಪ್‌ನಲ್ಲಿ ಬರೋಬ್ಬರಿ 20 ತಂಡಗಳು ಭಾಗವಹಿಸಿದ್ದವು. ಟಿ20 ವಿಶ್ವಕಪ್‌ನಲ್ಲಿ ಇಷ್ಟೊಂದು ತಂಡಗಳು ಭಾಗವಹಿಸಿದ್ದು, ಇದೇ ಮೊದಲು. 2022ರಲ್ಲಿ ನಡೆದಿದ್ದ ಟಿ20 ವಿಶ್ವಕಪ್‌ನಲ್ಲಿ 16 ತಂಡಗಳು ಸ್ಪರ್ಧಿಸಿದ್ದವು. ಆದರೆ ಆ ಬಳಿಕ ವಿಶ್ವದಲ್ಲಿ ಹೆಚ್ಚುತ್ತಿರುವ ಟಿ20 ಕ್ರಿಕೆಟ್‌ನ ಕ್ರೇಜ್ ಅನ್ನು ಪರಿಗಣಿಸಿದ ಐಸಿಸಿ, 16 ತಂಡಗಳ ಬದಲು 20 ತಂಡಗಳನ್ನು ಟಿ20 ವಿಶ್ವಕಪ್‌ನಲ್ಲಿ ಕಣಕ್ಕಿಳಿಸಿತ್ತು. ಇದೀಗ ಮಹಿಳಾ ಟಿ20 ವಿಶ್ವಕಪ್‌ನಲ್ಲೂ ಈ ಯೋಜನೆಯನ್ನು ಜಾರಿಗೆ ತರಲು ಐಸಿಸಿ ಮುಂದಾಗಿದೆ.

ವಾರ್ಷಿಕ ಸಮ್ಮೇಳನದಲ್ಲಿ ಪ್ರಮುಖ ನಿರ್ಧಾರ: ಐಸಿಸಿಯ ವಾರ್ಷಿಕ ಸಮ್ಮೇಳನವು ಶ್ರೀಲಂಕಾದ ರಾಜಧಾನಿ ಕೊಲಂಬೊದಲ್ಲಿ ಶನಿವಾರ ಮತ್ತು ಭಾನುವಾರದಂದು ನಡೆಯಿತು. ಇದರಲ್ಲಿ ಮಂಡಳಿಯ ಸಭೆಯ ಹೊರತಾಗಿ, ವಾರ್ಷಿಕ ಸಾಮಾನ್ಯ ಸಭೆ ಸಹ ನಡೆಯಿತು. ಈ ಸಭೆಯಲ್ಲಿ, ಎಲ್ಲಾ ಐಸಿಸಿ ಸದಸ್ಯ ಮಂಡಳಿಗಳ ಅಧಿಕಾರಿಗಳು ಉಪಸ್ಥಿತರಿದ್ದು, ಕೆಲವು ಪ್ರಮುಖ ವಿಷಯಗಳ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು.

ಆ.15 ದೇಶಾದ್ಯಂತ ಟ್ರ್ಯಾಕ್ಟರ್ ಮೆರವಣಿಗೆ ಆ.1 ಬಿಜೆಪಿ ಪ್ರತಿಕೃತಿ ದಹನ: ರೈತ ಒಕ್ಕೂಟ

ದೆಹಲಿ: ಕನಿಷ್ಠ ಶಾಸನಾತ್ಮಕ ಬೆಲೆ(ಎಮ್‌ಎಸ್‌ಪಿ) ನಿಗದಿಗೆ ಕಾನೂನು ಖಾತರಿ ನೀಡಬೇಕು ಎಂಬುದೂ ಸೇರಿದಂತೆ ರೈತರ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಆ.1ರಂದು ಬಿಜೆಪಿ ಪ್ರತಿಕೃತಿ ದಹನ ಮಾಡಲಾಗುವುದು ಎಂದು ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ಸೋಮವಾರ ಘೋಷಿಸಿವೆ.

ದೆಹಲಿಯಲ್ಲಿ ಸೋಮವಾರ ಪತ್ರಿಕಾಗೋಷ್ಠಿ ನಡೆಸಿದ ಕಿಸಾನ್ ಮಜ್ದೂರ್ ಮೋರ್ಚಾ(ಕೆಎಂಎಂ) ಮುಖಂಡ ಸರ್ವಣ್ ಸಿಂಗ್ ಪಂಧೇರ್, ಆ.15 ರಂದು ದೇಶಾದ್ಯಂತ ಟ್ರ್ಯಾಕ್ಟರ್ ಮೆರವಣಿಗೆ ನಡೆಸಲು ನಿರ್ಧರಿಸಲಾಗಿದೆ ಎಂದು ಹೇಳಿದರು. ರೈತರ 'ದೆಹಲಿ ಚಲೋ' ಆ.31ಕ್ಕೆ 200 ದಿನ ಪೂರೈಸುತ್ತದೆ. ಅಂದು ಪಂಜಾಬ್, ಹರಿಯಾಣ ಗಡಿಯ ಖಾನೌರಿ ಮತ್ತು ಶಂಭು ಪಾಯಿಂಟ್ ತಲುಪುವಂತೆ ರೈತರಿಗೆ ಕರೆ ನೀಡಿದರು. ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕೆಎಂಎಂ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದು, ಆ.1ರಂದು ರೈತರು ದೇಶಾದ್ಯಂತ ಜಿಲ್ಲಾ ಕೇಂದ್ರಗಳಿಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಬಿಜೆಪಿ ಪ್ರತಿಕೃತಿಗಳನ್ನು ದಹನ ಮಾಡಲಿದ್ದಾರೆ ಎಂದು ಹೇಳಿದ್ದಾರೆ.

ಎಸ್‌ಕೆಎಂ ಮತ್ತು ಕೆಎಂಎಂ ನೇತೃತ್ವದಲ್ಲಿ ಪಂಜಾಬ್ ರೈತರು ಫೆ.13ರಂದು ದೆಹಲಿಗೆ 'ದೆಹಲಿ ಚಲೋ' ಮೆರವಣಿಗೆ ಪ್ರಾರಂಭಿಸಿದ್ದು, 'ಎಂಎಸ್ ಪಿ' ಸೇರಿದಂತೆ ರೈತರ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದ್ದಾರೆ. ಆದರೆ ಹರಿಯಾಣ ಪೊಲೀಸರು ಸಿಮೆಂಟ್ ತಡೆಗೋಡೆ ಸೇರಿದಂತೆ ಬ್ಯಾರಿಕೇಡ್‌ಗಳ ಮೂಲಕ ರೈತರನ್ನು ತಡೆದಿದ್ದಾರೆ.

ಪ್ರತಿಕ್ರಿಯೆ ಕೇಳಿ 3 ರಾಜ್ಯಗಳಿಗೆ ನೋಟಿಸ್: 26ಕ್ಕೆ ಮುಂದಿನ ವಿಚಾರಣೆ

ಫಲಕದಲ್ಲಿ ಮಾಲೀಕರ ಹೆಸರು: ಸುಪ್ರೀಂ ತಡೆ

ದೆಹಲಿ: ಕನ್ವರ್ ಯಾತ್ರೆಯ ಶಿವ ಭಕ್ತರು ಸಾಗುವ ಮಾರ್ಗದ ಹೋಟೆಲ್‌ಗಳು ಮಾಲೀಕರ ಹೆಸರನ್ನು ಫಲಕದಲ್ಲಿ ತಪ್ಪದೇ ಪ್ರಕಟಿಸಬೇಕು ಎಂಬ ಉತ್ತರ ಪ್ರದೇಶ ಸರಕಾರದ ಆದೇಶಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ಮಧ್ಯಂತರ ತಡೆ ನೀಡಿದೆ. ಅಲ್ಲದೇ ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಮಧ್ಯ ಪ್ರದೇಶ ರಾಜ್ಯ ಸರಕಾರಗಳಿಗೆ ಪ್ರತಿಕ್ರಿಯೆ ಕೇಳಿ ನೋಟಿಸ್ ನೀಡಿದೆ. ಮುಂದಿನ ವಿಚಾರಣೆಯನ್ನು ಜುಲೈ 26 ಕ್ಕೆ ನಿಗದಿ ಪಡಿಸಿದೆ.

ಕನ್ವರ್ ಯಾತ್ರೆ ಮಾರ್ಗದ ಹೋಟೆಲ್ ಮಾಲೀಕರು ತಮ್ಮ ಹೆಸರು ಮತ್ತು ವಿವರಗಳನ್ನು ಫಲಕದಲ್ಲಿ ಕಡ್ಡಾಯವಾಗಿ ಪ್ರದರ್ಶಿಸುವಂತೆ ಉತ್ತರ ಪ್ರದೇಶ ಸರಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ 'ಅಸೋಸಿಯೇಷನ್ ಆಫ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್' (ಎಪಿಸಿಆರ್) ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ನ್ಯಾಯಮೂರ್ತಿ ಹೃಷಿಕೇಶ್ ರಾಯ್ ಮತ್ತು ನ್ಯಾ. ಎಸ್.ವಿ.ಎನ್. ಭಟ್ಟಿ ಅವರ ಪೀಠ ಸೋಮವಾರ ವಿಚಾರಣೆ ನಡೆಸಿ, ಶುಕ್ರವಾರದವರೆಗೂ ಸರಕಾರದ ಆದೇಶ ಜಾರಿ ನಿರ್ಬಂಧಿಸಿ ಆದೇಶ ಹೊರಡಿಸಿತು. ಆಹಾರ ಮಳಿಗೆ ಮಾಲೀಕರು, ಸಿಬ್ಬಂದಿ ಹೆಸರು ಪ್ರಕಟಿಸುವಂತೆ ಒತ್ತಾಯಿಸಬಾರದು ಎಂದು ನ್ಯಾಯಾಲಯ ಸೂಚನೆ ನೀಡಿತು.

ಅರ್ಜಿ ಕುರಿತು ಶುಕ್ರವಾರ ಪ್ರತಿಕ್ರಿಯೆ ಸಲ್ಲಿಸುವಂತೆ ಉತ್ತರ ಪ್ರದೇಶ, ಉತ್ತರಾಖಂಡ ಹಾಗೂ ಮಧ್ಯಪ್ರದೇಶ ಸರಕಾರಗಳಿಗೆ ನೋಟಿಸ್ ಜಾರಿ ಮಾಡಿತು. ರೆಸ್ಟೋರೆಂಟ್‌ನಲ್ಲಿ ಅಡುಗೆ ಮಾಡುವವರು, ಬಡಿಸುವವರ ಗುರುತು ಬಹಿರಂಗ ಕುರಿತಾಗಿ ಸುಪ್ರೀಂ ಕೋರ್ಟ್‌ನಲ್ಲಿ ಪೀಠ, ವಾದಿಗಳು, ಪ್ರತಿವಾದಿಗಳ ಮಧ್ಯೆ ಸಾಕಷ್ಟು ಚರ್ಚೆ ನಡೆಯಿತು.

ಅರ್ಜಿದಾರರ ಪರ ಮನು ಸಿಂಘ್ವಿ ವಾದ

ಎಂಥ ಆಹಾರ, ರುಚಿ ಹೇಗಿರಬಹುದು ಎಂದು ಕೊಂಡು ಹೋಟೆಲ್ ಗೆ ಹೋಗುತ್ತೀರೇ ವಿನಃ, ಯಾರು ಬಡಿಸುತ್ತಾರೆ ಎಂಬುದನ್ನು ನೋಡಿಕೊಂಡಲ್ಲ. ರಾಜ್ಯ ಸರಕಾರದ ಆದೇಶ ಹೆಸರಿನ ಗುರುತಿನಿಂದ ಕೆಲವರನ್ನು ಹೊರಗಿಡುವ ಉದ್ದೇಶದ್ದಾಗಿದೆ. ಸಂವಿಧಾನ ಹೇಳಿದ್ದ ಗಣರಾಜ್ಯ ಇದಲ್ಲ ಎಂದು ಅರ್ಜಿದಾರರ ಪರ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ವಾದಿಸಿದರು.

ಮಾಲೀಕರ ಇಚ್ಛೆಗೆ ಬಿಟ್ಟ ವಿಚಾರ: ಉ.ಪ್ರ

ನಾಮಫಲಕ ಕ್ರಮಕ್ಕೆ ವಿರೋಧ ವ್ಯಕ್ತವಾದ ಹಿನ್ನಲೆ ಸಿಎಂ ಯೋಗಿ ಆದಿತ್ಯನಾಥ್ ಸರಕಾರ, ಆದೇಶ ಪಾಲನೆಯನ್ನು ಹೋಟೆಲ್ ಮಾಲೀಕರ ಇಚ್ಛೆಗೆ ಬಿಟ್ಟಿದೆ ಎಂದು ಮೂಲಗಳು ತಿಳಿಸಿವೆ. ಹೋಟೆಲ್ ಮಾಲೀಕರು ಫಲಕ ಪ್ರದರ್ಶನ ಮಾಡುವುದು - ಬಿಡುವುದು ಅವರ ವಿವೇಚನೆಗೆ ಬಿಟ್ಟಿದ್ದು ಎಂದು ಅಧಿಕಾರಿಗಳು ಹೇಳಿದ್ದಾರೆ.

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ಚಿತ್ರ ವಿಹಾರ

ನಿರೂಪಣೆ ಕಲೆಗೆ ಮೆರಗು ತಂದವರು

ಒಂದು ಕಾರ್ಯಕ್ರಮದ ನಿರೂಪಣೆ ಹೇಗಿರಬೇಕು ಎಂದು ವಿಸ್ತಾರವಾಗಿ ಹೇಳುವ ಬದಲು, ಅಪರ್ಣಾ ವಸ್ತಾರೆ ಅವರ ರೀತಿ ನಿರೂಪಣೆ ಇರಬೇಕು ಎಂದು ಒಂದೇ ಮಾತಿನಲ್ಲಿ ಹೇಳಬಹುದು! ನಮ್ಮ ನಾಡಿನಲ್ಲಿ ಅರ್ಥಪೂರ್ಣ ನಿರೂಪಣೆಯ ಒಂದು 'ಘರಾಣೆ'ಯನ್ನೇ ಅಪರ್ಣ ಅವರು ಬೆಳೆಸಿದರು ಎಂದರೆ ಅತಿಶಯೋಕ್ತಿಯಾಗುವುದಿಲ್ಲ.

ಅಪರ್ಣಾ ಕನ್ನಡ ನಾಡಿನ ಹೆಮ್ಮೆಯ ನಿರೂಪಕಿ. ಸ್ಪಷ್ಟ ಭಾಷೆ, ಮೃದುವಾದ ಇಂಪಾದ ಧ್ವನಿ, ಸಂದರ್ಭಕ್ಕೆ ತಕ್ಕಂತೆ ಪದಗಳ ಬಳಕೆ , ಧ್ವನಿಯ ಏರಿಳಿತ , ಸುಸಂಸ್ಕೃತ ಹಾವ ಭಾವ, ಸಭೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಚಾಕಚಕ್ಯತೆ – ಎಲ್ಲವೂ ವಿಶೇಷ, ವಿಭಿನ್ನ, ಅನನ್ಯ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅನೇಕ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ನಿರೂಪಿಸಿದ ಕೀರ್ತಿ ಅವರದು. ದೀಪಾವಳಿ ಹಬ್ಬದ ನಿಮಿತ್ತ ನಡೆದ ಒಂದು ಕಾರ್ಯಕ್ರಮದಲ್ಲಿ ಸತತವಾಗಿ ಎಂಟು ಗಂಟೆ ನಿರೂಪಿಸಿದ ದಾಖಲೆ ಅವರದು. ಕನ್ನಡದಲ್ಲಿ ಸೊಗಸಾದ ನಿರೂಪಣೆ ಮಾಡಿದಷ್ಟೇ ಸಲೀಸಾಗಿ, ಇಂಗ್ಲಿಷ್ ಕಾರ್ಯಕ್ರಮದಲ್ಲೂ ನಿರೂಪಣೆ ಮಾಡಿದ ಅಪರ್ಣಾ ಅವರು, ನಿರೂಪಣೆ ಕಲೆಯನ್ನು ಹೊಸ ಎತ್ತರಕ್ಕೆ ಏರಿಸಿದರು.

ಅಪರ್ಣಾ ಬಹುಮುಖ ಪ್ರತಿಭಾವಂತೆ. ನಟಿಯಾಗಿ, ಗಾಯಕಿಯಾಗಿ ಗುರುತಿಸಿಕೊಂಡ ಅವರು ನಿರೂಪಕಿಯಾಗಿ ತಮ್ಮದೇ ಛಾಪು ಮೂಡಿಸಿದವರು. ಅವರ ಕನ್ನಡ ಮಾತುಗಳನ್ನು ಕೇಳುತ್ತಿದ್ದರೆ ಮತ್ತೆ ಮತ್ತೆ ಕೇಳಬೇಕು ಎನಿಸುತ್ತದೆ. ಅಸ್ಖಲಿತವಾದ, ಸಂಗತ ಎನಿಸುವ ಮಾತಿನ ವಾಗ್ಝರಿ ಅವರದು. ಸಂದರ್ಭಕ್ಕೆ ತಕ್ಕಂತೆ ಅವರು ಬಳಸುವ ಹಿತನುಡಿಗಳು, ಗಣ್ಯರ ಹೇಳಿಕೆಗಳು, ಕವಿವಾಣಿಗಳು ಒಂದಕ್ಕಿಂತ ಒಂದು ವಿಶೇಷ. ಅವರ ಜ್ಞಾನ ಸಂಪತ್ತು ಅಪಾರವಾದುದು. ತಾವೂ ನಿರೂಪಣೆ ಮಾಡಬೇಕು, ಅದರಲ್ಲಿ ಯಶಸ್ವಿಯಾಗಬೇಕು ಮತ್ತು ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ನಿರೂಪಿಸಬೇಕು ಎಂಬಿತ್ಯಾದಿ ಕನಸು ಹೊತ್ತ ಇಂದಿನ ಯುವಜನರಿಗೆ, ಅಪರ್ಣಾ ಒಂದು ಪರಿಪೂರ್ಣ ರೋಲ್ ಮಾಡೆಲ್ ಎಂದರೆ ತಪ್ಪಾಗದು. ಇಂತಹ ನಿರೂಪಕಿ ಮಜಾ ಟಾಕೀಸ್‌ನಲ್ಲಿ ಹಾಸ್ಯ ನಟಿಯಾಗಿ ಕಾರ್ಯಕ್ರಮ ನೀಡಿದ್ದನ್ನು ಸಹ ಇಲ್ಲಿ ಸ್ಮರಣೀಸಬಹುದು.

ಬೆಂಗಳೂರು ಮೆಟ್ರೋ ರೈಲಿನ ನಿಲ್ದಾಣಗಳ ಹೆಸರು ಮತ್ತು ಪ್ರಯಾಣಿಕರಿಗೆ ಸೂಚನೆಗಳನ್ನು ತಮ್ಮ ಸ್ಪಷ್ಟವಾದ ಧ್ವನಿಯಲ್ಲಿ ಹೇಳುವ ಮೂಲಕ, ಅಪರ್ಣಾ ಅವರು ಅಮರರಾಗಿದ್ದಾರೆ.

• ರಂಗನಾಥ ಎನ್ ವಾಲ್ಮೀಕಿ

ಹೆಲ್ತ್ ಕಾರ್ನರ್

ಈ ಪಲ್ಯ ಗೊತ್ತೆ?

ಬಾಳೆ ಮರದ ತಿರುಳಿನ ಭಾಗವಾಗಿರುವ ಬಾಳೆ ದಿಂಡು (ಬನಾನಾ ಸ್ಟೆಮ್)– ಇದನ್ನು ಆಹಾರವಾಗಿಯೂ ಬಳಸಬಹುದು ಮತ್ತು ಅದರಿಂದ ಆರೋಗ್ಯಕ್ಕೆ ಅಧಿಕ ಲಾಭವಿದೆ ಎಂದು ಆಹಾರ ತಜ್ಞರು ಗುರುತಿಸಿದ್ದಾರೆ. ಬಾಳೆ ದಿಂಡಿನಲ್ಲಿ ಅಧಿಕ ನಾರಿನ ಅಂಶ ಇರುವುದರಿಂದ, ಮಧುಮೇಹ ನಿಯಂತ್ರಿಸಲು ಇದರ ಸೇವನೆ

ಸಹಕಾರಿ. ಜತೆಗೆ, ಇದರ ಸೇವನೆಯಿಂದ ನಮ್ಮ ದೇಹದಲ್ಲಿ ಸೇರಿಕೊಂಡಿರಬಹುದಾದ ಮಲಿನಾಂಶ ಮತ್ತು ವಿಷಕಾರಿ ಅಂಶಗಳನ್ನು ದೂರಮಾಡಬಹುದು ಎಂಬ ನಂಬಿಕೆಯೂ ಇದೆ. ಬಾಳೆ ದಿಂಡನ್ನು ಪಲ್ಯ ಮತ್ತು ಚಟ್ನಿಯ ರೂಪದಲ್ಲಿ ಸೇವಿಸಬಹುದು; ಜ್ಯೂಸ್ ರೂಪದಲ್ಲೂ ಸೇವಿಸಬಹುದು. ಹಸಿಯಾದ ಬಾಳೆ ದಿಂಡನ್ನು ಚಿಕ್ಕ ಚಿಕ್ಕದಾಗಿ ಕತ್ತರಿಸಿ, ಲಿಂಬೆ ರಸ ಬೆರೆಸಿ, ಕೋಸಂಬರಿಯ ಸ್ವರೂಪದಲ್ಲೂ ಸೇವಿಸುವ ಪದ್ಧತಿ ಇದೆ.

ಎಂ.ಜಿ ರಸ್ತೆ

ಬೆಂಗಳೂರು ಬದಲಾಗಿದೆ, ಬೃಹತ್ ಮಟ್ಟದಲ್ಲಿ ಬೆಳೆದಿದೆ. ಹಿಂದಿನ ದಿನಗಳಲ್ಲಿ ಬೆಂಗಳೂರು ಒಂದು ಅಂದದ ನಗರ; ನಿವೃತ್ತರು ಸುಖವಾಗಿ ವಾಸಿಸಬಲ್ಲ ತಂಪು ಪ್ರದೇಶ ಎಂದೇ ಹೆಸರಾಗಿತ್ತು. ಅಂದಿನ ದಿನಗಳಲ್ಲಿ ಬೆಂಗಳೂರಿನ ಛಾಯಾಚಿತ್ರಗಳನ್ನು ಕ್ಲಿಕ್ಕಿಸಿದ ಲೇಖಕರು, ಆಯ್ದ ಕೆಲವು ಚಿತ್ರಗಳನ್ನು 'ವಿಶ್ವವಾಣಿ'ಯ ಓದುಗರಿಗೆ ಇಲ್ಲಿ ಪ್ರಸ್ತುತಪಡಿಸಿದ್ದಾರೆ.

ಕಪ್ಪು ಬಿಳುಪಿನಲ್ಲಿ ಬೆಂಗಳೂರು

• ಚಿತ್ರ ಮಾಹಿತಿ: ವಿಶ್ವನಾಥ್ ಬಳುವನೇರಲು



ಬೆಂಗಳೂರು ನಾವು ಊಹಿಸದಷ್ಟು ಬದಲಾಗಿದೆ. 1960ರ ದಶಕದಲ್ಲಿ ಗ್ರಾಮೀಣ ಭಾಗದಿಂದ ಬಂದ ನಾನು ಕಂಡಿದ್ದ ಸೌಮ್ಯವಾದ ಬೆಂಗಳೂರು ಪಟ್ಟಣ ಇಂದು ಬೃಹತ್ ಮಹಾ ನಗರವಾಗಿ ಬದಲಾಗಿದೆ. ಆಗಿನ ದಿನಗಳಲ್ಲಿ ಹಳ್ಳಿಯಿಂದ ಬಂದಿದ್ದ ನಮ್ಮಂತಹವರು ಬೆಂಗಳೂರಿನ ಬೀದಿಗಳಲ್ಲಿ ಬೆರಗುಗಣ್ಣು ಬಿಟ್ಟುಕೊಂಡು ಓಡಾಡುವ ಅನುಭವ ವಿಶಿಷ್ಟ. ಹೆಚ್ಚು ಕಡಿಮೆ ಬೆಂಗಳೂರಿನ ಹೆಚ್ಚಿನ ಭಾಗಗಳಿಗೆ ಆಗ ನಡೆದುಕೊಂಡು ಅಥವಾ ಸೈಕಲ್‌ನಲ್ಲಿ ತಲುಪಬಹುದಿತ್ತು. ನಡೆಯುವುದು ಅಂದಿನ ಪ್ರಮುಖ ಸಂವಹನ ಎನಿಸಿತ್ತು.

ಬದಲಾವಣೆ ಜಗದ ನಿಯಮ, ಆದರೂ ಈಗಿನ ಬೆಂಗಳೂರು ನಮ್ಮ ಊಹೆಗೂ ನಿಲುಕದಷ್ಟು ವಿಚಿತ್ರವಾಗಿ ಹರಡಿದೆ. 1960ರ ದಶಕದಲ್ಲಿ ಮೊದಲ ಬಾರಿ ಬಂದಾಗ, ಮಲ್ಲೇಶ್ವರದಲ್ಲಿ ವಾಸಿಸಿದ್ದೆ. ಅಂದು ನನಗೆ ಎಕರೆಗಳಷ್ಟು

ಸ್ಥಳದಲ್ಲಿ ಬಂಗಲೆ, ಗ್ಯಾರೇಜ್ ಮತ್ತು ಸೇವಕರ ಕೊಠಡಿಗಳೇ ಕಾಣಿಸುತ್ತಿದ್ದವು. ಆದರೆ ಇಂದುಕ ಬೆಂಗಳೂರಿನಲ್ಲಿ ನನಗೆ ಇಂದು ಬಹುಮಹಡಿಗಳ ಕಟ್ಟಡಗಳೇ ಕಾಣುತ್ತಿವೆ.

ನಾನು ಹಲವು ದಶಕಗಳ ಹಿಂದೆ ನಾನು ಕಂಡಿದ್ದ ರೀತಿಯ ಕಟ್ಟಡವೊಂದನ್ನು ಸಿ.ವಿ.ರಾಮನ್ ಅವರ ಬಂಗಲೆಯಲ್ಲಿ ಕಾಣಬಹುದಾಗಿದೆ. ಅಂದು ಮಲ್ಲೇಶ್ವರದಲ್ಲಿ, ನಾನು ವಾಸಿಸದ್ದ ಭಾಗದಲ್ಲಿ ಕೇವಲ ನಾಲ್ಕು ಕಾರುಗಳು ಇದ್ದವೆಂದರೆ ಅಚ್ಚರಿಯಾಗಬಹುದು! ನಾನು ಅಭ್ಯಾಸ ಮಾಡುತ್ತಿದ್ದ ಕೆ.ಆರ್. ವೃತ್ತದಲ್ಲಿ ಆಗ ಸರಾಸರಿ ಗಂಟೆಗೊಂದು ಕಾರು ಹಾದು ಹೋಗುತ್ತಿತ್ತು. ಇಂದು ಬಂಪರ್‌ಗೆ ತಾಗುವಂತೆ ವಾಹನಗಳು ಹರಿದಾಡುತ್ತಿವೆ!

ಅಂದು ನಾವು ಕಂಡಿದ್ದ ಡ್ರೈವ್ ಇನ್ ಥಿಯೇಟರ್ ಇಂದು ನೆನಪಿನಿಂದ ಮರೆಯಾಗಿ ಹೋಗಿದೆ. ಬೆಂಗಳೂರಿನಲ್ಲಿ ಡ್ರೈವ್ ಇನ್ ಥಿಯೇಟರ್ ಆರಂಭವಾದಾಗ, ಅದು ರಾಜ್ಯ ಮಟ್ಟದ ಸುದ್ದಿಯಾಗಿತ್ತು! ಅಂದು ಬೆಂಗಳೂರಿನಲ್ಲಿದ್ದ ಹಿರಣ್ಣಯ್ಯನವರ ನಾಟಕ ಮಂಡಳಿ, ಜಟಕಾ- ಕಾರ್ ಸ್ಟ್ಯಾಂಡ್, ಸರ್ಕಸ್, ವಸ್ತು ಪ್ರದರ್ಶನ, ಬಾಟಲ್ ಹಾಲು, ಹಾವಾಡಿಗರು, ಉಗಿಶಕ್ತಿಯಿಂದ ಚಲಿಸುವ ರೈಲು ಬಂಡಿ, ಡಬ್ಬಲ್ ಡೆಕ್ಕರ್ ಬಸ್‌ಗಳು, ರಸ್ತೆ ರೈಲು (ಬಸ್) ಹೀಗೆ ನೂರಾರು ಸವಿ ನೆನಪುಗಳು ಇಂದು ಇತಿಹಾಸ ಸೇರಿದೆ.

ಹಳೆಯ ನೆನಪುಗಳು

ಬೆಂಗಳೂರಿಗೆ ಮೊದಲ ಬಾರಿಗೆ ಕಾವೇರಿ ನೀರು ಹಾಯಿಸಲು ಹಾಕಿದ ಬೃಹತ್ ಕೊಳವೆಗಳನ್ನು ನೆಲದೊಳಗೆ ಹುದುಗಿಸಿದ್ದನ್ನು ಕಂಡಿದ್ದೇನೆ. ದೂರದ ಕಾವೇರಿ ನೀರು ಬೆಂಗಳೂರಿನ ಜನರ ದಾಹ ತಣಿಸಲು ಬರುತ್ತಿದೆ ಎಂಬುದ ಒಂದು ಸುದ್ದಿಯಾದರೆ, ಕಾವೇರಿಯ ಸಿಹಿನೀರನ್ನು ನಾವೆಲ್ಲಾ ಕುಡಿಯಬಹುದು ಎಂಬ ಸಂಭ್ರಮ ಇನ್ನೊಂದೆಡೆ! ಅಂದು ಸಂಜೆಯಾದರೆ ರಸ್ತೆಯಲ್ಲಿ ಜನ ಸಂಚಾರ ಸ್ಥಬ್ಧವಾಗುತ್ತಿದ್ದ ಜಾಗದಲ್ಲಿಂದು ರಾತ್ರಿಯೆಲ್ಲಾ ವಾಹನಗಳು ಹರಿದಾಡುತ್ತಿವೆ.

ವಾರಾಂತ್ಯದಲ್ಲಿ ಉದ್ಯಾನವನದಲ್ಲಿ ಆರ್ಕೆಸ್ಟ್ರಾ ಗೀತೆಗಳನ್ನು ಕೇಳುತ್ತಾ ಕಡಲೆಕಾಯಿ ತಿನ್ನುವುದು ನಮಗೆ ಪ್ರಮುಖ

ಟ್ಯಾಂಕ್ ಬಂಡ್ ರಸ್ತೆ

ಮನೋರಂಜನೆಯಾಗಿತ್ತು. ಉದ್ಯಾನವನದಲ್ಲಿರುವ ಬ್ಯಾಂಡ್ ಸ್ಟ್ಯಾಂಡ್‌ನಲ್ಲಿ ಈ ವಾರ ಯಾರು ಹಾಡುತ್ತಾರೆ ಎಂಬುದು ಸಹ ಅಂದಿನ ಸಂಭ್ರಮಗಳಲ್ಲೊಂದು. ಅಂದಿನ ದಿನಗಳಲ್ಲಿ ಹಳೆಯ ರೀಲ್ ಕ್ಯಾಮೆರಾದಲ್ಲಿ ಬ್ಲ್ಯಾಕ್ ಅಂಡ್ ವೈಟ್ ಚಿತ್ರಗಳನ್ನು ಕ್ಲಿಕ್ಕಿಸುವುದೇ ಒಂದು ವಿಭಿನ್ನ ಸಂಭ್ರಮ!

ಸಿಟಿ ಬಸ್‌ಗಳೇ ಅಂದಿನ ಪ್ರಮುಖ ಸಂವಹನ; ಅದು ಬಿಟ್ಟರೆ ಆಟೊರಿಕ್ಷಾಗಳ ಸೇವೆ. ಮೀಟರ್ ಮೂಲಕ ಬಾಡಿಗೆ ನಿಗದಿಯಾಗುವ ಆಟೊರಿಕ್ಷಾಗಳನ್ನು ಕಂಡು, ಹಳ್ಳಿಯಿಂದ ಬಂದಿದ್ದ ನಮಗೆ ಬೆರಗಾಗುತ್ತಿತ್ತು. ಅಂದು ಟ್ಯಾಕ್ಸಿ ಎಂಬುದು ಸಿರಿವಂತರ ಸ್ವತ್ತು. ಇಂದಿನ ಕಾಲದಲ್ಲಿ ಮೆಟ್ರೋ ರೈಲು, ಊಲಾ, ಊಬರ್ ಟ್ಯಾಕ್ಸಿಗಳು ಜನರಿಗೆ ನಗರ ಪ್ರದಕ್ಷಿಣೆ ಮಾಡಿಸುತ್ತಿವೆ ಮೊಬೈಲ್ ಒತ್ತಿದಾಕ್ಷಣ ಊಟ, ತಿಂಡಿ, ತರಕಾರಿ, ಹಾಲು ಮುಂತಾದವು ಮನೆಗೇ ಬರುತ್ತದೆ. ಅಂತೂ ಇಂತೂ

ಗಾರ್ಡನ್ ಸಿಟಿ?

1980ರ ದಶಕದ ತನಕ ಬೆಂಗಳೂರು ಸಾಕಷ್ಟು ಕಾಂಪಾಕ್ಟ್ ಆಗಿತ್ತು; ಈಗಿನಂತೆ ಎಲ್ಲೆಗಳನ್ನು ದಾಟಿ ಬೆಳೆದಿರಲಿಲ್ಲ. ಉತ್ತರಹಳ್ಳಿ, ಕೆಂಗೇರಿ ಮೊದಲಾದ ಪ್ರದೇಶಗಳು ನಗರದಿಂದ ಹೊರಗೆ ಇದ್ದ ಪ್ರತ್ಯೇಕ ಪಟ್ಟಣಗಳಾಗಿದ್ದವು. ಆದರೆ, ಇಂದು ಸುತ್ತಮುತ್ತಲಿನ ನೂರಾರು ಹಳ್ಳಿಗಳನ್ನು, ಪಟ್ಟಣಗಳನ್ನು ಈ ಮಹಾನಗರ ಆಪೋಶನ ತೆಗೆದುಕೊಂಡಿದೆ. ಅಂದು ಶುದ್ಧಗಾಳಿಗೆ, ತಂಪು ಹವೆಗೆ ಹೆಸರಾಗಿದ್ದ ಬೆಂಗಳೂರು, ಗಾರ್ಡನ್ ಸಿಟಿ ಎಂದೂ ಹೆಸರಾಗಿತ್ತು. ಇಂದು ಬೆಂಗಳೂರಿಗೂ ವಾಯುಮಾಲಿನ್ಯ ಅಮರಿಕೊಂಡಿದೆ. ದೂಳು, ಪೆಟ್ರೋಲ್ ಹೊಗೆ, ಡೀಸೆಲ್ ಹೊಗೆ, ಇತರ ಕಲ್ಮಶಗಳು ಬೆಂಗಳೂರಿನ ವಾಯುವನ್ನು ಸೇರಿಕೊಂಡಿವೆ, ಇಲ್ಲಿನ ನಿವಾಸಿಗಳ ಶ್ವಾಸಕೋಶವನ್ನು ನಿಧಾನವಾಗಿ ಸೇರಿಕೊಳ್ಳುತ್ತಿವೆ. ಈ ಮಹಾನಗರದ ರಸ್ತೆಯಲ್ಲಿ ಎಡೆಬಿಡದೆ ಚಲಿಸುವ ವಾಹನಗಳಿಂದಾಗಿ, ದೂಳು ಸದಾ ಹಾರುತ್ತಿರುತ್ತದೆ. ತಂಪು ವಾತಾವರಣದ, ಉದ್ಯಾನಗಳ ನಗರ ಎಂಬ ಪಟ್ಟಿಯಿಂದ ಬೆಂಗಳೂರು ತಾನಾಗಿಯೇ ಹೊರಬಂದಿದೆ!

ಬೆಂಗಳೂರು ಪ್ರತಿಯೊಂದು ವಿಷಯದಲ್ಲೂ ಪಾಶ್ಚಾತ್ಯ ಸಂಸ್ಕೃತಿಯನ್ನು ಅಪ್ಪಿಕೊಂಡು ಜನಸಾಮಾನ್ಯರಿಂದ ಅತಿ ದೂರ ಸಾಗುತ್ತಿದೆ. ಹೊರ ರಾಜ್ಯದಿಂದ ಬಂದವರ ಸಂಖ್ಯೆ ವೃದ್ಧಿಯಾಗುತ್ತಿದ್ದು ಕನ್ನಡಿಗರು ಅಲ್ಪ ಸಂಖ್ಯಾತರ ಪಟ್ಟಿಗೆ ಸೇರಿದ್ದಾರೆ.

ಇತಿಹಾಸದಲ್ಲಿ ಸೇರಿಹೋದ ಗಂಗಾರಾಮ್ ಕಟ್ಟಡ ಪತನ ಹಾಗೂ ಸರ್ಕಸ್ ಬೆಂಕಿ ದುರಂತ ಕಂಡ ನನಗೆ ಇಂದು ಅಪಘಾತದಲ್ಲಿ ಅಸಂಖ್ಯಾತ ಮಂದಿ ಅಕಾಲ ಮರಣಕ್ಕೀಡಾಗುತ್ತಿರುವ ಸಂಗತಿ ನೋವುಂಟುಮಾಡುತ್ತಿದೆ. ಬೆಂಗಳೂರಿನ ಅತಿ ದೊಡ್ಡ ದುರಂತಗಳಾಗಿ ಆ ಎರಡು ದುರಂತಗಳು ದಾಖಲಾಗಿವೆ. ಆದರೆ, ಇಂದು ಪ್ರತಿ ನಿತ್ಯ ಎನ್ನುವಂತೆ ನಡೆಯುತ್ತಿರುವ ಅಪಘಾತಗಳು ಸದ್ದಿಲ್ಲದೇ ದುರಂತದ ಅಧ್ಯಾಯವನ್ನೇ ತೆರೆಯುತ್ತಿವೆ! ವಾಹನ ಚಾಲನೆಯಲ್ಲಿ ನಮ್ಮ ಜನರು ತೋರುತ್ತಿರುವ ಅಸಡ್ಡೆ, ನಿರ್ಲಕ್ಷ್ಯ, ಅತಿ ವೇಗ – ಇವೇ ಇಂದಿನ ಅಪಘಾತಗಳ ಕಾರಣ ಎಂಬುದನ್ನು ಯೋಚಿಸಿದಾಗ, ಇನ್ನಷ್ಟು ನೋವುಂಟಾಗುತ್ತದೆ. ಇರಲಿ.

ಇಂದಿನ ಬೆಂಗಳೂರಿನಲ್ಲಿ ವಾಸಿಸುತ್ತಿರುವ ಆಧುನಿಕ ಸಮುದಾಯಕ್ಕೆ, ಹಳೆಯ ಬೆಂಗಳೂರನ್ನು ಚಿತ್ರಗಳ ಮೂಲಕ ದರ್ಶನ ಮಾಡಿಸುತ್ತಿದ್ದೇನೆ.

ರಸ್ತೆ ರೈಲು

ನಗರ ರೈಲು ನಿಲ್ದಾಣ

ಜಯನಗರ ಕಾಂಪ್ಲೆಕ್ಸ್



ಮಲ್ಲೇಶ್ವರದ ಮನೆಗಳು

ಜಟಕಾ ನಿಲ್ದಾಣ

ಹಾವಾಡಿಗ

ಹಗಲೆಲ್ಲಾ ಹುಡುಕಿದರೂ ಗೊತ್ತಾಗಲಿಲ್ಲ, ಏಕೆಂದರೆ, ಈ ಕೀಟ ರಾತ್ರಿ ಸಂಚಾರಿ!

ರಾತ್ರಿ ಸಂಚಾರಿ!

• ಕೆ.ಎಸ್. ಮುರುಗೇಂದ್ರ

ದುಂಡು ಮಲ್ಲಿಗೆ ಗಿಡವನ್ನು ಆಸೆಯಿಂದ ತಂದು ನೆಟ್ಟಿದ್ದೆ. ಕೆಲವು ದಿನಗಳಲ್ಲಿ ಗಿಡದಲ್ಲಿದ್ದ ಎಲೆಗಳು ಕಡಿಮೆಯಾಗಿದ್ದವು. ಪರಿಶೀಲಿಸಿದಾಗ ಹುಳ ಕಾಣಲಿಲ್ಲ. ಆದರೆ ಗಿಡದ ಟಿಸಿಲಿಗೆ, ಅನುಮಾಸ್ಪದವಾಗಿ ಅಂಟಿಕೊಂಡಿದ್ದ ಒಂದು ಕಡ್ಡಿ ಕಾಣಿಸಿತು. ಸ್ವಲ್ಪ ಹೊತ್ತು ಗಮನಿಸಿದೆ ಕದಲಿಲ್ಲ. ಏನಿರಬಹುದು ನೋಡೋಣವೆಂದು ಸುಮ್ಮನಾದೆ.

ಮಾರನೇ ದಿನ ನೋಡಿದರೆ ಒಂದೆರಡು ಎಲೆಗಳು ಕಾಣೆಯಾಗಿದ್ದವು. ಕಡ್ಡಿಯ ಸ್ಥಾನ ಪಲ್ಲಟವಾಗಿತ್ತು! ಅಲ್ಲೇ ಎಲೆಗಳ ಮೇಲೆ ಹಿಕ್ಕೆ. ದುಡ್ಡು ಕೊಟ್ಟು ತಂದ ಗಿಡ ಹಾಳಾಗುತ್ತಿರುವುದರಿಂದ ಬೇಸರವಾಯಿತು. ಆ ಕಡ್ಡಿಯನ್ನು ಬಿಡಿಸಲು ಹೋದರೂ, ಅದು ಬೀಳಲಿಲ್ಲ.

ಮತ್ತೆರಡು ದಿನ ಬಿಟ್ಟು ನೋಡಿದರೆ ಮತ್ತೆರಡು ಎಲೆಗಳು ಮಾಯ! ಮತ್ತೆ ಕಡ್ಡಿಯನ್ನು ಬಿಡಿಸಲು ಹೋದರೂ ಬೀಳಲಿಲ್ಲ. ನನಗೂ ಕುತೂಹಲ ಹೆಚ್ಚಾಯಿತು. ಅದು ಪ್ಯೂಪವೇ, ಕಂಬಳಿ ಹುಳವೇ, ಕಡ್ಡಿ ಹುಳವೆ? ಪೂರ್ಣಚಂದ್ರ ತೇಜಸ್ವಿಯವರ ಬರಹಗಳಲ್ಲಿ ಕಡ್ಡಿ ಹುಳದ ಚಿತ್ರ ನೋಡಿದ ನೆನಪು. ಮುಳ್ಳಿನ ಹಾಗೆ ಅಂಟಿಕೊಂಡಿರುವ ಈ ಹುಳ ತಿನ್ನುವುದು ಹೇಗೆ, ಬಾಯಿ ಯಾವುದು, ನಿಶಾಚರಿಯೇ, ನೋಡೋಣ ಎಂದು ಕಾದು ಕುಳಿತೆ.

ಕತ್ತಲಾದ ಕೂಡಲೇ ಸೂಕ್ಷ್ಮವಾಗಿ ಗಮನಿಸಿದೆ, ಅವಾಕ್ಕಾದೆ! ಈ ಹುಳ ನಿಶಾಚರಿ. ಒಂದು ತುದಿಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡು,ಇನ್ನೊಂದು ತುದಿಯಿಂದ ಬಗ್ಗಿ, ಗಬಗಬನೆ ಎಲೆಯನ್ನು ತಿನ್ನುತ್ತಿರುವುದು ಕಂಡಿತು. ಅದರ ಬಾಯಿ, ಸಣ್ಣ ಗರಗಸದಂತಿರುವ ಹಲ್ಲುಗಳು ಸ್ಪಷ್ಟವಾಗಿ ಕಾಣುತ್ತಿರುವುದರ ಜೊತೆಗೆ, ಹತ್ತಿರ ಹೋಗಿ ಕಿವಿಯಿಂದ ಸೂಕ್ಷ್ಮವಾಗಿ ಆಲಿಸಿದರೆ ತಿನ್ನುತ್ತಿರುವ ಕರಕರ ಶಬ್ದ ಕೇಳುತ್ತಿತ್ತು. ಅದರ ಚಲನವಲನ ನೋಡುವುದೇ ಸೋಜಿಗ. ನಿಶಾಚರಿಯಾದ ಪತಂಗದ (Geometrid Moth) ಕಂಬಳಿಹುಳ (Stick Caterpillar) ಎಂದು ತಿಳಿಯಿತು.

(ಚಿತ್ರಗಳು : ಲೇಖಕರವು)

ಆಯುಷ್ ಪಟ್ಟಿಯಲ್ಲಿ ಸ್ಥಾನ ಪಡೆದ ಆಹಾರ!

ಮಳೆ ಬಿದ್ದ ತಕ್ಷಣ ಸಹಜವಾಗಿ ಬೆಳೆಯುವ ಕೆಸುವಿನ ಎಲೆಯಲ್ಲಿ ಕ್ಯಾಲ್ಸಿಯಂ, ಕಬ್ಬಿಣದ ಅಂಶ ಜಾಸ್ತಿ ಇರುವುದರಿಂದ, ಇದರಿಂದ ತಯಾರಿಸಿದ ಪತ್ರೊಡೆ ನಮ್ಮ ಆರೋಗ್ಯಕ್ಕೆ ಒಳ್ಳೆಯದು.

• ಸುರೇಂದ್ರ ಪೈ ಭಟ್ಕಳ

ಮಳೆಗಾಲ ಪ್ರಾರಂಭವಾಗುತ್ತಿದ್ದ ಹಾಗೇ ಮಲೆನಾಡು, ಕರಾವಳಿ ಪ್ರದೇಶಗಳ ಭಾಗದಲ್ಲಿ ಪತ್ರೊಡೆ ಮಾಡುವ ಚಟುವಟಿಕೆಯನ್ನು ಕಾಣಬಹುದು. ಮಳೆ ಬಿದ್ದ ತಕ್ಷಣ ಎಲ್ಲೆಡೆ ಬೆಳೆಯುವ ಕೆಸುವಿನ ಎಲೆಯಿಂದ ಪತ್ರೊಡೆ, ಪಲ್ಯ, ಸಾಂಬಾರು, ಪಕೋಡಾ, ಚಟ್ನಿ ಮುಂತಾದ ವಿವಿಧ ಬಗೆಯ ಖಾದ್ಯಗಳನ್ನು ತಯಾರಿಸುವುದುಂಟು, ಆದರೆ ಹೆಚ್ಚು ಪ್ರಸಿದ್ದಿಯಾಗಿರುವುದು ಕೆಸುವಿನ ಎಲೆಯ ಪತ್ರೊಡೆ.

ಎಲೆಯಿಂದ ತಯಾರಿಸುವ, ನೈಸರ್ಗಿಕ ರುಚಿ ಹೊಂದಿದ, ಆರೋಗ್ಯಕ್ಕೆ ಉತ್ತಮ ಎನಿಸುವ ಪತ್ರೊಡೆಯು ನಮ್ಮ ರಾಜ್ಯದ ವಿಶಿಷ್ಟ ತಿನಿಸು ಆಗಿದ್ದರೂ, ನಗರ ವಾಸಿಗಳಿಗೆ ಇದರ ರುಚಿ ಇನ್ನೂ ತಿಳಿದಿಲ್ಲ ಎಂದೇ ಹೇಳಬಹುದು. ಒಮ್ಮೆ ಇದನ್ನು ಸವಿದರೆ ಮತ್ತೊಮ್ಮೆ ಸವಿಯಬೇಕೆಂದು ಅನಿಸದೆ ಇರದು. ಸುಲಭವಾಗಿ ಪತ್ರೊಡೆಯನ್ನು ಹೇಗೆ ತಯಾರಿಸುತ್ತಾರೆ ಎಂದು ನೋಡೋಣ.

ಬೇಕಾಗುವ ಸಾಮಾಗ್ರಿಗಳು: ಕೆಸುವಿನ ಎಲೆ (10 ರಿಂದ 20), ತೆಂಗಿನ ತುರಿ 1 ಕಪ್, ಒಂದು ಕಪ್ ಅಕ್ಕಿ, ಅರ್ಧ ಕಪ್ ಕಡಲೆ ಬೇಳೆ, ಅರ್ಧ ಕಪ್ ತೊಗರಿ ಬೇಳೆ, ಒಣಮೆಣಸು (20–25), ಸ್ವಲ್ಪ ಹುಣಸೆ ಹಣ್ಣು, ಕೊತ್ತಂಬರಿ ಕಾಳು, ಒಂದು ಚಮಚ ಜೀರಿಗೆ, ಇಂಗು (ಒಂದು ಚಿಟಕಿ), ಸ್ವಲ್ಪ ಬೆಲ್ಲ, ರುಚಿಗೆ ತಕ್ಕಷ್ಟು ಉಪ್ಪು.

ತಯಾರಿಸುವ ವಿಧಾನ: ಅಕ್ಕಿ, ತೊಗರಿಬೇಳೆ, ಕಡಲೆಬೇಳೆ, ಜೀರಿಗೆ ಮತ್ತು ಕೊತ್ತಂಬರಿಯನ್ನು 2–3 ಗಂಟೆಗಳ ಕಾಲ ನೀರಿನಲ್ಲಿ ನೆನ ಹಾಕಿರಿ. ನೀರಿನಲ್ಲಿ ನೆನೆದ ಬಳಿಕ ತೆಂಗಿನ ತುರಿ, ಒಣಮೆಣಸಿನ ಕಾಯಿ, ಹಣೆಸೇ ಹುಳಿ, ಇಂಗು, ಬೆಲ್ಲ ಮತ್ತು ಉಪ್ಪು ಹಾಕಿ, ಜಾಸ್ತಿ ನೀರು ಸೇರಿಸದೆ ಗಟ್ಟಿ ಮಸಾಲೆ ರುಬ್ಬಬೇಕು. ಮಸಾಲೆಯು ಎಲೆಗೆ ಸವರಲು ಸ್ವಲ್ಪ ಗಟ್ಟಿಯಿದ್ದಷ್ಟು ಒಳ್ಳೆಯದು.

ತೊಳೆದ ಕೆಸುವಿನ ಎಲೆಗಳನ್ನು ಒಂದೊಂದಾಗಿ ತೆಗೆದುಕೊಂಡು ಎರಡೂ ಕಡೆ (ಎಲೆಯ ಮುಂಭಾಗ ಮತ್ತು ಹಿಂಭಾಗ) ಸಿದ್ಧವಾಗಿರುವ ಮಸಾಲೆಯ ಮಿಶ್ರಣವನ್ನು ಹಚ್ಚಬೇಕು.

ಔಷಧೀಯ ಗುಣ

ಆಯುಷ್ ಇಲಾಖೆಯು ತಯಾರಿಸಿದ 26 ಪ್ರಮುಖ ಆಹಾರ ಪಟ್ಟಿಯಲ್ಲಿ, ನಮ್ಮ ರಾಜ್ಯದ ಪತ್ರೊಡೆ ಸ್ಥಾನವನ್ನು ಪಡೆದಿದೆ ಎಂಬುದು ಹೆಗ್ಗಳಿಕೆಯ ಸಂಗತಿ. ಕೆಸುವಿನ ಎಲೆಯಲ್ಲಿ ಕ್ಯಾಲ್ಸಿಯಂ, ಕಬ್ಬಿಣ ಅಧಿಕವಿದೆ, ಇದರಿಂದ ದೇಹದಲ್ಲಿ ಹಿಮೋಗ್ಲೋಬಿನ್ ಪ್ರಮಾಣ ಹೆಚ್ಚುವುದು. ಫೀನಾನ್‌ಗಳು, ಟ್ಯಾನಿನ್ಸ್, ಫ್ಲೇವೋನಾಯ್ಡ್ಸ್, ಗ್ಲೈಸೋಸೈಡ್ಸ್, ಸ್ಟೀರೋಲ್ಸ್ ಅಂಶವಿರುವುದರಿಂದ ಸಂಧಿವಾತ ನಿವಾರಿಸುತ್ತದೆ. ಕೆಸುವಿನ ಎಲೆಯಲ್ಲಿ ವಿಟಮಿನ್ ಸಿ ಹಾಗೂ ಬೀಟಾ ಕೆರೋಟಿನ್ ಅಧಿಕವಿದೆ ಎಂದು ಆಯುಷ್ ಇಲಾಖೆ ಹೇಳಿದೆ. ಮಳೆಗಾಲದಲ್ಲಿ ಒಮ್ಮೆ ಪತ್ರೊಡೆ ಮಾಡಿ ಸವಿಯಿರಿ. ಪತ್ರೊಡೆಗೆ ಎಣ್ಣೆ ಒಗ್ಗರಣೆ ಹಾಕಿ ಸೇವಿಸುವುದಾದರೆ, ದಯವಿಟ್ಟು ಯಾವುದೇ ರಿಫೈನ್ಡ್ ಆಯಿಲ್ ಬಳಸಬೇಡಿ, ಕೋಲ್ಡ್ ಪ್ರೆಸ್ಡ್ ಎಣ್ಣೆ ಬಳಸಿ.

ಮೊದಲು ಹೀಗೆ 5 ರಿಂದ 6 ಎಲೆಗಳಿಗೆ ಹಚ್ಚಿ, ನಂತರ ದೊಡ್ಡ ಎಲೆಯ ಮೇಲೆ ಒಂದೊಂದಾಗಿ ಸಣ್ಣ ಎಲೆಗಳನ್ನು ಇಟ್ಟು, ರೋಲ್ ರೀತಿ ಸುತ್ತಬೇಕು. ಹೀಗೆ 5 ರಿಂದ 6 ರೋಲ್ ಗಳನ್ನು ಸಿದ್ಧಪಡಿಸಿಕೊಳ್ಳಿ. ನಂತರ ದೊಡ್ಡ ರೋಲ್‌ನ್ನು ಚಿಕ್ಕ ಚಿಕ್ಕ ತುಂಡು (ಪೋಡಿ)ಗಳನ್ನಾಗಿ ಕತ್ತರಿಸಿಕೊಂಡು ಇಟ್ಟುಕೊಳ್ಳಿ. ಇಡ್ಲಿ ಪಾತ್ರೆಯಲ್ಲಿ ಕಾಲು ಭಾಗದಷ್ಟು ನೀರನ್ನು ಹಾಕಿ ಒಲೆಯ ಮೇಲೆ ಇಡಿ. ಪತ್ರೊಡೆಯ ಚಿಕ್ಕ ಚಿಕ್ಕ ತುಂಡುಗಳನ್ನು ಇಟ್ಟು 45 ನಿಮಿಷಗಳ ಕಾಲ ಬೇಯಿಸಿರಿ. ಈಗ ಬಿಸಿ ಬಿಸಿಯಾದ ಪ್ರತೊಡೆ ಸವಿಯಲು ಸಿದ್ಧ.

ಇದನ್ನು ಒಗ್ಗರಣೆಯ ಮೂಲಕ ಇನ್ನಷ್ಟು ರುಚಿಕರವಾಗಿಸಬಹುದು. ರವೆಯನ್ನು ಹಚ್ಚಿ, ಕಾವಲಿಗೆ ಎಣ್ಣೆ ಸವರಿ, ಒಲೆಯ ಮೇಲಿಟ್ಟು, ಕಾದ ನಂತರ ಅದರ ಮೇಲೆ ಪತ್ರೊಡೆ ಪೋಡಿಗಳನ್ನಿಟ್ಟು ಸ್ವಲ್ಪ ಹೊತ್ತಿನಲ್ಲಿ ಮುಗುಚಿ ಹಾಕಿ ಎರಡೂ ಬದಿಗಳನ್ನು ಎಣ್ಣೆಯಲ್ಲಿ ಕೆಂಪಗೆ ಹುರಿದು ತೆಗೆದು ಸಹ ತಿನ್ನಬಹುದು.

ಯಾವ ತಳಿಯ ಎಲೆ?: ಕೆಸುವಿನಲ್ಲಿ ಹಲವು ಪ್ರಭೇದದ ಎಲೆಗಳಿವೆ. ಕೆಲವು ತಳಿಯ ಎಲೆಗಳಿಂದ ತಯಾರಿಸಿದ ಪತ್ರೊಡೆಯನ್ನು ತಿಂದಾಗ, ಬಾಯಿ ತುರಿಕೆ ಆಗಲೂ ಬಹುದು. ಪತ್ರೊಡೆ ತಯಾರಿಸಲುಊರ ಕೆಸು ಮತ್ತು ಮರ ಕೆಸುವಿನ ಎಲೆಗಳನ್ನು ಬಳಸಬಹುದು. ತಿಂದಾಗ ತುರಿಕೆ ಉಂಟಾಗದಿರಲು ಎಲೆ ಕಿತ್ತು, ನಾರು ತೆಗೆದು ಒಂದು ದಿನ ಇಡಿ. ಹುಣಸೆಹಣ್ಣು ಸ್ವಲ್ಪ ಅಧಿಕ ಬಳಸುವುದರಿಂದ ತುರಿಕೆ ಉಂಟಾಗುವುದಿಲ್ಲ. ಪತ್ರೊಡೆಯಲ್ಲಿ ಬಳಸುವ ಕೆಸುವಿನ ಎಲೆಯಲ್ಲಿರುವ ಅಧಿಕ ಲವಣಾಂಶ ಮತ್ತು ನಾರಿನ ಅಂಶವನ್ನು ಗುರುತಿಸಿ, ಆಯುಷ್ ಇಲಾಖೆಯು ಬಿಡುಗಡೆ ಮಾಡಿರುವ 26 ಪ್ರಮುಖ ಆಹಾರಗಳ ಪಟ್ಟಿಯಲ್ಲಿ ಪತ್ರೊಡೆಯನ್ನು ಸೇರಿಸಿದೆ! ಇನ್ನೇಕೆ ತಡ, ಪತ್ರೊಡೆ ಮಾಡುವುದನ್ನು ಕಲಿತುಕೊಳ್ಳಿ, ತಯಾರಿಸಿ ತಿನ್ನಿ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
22.07.2024 ಸೋಮವಾರ
vishwavani.news

ದಿನ ದರ್ಶಿಕೆ

ಶ್ರಾವಣ ಮಾಸ, ಕೃಷ್ಣ ಪಕ್ಷ, ಪ್ರತಿಪದ ತಿಥಿ, ಪ್ರೀತಿ ಯೋಗ, 1945 ಕ್ರೋಧಿನಾಂ ಸಂವತ್ಸರ, ಚಂದ್ರ ಚಿಹ್ನೆ ಮಕರ, ಸೂರ್ಯ ಚಿಹ್ನೆ ಕರ್ಕ, ವರ್ಷಾ ದ್ರಿಕ್ ಋತು, ದಕ್ಷಿಣಾಯನ

ಮನೆಮದ್ದು

ಉಗುರು ಸುತ್ತಿನಿಂದ ಬಳಲುತ್ತಿದ್ದರೆ, ಒಂದು ನಿಂಬೆಹಣ್ಣಿಗೆ ಸೋಂಕು ಉಂಟಾಗಿರುವ ಬೆರಳು ಹೋಗುವಂತೆ ರಂಧ್ರ ಮಾಡಿ ಅದಕ್ಕೆ ಎರಡು ಕಾಳುಮೆಣಸು, ಅರಿಷಿಣ ಮತ್ತು ಏಲಕ್ಕಿ ಕುಟ್ಟಿ ಪುಡಿಮಾಡಿ ಸೇರಿಸಿ. ಅದರೊಳಗೆ ಬಾಧಿತ ಬೆರಳನ್ನು ಮೂರು-ನಾಲ್ಕು ಗಂಟೆಗಳ ಇಟ್ಟುಕೊಂಡರೆ ಉಗುರು ಸುತ್ತು ವಾಸಿಯಾಗುತ್ತದೆ.

ಸೌಂದರ್ಯ ಸೂತ್ರ

ಒಂದು ಕ್ಯಾರೆಟ್‌ನ್ನು ಪೇಸ್ಟ್ ಮಾಡಿಕೊಂಡು ಅದಕ್ಕೆ 2 ರಿಂದ 3 ಚ. ಜೇನುತುಪ್ಪ ಸೇರಿಸಿ. ಮುಖಕ್ಕೆ ಹಚ್ಚಿ. ಹೀಗೆ ಮಾಡುವುದರಿಂದ ಮುಖದ ಮೇಲಿನ ಮೊಡವೆಗಳು, ಕಪ್ಪು ಕಳೆಗಳು ನಿವಾರಣೆಯಾಗುತ್ತದೆ.

ದಿನ ಭವಿಷ್ಯ

ಮೇಷ: ಉದ್ಯೋಗಕ್ಕೆ ಸಂಬಂಧಿಸಿದಂತೆ ಲಾಭದಾಯಕ ದಿನ. ಕೆಲಸದ ಸ್ಥಳದಲ್ಲಿ ಮೆಚ್ಚುಗೆ. ಅಧಿಕಾರಿಗಳಿಂದ ಪ್ರೋತ್ಸಾಹ.

ವೃಷಭ: ಮಕ್ಕಳ ಕಾರಣದಿಂದಾಗಿ ವೈವಾಹಿಕ ಜೀವನದಲ್ಲಿ ಉದ್ವಿಗ್ನತೆ ಇರುತ್ತದೆ. ಅನಗತ್ಯ ವೆಚ್ಚಗಳು ಮುನ್ನೆಲೆಗೆ ಬರುತ್ತವೆ.

ಮಿಥುನ: ಗ್ರಹ ಸ್ಥಾನಗಳು ಮಾನಸಿಕ ಒತ್ತಡದಿಂದ ಹೊರ ಬರುವ ದಾರಿಯನ್ನು ತೋರಿಸುತ್ತವೆ. ವ್ಯವಹಾರದಲ್ಲಿ ಸಂಪೂರ್ಣ ಗಮನ ಹರಿಸುವಿರಿ.

ಕಟಕ: ಆರೋಗ್ಯ ಸ್ವಲ್ಪ ದುರ್ಬಲವಾಗಬಹುದು. ಆದ್ದರಿಂದ ಎಚ್ಚರಿಕೆಯಿಂದಿರಿ. ಕೆಲಸಕ್ಕೆ ಸಂಬಂಧಿಸಿದಂತೆ ದಿನವು ಏರಿಳಿತಗಳಿಂದ ತುಂಬಿರುತ್ತದೆ.

ಸಿಂಹ: ಉದ್ಯೋಗಸ್ಥರು ಇಂದು ಎಚ್ಚರಿಕೆಯಿಂದ ಕೆಲಸ ಮಾಡಬೇಕಾಗುತ್ತದೆ. ವೈವಾಹಿಕ ಜೀವನದಲ್ಲಿ ಪ್ರೀತಿಯು ಹಾಗೇ ಉಳಿಯುತ್ತದೆ.

ಕನ್ಯಾ: ಪ್ರೀತಿಯ ಜೀವನದಲ್ಲಿ ಇರುವವರು ಏರಿಳಿತಗಳನ್ನು ಎದುರಿಸಬೇಕಾಗಬಹುದು. ಹಸಿದವರಿಗೆ ಅನ್ನ ನೀಡಿ ಹನುಮಂತನಿಗೆ ಪೂಜೆ ಮಾಡಿ.

ತುಲಾ: ಅನಗತ್ಯ ಖರ್ಚು ಮಾಡುವ ಅಭ್ಯಾಸವು ತೊಂದರೆಗೆ ಸಿಲುಕಬಹುದು. ಖರ್ಚುಗಳ ಬಗ್ಗೆ ಗಮನ ಕೊಡಿ ಇಲ್ಲದಿದ್ದರೆ ಸಾಲಕ್ಕೆ ಸಿಲುಕಬಹುದು.

ವೃಶ್ಚಿಕ: ದಿನವು ಕಚೇರಿಯಲ್ಲಿ ಕಠಿಣ ಪರಿಶ್ರಮದಿಂದ ತುಂಬಿ ರುತ್ತದೆ ಮತ್ತು ಸಹೋದ್ಯೋಗಿಗಳೊಂದಿಗೆ ಸಂತೋಷದಿಂದ ಕಾಣುವಿರಿ.

ಧನು: ಉದ್ಯಮಿಗಳು ತಮ್ಮ ವ್ಯವಹಾರವನ್ನು ಮುಂದುವರಿಸಲು ಕೆಲವು ಹೊಸ ಜನರನ್ನು ಭೇಟಿ ಮಾಡುತ್ತಾರೆ. ವೈವಾಹಿಕ ಜೀವನದಲ್ಲಿ ಸಂತೋಷ.

ಮಕರ: ವ್ಯಾಪಾರಸ್ಥರು ಇಂದು ಎದುರಾಳಿಗಳ ಮೇಲೆ ಪ್ರಾಬಲ್ಯ ಸಾಧಿಸುತ್ತಾರೆ, ಆದರೆ ಆರೋಗ್ಯದ ದೃಷ್ಟಿಯಿಂದ ದಿನವು ದುರ್ಬಲವಾಗಿರುತ್ತದೆ.

ಕುಂಭ: ಉದ್ಯೋಗಸ್ಥರು ಇಂದು ತಮ್ಮ ಮಾತಿನ ಬಗ್ಗೆ ಕಾಳಜಿ ವಹಿಸಬೇಕು, ಅಧಿಕಾರಿಗಳೊಂದಿಗೆ ವಾಗ್ವಾದ ಬೇಡ.

ಮೀನ: ಕುಟುಂಬದ ಸೌಕರ್ಯಗಳ ಬಗ್ಗೆ ಸಂಪೂರ್ಣ ಗಮನ ಹರಿಸುತ್ತಾರೆ. ಕುಟುಂಬ ಸದಸ್ಯರೊಂದಿಗೆ ಸಂತಸದಿಂದ ಕಾಲ ಕಳೆಯುವಿರಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 2022: ದ್ರೌಪದಿ ಮುರ್ಮು ಅವರು ಭಾರತದ 15 ನೇ ರಾಷ್ಟ್ರಪತಿಯಾಗಿ ಆಯ್ಕೆಗೊಂಡರು.
- 2012: ಪ್ರಣಬ್ ಮುಖರ್ಜಿ ಅವರು ಭಾರತದ 13 ನೇ ರಾಷ್ಟ್ರಪತಿಯಾಗಿ ಆಯ್ಕೆಗೊಂಡರು.
- 1947: ಶಾಸಕಾಂಗ ಸಭೆಯೊ ಇಂದಿನ ಭಾರತದ ಧ್ವಜ ತಿರಂಗವನ್ನು ಅಂಗೀಕರಿಸಲಾಯಿತು.

ಚಿತ್ರಸ್ಫೂರ್ತಿ

ಈ ಫೋಟೋವನ್ನು ನೋಡಿದರೆ, ವಿನ್ಸೆಂಟ್ ವ್ಯಾನ್ ಗೋಘ್ ಅವರ ಪ್ರಸಿದ್ಧ ಚಿತ್ರದ ಥರಹವೇ ಇದೆ. ಒಂದು ಸಲ ನೋಡಿದರೆ ಇದನ್ನು ಎಡಿಟ್ ಮಾಡಿರಬಹುದು ಎನ್ನಿಸುತ್ತೆ. ಆದರೆ ಇದು ಎಡಿಟ್ ಮಾಡಿರುವ ಚಿತ್ರವಂತೂ ಅಲ್ಲ, ಬದಲಿಗೆ ಕ್ಯಾಲಿಫೋರ್ನಿಯಾದ ಯೋಸ್‌ಮೈಟ್ ನ್ಯಾಷನಲ್ ಪಾರ್ಕ್‌ನಲ್ಲಿ ಬಬಾಕ್ ತಫ್ರೇಶಿ ತಗೆದಿರುವ ಚಿತ್ರ. ಮಳೆಗಾಲದಲ್ಲಿ ನಡೆಯುವ ಅಂತರಿಕ್ಷದ ಚಮತ್ಕಾರ ಇದು.

ಗುರುಗಳನ್ನು ಪೂಜಿಸುವ ಗುರು ಪೂರ್ಣಿಮೆಯ ಮಹತ್ವ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಆಷಾಢ ಮಾಸದ ಹುಣ್ಣಿಮೆಯ ದಿನವನ್ನು ಗುರು ಪೂರ್ಣಿಮೆ ಎಂದು ಆಚರಿಸುತತ್ತೇವೆ. ಇದನ್ನು ವ್ಯಾಸ ಪೂರ್ಣಿಮೆ ಎಂದೂ ಕರೆಯುತ್ತಾರೆ. ಏಕೆಂದರೆ, ಇದು ವೇದವ್ಯಾಸರ ಜಯಂತಿಯ ದಿನ.

ವೇದವ್ಯಾಸರ ಮೂಲ ಹೆಸರು ಕೃಷ್ಣ ದ್ವೈಪಾ ಯನ. ತಂದೆ ಪರಾಶರ ಮುನಿಗಳು ಹಾಗೂ ತಾಯಿ ಸತ್ಯವತಿ ದೇವಿ. ಒಮ್ಮೆ ಮಹರ್ಷಿ ಪರಾಶರರು ನಾವೆಯೊಂದರಲ್ಲಿ ಗಂಗಾ ನದಿಯನ್ನು ದಾಟುತ್ತಿರುವಾಗ ದೂರದ ದ್ವೀಪದಿಂದ ಮೀನು ಕೊಳೆತಾಗ ಬರುವ ಕೆಟ್ಟ ವಾಸನೆ ಬರುತ್ತಿತ್ತು. ಅವರು ಆ ದ್ವೀಪಕ್ಕೆ ಹೋಗಿ ನೋಡಿದಾಗ ಅಲ್ಲಿ ಒಬ್ಬ ಸ್ತ್ರೀ ಕುಳಿತಿದ್ದಳು. ಆಕೆಯ ದೇಹದಿಂದಲೇ ಆ ಕೆಟ್ಟ ವಾಸನೆ ಬರುತ್ತಿತ್ತು. ಆಕೆ ಪರಾಶರ ಮುನಿಗಳನ್ನು ನೋಡಿ, ಬಳಿಗೆ ಬಂದು ಅವರ ಪಾದಕ್ಕೆರಗಿದಳು. ಆಕೆಯ ಹೆಸರು ಸತ್ಯವತಿ. ಆಕೆಯ ದೇಹದಿಂದ ಮೀನಿನ ವಾಸನೆ ಬರುತ್ತಿದ್ದುದರಿಂದ ಆಕೆಯನ್ನು ಮತ್ಸ್ಯಗಂಧಿ ಎಂದು ಕರೆಯುತ್ತಿದ್ದರು. ಆಕೆಯು ಮೂಲತಃ ಬೆಸ್ತರವಳಲ್ಲ. ಅದ್ರಿಕೆ ಎಂಬ ಒಬ್ಬಳು ಅಪ್ಸರೆಯು ಬ್ರಹ್ಮನ ಶಾಪದಿಂದಾಗಿ ಮತ್ಸ್ಯಕನ್ಯೆಯಾಗಿದ್ದಳು. ಆಕೆಗೆ ಜನಿಸಿದವಳು ಈ ಸತ್ಯವತಿ. ಬೆಸ್ತರ ರಾಜ ಕಂದರನು ಆಕೆಯನ್ನು ಸಾಕಿಕೊಂಡಿದ್ದುದರಿಂದ ಆಕೆ ಬೆಸ್ತರ ಮಗಳಾದಳು.

ನನ್ನ ಶಾಪ ವಿಮೋಚನೆ ಮಾಡಬೇಕೆಂದು ಆಕೆ ಪರಾಶರರನ್ನು ಪ್ರಾರ್ಥಿಸಿದಾಗ, ಮಹರ್ಷಿಗಳು ಆಕೆಯನ್ನು ಸ್ಪರ್ಶಿಸಿ ಅವಳ ಶಾಪ ವಿಮೋಚನೆ ಮಾಡಿದರು. ಅವಳು ಸುರೂಪಿಯಾಗಿ ಸುಗಂಧವನ್ನು ಹೊರ ಹೊಮ್ಮಿಸುವಂತಳಾದಳು. ನಂತರ, ಪರಾಶರರು ಅಲ್ಲಿಯೇ ಅಗ್ನಿಯನ್ನು ಸ್ಥಾಪಿಸಿ, ಗಾಂಧರ್ವ ರೀತಿಯಲ್ಲಿ ಆಕೆಯ ವಿವಾಹವಾದರು. ಇವರಿಬ್ಬರಿಂದ ಜನಿಸಿದ ಮಗುವೇ ಕೃಷ್ಣ ದ್ವೈಪಾಯನ. ಅಂದರೆ ವ್ಯಾಸರು. ಕೃಷ್ಣ ಎಂದರೆ ಕಪ್ಪು ಎಂತಲೂ ದ್ವೈಪಾ ಯನ ಎಂದರೆ ಸುತ್ತಲೂ ನೀರು ಇರುವ ಪ್ರದೇಶ ಅಂದರೆ ದ್ವೀಪ ಎಂತಲೂ ಅರ್ಥ. ಹೀಗೆ ವ್ಯಾಸರ ಬಣ್ಣ ಕಪ್ಪಾಗಿದ್ದು ದ್ವೀಪದಲ್ಲಿ ಜನಿಸಿದವರಾದ್ದರಿಂದ ಕೃಷ್ಣ ದ್ವೈಪಾಯನ ಎಂಬ ಹೆಸರು ಬಂದಿತು. ಈ ದ್ವೀಪವು ಈಗಿನ ಕಾಲದ ಉತ್ತರ ಪ್ರದೇಶದ 'ಕಲ್ಪಿ' ಎನ್ನುವ ಸ್ಥಳದ ಬಳಿಯಿದೆ.

ಮಗುವಾಗಿ ಹುಟ್ಟಿದ ಕ್ಷಣವೇ ಕೃಷ್ಣ ದ್ವೈಪಾಯನರು ದೊಡ್ಡವರಾಗಿ ಬೆಳೆದು, ತಾಪಸ ಜೀವನ ನಡೆಸಿ ಅತಿ ಪ್ರಮುಖ ಋಷಿಗಳಲ್ಲಿ ಒಬ್ಬರಾಗಿ ಪರಿಗಣಿತರಾದರು. ಕೃಷ್ಣ ದ್ವೈಪಾಯನರು ತಮ್ಮ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲ ವೈದಿಕ ಋಕ್ಕುಗಳನ್ನು ಸಂಗ್ರಹಿಸಿ, ಯಜ್ಞ ಯಾಗಾದಿ ಧಾರ್ಮಿಕ ವಿಧಿಗಳಲ್ಲಿನ ಅವುಗಳ ಬಳಕೆಯ ಆಧಾರದ ಮೇಲೆ ಅವುಗಳನ್ನು ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ ಎಂಬ ನಾಲ್ಕು ಭಾಗಗಳನ್ನಾಗಿ ವಿಭಾಗಿಸಿ, ಅವುಗಳನ್ನು ಕ್ರಮವಾಗಿ ತಮ್ಮ ನಾಲ್ಕು ಮುಖ್ಯ ಶಿಷ್ಯರಾದ ಪೈಲ, ವೈಶಂಪಾಯನ, ಜೈಮಿನಿ ಮತ್ತು ಸುಮಂತು ಮುನಿಗಳಿಗೆ ಬೋಧಿಸಿದರು. ವೇದಾಧ್ಯಯನಕ್ಕೆ ನಾಂದಿ ಹಾಡಿದ ವೇದವ್ಯಾಸ ಮಹರ್ಷಿಗಳು ಗುರುಗಳಿಗೆ ಗುರುಗಳಾಗಿ ಪರಮ ಗುರುಗಳಾಗಿದ್ದಾರೆ. ಹೀಗಾಗಿ ಅವರ ಜನ್ಮ ದಿನವಾದ ಹುಣ್ಣಿಮೆಯ ದಿನವನ್ನು ಗುರುಪೂರ್ಣಿಮೆ ಎಂದು ಆಚರಿಸುತ್ತೇವೆ.

ಇಂತಹ ಅಪೂರ್ವವಾದ ಹಿನ್ನೆಲೆ ಇರುವ ಗುರುಪೌರ್ಣಮಿಯನ್ನುನಾವೆಲ್ಲರೂ ನಮಗೆ ಜೀವನದಲ್ಲಿ ದಾರಿ ತೋರಿದ ಗುರುಗಳಿಗೆ ನಮಸ್ಕರಿಸುತ್ತಾ, ಕೃತಜ್ಞತೆ ಹೇಳುತ್ತಾ ಸಾರ್ಥಕಗೊಳಿಸಿಕೊಳ್ಳುತ್ತೇವೆ. ಜೀವನದಲ್ಲಿ ಪ್ರತಿ ಹಂತದಲ್ಲೂ ನಮಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ

ಯಾರಾದರೂ ಒಬ್ಬರು ಗುರು ಸ್ಥಾನದಲ್ಲಿ ನಿಂತು ಜೀವನದಲ್ಲಿ ಮುನ್ನಡೆಸಿರುತ್ತಾರೆ. ಬದುಕನ್ನು ನಾವೊಬ್ಬರೇ ಕಟ್ಟಿಕೊಳ್ಳಲು ಸಾಧ್ಯವೇ ಇಲ್ಲ. ತಂದೆ ತಾಯಿ, ಶಾಲೆಯ ಮೇಷ್ಟ್ರು, ಸ್ನೇಹಿತರು, ಕುಟುಂಬದ ಎಲ್ಲ ಸದಸ್ಯರು, ಕೆಲಸದಲ್ಲಿರುವ ನಮ್ಮ ಸಹೋದ್ಯೋಗಿಗಳು , ದೈನಂದಿನ ಜೀವನದಲ್ಲಿ ಎದುರಾಗುವ ಅನಿಕ ಅಪರಿಚಿತರು ಸಹ ಕೆಲವೊಮ್ಮೆ ನಮಗೆ ಜೀವನದ ಪಾಠ ಕಲಿಸಿಬಿಡುತ್ತಾರೆ.

ಬದುಕಿನಿಂದ ನಿರಂತರವಾಗಿ ಕಲಿಕೆಯನ್ನು ಗ್ರಹಿಸುವ ಮನಸುಳ್ಳವರಿಗೆ ಪ್ರತಿದಿನ ಪ್ರತಿಕ್ಷಣವೂ ಕೂಡ ಕಲಿಕೆಯೇ. ಪ್ರತಿಯೊಬ್ಬರಲ್ಲೂ ಒಬ್ಬ ಗುರುವನ್ನು ಗುರುತಿಸಿ, ಅವರ ಸದ್ವಿಚಾರವನ್ನು ನಾವು ನಮ್ಮ ಜೀವನಕ್ಕೆ ಅಳವಡಿಸಿಕೊಂಡಾಗ ಬದುಕು ಹೆಚ್ಚು ಅರ್ಥಪೂರ್ಣವಾಗುತ್ತಾ ಹೋಗುತ್ತದೆ. ಎಲ್ಲರಿಗೂ ಗುರುಪೂರ್ಣಿಮೆಯ ಹಾರ್ದಿಕ ಶುಭಾಶಯಗಳು.

ಪದಬಂಧ



ಎಡದಿಂದ ಬಲಕ್ಕೆ:

3. ನೀರವ ಮೌನದಲ್ಲಿ ಕೇಳಿದ ಸದ್ದು ಯಾವುದು (3)
5. ಕಾರು ಕೊಳ್ಳಲು ಹೋದಾಗ ಕೇಳಿದ ತಕರಾರು ಏನು (3)
7. ಅಗತ್ಯವಿದ್ದಾಗ ನೆರವು ಚಾಚಿದ ಕೈ (5)
9. ಮತ್ತೊಂದು ಮಾಲೆಯನ್ನು ಕಟ್ಟಿಕೊಂಡಿದೆ ಪಾಳಿ (3)
11. ಮರದ ಟಿಸಿಲು (3)
13. ಹಲವು ಬಾರಿ ಕಬ್ಬಿಣದ ಕಡಲೆಯಾಗುವ ಪಠ್ಯ ವಿಷಯ (3)
14. ಲಿಖಿತವಾಗಿ ಸಲ್ಲಿಸಿದ ಬೇಡಿಕೆ (3)
16. ಅಣ್ಣ ಮಾಡಿದ ಅಪಹಾಸ್ಯ (3)
18. ಕದನ ಕಲಿಗೆ ಮತ್ತೊಂದು ಹೆಸರು (5)
19. ಪ್ರಕೃತಿ ಅಥವಾ ಸೃಷ್ಟಿ (3)
21. ಸದರಕ್ಕೆ ಮತ್ತೊಂದು ಹೆಸರು (3)

ಮೇಲಿನಿಂದ ಕೆಳಕ್ಕೆ:

1. ಉಪ್ಪು ಎನ್ನುವುದಕ್ಕೆ ಮತ್ತೊಂದು ಪದ (2)
2. ತಿರುಗಿ ಬಂದಿದೆ ಸಮಯ (2)
3. ಆಗ ಕಂಡಿದೆ ಗಗನ (3)
4. ಸತಿಯಿರುವ ವಾಸ ಸ್ಥಳ (3)
5. ಜ್ಞಾನ ನೀಡುವ ಹೊತ್ತಗೆಗೆ ಮತ್ತೊಂದು ಹೆಸರು (3)
6. ಮಧ್ಯೆ ಹಿಂದಿಯ ತಾಯಿ ಇರುವ ಮುಂಡಾಸು (3)
8. ಇಂದ್ರಜಾಲ ವಿದ್ಯೆ ಪ್ರದರ್ಶಿಸಿದವನು (5)
10. ನಮಗೆ ರುಚಿ ತಿಳಿಸುವ ನಾಲಗೆ (3)
12. ಮಳೆಯ ದೇವರು (3)
14. ತಲೆಕೆಳಗಾಗಿ ಬಂದಿರುವ ಕಟ್ಟುಪಾಡು (3)
15. ಎರಡು ಬಿಂದುಗಳ ಚಿನ್ಹೆಯಿಂದ ಗುರುತಿಸುವ ವರ್ಣ ಸಂಜ್ಞೆ (3)
16. ನಾಡಿನ ದೊರೆ (3)
17. ಮರದ ತುಂಡು ಅಥವಾ ಸೌದೆ (3)
20. ಎರಡಕ್ಷರದ ಗೆಳತಿ (2)
22. ನಡೆದಾಡಲು ಸಹಾಯ ಮಾಡುವ ಅಂಗ ಅಡಿ ಮೇಲಾಗಿದೆ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಅಪಖ್ಯಾತಿ 4. ಸರಪಂಚ 6. ಲಸುಹ 7. ಅಡವಿ 9. ಜಾಡಮಾಲಿ 11. ಜಜ್ಜರಿತ 12. ವಲಯ 14. ನಾಟಕ 16. ತರುವಾಯ 17. ಪರಿವಾರ 18. ಕನಕ 20. ಕಾರ್ತಿಕ 22.ಮದನಾರಿ 23. ನಾಗರಿಕ

ಮೇಲಿನಿಂದ ಕೆಳಕ್ಕೆ: 2. ಪವಾಡ 3. ತಿಲ 4. ಸಹಜಾತ 5. ಚಪ್ಪಲಿ 7. ಅತೀವ 8. ವಿಜಯ 10. ಮಾರಾಟ 13. ಲಹರಿ 14. ನಾಯಕ 15. ಕಟುಕ 16. ತರಕಾರಿ 17. ಪದುಮ 19. ನಗಾರಿ 21. ಕನಾ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಪ್ರಪಂಚದ ಅತಿ ಚಿಕ್ಕ ಸಸ್ತನಿ

ಜಗತ್ತಿನಲ್ಲೇ ಅತಿ ಚಿಕ್ಕ ಸಸ್ತನಿ ಯಾವುದು ಎನ್ನುವುದು ನಿಮಗೆ ಗೊತ್ತೇ. 1.5 ರಿಂದ 1.7 ಗ್ರಾಂವರೆಗೆ ತೂಕ ಹೊಂದಿ, 1.14 ರಿಂದ 1.29 ಇಂಚ್‌ಗಳವರೆಗೆ ಉದ್ದ ಹೊಂದಿ, 5.1 ರಿಂದ 5.7 ಇಂಚುಗಳ ಉದ್ದದ ರೆಕ್ಕೆಗಳನ್ನು ಹೊಂದಿದ ಬಂಬಲ್ ಬೀ ಎಂಬ ಸಸ್ತನಿಯು ಪ್ರಪಂಚದ ಅತಿ ಚಿಕ್ಕ ಸಸ್ತನಿಯೆಂಬ ಹೆಸರಿಗೆ ಭಾಜನವಾಗಿದೆ. ಅತಿ ಚಿಕ್ಕ ಜೀವಿ ಎನ್ನುವ ಕಾರಣಕ್ಕೆ ಗಿನ್ನೆಸ್ ವರ್ಲ್ಡ್ ರೆಕಾರ್ಡ್‌ನಲ್ಲೂ ಅದು ಸೇರ್ಪಡೆಯಾಗಿದೆ. ಇದನ್ನು ನೋಡಬೇಕೆಂದರೆ ಥಾಯ್ಲೆಂಡಿನ ಖ್ವೆಯೇ ನೋಯಿ ನದಿ ಹಾಗೂ ಕಾಂಚನಬುರಿ ಭಾಗಕ್ಕೆ ಹೋಗಬೇಕು.

ಪುಸ್ತಕ ಲೋಕ

ಫೂ ಮತ್ತು ಇತರೆ ಕತೆಗಳು



ಮಂಜುನಾಯಕ್ ಚೆಳ್ಳೂರು ಬರೆದಿರುವ ಫೂ ಮತ್ತು ಇತರೆ ಕತೆಗಳು ಪುಸ್ತಕ 2023ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಆಯ್ಕೆ ಯಾಗಿದೆ. ಇದು ಲೇಖಕರ ಮೊದ ಲನೇ ಕಥಾ ಸಂಕಲನ. ಬೊಗಸೆಯಷ್ಟು ನೀರನ್ನು ಬಾಯಲ್ಲಿಟ್ಟುಕೊಂಡು ಆಕಾ ಶಕ್ಕೆ ' ಫು ' ಎಂದು ಉಗಿದರೆ ಕಾಮನ ಬಿಲ್ಲನ್ನು ಮೂಡಿಸುತ್ತದೆ. ಅದನ್ನೇ ತಮ್ಮ ಪುಸ್ತಕಕ್ಕೆ ಹೆಸರನ್ನು ಇಟ್ಟುಕೊಂಡು. ಅತ್ಯಂತ ಸೂಕ್ಷ್ಮವಾಗಿ ಮೂಡಿ ಸಿದ್ದಾರೆ. ಈ ಕೃತಿಯಲ್ಲಿ ಪ್ರತಿಯೊಂದು ಕಥೆಗಳು ಬದುಕಿಗೆ ಹತ್ತಿರವಾಗಿರುವಂಥವು. ಹಾಗೆಯೇ ಓದುಗರ ಮನಸ್ಸಿಗೂ ಆಪ್ತವಾಗುತ್ತವೆ.

ಟ್ವೀಟ್‌ಮೆಂಟ್

ಜಗನ್: ಸಣ್ಣ ವಯಸ್ಸಲ್ಲೇ ಯಾಕ್ ಜನ ಮದ್ವೆಯಾಗ್ತರೋ. ನನ್ನ ಸ್ನೇಹಿತರದ್ದೆಲ್ಲ ಮದ್ವೆ ಆಗಿದೆ. ಅವ್ರು ಹೊರಗ ಬರ್ಬೇಕು ಅಂದ್ರೆ, ಅವ್ರಿಗೆ ಅವ್ರ ಹೆಂಡತಿ ಕಾಟ!

ಸಣ್ಣ ಮಧು: ನಿಮಗಿನ್ನೂ ಸೆಟ್ ಆಗಿಲ್ವೇ?!

ಸಹಾಯವಾಣಿ ಸಂಖ್ಯೆ

ತುರ್ತು ವೈದ್ಯಕೀಯ ಸೇವೆ

104/97456 97456

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

- ಸೂರ್ಯನನ್ನು ವೀಕ್ಷಿಸಲು,ಅಧ್ಯಯನ ಮಾಡಲು ಕಾರ್ಯರೂಪಕ್ಕಿಳಿಸಿದ ಮೊದಲ ಭಾರತೀಯ ಬಾಹ್ಯಾಕಾಶ ಕಾರ್ಯಾಚರಣೆಯ ಹೆಸರೇನು?

- ಎ. ಭಾನು ಎಲ್ 1.
- ಬಿ. ಆದಿತ್ಯ ಎಲ್ 1.
- ಸಿ. ಸಂಯುಕ್ತ ಎಲ್ 1.
- ಡಿ. ರವಿತೇಜ್ ಎಲ್ 1.

ಉತ್ತರ: ಬಿ. ಆದಿತ್ಯ ಎಲ್ 1

ಮಾಹಿತಿ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಜೂನ್ ಅಥವಾ ಜುಲೈ 2023 ರೊಳಗೆ ಆದಿತ್ಯ-ಎಲ್1 ಮಿಷನ್ ಅನ್ನು ಪ್ರಾರಂಭಿಸಿಯಾಗಿದೆ. ಸೂರ್ಯ ಮತ್ತು ಸೌರ ಕರೋನಾವನ್ನು ವೀಕ್ಷಿಸಲು ಮೊದಲ ಭಾರತೀಯ ಬಾಹ್ಯಾಕಾಶ ಮಿಷನ್ ಆಗಿದೆ. ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ (ಐಐಎ) ಯ ವಿಜ್ಞಾನಿಗಳು ಇತ್ತೀಚೆಗೆ ಅತ್ಯಂತ ಸವಾಲಿನ ವೈಜ್ಞಾನಿಕ ಪೇಲೋಡ್‌ಗಳಲ್ಲಿ ಒಂದನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಗೆ ಹಸ್ತಾಂತರಿಸಿದ್ದಾರೆ.

ಇಂದು ಅಧುನಿಕತೆಯು ಅತ್ಯಂತ ವೇಗದಲ್ಲಿ ಬೇಳೆಯುತ್ತಿರುವುದು ನಿಜಕ್ಕೂ ಸಂತೋಷದ ವಿಷಯವೇ. ಆದರೆ ಈ ತೀವ್ರಗತಿಯ ಅಧುನಿಕತೆಯ ಬೆಳವಣಿಗೆಯಿಂದಾಗಿ ಭಾರತದಲ್ಲಿ ಅಧುನಿಕತೆಯ ಬಿಸಿ ಹೆಚ್ಚು ತಟ್ಟಿ ನಮ್ಮನ್ನು ದುಶ್ಚಟಗಳಿಗೆ ದಾಸರಾಗುವಂತೆ ಮಾಡಿರುವುದು ನಿಜಕ್ಕೂ ವಿಷಾದನೀಯ ಸಂಗತಿ. ಅಧುನಿಕ ವೈಭವ ಜೀವನ ಶೈಲಿಯಾದ ಸಿಗರೇಟ್, ಗುಟ್ಕಾ, ತಂಬಾಕು, ಮದ್ಯಪಾನ ಸೇವನೆಯ ಚಟಗಳಿಗೆ ಮಾರಿಹೋದ ನಾವು ನಮ್ಮ ಸ್ವಂತಿಕೆ, ಸಾಮರ್ಥ್ಯ ಕಳೆದುಕೊಳ್ಳುತ್ತಿದ್ದೇವೆ.



ಭಾರತದಲ್ಲಿ ಮಹಿಳೆಯರು ಸಿಗರೇಟ್ ಸೇದುವುದು ನೈಜವಾಗಿ ಕಡಿಮೆ ಪ್ರಮಾಣದಲ್ಲಿ ಕಂಡುಬರುವುದಾದರೂ, ಕಳೆದ ಕೆಲವು ವರ್ಷಗಳಿಂದ ಈ ಪ್ರಮಾಣವು ಹೆಚ್ಚುತ್ತಿದೆ. ಈ ಬದಲಾವಣೆಯು ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಗಮನಾರ್ಹವಾಗಿದೆ. ದೇಶದಲ್ಲಿ ಮಹಿಳೆಯರಲ್ಲಿ ಸಿಗರೇಟು ಸೇದುವ ಪ್ರಮಾಣ 1980ರಲ್ಲಿ 5.3 ದಶಲಕ್ಷದಿಂದ 2012ರಲ್ಲಿ 12.7 ದಶಲಕ್ಷಗಳಿಗೆ ಏರಿಕೆಯಾಗಿದೆ. ವಿಶ್ವದ ಇತರ ಭಾಗಗಳಲ್ಲಿ ಮಹಿಳೆಯರಲ್ಲಿ ಧೂಮಪಾನದ ಚಾಳಿ ಇಳಿಕೆಯಾಗುತ್ತಿದ್ದರೆ, ಭಾರತದಲ್ಲಿ ಅದರ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತಿದೆ ಎಂಬುದು ಆತಂಕದ ಸಂಗತಿ.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಭಾರತದಲ್ಲಿ ಸರಿಸುಮಾರು 120 ಮಿಲಿಯನ್ ಧೂಮಪಾನಿಗಳಿದ್ದಾರೆ ಮತ್ತು ಭಾರತವು ವಿಶ್ವದ 12 ಪ್ರತಿಶತದಷ್ಟು ಧೂಮಪಾನಿಗಳ ನೆಲೆಯಾಗಿದೆ. ಭಾರತದಲ್ಲಿ ತಂಬಾಕು ಸೇವನೆಯಿಂದ ಪ್ರತಿ ವರ್ಷ 10 ಮಿಲಿಯನ್‌ಗಿಂತಲೂ ಹೆಚ್ಚು ಮಂದಿ ಸಾವನ್ನಪ್ಪುತ್ತಿದ್ದಾರೆ. ಆತಂಕಕಾರಿ ವಿಷಯವೆಂದರೆ, ಭಾರತದಲ್ಲಿ 12.1 ಮಿಲಿಯನ್‌ಗಿಂತ ಹೆಚ್ಚು ಮಹಿಳೆಯರು ಧೂಮಪಾನಿಗಳು.

ವಯಸ್ಸಾದ ಮಹಿಳೆಯರಲ್ಲಿ ಧೂಮಪಾನವು ಕಡಿಮೆಯಾಗುತ್ತಿರುವ ಬೆಳವಣಿಗೆ ನಡುವೆಯೇ ಭಾರತದ ಹದಿಹರೆಯದ ಹುಡುಗಿಯರಲ್ಲಿ ಧೂಮಪಾನ ಚಟ ಗಮನಾರ್ಹವಾಗಿ ಏರಿಕೆ ಕಂಡಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಬಿಡುಗಡೆ ಮಾಡಿದ ಇತ್ತೀಚಿನ ಭಾರತ ತಂಬಾಕು ನಿಯಂತ್ರಣ ವರದಿಯಲ್ಲಿನ ಅಂಕಿಅಂಶಗಳು ತಿಳಿಸಿವೆ. ಹದಿಹರೆಯದ ಹುಡುಗಿಯರಲ್ಲಿ ಧೂಮಪಾನದ ವ್ಯಸನ ತೀವ್ರವಾಗಿ ಹೆಚ್ಚಾಗಿರುವುದು ಚಿಂತೆಗೀಡು ಮಾಡುವ ವಿಷಯವಾಗಿದೆ.

ತಂಬಾಕು ಹೊಗೆ 7000 ಕ್ಕೂ ಹೆಚ್ಚು ರಾಸಾಯನಿಕ ಸಂಯುಕ್ತಗಳನ್ನು ಹೊಂದಿರುತ್ತದೆ. ಇವುಗಳಲ್ಲಿ ಸುಮಾರು 100 ರಾಸಾಯನಿಕಗಳು ಮಾನವ ದೇಹದ ಮೇಲೆ ನೇರವಾಗಿ ಪರಿಣಾಮ ಬೀರುತ್ತವೆ. ಮತ್ತು ಅವುಗಳಲ್ಲಿ ಕನಿಷ್ಠ 70 ವಿಷಕಾರಿ ರಾಸಾಯನಿಕಗಳು ಕ್ಯಾನ್ಸರ್‌ಗೆ ಕಾರಣವಾಗುತ್ತವೆ. ಧೂಮಪಾನವು ದೀರ್ಘಕಾಲದ ಪ್ರತಿರೋಧಕ ಶ್ವಾಸಕೋಶದ ಕಾಯಿಲೆ (Chronic obstructive pulmonary disease), ಎಂಫಿಸೆಮಾ ಮತ್ತು ದೀರ್ಘಕಾಲದ ಬ್ರಾಂಕೈಟಿಸ್‌ಗೆ ಕಾರಣವಾಗಬಹುದು. ಅದು ಶ್ವಾಸಕೋಶದ ವಾಯುಮಾರ್ಗಗಳಲ್ಲಿ ಉರಿಯೂತವನ್ನು ಉಂಟು ಮಾಡುತ್ತದೆ. ಧೂಮಪಾನ ಮಾಡುವುದರಿಂದ ದೀರ್ಘಕಾಲದ ಕೆಮ್ಮು, ಬಹಳಷ್ಟು ಕಫ ಉತ್ಪಾದನೆ, ಉಸಿರಾಟದ ತೊಂದರೆ, ಆಯಾಸ, ತೂಕ ನಷ್ಟವು ಉಂಟಾಗಬಹುದು ಅಥವಾ ಉಲ್ಬಣಗೊಳ್ಳಬಹುದು. ಸಿಗರೇಟ್ ಸೇದುವುದು ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಇದು ಪೆಪ್ಟಿಕ್ ಅಲ್ಸರ್‌ಗೆ ಕಾರಣವಾಗುತ್ತದೆ, ಸಂತಾನೋತ್ಪತ್ತಿ ವ್ಯವಸ್ಥೆಗೆ ಹಾನಿ ಮಾಡುತ್ತದೆ ಮತ್ತು ರೋಗನಿರೋಧಕ ಶಕ್ತಿಯನ್ನು ದುರ್ಬಲಗೊಳಿಸುತ್ತದೆ. ದೇಹವು ಸೋಂಕುಗಳಿಗೆ ಹೆಚ್ಚು ಒಳಗಾಗುತ್ತದೆ ಎಂದು ಸಂಶೋಧಕರು ಎಚ್ಚರಿಸಿದ್ದಾರೆ.

ಧೂಮಪಾನ ಮಾಡುವ ಮಹಿಳೆಯರು ವಿವಿಧ ಕಾಯಿಲೆಗಳು ಮತ್ತು ಆರೋಗ್ಯ ಸಮಸ್ಯೆಗಳಿಗೆ ಹೆಚ್ಚು ಒಳಗಾಗುತ್ತಾರೆ. ಧೂಮಪಾನವು ಮಹಿಳೆಯರ ಆರೋಗ್ಯಕ್ಕೆ ಗಂಭೀರ ಹಾನಿಯನ್ನುಂಟುಮಾಡುತ್ತದೆ . ಅನಿಯಮಿತ ಮುಟ್ಟಿನ ಚಕ್ರಗಳು, ಹಾರ್ಮೋನುಗಳ ಅಸಮತೋಲನ ಮತ್ತು ಆರಂಭಿಕ ಋತುಬಂಧವನ್ನು ಉಂಟುಮಾಡುವ ಮೂಲಕ ಧೂಮಪಾನವು ಸ್ತ್ರೀ ಫಲವತ್ತತೆಯ ಮೇಲೆ ಪರಿಣಾಮ ಬೀರುತ್ತದೆ. ಧೂಮಪಾನದ ವಿಷಕಾರಿ ಪರಿಣಾಮವು ಹುಟ್ಟಲಿರುವ ಮಗುವಿಗೆ ಹಾನಿಕಾರಕವಾಗಿದೆ. ಧೂಮಪಾನವು ಸಂತಾನೋತ್ಪತ್ತಿ ಅಂಗಗಳನ್ನು ಹಾನಿಗೊಳಿಸುತ್ತದೆ. ಧೂಮಪಾನವು ಅಪಸ್ಥಾನೀಯ ಗರ್ಭಧಾರಣೆಯ ಅಪಾಯವನ್ನು ಹೆಚ್ಚಿಸುವುದು. ಇದು ಅವಧಿಪೂರ್ವ ಜನನ, ಕಡಿಮೆ ತೂಕದ ಜನನ ಮತ್ತು ಮಗುವಿನ ಬೆಳವಣಿಗೆಯ ಸಮಸ್ಯೆಗಳಿಗೂ ಕಾರಣವಾಗುತ್ತದೆ.

ಅಮೇರಿಕನ್ ಕಾಲೇಜ್ ಆಫ್ ಪ್ರಸೂತಿ ಮತ್ತು ಸ್ತ್ರೀರೋಗತಜ್ಞರ (ಅಇಔಎ)ಪ್ರಕಾರ, ಧೂಮಪಾನವು ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ಅಪಾಯವನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ. ಧೂಮಪಾನ ಮಾಡದ ಮಹಿಳೆಯರಿಗಿಂತ ಧೂಮಪಾನ ಮಾಡುವ ಮಹಿಳೆಯರಿಗೆ ಕ್ಯಾನ್ಸರ್ ಅಪಾಯವು ಆರು ಪಟ್ಟು ಹೆಚ್ಚು ಎಂದು ಡ್ಯಾನಿಶ್ ಅಧ್ಯಯನವು ಕಂಡುಹಿಡಿದಿದೆ. ಧೂಮಪಾನ ಮಾಡುವ ಮಹಿಳೆಯರಿಗೆ ಪಾರ್ಶ್ವವಾಯು ಬರುವ ಅಪಾಯವು ಶೇ.50ಕ್ಕೂ ಹೆಚ್ಚು. ಅತಿಯಾದ ಧೂಮಪಾನವು ಮಹಿಳೆಯ ಚರ್ಮವನ್ನು ಹಾನಿಗೊಳಿಸುತ್ತದೆ. ಧೂಮಪಾನಿಗಳಲ್ಲಿ ತಲೆ ಮತ್ತು ಕುತ್ತಿಗೆ ಕ್ಯಾನ್ಸರ್ ಅಪಾಯವು ಎಂದಿಗೂ ಧೂಮಪಾನ ಮಾಡದವರಿಗಿಂತ ಸರಿಸುಮಾರು 10 ಪಟ್ಟು ಹೆಚ್ಚು ಎಂದು ತಜ್ಞರು ಹೇಳುತ್ತಾರೆ.

ಧೂಮಪಾನದಿಂದ ಕ್ಯಾನ್ಸರ್ ಬೆಳವಣಿಗೆಯ ಅಪಾಯವು ಗಮನಾರ್ಹವಾಗಿ ಹೆಚ್ಚಾಗುತ್ತದೆ. ಧೂಮಪಾನ ಮಾಡುವ ಜನರು ಶ್ವಾಸಕೋಶದ ಕ್ಯಾನ್ಸರ್, ಗಂಟಲು ಕ್ಯಾನ್ಸರ್, ಬಾಯಿ ಕ್ಯಾನ್ಸರ್, ಮೇದೋಜ್ಜೀರಕ ಗ್ರಂಥಿಯ ಕ್ಯಾನ್ಸರ್ ಇತ್ಯಾದಿಗಳನ್ನು ಒಳಗೊಂಡಂತೆ ಅನೇಕ ರೀತಿಯ ಕ್ಯಾನ್ಸರ್‌ಗಳನ್ನು ಅಭಿವೃದ್ಧಿಪಡಿಸುವ ಹೆಚ್ಚಿನ ಅಪಾಯವನ್ನು ಹೊಂದಿರುತ್ತಾರೆ. ವೈದ್ಯಕೀಯ ಮೂಲಗಳ ಪ್ರಕಾರ, ತಂಬಾಕು ವ್ಯಸನಿಗಳು ಸಾಮಾನ್ಯವಾಗಿ ಶ್ವಾಸಕೋಶ, ಮೂತ್ರಜನಕಾಂಗದ ಗ್ರಂಥಿ, ಹೊಟ್ಟೆ, ಮೂಗು, ಮೂತ್ರಕೋಶ, ಮೇದೋಜ್ಜೀರಕ ಗ್ರಂಥಿ, ಪಿತ್ತರಸ ನಾಳ, ಮೂತ್ರನಾಳ, ಬಾಯಿ, ಗಂಟಲು ಮತ್ತು ಅನ್ನನಾಳದ ಕ್ಯಾನ್ಸರ್‌ಗಳಿಂದ ಬಳಲುತ್ತಿದ್ದಾರೆ. ತಂಬಾಕು ಸೇವನೆಯ ದೈಹಿಕ ಮತ್ತು ಮಾನಸಿಕ ದುಷ್ಪರಿಣಾಮಗಳು ನಮ್ಮ ಸಮಸ್ಯೆಗಳಲ್ಲಿ ಮುಂಚೂಣಿಯಲ್ಲಿದ್ದು, ಈ ವಿಷಪೂರಿತ ಮಾರಣಾಂತಿಕ ಚಟ ನಮ್ಮನ್ನು ಬಲಿ ತೆಗೆದುಕೊಳ್ಳುತ್ತಿದೆ.

ಯುಎಸ್ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಹೆಲ್ತ್ ಪ್ರಕಾರ, ಧೂಮಪಾನವು ಮಹಿಳೆಯರಲ್ಲಿ ಹೃದಯಾಘಾತದ ಅಪಾಯವನ್ನು ಹಲವು ಬಾರಿ ಹೆಚ್ಚಿಸುತ್ತದೆ. ಒಟ್ಟಾರೆಯಾಗಿ, ಧೂಮಪಾನವು ಎಲ್ಲರಿಗೂ ಹಾನಿಕಾರಕವಾಗಿದೆ, ಆದರೆ ಇದು ಮಹಿಳೆಯರ ಆರೋಗ್ಯಕ್ಕೆ ವಿಶೇಷವಾಗಿ ಹಾನಿಕಾರಕವಾಗಿದೆ. ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ, ಅನಿಯಂತ್ರಿತ, ಸ್ಪರ್ಧಾತ್ಮಕ ಯಾಂತ್ರಿಕ ಜೀವನದಿಂದ ಅತಿಯಾದ ಒತ್ತಡದಿಂದಾಗಿ ಇಂದಿನ ದಿನಗಳಲ್ಲಿ ಮಹಿಳೆಯರೂ ಸಹ ಧೂಮಪಾನದಂತಹ ಕೆಟ್ಟ ಚಟಗಳಿಗೆ ಹೆಚ್ಚು ಬಲಿಯಾಗುತ್ತಿದ್ದಾರೆ. ತಂಬಾಕು ಉತ್ಪನ್ನಗಳ ದುರುಪಯೋಗವು ಮಾನವೀಯತೆಗೆ ತೀವ್ರ ಹಾನಿಯನ್ನುಂಟುಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ನಾಗರಿಕರು ಈ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ. ತಂಬಾಕು ಉತ್ಪನ್ನಗಳ ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ತೀವ್ರ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಮೂಲಕ, ಈ ಕೆಟ್ಟ ಅಭ್ಯಾಸವನ್ನು ಅದರ ಬೇರುಗಳಿಂದ ನಿರ್ಮೂಲನೆ ಮಾಡಬೇಕು. ಮನುಷ್ಯನಿಗೆ ಆರೋಗ್ಯವೇ ಅತ್ಯಂತ ದೊಡ್ಡ ಭಾಗ್ಯ.

● ಪ್ರಕಾಶ ತದಡಿಕರ